ಬುಧವಾರ, ಜುಲೈ 31, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಕ್ಷಣೆ
ವಯನಾಡ್‌ನಲ್ಲಿ ಮಂಗಳವಾರ ಸಂಭವಿಸಿದ ಭೂಕುಸಿತದಲ್ಲಿ ಸಿಲುಕಿದ್ದ ಬಾಲಕಿಯನ್ನು ರಕ್ಷಿಸಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಯಿತು



ವೈದ್ಯ ಶಿಕ್ಷಣದ ಹೊಸ ಪರ್ವ

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಬಾಡಗಂಡಿ ಗ್ರಾಮದಲ್ಲಿ ಬುಧವಾರ (ಜುಲೈ 31) ಎಸ್.ಆರ್. ಪಾಟೀಲ ವೈದ್ಯಕೀಯ ಕಾಲೇಜು ಆಸ್ಪತ್ರೆ, ಸಂಶೋಧನೆ ಕೇಂದ್ರ, ಲೋಕಾರ್ಪಣೆ ಆಗಲಿದೆ.

ಎಸ್‌.ಆರ್‌.ಪಾಟೀಲ ವೈದ್ಯಕೀಯ ಕಾಲೇಜು

ಆಸ್ಪತ್ರೆ, ಸಂಶೋಧನಾ ಕೇಂದ್ರ ಉದ್ಘಾಟನೆ ಇಂದು



ಬಾಪೂಜಿ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಎಸ್‌.ಆರ್‌ ಪಾಟೀಲ

'ಗ್ರಾಮಗಳ ಅಭಿವೃದ್ಧಿಯಿಂದಲೇ ದೇಶದ ಅಭಿವೃದ್ಧಿ ಸಾಧ್ಯ' ಎಂದಿದ್ದಾರೆ ಮಹಾತ್ಮ ಗಾಂಧೀಜಿ. 'ಗ್ರಾಮಗಳು ಪಟ್ಟಣಗಳ ಕಡೆ ಮುಖ ಮಾಡದೆ ಪಟ್ಟಣಗಳೆ ಗ್ರಾಮಗಳ ಕಡೆ ಮುಖ ಮಾಡಬೇಕು' ಎನ್ನುವ ಅಬ್ದುಲ್ ಕಲಾಂ ಅವರ ಪರಿಕಲ್ಪನೆಯನ್ನು ಅಕ್ಷರಶಃ ಪಾಲಿಸಿ ಅಪಾರ ಜನಮೆಚ್ಚುಗೆ ಗಳಿಸಿದ ಧೀಮಂತ ನಾಯಕ ಎಸ್.ಆರ್.ಪಾಟೀಲ.

ಗಾಂಧೀಜಿ ಹಾಗೂ ಅಬ್ದುಲ್ ಕಲಾಂ ಅವರ ಆದರ್ಶಗಳಿಂದಲೇ ಸರಳ ಬದುಕು ರೂಪಿಸಿಕೊಂಡು ನಾಲ್ಕು ದಶಕಗಳ ಸುಧೀರ್ಘ ರಾಜಕೀಯ ಅನುಭವದಲ್ಲಿ ವಿಧಾನ ಪರಿಷತ್ ಸದಸ್ಯರಾಗಿ, ಸಚಿವರಾಗಿ ಇವರು ಕೈಗೊಂಡ ಕಾರ್ಯಗಳು ಜನಪರ ಕಳಕಳಿಗೆ ಸಾಕ್ಷಿಯಾಗಿವೆ. ಸಹಕಾರಿ ರಂಗ, ಶಿಕ್ಷಣ, ಔದ್ಯೋಗಿಕ, ಆರೋಗ್ಯ ಕ್ಷೇತ್ರಗಳ ಮೂಲಕ ಬಡವರ ಮನೆ, ಮನಗಳನ್ನು ತಲುಪಿದ ದಣಿವರಿಯದ ಸೇವೆ ಇತಿಹಾಸ ಸೃಷ್ಟಿಸಿದೆ. 'ಹಳ್ಳಿಯಾದರೇನು ಎಲ್ಲರೂ ಹೊರಳಿ ನೋಡುವಂತೆ ಮಾಡುವೆ' ಎಂಬ ಅಭಿಮಾನದಿಂದ ಕೈಗೊಂಡ ಶಿಕ್ಷಣಕ್ರಾಂತಿ ಗ್ರಾಮದ ಕೀರ್ತಿಯನ್ನೇ ಹೆಚ್ಚಿಸಿದೆ. ಪ್ರಸ್ತುತ ಇದೇ ಗ್ರಾಮದಲ್ಲಿ ವೈದ್ಯಕೀಯ ಕಾಲೇಜ್ ಆರಂಭವಾಗಿ ಹಳ್ಳಿಗರೆಲ್ಲ ಹೆಮ್ಮೆಪಡುವಂತಾಗಿದೆ.

ಬಾಗಲಕೋಟೆ ಜಿಲ್ಲೆಯ ಬೀಳಗಿ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದು. ಈ ತಾಲ್ಲೂಕಿನ ಒಂದು ಸಾವಿರ ಜನಸಂಖ್ಯೆಯುಳ್ಳ ಬಾಡಗಂಡಿ ಗ್ರಾಮದಲ್ಲಿ ಜುಲೈ 31ರಂದು ಎಸ್.ಆರ್.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಹಾಗೂ ಸಂಶೋಧನೆ ಕೇಂದ್ರ ಆರಂಭವಾಗುತ್ತಿದೆ. ಪ್ರಸಕ್ತ ವರ್ಷ ರಾಜ್ಯದಲ್ಲಿ ಅನುಮತಿ ಪಡೆದ ಕೇವಲ ಮೂರು ವೈದ್ಯಕೀಯ ಕಾಲೇಜ್‌ಗಳಲ್ಲಿ ಉತ್ತರ ಕರ್ನಾಟಕದ ಏಕೈಕ ಕಾಲೇಜು ಇದಾಗಿದೆ ಎಂಬುದು ಗಮನಾರ್ಹ.

ಎಸ್.ಆರ್.ಪಾಟೀಲ ಶಿಕ್ಷಣ ಪ್ರತಿಷ್ಠಾನದ ಮೂಲಕ 16 ವರ್ಷಗಳಿಂದ ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ ಸಲ್ಲಿಸುತ್ತಿರುವ ಎಸ್ಆರ್ ನಮ್ಮ ಭಾಗದ ಯುವ ಪ್ರತಿಭೆಗಳಿಗೆ ನಮ್ಮ ನೆಲದಲ್ಲೇ ವೈದ್ಯಕೀಯ ಶಿಕ್ಷಣ ದೊರೆಯಬೇಕು ಎಂಬ ಕನಸು ಕಂಡಿದ್ದರು. ಸಕ್ರಿಯ ರಾಜಕಾರಣದಿಂದ ಎರಡು ವರ್ಷ ದೂರ ಉಳಿದು ತಮ್ಮ ಬಹುತೇಕ ಸಮಯವನ್ನು ವೈದ್ಯಕೀಯ ಕಾಲೇಜ್ ಅಭಿವೃದ್ಧಿಪಡಿಸಲು ಮೀಸಲಿಟ್ಟಿದ್ದರು. ಹಗಲಿರುಳು ಶ್ರಮಿಸಿದ್ದರು. ದಣಿವರಿಯದ ಪ್ರಯತ್ನಕ್ಕೆ ಸಿಕ್ಕ ಫಲ ಎನ್ನುವಂತೆ 24 ಎಕರೆ ವಿಶಾಲ ಪ್ರದೇಶದಲ್ಲಿ ಸಂಪೂರ್ಣ ಸುಸಜ್ಜಿತ ವೈದ್ಯಕೀಯ ಕಾಲೇಜ್ ಹಾಗೂ ಆಸ್ಪತ್ರೆ ತಲೆ ಎತ್ತಿದೆ.

ಬೀಳಗಿ, ಕೊಲ್ಹಾರ, ಬಸವನ ಬಾಗೇವಾಡಿ, ನಿಡಗುಂದಿ, ಬಬಲೇಶ್ವರ ಹಾಗೂ ಬಾಗಲಕೋಟೆ, ಮುಧೋಳ ಮತ್ತು ಜಮಖಂಡಿ ತಾಲ್ಲೂಕು ಸೇರಿ ಅವಳಿ ಜಿಲ್ಲೆಯ ಅಂದಾಜು 350 ಗ್ರಾಮಗಳ ಜನತೆಗೆ ಆರೋಗ್ಯ ಸೇವೆ ಒದಗಿಸುವ ದೂರದೃಷ್ಟಿಯಿಂದ 630 ಹಾಸಿಗೆಯುಳ್ಳ ಆಸ್ಪತ್ರೆ ಆರಂಭಿಸಲಾಗಿದೆ. ಇಲ್ಲಿ ಬಡವರಿಗಾಗಿ 2023 ಜನವರಿ 1ರಿಂದ ನಿರಂತರ ಆರೋಗ್ಯ ಉಚಿತ ತಪಾಸಣೆ ಸೇವೆ ಕೈಗೊಳ್ಳಲಾಗುತ್ತಿದೆ. ಇಲ್ಲಿಯವರೆಗೆ ಅಂದಾಜು 3.5 ಲಕ್ಷ ಜನ ಈ ಸೇವೆಯ ಸೌಲಭ್ಯ ಪಡೆದು ಆಸ್ಪತ್ರೆಯ ಕಳಕಳಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪ್ರಸ್ತುತಿ: ಪಿ.ವಿ ಬ್ರ್ಯಾಂಡ್ ಸ್ಪಾಟ್

ಆಸ್ಪತ್ರೆಯಲ್ಲಿ 9 ಅತ್ಯಾಧುನಿಕ ಶಸ್ತ್ರಚಿಕಿತ್ಸೆ ಕೊಠಡಿಗಳಿದ್ದು, ಅಗತ್ಯವಿರುವ 3 ಸಾವಿರಕ್ಕೂ ಹೆಚ್ಚು ಬಡ ಜನತೆಗೆ ಉಚಿತ ಶಸ್ತ್ರಚಿಕಿತ್ಸೆಗಳನ್ನೂ ನಡೆಸಲಾಗಿದೆ. ಲ್ಯಾಬ್, ಎಕ್ಸರೆ, ಸಿಟಿ ಸ್ಕ್ಯಾನ್, ಅಲ್ಟ್ರಾಸೌಂಡ್ ಸೇವೆ ಹಾಗೂ ಅಂದಾಜು ₹ 7.5 ಕೋಟಿ ಔಷಧವನ್ನು ಉಚಿತವಾಗಿ ವಿತರಿಸಲಾಗಿದೆ. ಈ ವೈದ್ಯಕೀಯ ಕಾಲೇಜ್ ಹಾಗೂ ಆಸ್ಪತ್ರೆ ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡಿದ ಕೀರ್ತಿಗೂ ಪಾತ್ರವಾಗಲಿದೆ.

ಎಲ್ಲ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ಎಸ್.ಆರ್.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನೆ ಕೇಂದ್ರ ಕರ್ನಾಟಕದ ಪ್ರತಿಷ್ಠಿತ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಒಂದಾಗಿ ಬಡ ಜನತೆಗೆ ಆಸರೆಯಾಗಲಿ. ಬಾಡಗಂಡಿ ಗ್ರಾಮದ ಕೀರ್ತಿಯನ್ನು ದಶ ದಿಕ್ಕುಗಳಲ್ಲೂ ಬೆಳಗಲಿ ಎಂಬುದು ನಾಡಿನ ಸಾವಿರಾರು ಜನರ ಹಾರೈಕೆಯಾಗಿದೆ.



ಎಸ್‌.ಆರ್‌.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಪ್ರವೇಶದ್ವಾರ



ಸುತ್ತಲಿನ ನೂರಾರು ಹಳ್ಳಿಗಳ ಜನ ಕಿಡ್ನಿ ಅಥವಾ ಹೃದಯ ತೊಂದರೆಯಂಥ ಗಂಭೀರ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ದೂರದ ನಗರಗಳಿಗೆ ಹೋಗಬೇಕಾಗಿತ್ತು. ಸದ್ಯ ಎಸ್.ಆರ್.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದಿಂದ ಈ ಸಮಸ್ಯೆಗೆ ಪರಿಹಾರವಾಗಿದೆ. ಮುಂದಿನ ದಿನಗಳಲ್ಲಿ ಬಡ ಜನತೆಗೆ ಇನ್ನಷ್ಟು ಆಧುನಿಕ ಆರೋಗ್ಯ ಸೌಲಭ್ಯಗಳನ್ನು ಒದಗಿಸುವ ಗುರಿ ನಮ್ಮದಾಗಿದೆ.

ಎಂ.ಎನ್.ಪಾಟೀಲ, ಕಾರ್ಯದರ್ಶಿ, ಎಸ್‌.ಆರ್‌.ಪಾಟೀಲ ಶಿಕ್ಷಣ ಪ್ರತಿಷ್ಠಾನ



ಯಾವುದೇ ಕಾರಣಕ್ಕೂ ಹಳ್ಳಿ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬುದು ನನ್ನ ಕಳಕಳಿ. ಈ ಭಾಗದ ಪ್ರತಿಭಾವಂತ ಮಕ್ಕಳು ವೈದ್ಯಕೀಯ ಶಿಕ್ಷಣಕ್ಕಾಗಿ ಬಾಗಲಕೋಟೆ, ವಿಜಯಪುರ, ಬೆಳಗಾವಿ, ಹುಬ್ಬಳ್ಳಿಗೆ ಹೋಗಬೇಕಾದ ಅನಿವಾರ್ಯವಿತ್ತು. ಸದ್ಯ ಅಂಥ ಮಕ್ಕಳು ನಮ್ಮ ಸಂಸ್ಥೆಯಲ್ಲೇ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ಪಡೆಯಬಹುದಾಗಿದೆ. ನಮ್ಮ ಸಂಸ್ಥೆಯ ಮಕ್ಕಳು ಹೆಮ್ಮೆಯ ವೈದ್ಯರಾಗಿ ಸಮಾಜದ ಆಸ್ತಿಯಾಗಿ ಬಾಡಗಂಡಿ ಕೀರ್ತಿಯನ್ನು ಇನ್ನಷ್ಟು ಬೆಳಗಲಿ

ಎಸ್.ಆರ್.ಪಾಟೀಲ, ಮಾಜಿ ಸಚಿವ



ಎಸ್‌.ಆರ್‌.ಪಾಟೀಲ ಅವರು ಉತ್ತಮ ಶಾಸಕ ಪ್ರಶಸ್ತಿ ಸ್ವೀಕರಿಸುತ್ತಿರುವುದು

ಆಸ್ಪತ್ರೆ ಸೌಲಭ್ಯಗಳು

- 24 ಗಂಟೆ ತುರ್ತು ಚಿಕಿತ್ಸೆ
- 1200 ಒಪಿಡಿ ಸಾಮರ್ಥ್ಯ
- ಸುಸಜ್ಜಿತ ಆಂಬುಲೆನ್ಸ್ ಅಲ್ಟ್ರಾಸೌಂಡ್,
- ಇ.ಸಿ.ಜಿ ಮತ್ತು ಟಿಎಂಟಿ ಆಧುನಿಕ ಶಸ್ತ್ರಚಿಕಿತ್ಸೆ ವಿಭಾಗ ಡಿಜಿಟಲ್ ಎಕ್ಸರೇ ಸೌಲಭ್ಯ
- ಸುಸಜ್ಜಿತ ಪ್ರಯೋಗಾಲಯ
- ಅತ್ಯಾಧುನಿಕ ಔಷಧಾಲಯ
- ಸಾಮಾನ್ಯ ಹಾಗೂ ಸ್ಪೆಷಲ್ ವಾರ್ಡ್

ಲೋಕಾರ್ಪಣೆ ಇಂದು

ಬಾಡಗಂಡಿಯ ಎಸ್.ಆರ್.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ಜುಲೈ 31ರಂದು ಬೆಳಗ್ಗೆ 10 ಗಂಟೆಗೆ ಎಸ್.ಆರ್.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಹಾಗೂ ಸಂಶೋಧನೆ ಕೇಂದ್ರದ ಉದ್ಘಾಟನೆ ಸಮಾರಂಭ ನಡೆಯಲಿದೆ.

ಶಿರಹಟ್ಟಿಯ ಫಕೀರೇಶ್ವರ ಭಾವೈಕ್ಯತೆ ಪೀಠದ ಫಕೀರದಿಂಗಾಲೇಶ್ವರ ಸ್ವಾಮೀಜಿ, ಎರೆಹೊಸಳ್ಳಿಯ ಮಹಾಯೋಗಿ ವೇಮನ ಸಂಸ್ಥಾನ ಮಠದ ವೇಮನಾನಂದ ಶ್ರೀಗಳು ಸಾನ್ನಿಧ್ಯ ವಹಿಸುವರು.
630 ಹಾಸಿಗೆಗಳ ನವೀಕೃತ ಆಸ್ಪತ್ರೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ ಗುಂಡುರಾವ್ ಹಾಗೂ ಮಹಾವಿದ್ಯಾಲಯವನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಲೋಕಾರ್ಪಣೆಗೊಳಿಸುವರು.

ಅಬಕಾರಿ ಸಚಿವ ಆರ್.ಬಿ.ತಿಮ್ಮಾಪೂರ 'ನಮ್ಮನ್ನು ಹೆತ್ತವರು' ಮಂದಿರ ಉದ್ಘಾಟಿಸುವರು. ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ, ಶಾಸಕ ಜೆ.ಟಿ.ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್.ಪೂಜಾರ, ಹನಮಂತ ನಿರಾಣಿ , ಕುಲಪತಿ ಡಾ.ಎಂ.ಕೆ.ರಮೇಶ, ಬಾಗಲಕೋಟೆ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯಕುಮಾರ್ ಸರನಾಯಕ, ರಮೇಶ ಕತ್ತಿ, ಡಾ.ನವೀನ ಎಸ್, ಎಲ್.ಬಿ.ಕುರ್ತಕೋಟಿ, ಎಸ್.ಸಿ.ಮೋಟಗಿ ಮತ್ತಿತರ ಗಣ್ಯರು ಭಾಗವಹಿಸುವರು.

ಶಿಕ್ಷಣ ಪ್ರತಿಷ್ಠಾನದ ಸಾಧನೆ

ಗ್ರಾಮೀಣ ಭಾಗದ ಬಡ ಮಕ್ಕಳು ಗುಣಮಟ್ಟದ ಶಿಕ್ಷಣಕ್ಕಾಗಿ ಪಟ್ಟಣಗಳಿಗೆ ತೆರಳುವುದನ್ನು ಕಂಡು ಬಾಡಗಂಡಿಯಲ್ಲೇ 2008ರ ನವೆಂಬರ್ 17ರಂದು ಎಸ್.ಆರ್.ಪಾಟೀಲ ಶಿಕ್ಷಣ ಪ್ರತಿಷ್ಠಾನವನ್ನು ನೋಂದಾಯಿಸಿದರು. 2009 ಅಕ್ಟೋಬರ್ 2ರಂದು ಪ್ರತಿಷ್ಠಾನವನ್ನು ಉದ್ಘಾಟಿಸಲಾಯಿತು. 2010 ಜುಲೈನಿಂದ ಸಿಬಿಎಸ್‌ಇ ಶಿಕ್ಷಣ ಪ್ರವೇಶ ಆರಂಭವಾಯಿತು. ನರ್ಸರಿಯಿಂದ 7ನೇ ತರಗತಿವರೆಗೆ 250 ಮಕ್ಕಳು ಪ್ರವೇಶ ಪಡೆದರು. ಪ್ರಸಾದ ನಿಲಯ, ವಸತಿ ಗೃಹಗಳು, ಯೋಗಾ ಹಾಲ್, ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾಂಗಣ, ಅತ್ಯಾಧುನಿಕ ಪ್ರಯೋಗಾಲಯ, ನುರಿತ ಸಿಬ್ಬಂದಿ, ವಾಹನ ಮತ್ತಿತರ ಸೌಲಭ್ಯಗಳೊಂದಿಗೆ ಜ್ಞಾನಯಜ್ಞಕ್ಕೆ ಚಾಲನೆ ನೀಡಲಾಯಿತು. ಕೆಲವೇ ವರ್ಷಗಳಲ್ಲಿ ಬಾಪೂಜಿ ಶಾಲೆ ಪಾಲಕರ ಮನೆಮಾತಾಯಿತು.

2012ನೇ ಸಾಲಿನಿಂದ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳಲ್ಲಿ ಪದವಿ ಪೂರ್ವ ಕಾಲೇಜ್ ಆರಂಭಿಸಲಾಯಿತು. 2022ರಲ್ಲಿ ಎಸ್.ಆರ್. ಪಾಟೀಲರ ಹಿರಿಯ ಸಹೋದರಿ ಶ್ರೀಮತಿ ಶಾಂತಾದೇವಿ ಅವರ ಸ್ಮರಣಾರ್ಥ ಆಯುರ್ವೇದ ಹಾಗೂ ಬಿಎಸ್ಸಿ ನರ್ಸಿಂಗ್ ಕಾಲೇಜ್ ಆರಂಭಿಸಲಾಯಿತು. ಸದ್ಯ ಈ ಶಿಕ್ಷಣ ಸಂಸ್ಥೆಯಲ್ಲಿ600 ಕ್ಕೂ ಹೆಚ್ಚು ಮಕ್ಕಳು ಅಧ್ಯಯನ ನಡೆಸುತ್ತಿದ್ದು, ಪ್ರಸಕ್ತ ವರ್ಷದಿಂದ ವೈದ್ಯಕೀಯ ಕಾಲೇಜ್ ಕೂಡ ಆರಂಭವಾಗುತ್ತಿದೆ. ಮುಂದಿನ ವರ್ಷದಿಂದ ವೈದ್ಯಕೀಯ ಸ್ನಾತಕೋತ್ತರ ಪದವಿ ಕೂಡ ಆರಂಭಿಸುವ ಚಿಂತನೆ ನಡೆದಿದೆ.

ಇಂಥ ಭವ್ಯ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಿದರೂ ಬಾಡಗಂಡಿಯಲ್ಲಿ ಸರಕಾರಿ ಪ್ರಾಥಮಿಕ & ಪ್ರೌಢಶಾಲೆಗೆ 5 ಎಕರೆ ಜಮೀನು ಹಾಗೂ ಬೀಳಗಿಯಲ್ಲಿ ರುದ್ರಗೌಡ ಪಾಟೀಲ ಸರಕಾರಿ ಮಹಾವಿದ್ಯಾಲಯಕ್ಕೆ 8 ಎಕರೆ ಜಮೀನು ದಾನ ನೀಡುವ ಮೂಲಕ ಶಿಕ್ಷಣಪ್ರೇಮ ಮೆರೆದ ಎಸ್.ಆರ್. ಪಾಟೀಲ, ಪ್ರಜ್ಞಾವಂತರ ಮೆಚ್ಚುಗೆಗೂ ಪಾತ್ರರಾಗಿದ್ದಾರೆ.



ಎಸ್‌.ಆರ್‌ ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಹೊರನೋಟ

ಬಡವರ ಆರೋಗ್ಯಧಾಮ

ಆಸ್ಪತ್ರೆಯಲ್ಲಿ ಎಲ್ಲ ಅತ್ಯಾಧುನಿಕ ಸೌಲಭ್ಯಗಳು ದೊರೆಯುತ್ತಿವೆ. ಮಧುಮೇಹ, ಹೃದಯ ರೋಗ, ಪ್ರಸೂತಿ ಹಾಗೂ ಚಿಕ್ಕಮಕ್ಕಳ ವಿಭಾಗ, ಮನೋವೈದ್ಯ ಶಾಸ್ತ್ರ, ಚರ್ಮರೋಗ, ಎಲುಬು ಕೀಲು, ನೇತ್ರ ವಿಜ್ಞಾನ, ಸಾಮಾನ್ಯ ಶಸ್ತ್ರಚಿಕಿತ್ಸೆ, ಅಂಗರಚನಾ ಶಾಸ್ತ್ರ, ಶರೀರ ಶಾಸ್ತ್ರ, ಜೀವರಸಾಯನ ಶಾಸ್ತ್ರ, ರೋಗಶಾಸ್ತ್ರ, ಸೂಕ್ಷ್ಮಜೀವ ವಿಜ್ಞಾನ, ಫಾರ್ಮಕಾಲಾಜಿ, ಫೋರೆನ್ಸಿಕ್ ಮೆಡಿಸಿನ್, ಟಾಕ್ಸಿಕಾಲಾಜಿ, ಕಮ್ಯುನಿಟಿ ಮೆಡಿಸಿನ್, ಅರಿವಳಿಕೆ ಶಾಸ್ತ್ರ, ದಂತವೈದ್ಯ ಶಾಸ್ತ್ರ, ಇಂಟಿಗ್ರೇಟಿವ್ ಮೆಡಿಕಲ್ ರಿಸರ್ಚ್ ಸೇರಿ ಒಟ್ಟು 21 ವಿಭಾಗಗಳಲ್ಲಿ ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿದೆ. ಆಸ್ಪತ್ರೆಯಲ್ಲಿ 235 ವೈದ್ಯರು ಹಾಗೂ ಅಂದಾಜು ವೈದ್ಯಕೀಯೇತರ ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದಾರೆ. ಸಿಟಿ ಸ್ಕ್ಯಾನ್,ಯು.ಎಸ್.ಜಿ, ಸೌಲಭ್ಯವೂ ಇಲ್ಲಿ ದೊರೆಯುತ್ತಿದ್ದು, ಸುತ್ತಲಿನ ಹಳ್ಳಿ ಜನತೆ ಬಾಗಲಕೋಟೆ, ವಿಜಯಪುರ, ಹುಬ್ಬಳ್ಳಿ, ಬೆಳಗಾವಿ ನಗರಗಳಿಗೆ ತೆರಳುವುದು ತಪ್ಪಿದೆ. ಈ ಆಸ್ಪತ್ರೆಯಲ್ಲಿ ನೀಡಲಾಗುತ್ತಿರುವ ಉಚಿತ ತಪಾಸಣೆ ಸೇವೆಯನ್ನು ಆಗಸ್ಟ್ 15 ರವರೆಗೆ ವಿಸ್ತರಿಸಲಾಗಿದೆ.

ಪ್ರವೇಶ ಆರಂಭ

ವೈದ್ಯಕೀಯ ಕಾಲೇಜ್‌ನಲ್ಲಿ 2024-25ನೇ ಶೈಕ್ಷಣಿಕ ವರ್ಷದಿಂದ ಪ್ರವೇಶಗಳು ಆರಂಭವಾಗಲಿವೆ. ಸದ್ಯ 100 ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ದೊರೆತಿದ್ದು, ರಾಜ್ಯ ಸೇರಿದಂತೆ ನೆರೆಯ ಕೇರಳ, ಆಂಧ್ರ, ಗೋವಾ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ವಿದ್ಯಾರ್ಥಿಗಳು ಕೂಡ ಪ್ರವೇಶ ಪಡೆಯಲು ಸಂಪರ್ಕಿಸಿದ್ದಾರೆ.

ಇಂಗ್ಲೆಂಡ್, ಮಲೇಷ್ಯಾ, ಕುವೈತ ಹಾಗೂ ಗುಜರಾತ ರಾಜ್ಯಗಳಲ್ಲಿ ಸೇವೆ ಸಲ್ಲಿಸಿದ ಅನುಭವಿ ಉಪನ್ಯಾಸಕರು ಹಾಗೂ ಸಿಬ್ಬಂದಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬೋಧನೆ ಹಾಗೂ ಪ್ರಾಯೋಗಿಕ ತರಗತಿಗಳನ್ನು ಆರಂಭಿಸಲು ಸಕಲ ಸೌಲಭ್ಯಗಳೂ ಇಲ್ಲಿವೆ. 600 ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಸತಿ ನಿಲಯ ಸೌಲಭ್ಯ ಕಲ್ಪಿಸಲಾಗಿದೆ. ಹೃದಯರೋಗ, ನರರೋಗ, ಆಸ್ತಮಾ, ಎಚ್‌ಐವಿ, ಕಿಡ್ನಿ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುವ ಪ್ರತ್ಯೇಕ ವಿಭಾಗಗಳೂ ಇಲ್ಲಿವೆ.



ಕರ್ನಾಟಕ ಸರ್ಕಾರದ ಕಾರ್ಮಿಕ ಸಚಿವ ಸಂತೋಷ ಲಾಡ್ ಅವರು ವೈದ್ಯಕೀಯ ಮಹಾವಿದ್ಯಾಲಯಕ್ಕೆ ಭೇಟಿ ನೀಡಿದ ಸಂದರ್ಭ



ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರೊಂದಿಗೆ ಎಸ್‌.ಆರ್‌ ಪಾಟೀಲ



ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಹಾಗೂ ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಶ್ರೀಗಳೊಂದಿಗೆ ಎಸ್‌.ಆರ್‌ ಪಾಟೀಲ

ಆಸ್ಪತ್ರೆ ವಿಳಾಸ

ಮಾಹಿತಿಗೆ ಸಂಪರ್ಕಿಸಿ

ಕಾಲೇಜ್ ವಿಭಾಗ - ಮೊ. 8425275001

ಆಸ್ಪತ್ರೆ ವಿಭಾಗ - ಮೊ. 8425275002



ಲೋಕಾರ್ಪಣೆಗೆ ಸಜ್ಜಾದ 'ನಿಮ್ಮನ್ನು ಹೆತ್ತವರ' ಮಂದಿರ



ಎಸ್‌.ಆರ್‌. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ತಪಾಸಣಾ ಶಿಬಿರವನ್ನು ಉದ್ಘಾಟಿಸಿದ ಎಸ್‌.ಆರ್‌. ಪಾಟೀಲ



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಎಸ್‌.ಆರ್‌ ಪಾಟೀಲ



ಕರ್ನಾಟಕ ಸರ್ಕಾರದ ಗೃಹ ಸಚಿವ ಜಿ.ಪರಮೇಶ್ವರ್ ಅವರು ವೈದ್ಯಕೀಯ ಮಹಾವಿದ್ಯಾಲಯಕ್ಕೆ ಭೇಟಿ ನೀಡಿದ ಸಂದರ್ಭ

ಬುಧವಾರ, ಜುಲೈ 31, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 212 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಜನರೇಟಿವ್ ಎಐ ತಂತ್ರಜ್ಞಾನ 'ಕೋಪೈಲಟ್'ನಿಂದಾಗುವ ಲಾಭಗಳು ಹಲವು



ಒಆರ್‌ಒಪಿ ತಾರತಮ್ಯ ನಿವಾರಣೆಗೆ ಗಡುವು 10

ವಿಪಕ್ಷಗಳಿಗೆ ನಿರ್ಮಲಾ ತಿರುಗೇಟು 12

'ಸಿದ್ದರಾಮಯ್ಯ ವಿರುದ್ಧ ಕುತಂತ್ರ ನಿಲ್ಲಿಸದಿದ್ದರೆ ದಂಗೆ' 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,455	24,857	₹70,920 (ಬೆಂಗಳೂರು)	₹84,100 (ಬೆಂಗಳೂರು)	83.73

ಭೀಕರ ಭೂಕುಸಿತಕ್ಕೆ 123 ಸಾವು ● ಕೊಚ್ಚಿಹೋದ ನಾಲ್ಕು ಗ್ರಾಮಗಳು ● ದುರಂತದ ತೀವ್ರತೆ ತೆರೆದಿಟ್ಟ ಕೆಸರು ಮೆತ್ತಿಕೊಂಡ ಮೃತದೇಹಗಳು

ವಯನಾಡ್‌ನಲ್ಲಿ ಮರಣ ಮೃದಂಗ

ಅಮ್ಮಂದಿರ ತೆಕ್ಕೆಯಲ್ಲೇ ಚಿರನಿದ್ರೆಗೆ ಜಾರಿದ ಕಂದಮ್ಮಗಳು ● ಸಾವಿನ ಸಂಖ್ಯೆ ಏರುವ ಅಪಾಯ ● ನೂರಕ್ಕೂ ಅಧಿಕ ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ/ ಪಿಟಿಐ

ವಯನಾಡ್/ತಿರುವನಂತಪುರ (ಕೇರಳ): ಕೇರಳದ ವಯನಾಡ್ ಜಿಲ್ಲೆಯಲ್ಲಿ ಮಂಗಳವಾರ ನಸುಕಿನಲ್ಲಿ ಸಂಭವಿಸಿದ ಸರಣಿ ಭೂಕುಸಿತದಲ್ಲಿ 123 ಮಂದಿ ಸಾವನ್ನಪ್ಪಿದ್ದಾರೆ. ನೂರಾರು ಮಂದಿ ಅವಶೇಷಗಳಡಿ ಸಿಲುಕಿದ್ದು, ಸಾವಿನ ಸಂಖ್ಯೆ ಏರುವ ಅಪಾಯವಿದೆ.

ಭೀಕರ ದುರಂತದಿಂದಾಗಿ ಜಿಲ್ಲೆಯ ಮೇಪ್ಪಾಡಿ ಪಟ್ಟಣ ವ್ಯಾಪ್ತಿಯ ಮುಂಡಕ್ಕೈ, ಚೂರಲ್‌ಮಲ, ಅಟ್ಟಮಲ ಹಾಗೂ ಸಮೀಪದ ನೂಲ್ಪುಳ ಗ್ರಾಮಗಳು ಅಕ್ಷರಶಃ ಕೊಚ್ಚಿಹೋಗಿವೆ. ಸೋಮವಾರದವರೆಗೂ ಹಸಿರುಹೊದ್ದು ಮಲಗಿ ತಮ್ಮ ಸೌಂದರ್ಯಕ್ಕೆ ಹೆಸರುವಾಸಿಯಾಗಿದ್ದ ಈ ಗ್ರಾಮಗಳು ಸ್ಮಶಾನ ಸದೃಶವಾಗಿ ಬದಲಾಗಿದ್ದು, ಹೊರಲೋಕದ ಸಂಪರ್ಕವನ್ನೇ ಕಡಿದುಕೊಂಡಿವೆ.

ಗ್ರಾಮಸ್ಥರು ಮಲಗಿದ್ದಾಗ ಭೂಕುಸಿತ ಸಂಭವಿಸಿದ್ದು ಸಾವಿನ ಸಂಖ್ಯೆ ಹೆಚ್ಚಲು ಕಾರಣ. ಸಿಹಿ ನಿದ್ದೆಯಲ್ಲಿದ್ದ ಹಲವು ಕುಟುಂಬಗಳು ನಿರ್ನಾಮವಾಗಿವೆ. ಅಮ್ಮನ ತೆಕ್ಕೆಯಲ್ಲಿ ಮಲಗಿದ್ದ ಕಂದಮ್ಮಗಳು, ಮಕ್ಕಳು ಮಣ್ಣನಡಿ ಸಮಾಧಿಯಾಗಿವೆ. ಕೆಸರು ಮೆತ್ತಿಕೊಂಡ ಮೃತದೇಹಗಳನ್ನು ರಕ್ಷಣಾ ಕಾರ್ಯಕರ್ತರು ಎತ್ತಿಕೊಂಡು ಹೋದ ದೃಶ್ಯ ದುರಂತದ ತೀವ್ರತೆಗೆ ಸಾಕ್ಷಿಯಾಗಿದೆ. ಹಲವು ಮೃತದೇಹಗಳು ಅಂಗಾಂಗ ಬೇರ್ಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿವೆ.


ಭೂಕುಸಿತಕ್ಕೆ ಭಾರಿ ಮಳೆಯೇ ಕಾರಣ ಎಂದು ಕೇರಳ ಸರ್ಕಾರದ ಮೂಲಗಳು ತಿಳಿಸಿವೆ. ವಯನಾಡ್ ಜಿಲ್ಲೆಯಲ್ಲಿ ಕಳೆದ ಎರಡು ವಾರಗಳಿಂದಲೂ ಭಾರಿ ಮಳೆಯಾಗುತ್ತಿದೆ.

ಮಳೆ ಧಾರಾಕಾರವಾಗಿ ಸುರಿಯುತ್ತಿದ್ದಂತೆಯೇ ಭೂಕುಸಿತ ಉಂಟಾದ್ದರಿಂದ ಏನಾಗುತ್ತಿದೆ ಎಂಬುದೇ ಹೆಚ್ಚಿನವರಿಗೆ ತಿಳಿಯಲಿಲ್ಲ. ಭಾರಿ ಶಬ್ದ ಕೇಳಿ ನಿದ್ದೆಯಿಂದ ಎಚ್ಚೆತ್ತಾಗ ಹಲವರ ಕುತ್ತಿಗೆಯವರೆಗೂ ಕೆಸರು ಮತ್ತು ನೀರು ಬಂದಿತ್ತು. ಈ ವೇಳೆ ವಿದ್ಯುತ್ ಸಂಪರ್ಕವೂ ಕಡಿತಗೊಂಡಿತ್ತು. ಗ್ರಾಮಸ್ಥರಿಗೆ ಬೆಳಕು ಹರಿದ ಬಳಿಕವಷ್ಟೇ ದುರಂತ ಏನು ಎಂಬುದು ಅರಿವಿಗೆ ಬಂತು. 'ಭೂಕುಸಿತದಲ್ಲಿ 128 ಮಂದಿ ಗಾಯಗೊಂಡಿದ್ದಾರೆ. ಮೃತರಲ್ಲಿ 34 ಮಂದಿಯನ್ನು ಗುರುತಿಸಲಾಗಿದ್ದು, 18 ಮೃತದೇಹಗಳನ್ನು ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಾಗಿದೆ' ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

10ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 11





ದುರಂತದ ತೀವ್ರತೆಗೆ ಸಾಕ್ಷಿಯಾದ ಬೇರು ಸಹಿತ ಉರುಳಿ ಬಿದ್ದ ಮರಗಳ ರಾಶಿ –ಪಿಟಿಐ ಚಿತ್ರ



ಭೂಕುಸಿತ ದುರಂತದ ಬಗ್ಗೆ ಕೇರಳ ಮುಖ್ಯಮಂತ್ರಿ ಜತೆ ಮಾತನಾಡಿದ್ದೇನೆ. ಪರಿಹಾರ ಕಾರ್ಯಕ್ಕೆ ಕೇಂದ್ರ ಸರ್ಕಾರ ಎಲ್ಲ ರೀತಿಯ ನೆರವು ನೀಡಲಿದೆ

ನರೇಂದ್ರ ಮೋದಿ, ಪ್ರಧಾನಿ



ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳಿಗೆ ಸಂತಾಪಗಳು. ಅವಶೇಷಗಳಡಿ ಸಿಲುಕಿರುವವರನ್ನು ರಕ್ಷಿಸಲು ಸಾಧ್ಯ ಎಂದು ಭಾವಿಸಿದ್ದೇನೆ

ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ



ರಾಜ್ಯ ಕಂಡಂತಹ ಅತ್ಯಂತ ಭೀಕರ ಪ್ರಕೃತಿ ವಿಕೋಪಗಳಲ್ಲಿ ಇದು ಒಂದಾಗಿದೆ. ಈ ಸಂಕಷ್ಟದಲ್ಲಿ ನೆರವಿಗೆ ಎಲ್ಲರೂ ಕೈಜೋಡಿಸಬೇಕು

ಪಿಣರಾಯಿ ವಿಜಯನ್, ಕೇರಳ ಮುಖ್ಯಮಂತ್ರಿ

ಚಾಮರಾಜನಗರದ ಇಬ್ಬರ ಸಾವು

ಚಾಮರಾಜನಗರ: ಗುಡ್ಡ ಕುಸಿತದಲ್ಲಿ ಚಾಮರಾಜನಗರ ಜಿಲ್ಲೆಯ ಇಬ್ಬರು ಮೃತಪಟ್ಟಿದ್ದು ಹಲವರು ನಾಪತ್ತೆಯಾಗಿದ್ದಾರೆ.

ಮೇಪ್ಪಾಡಿಯಲ್ಲಿ ನೆಲೆಸಿದ್ದ ಪುಟ್ಟಸಿದ್ದಿ (62) ಹಾಗೂ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಚೂರಲ್‌ಮಲ ಗ್ರಾಮದಲ್ಲಿ ನೆಲಸಿದ್ದ ರಾಜನ್ ಹಾಗೂ ರಜನಿ, ಚಾಮರಾಜನಗರ ತಾಲ್ಲೂಕಿನ ನಾಗವಳ್ಳಿಯಿಂದ ವಯನಾಡ್‌ನ ಟೀ ಎಸ್ಟೇಟ್‌ನಲ್ಲಿ ಕೆಲಸ ಮಾಡಲು ತೆರಳಿದ್ದ ರತ್ನಮ್ಮ (45) ರಾಜೇಂದ್ರ (55) ದಂಪತಿ ನಾಪತ್ತೆಯಾಗಿದ್ದಾರೆ.

ರಾಜ್ಯದ ದೊಡ್ಡತಪ್ಪಲೆಯಲ್ಲಿ ಮತ್ತೆ ಭೂಕುಸಿತ

ಹಾಸನ: ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಬಳಿ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಮಂಗಳವಾರ ಮಧ್ಯಾಹ್ನ ಮತ್ತೆ ಭಾರಿ ಪ್ರಮಾಣದ ಭೂಕುಸಿತವಾಗಿದ್ದು, ಅನಿಲ ಟ್ಯಾಂಕರ್ ಮತ್ತು ಲಾರಿ ಉರುಳಿ ಬಿದ್ದಿವೆ. ಒಟ್ಟು 4 ವಾಹನಗಳು ಮಣ್ಣಿನಡಿ ಸಿಲುಕಿವೆ.

21 ಟನ್ ಅಡುಗೆ ಅನಿಲ ತುಂಬಿರುವ ಟ್ಯಾಂಕರ್‌ನಿಂದ ಗ್ಯಾಸ್ ಸೋರಿಕೆಯ ಆತಂಕ ಎದುರಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದಾರೆ.

ಈ ಪ್ರದೇಶದಲ್ಲಿ 15 ದಿನಗಳಿಂದ ನಿರಂತರವಾಗಿ ಮಣ್ಣು ಕುಸಿಯುತ್ತಿದ್ದು, ಆಗಾಗ ತೆರವುಗೊಳಿಸಿ, ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿತ್ತು. ಮಂಗಳವಾರ ಮಧ್ಯಾಹ್ನ ವಾಹನಗಳು ಸಂಚರಿಸುತ್ತಿರುವಾಗಲೇ ಮತ್ತೆ ಭಾರಿ ಪ್ರಮಾಣದಲ್ಲಿ ಮಣ್ಣು ಕುಸಿದಿದೆ. ಕೆಲ ಪ್ರಯಾಣಿಕರು ಕಾರಿನಲ್ಲೇ ಸಿಲುಕಿದ್ದರು. ಯಾರಿಗೂ ಅಪಾಯವಾಗಿಲ್ಲ. ಹಿಟಾಚಿ, ಜೆಸಿಬಿ ಮೂಲಕ ಮಣ್ಣು ತೆರವುಗೊಳಿಸಲಾಗುತ್ತಿದೆ.

'ಹೆಚ್ಚಿನ ಪ್ರಮಾಣ ಮಣ್ಣು ಕುಸಿದಿದ್ದರೆ, ಶಿರೂರು ಮಾದರಿಯಲ್ಲಿ ದೊಡ್ಡ ಅನಾಹುತ ಸಂಭವಿಸುತ್ತಿತ್ತು' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.



ದೊಡ್ಡತಪ್ಪಲೆ ಬಳಿ ಮಂಗಳವಾರ ಭೂಕುಸಿತದಲ್ಲಿ ಲಾರಿ, ಟ್ಯಾಂಕರ್ ಉರುಳಿ ಬಿದ್ದಿದ್ದು, ಕಾರುಗಳು ಮಣ್ಣಿನಡಿ ಸಿಲುಕಿದ್ದವು

10ನೇ ಪುಟ ನೋಡಿ

ಮಲೆನಾಡು–ಕರಾವಳಿಯಲ್ಲಿ ಭಾರಿ ಮಳೆ

ಪ್ರವಾಸ ಮುಂದೂಡಲು ಮನವಿ ● ಕೆಲ ಜಿಲ್ಲೆಗಳಲ್ಲಿ ಶಾಲಾ–ಕಾಲೇಜುಗಳಿಗೆ ರಜೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು/ಮಂಗಳೂರು/ಮೈಸೂರು: ರಾಜ್ಯದ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಸೋಮವಾರ ರಾತ್ರಿಯಿಂದ ಮಳೆ ಮತ್ತೆ ರಭಸ ಪಡೆದಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿರುವುದರಿಂದ ಜಲಾಶಯಗಳಿಗೆ ಒಳಹರಿವು ಹೆಚ್ಚಾಗಿದೆ. ಕೆ.ಆರ್.ಎಸ್‌ನಿಂದ 1.10 ಲಕ್ಷ ಕ್ಯುಸೆಕ್ ಮತ್ತು ಕಬಿನಿಯಿಂದ 80 ಸಾವಿರ ಕ್ಯುಸೆಕ್ ಸೇರಿ ಒಟ್ಟು 2 ಲಕ್ಷ ಕ್ಯುಸೆಕ್ ನೀರನ್ನು ಕಾವೇರಿ ನದಿಗೆ ಬಿಡಲಾಗುತ್ತಿದೆ.

ಹೇಮಾವತಿ ಜಲಾಶಯಕ್ಕೆ ಒಳಹರಿವು ಹೆಚ್ಚಾಗುತ್ತಿದ್ದು, ನದಿಗೆ 1 ಲಕ್ಷ ಕ್ಯುಸೆಕ್ ನೀರು ಹರಿಸಲಾಗುತ್ತದೆ.



ಕಳಸದಲ್ಲಿ 25 ಸೆಂ.ಮೀ. ಮಳೆ

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಕಳಸದಲ್ಲಿ ರಾಜ್ಯದಲ್ಲಿಯೇ ಅತಿ ಹೆಚ್ಚು 25 ಸೆಂ.ಮೀ ಮಳೆಯಾಗಿದೆ. ಭಾಗಮಂಡಲದಲ್ಲಿ 24 ಸೆಂ.ಮೀ, ಮಾಸ್ತಿಕಟ್ಟೆಯಲ್ಲಿ 24 ಸೆಂ.ಮೀ., ಚಕ್ರಾದಲ್ಲಿ 22, ಯಡೂರು 21.7 ಹಾಗೂ ಹುಲಿಕಲ್‌ನಲ್ಲಿ 21 ಸೆಂ.ಮೀ., ಆಗುಂಬೆಯಲ್ಲಿ 23 ಸೆಂ.ಮೀ ಮಳೆ ದಾಖಲಾಗಿದೆ.

ಕೊಡಗು ಜಿಲ್ಲೆಯ ಭಾಗಮಂಡಲ, ಸಿದ್ದಾಪುರ, ವಿರಾಜಪೇಟೆ ಹಾಗೂ ಕುಶಾಲನಗರದಲ್ಲಿ ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. ಜುಲೈ 31 ಮತ್ತು ಆಗಸ್ಟ್ 1ರಂದು ಪ್ರವಾಸಿಗರು ಜಿಲ್ಲೆಯತ್ತ ಪ್ರವಾಸವನ್ನು ಮುಂದೂಡಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಸಲಹೆ ನೀಡಿದ್ದಾರೆ. ಜಿಲ್ಲೆಯ ಕುಟ್ಟ, ಪೊನ್ನಂಪೇಟೆ, ಗೋಣಿಕೊಪ್ಪಲು ಭಾಗದಲ್ಲಿ ಮಳೆ ಅತೀವ ಬಿರುಸಿನಿಂದ ಸುರಿಯುತ್ತಿದೆ. ಹವಾಮಾನ ಇಲಾಖೆ 'ರೆಡ್ ಅಲರ್ಟ್' ಘೋಷಿಸಿದ್ದು, ಜುಲೈ 31ರಂದು ಜಿಲ್ಲೆಯ ಎಲ್ಲ ಶಾಲೆ, ಪಿಯು ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿಯೂ ಶಾಲೆ–ಪಿಯು ಕಾಲೇಜುಗಳಿಗೆ ಜುಲೈ 31ರಂದು ರಜೆ ಘೋಷಿಸಲಾಗಿದೆ.

'ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿ, ಬಾಬಾ ಬುಡನ್ ಗಿರಿ ರಸ್ತೆಗಳಲ್ಲಿ ಅಲ್ಲಲ್ಲಿ ಮಣ್ಣು ಕುಸಿದಿದೆ. ಆಗಸ್ಟ್ 15ರವರೆಗೆ ಪ್ರವಾಸಿಗರು ಜಿಲ್ಲೆಗೆ ಭೇಟಿ ನೀಡಬಾರದು' ಎಂದು ಜಿಲ್ಲಾಧಿಕಾರಿ ಮನವಿ ಮಾಡಿದ್ದಾರೆ.

ಇನ್ನಷ್ಟು ಸುದ್ದಿಗಳು 7

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಒಲಿಂಪಿಕ್ಸ್‌ನಲ್ಲಿ ಮನು ಪದಕ ಡಬಲ್

ಒಲಿಂಪಿಕ್ಸ್ ಅಂಗಳದಲ್ಲಿ ಭಾರತದ ಮನು ಭಾಕರ್ ಮತ್ತೊಂದು ಐತಿಹಾಸಿಕ ಸಾಧನೆ ಮಾಡಿದರು. ಒಂದೇ ಒಲಿಂಪಿಕ್ ಕೂಟದಲ್ಲಿ ಎರಡು ಪದಕ ಜಯಿಸಿದ ಭಾರತದ (ಸ್ವಾತಂತ್ರ್ಯಾ ನಂತರ) ಮೊದಲ ಕ್ರೀಡಾಪಟುವಾದರು. ಮಂಗಳವಾರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಡೆದ 10 ಮೀಟರ್ಸ್ ಏರ್ ಪಿಸ್ತೂಲ್ ಶೂಟಿಂಗ್ ಸ್ಪರ್ಧೆಯ ಮಿಶ್ರ ತಂಡ ವಿಭಾಗದಲ್ಲಿ ಮನು ಮತ್ತು ಸರಬ್ಜೋತ್ ಸಿಂಗ್ ಜೋಡಿಯು ಕಂಚಿನ ಪದಕ ಜಯಿಸಿತು.

ಕಂಚಿನ ಪದಕದ ಸುತ್ತಿನ ಫಲಿತಾಂಶ

ಭಾರತ (ಮನು –ಸರಬ್ಜೋತ್ ಸಿಂಗ್) **16**

ದ.ಕೊರಿಯಾ (ಒಹ್ ಯೆ ಜಿನ್–ಲೀ ವೊನ್‌ಹೊ) **10**

ಮನು ದಾಖಲೆಗಳು

- ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಎರಡು ಪದಕ ಜಯಿಸಿದ ಭಾರತದ ಏಕೈಕ ಮಹಿಳಾ ಸ್ಪರ್ಧಿ
- ಒಲಿಂಪಿಕ್ಸ್‌ಲ್ಲಿ ಪದಕ ಜಯಿಸಿದ ಭಾರತದ ಐದನೇ ಶೂಟರ್
- ಈ ಕೂಟದಲ್ಲಿ ದೇಶಕ್ಕೆ ಒಲಿದ ಎರಡನೇ ಪದಕವೂ ಇದಾಗಿದೆ



ಇನ್ನಷ್ಟು ಸುದ್ದಿಗಳು 13,14

'ಮೈತ್ರಿ' ಪಾದಯಾತ್ರೆಗೆ 'ದಳ' ವಿಘ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಡಾ' ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದ್ದು, ಇದರ ಹೊಣೆ ಹೊತ್ತು ಮುಖ್ಯಮಂತ್ರಿ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿ ಬಿಜೆಪಿ–ಜೆಡಿಎಸ್ ನಡೆಸಲು ಉದ್ದೇಶಿಸಿದ್ದ ಬೆಂಗಳೂರು–ಮೈಸೂರು ಪಾದಯಾತ್ರೆಗೆ ಆರಂಭಕ್ಕೂ ಮುನ್ನವೇ ವಿಘ್ನ ಎದುರಾಗಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಎಚ್.ಡಿ. ಕುಮಾರಸ್ವಾಮಿ ಸಮ್ಮುಖದಲ್ಲಿ ಎರಡೂ ಪಕ್ಷಗಳ ಮುಖಂಡರು ಸಭೆಗಳನ್ನು ನಡೆಸಿದ್ದರು. ಅದಾದ ಬಳಿಕ, ಆ.3ರಿಂದ ಪಾದಯಾತ್ರೆ ಆರಂಭಿಸುವುದಾಗಿ ಪತ್ರಿಕಾ ಗೋಷ್ಠಿಯಲ್ಲಿ ಘೋಷಣೆ ಮಾಡಿದ್ದರು.

ಕಾರ್ಯಕರ್ತರು, ರೈತರ ಹಿತದೃಷ್ಟಿಯ ಬಗ್ಗೆ ಸಮಾಲೋಚನೆ ನಡೆಸಿದೆವು. ಪಾದಯಾತ್ರೆಗೆ ಬರುವವರ ಆರೋಗ್ಯದ ಕಾಳಜಿಯೂ ನಮಗೆ ಮುಖ್ಯ

ನಿಖಿಲ್ ಕುಮಾರಸ್ವಾಮಿ, ಯುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

12ನೇ ಪುಟ ನೋಡಿ

ಬಿಜೆಪಿಯಲ್ಲೂ ಅಪಸ್ವರ

'ಮೈಸೂರು ಚಲೋ' ಪಾದಯಾತ್ರೆಗೆ ಬಿಜೆಪಿಯಲ್ಲೂ ಅಪಸ್ವರ ಎದ್ದಿದೆ. ರಾಜ್ಯವ್ಯಾಪಿ ಮಳೆ ಸುರಿಯುತ್ತಿರುವಾಗ ಮತ್ತು ಜನ ಸಂಕಷ್ಟದಲ್ಲಿರುವಾಗ ಪಾದಯಾತ್ರೆ ನಡೆಸುವ ಅಗತ್ಯವಿದೆಯೇ ಎಂಬುದು ಒಂದು ಕಾರಣವಾದರೆ, ಪಾದಯಾತ್ರೆ ಘೋಷಿಸುವುದಕ್ಕೂ ಮುನ್ನ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಯಾರ ಜೊತೆಗೂ ಚರ್ಚಿಸಲಿಲ್ಲ ಎನ್ನುವುದೂ ಈಗ ಪಕ್ಷದ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಅಧಿವೇಶನದ ಸಂದರ್ಭದಲ್ಲಿ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿರಲಿಲ್ಲ. ಅಧಿವೇಶನ ಮುಗಿದ ಬಳಿಕ ಪಾದಯಾತ್ರೆ ನಡೆಸುವ ವಿಚಾರವನ್ನು ತಿಳಿಸಿದ್ದು ಸರಿಯಲ್ಲ ಎಂಬ ತಕರಾರು ಎದ್ದಿದೆ. ಈ ಮಧ್ಯೆ 'ಮೈಸೂರು ಚಲೋ'ಗೆ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ ಬಂಡಾಯ ಸಾರಿದ್ದಾರೆ.

12ನೇ ಪುಟ ನೋಡಿ

ಬಿಬಿಎಂಪಿ: ಒಟಿಎಸ್ ಯೋಜನೆ ಇಂದೇ ಕೊನೆ; ಆಗಸ್ಟ್ 1ರಿಂದ ಬಡ್ಡಿ, ದಂಡ ವಸೂಲಿ

3 ಲಕ್ಷ ಆಸ್ತಿಗಳಿಂದ ₹831 ಕೋಟಿ ತೆರಿಗೆ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆ ಬುಧವಾರ (ಜುಲೈ 31) ಮುಕ್ತಾಯವಾಗುತ್ತಿದ್ದರೂ, ಬಿಬಿಎಂಪಿ ವ್ಯಾಪ್ತಿಯಲ್ಲಿ ಇನ್ನೂ 2.87 ಲಕ್ಷ ಆಸ್ತಿಗಳಿಂದ ತೆರಿಗೆ ಹಿಂಬಾಕಿ ಉಳಿದಿದೆ. ತೆರಿಗೆ ಪುನರ್‌ನಿಗದಿ ಮಾಡಿದ ಆಸ್ತಿಗಳೂ ಸೇರಿದಂತೆ ಒಟ್ಟು ₹831 ಕೋಟಿ ಆಸ್ತಿ ತೆರಿಗೆ ಪಾವತಿಯಾಗಬೇಕಿದೆ.

ಎರಡು ವರ್ಷಕ್ಕಿಂತಲೂ ಹಿಂದಿನಿಂದ ಬಾಕಿ ಉಳಿಸಿಕೊಂಡಿದ್ದ ಆಸ್ತಿ ತೆರಿಗೆ ಸಂಗ್ರಹಿಸಲು 'ವಸೂಲಿ ಅಭಿಯಾನ' ಆರಂಭಿಸಲಾಗಿತ್ತು. ಹಲವು ಬಾರಿ ನೋಟಿಸ್ ನೀಡಿದರೂ ನಿರೀಕ್ಷಿತ ಮಟ್ಟದಲ್ಲಿ ತೆರಿಗೆ ಸಂಗ್ರಹವಾಗಿಲ್ಲ.

ನಗರದ ವ್ಯಾಪ್ತಿಯಲ್ಲಿ ನಾಲ್ಕು ಲಕ್ಷಕ್ಕೂ ಅಧಿಕ ಆಸ್ತಿಗಳ ಮಾಲೀಕರಿಗೆ ತೆರಿಗೆ ಬಾಕಿ ಪಾವತಿ ಮಾಡಲು ಮಾರ್ಚ್‌ನಲ್ಲೇ ಬೇಡಿಕೆ ಪತ್ರ ನೀಡಲಾಗಿತ್ತು. ಬಡ್ಡಿ ಹಾಗೂ ದಂಡಕ್ಕೆ ವಿನಾಯಿತಿ ನೀಡಿ ಒಂದು ಬಾರಿ ಪರಿಹಾರ (ಒಟಿಎಸ್) ಅವಕಾಶ ನೀಡಿದ್ದರೂ ಆಸ್ತಿ ಮಾಲೀಕರು ತೆರಿಗೆ ಪಾವತಿಸಲು ಆಸಕ್ತಿ ತೋರಿಲ್ಲ.

ಕಟ್ಟಡದ ವಾಸ್ತವ ವಿಸ್ತೀರ್ಣ ಅಥವಾ ವಲಯದ ಆಯ್ಕೆಯಲ್ಲಿ ತಪ್ಪಾಗಿ, ಆಸ್ತಿ ತೆರಿಗೆಯನ್ನು ಕಡಿಮೆ ಪಾವತಿಸುತ್ತಿದ್ದ ನಾಲ್ಕು ಲಕ್ಷಕ್ಕೂ ಅಧಿಕ ಆಸ್ತಿಗಳ ಮಾಲೀಕರಿಗೆ ತೆರಿಗೆಯನ್ನು ಪುನರ್‌ನಿಗದಿ ಮಾಡಿ ಪಾಲಿಕೆ ವತಿಯಿಂದ 'ಬೇಡಿಕೆ ಪತ್ರ' ನೀಡಲಾಗಿತ್ತು. ಹಿಂದಿನ ವರ್ಷಗಳ ತೆರಿಗೆಗೆ ಬಡ್ಡಿ ಹಾಗೂ ದಂಡವನ್ನು ಮನ್ನಾ ಮಾಡಿ, ಆಸ್ತಿ ತೆರಿಗೆಯನ್ನು ಮಾತ್ರ ಪಾವತಿಸಲು ಒಟಿಎಸ್ ವ್ಯವಸ್ಥೆಯನ್ನು ಸರ್ಕಾರ ಜಾರಿಗೆ ತಂದಿತ್ತು. ಜುಲೈ 31ರವರೆಗೆ ಈ ವ್ಯವಸ್ಥೆ ಜಾರಿಯಲ್ಲಿರಲಿದ್ದು, ನಂತರ ಎಲ್ಲ ರೀತಿಯ ಬಡ್ಡಿ ಹಾಗೂ ದಂಡ ಪಾವತಿಸಬೇಕಾಗುತ್ತದೆ.

ಏಪ್ರಿಲ್ 1ರಂತೆ 3.95 ಲಕ್ಷ ಆಸ್ತಿಗಳಿಗೆ ಬೇಡಿಕೆ ಪತ್ರ ನೀಡಲಾಗಿತ್ತು. ಇದರ ಮೊತ್ತ ₹733.71 ಕೋಟಿಯಾಗಿತ್ತು. ಜುಲೈ 29ರವರೆಗೆ ಸುಮಾರು ಒಂದು ಲಕ್ಷ ಆಸ್ತಿಗಳ ಮಾಲೀಕರು ಮಾತ್ರ ಬೇಡಿಕೆ ಪತ್ರಕ್ಕೆ ಅನುಗುಣವಾಗಿ ತೆರಿಗೆಯನ್ನು ಪಾವತಿಸಿದ್ದಾರೆ. ಇನ್ನೂ, 2.87 ಲಕ್ಷ ಆಸ್ತಿಗಳಿಂದ ₹548.94 ಕೋಟಿ ಬಾಕಿ ಉಳಿದಿದೆ.

ಆಸ್ತಿ ತೆರಿಗೆಯನ್ನು ತಪ್ಪಾಗಿ ಪಾವತಿಸುತ್ತಿರುವ 16,904 ಆಸ್ತಿಗಳಿಗೆ ತೆರಿಗೆ ಪುನರ್‌ನಿಗದಿ ಮಾಡಿ 'ಬೇಡಿಕೆ ಪತ್ರ' ನೀಡಲಾಗಿದೆ. ಈ ಆಸ್ತಿಗಳಿಂದ ₹282.59 ಕೋಟಿ ಬಾಕಿ ಉಳಿದಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಆಸ್ತಿ ಜಪ್ತಿ: 'ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡ ಮಾಲೀಕರಿಗೆ ಒಟಿಎಸ್ ವ್ಯವಸ್ಥೆಯಡಿ ಸಾಕಷ್ಟು ಸಮಯ ನೀಡಲಾಗಿತ್ತು. ಆದರೂ ಪಾವತಿ ಮಾಡಿಲ್ಲ. ಹೀಗಾಗಿ, ಆಸ್ತಿಯನ್ನು ವಶಕ್ಕೆ ಪಡೆಯಲು, ಉಪ ನೋಂದಣಾಧಿಕಾರಿ ಕಚೇರಿಗಳಿಗೆ ಮಾಹಿತಿ ಕಳುಹಿಸಿ 'ಅಟ್ಯಾಚ್' (ಋಣಭಾರ) ಮಾಡಿಕೊಳ್ಳುವ ಪ್ರಕ್ರಿಯೆ ನಡೆಸಲಾಗುವುದು' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ಮಾಹಿತಿ ನೀಡಿದರು.

ಆಸ್ತಿ ತೆರಿಗೆ ಬಾಕಿ ಎಲ್ಲೆಲ್ಲಿ, ಎಷ್ಟು?
(2024ರ ಜುಲೈ 29ರಂತೆ)

ವಲಯ	ಆಸ್ತಿಗಳು	ಬಾಕಿ
ಬೊಮ್ಮನಹಳ್ಳಿ	45,381	₹71.10 ಕೋಟಿ
ದಾಸರಹಳ್ಳಿ	13,176	₹18.71 ಕೋಟಿ
ಪೂರ್ವ	39,400	₹76.52 ಕೋಟಿ
ಮಹದೇವಪುರ	60,485	₹124.23 ಕೋಟಿ
ರಾಜರಾಜೇಶ್ವರಿನಗರ	44,570	₹43.27 ಕೋಟಿ
ದಕ್ಷಿಣ	27,157	₹84.11 ಕೋಟಿ
ಪಶ್ಚಿಮ	27,870	₹89.20 ಕೋಟಿ
ಯಲಹಂಕ	29,867	₹41.81 ಕೋಟಿ
ಒಟ್ಟು	**2,87,906**	**₹548.94 ಕೋಟಿ**

ರಾತ್ರಿ 9ರವರೆಗೆ ಅವಕಾಶ

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟಿಎಸ್ ಯೋಜನೆಯು ಬುಧವಾರ ಮುಕ್ತಾಯಗೊಳ್ಳುವ ಹಿನ್ನಲೆಯಲ್ಲಿ ಆಯಾ ವಲಯ ಕಚೇರಿಗಳು ಮತ್ತು ಸಹಾಯಕ ಕಂದಾಯ ಅಧಿಕಾರಿ ಕಚೇರಿಗಳು ಬುಧವಾರ ರಾತ್ರಿ 9ರವರೆಗೆ ಕಾರ್ಯನಿರ್ವಹಿಸಲಿವೆ.

ಆಸ್ತಿ ತೆರಿಗೆ ತಂತ್ರಾಂಶದ ಮೂಲಕ ಪಾವತಿಸುವಲ್ಲಿ ಯಾವುದೇ ಸಮಸ್ಯೆ ಇದ್ದಲ್ಲಿ, ಎಸ್‌ಎಎಸ್ ಅರ್ಜಿ ಸಂಖ್ಯೆಯನ್ನು ನಮೂದಿಸಿ ಭಾಗಶಃ ಪಾವತಿ ಅಥವಾ ಪೂರ್ಣ ಪಾವತಿಯನ್ನು ವಲಯ ಕಚೇರಿಯಲ್ಲಿ 'ಡಿಮ್ಯಾಂಡ್ ಡ್ರಾಫ್ಟ್' ಮೂಲಕ ಸ್ವೀಕರಿಸಲಾಗುತ್ತದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.

ಶೈಕ್ಷಣಿಕ ಕಟ್ಟಡಗಳಿಂದ ತೆರಿಗೆ ವಸೂಲಿಗೆ ವಿರೋಧ

ಬೆಂಗಳೂರು: ಶೈಕ್ಷಣಿಕ ಉದ್ದೇಶಕ್ಕೆ ಬಳಸುವ ನಿವೇಶನಗಳು ಅಥವಾ ಕಟ್ಟಡಗಳ ಮೇಲೆ ತೆರಿಗೆ ವಿಧಿಸುವ ಬಿಬಿಎಂಪಿ ಕ್ರಮವನ್ನು ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘ (ಕೃಪಾ) ಖಂಡಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, 'ಕರ್ನಾಟಕ ಮುನ್ಸಿಪಲ್ ಕಾಯ್ದೆ, ಬಿಬಿಎಂಪಿ ಕಾಯ್ದೆಯ ಪ್ರಕಾರ ಚಾರಿಟಬಲ್ ಟ್ರಸ್ಟ್ ಅಡಿಯಲ್ಲಿ ಸ್ಥಾಪಿಸಿರುವ ಶಾಲೆಗಳ ಕಟ್ಟಡ ಹಾಗೂ ಖಾಲಿ ನಿವೇಶನಗಳಿಗೆ ಯಾವುದೇ ರೀತಿಯ ತೆರಿಗೆ (ಆದಾಯ ತೆರಿಗೆ, ಸೇವಾ ತೆರಿಗೆ, ಸೆಸ್ ಅಥವಾ ಬಿಬಿಎಂಪಿ ತೆರಿಗೆ) ವಿಧಿಸುವಂತಿಲ್ಲ. ಆದರೆ, ಬಿಬಿಎಂಪಿ ವ್ಯಾಪ್ತಿಯಲ್ಲಿ ಇರುವ ಶಾಲೆಗಳ ಖಾಲಿ ನಿವೇಶನ ಹಾಗೂ ಕಟ್ಟಡಗಳ ಮೇಲೆ ತೆರಿಗೆ ವಿಧಿಸುವಂತೆ ಜುಲೈ 19ರಂದು ಆದೇಶಿಸಿ, ತೆರಿಗೆ ವಸೂಲಿ ಮಾಡಲಾಗುತ್ತಿದೆ' ಎಂದು ದೂರಿದರು.

'ಬಿಬಿಎಂಪಿ ಕಾನೂನುಬಾಹಿರವಾಗಿ ತೆರಿಗೆ ವಿಧಿಸುತ್ತಿರುವ ಕ್ರಮವನ್ನು ನಾವು ಖಂಡಿಸುತ್ತೇವೆ. ಈ ಆದೇಶವನ್ನು ಕೂಡಲೇ ಹಿಂಪಡೆಯಬೇಕು. ಶಾಲಾ–ಕಾಲೇಜುಗಳಿಂದ ಸಂಗ್ರಹಿಸಿರುವ ತೆರಿಗೆಯನ್ನು ಹಿಂದಿರುಗಿಸಬೇಕು. ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಹೋರಾಟ ಮಾಡಲಾಗುವುದು. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಧ್ಯಪ್ರವೇಶಿಸಿ ಸಮಸ್ಯೆಯನ್ನು ಬಗೆಹರಿಸಬೇಕು' ಎಂದು ಆಗ್ರಹಿಸಿದರು.

ಅವಧಿ ವಿಸ್ತರಿಸಲು ಎಫ್‌ಕೆಸಿಸಿ ಮನವಿ

ಬೆಂಗಳೂರು: ಆಸ್ತಿ ತೆರಿಗೆ ಪಾವತಿಸಲು ಜಾರಿಗೆ ತಂದಿರುವ ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆಯನ್ನು ಆಗಸ್ಟ್ 31ರವರೆಗೆ ವಿಸ್ತರಿಸಬೇಕು ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಮನವಿ ಮಾಡಿದ್ದಾರೆ.

'ವ್ಯಾಪಾರ, ಕೈಗಾರಿಕೆ ಮತ್ತು ಸೇವಾ ವಲಯಗಳ ನಮ್ಮ ಸದಸ್ಯರಿಗೆ ಒಟಿಎಸ್ ಉತ್ತಮ ಯೋಜನೆಯಾಗಿದೆ. ನಮ್ಮ ಅನೇಕ ಸದಸ್ಯರು ತಮ್ಮ ದಾಖಲೆಗಳನ್ನು ಪರಿಶೀಲಿಸುವ ಮತ್ತು ಅಂತಿಮಗೊಳಿಸುವ ಪ್ರಕ್ರಿಯೆಯಲ್ಲಿದ್ದು, ಇದಕ್ಕೆ ಹೆಚ್ಚು ಸಮಯ ಬೇಕಾಗಿರುತ್ತದೆ. ಆದ್ದರಿಂದ ಈ ಯೋಜನೆ ಅವಧಿಯನ್ನು ವಿಸ್ತರಿಸಬೇಕು ಎಂದು ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿಗೆ ಮನವಿ ಮಾಡಲಾಗಿದೆ' ಎಂದು ಅವರು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಅಣಕು ನ್ಯಾಯಾಲಯ ಸ್ಪರ್ಧೆ ಕ್ರೈಸ್ಟ್ ಸಂಸ್ಥೆ ಪ್ರಥಮ



ಚಿದಾನಂದರೆಡ್ಡಿ ಪಾಟೀಲ ಅವರು ಕ್ರೈಸ್ಟ್ ಅಕಾಡೆಮಿ ಇನ್‌ಸ್ಟಿಟ್ಯೂಟ್ ಆಫ್ ಲಾ ಸಂಸ್ಥೆಯ ವಿದ್ಯಾರ್ಥಿಗಳಾದ ಸ್ನೇಹಿಲ್ ಆನಂದ್, ಶೌರ್ಯ ಸಿನ್ಹಾ ಮತ್ತು ಅಪರ್ಣಾ ಕುಮಾರಿ ಅವರಿಗೆ ಬಹುಮಾನ ವಿತರಿಸಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌಂದರ್ಯ ಕಾನೂನು ಕಾಲೇಜು ನಗರದಲ್ಲಿ ಹಮ್ಮಿಕೊಂಡಿದ್ದ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಇಲ್ಲಿನ ಕ್ರೈಸ್ಟ್ ಅಕಾಡೆಮಿ ಇನ್‌ಸ್ಟಿಟ್ಯೂಟ್ ಆಫ್ ಲಾ ಸಂಸ್ಥೆಯ ವಿದ್ಯಾರ್ಥಿಗಳು ಪ್ರಥಮ ಹಾಗೂ ಕೆಎಲ್‌ಇ ಕಾನೂನು ಕಾಲೇಜಿನ ವಿದ್ಯಾರ್ಥಿಗಳು ರನ್ನರ್ ಅಪ್ ಬಹುಮಾನ ಪಡೆದುಕೊಂಡಿದ್ದಾರೆ.

ಪ್ರಥಮ ಬಹುಮಾನ ₹30 ಸಾವಿರ ಹಾಗೂ ರನ್ನರ್ ಅಪ್ ಬಹುಮಾನ ₹20 ಸಾವಿರ ನಗದು ಒಳಗೊಂಡಿದೆ. ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ಅಧ್ಯಕ್ಷ ಚಿದಾನಂದರೆಡ್ಡಿ ಪಾಟೀಲ ಅವರು ಕ್ರೈಸ್ಟ್ ಸಂಸ್ಥೆಯ ಸ್ನೇಹಿಲ್ ಆನಂದ್, ಶೌರ್ಯ ಸಿನ್ಹಾ ಮತ್ತು ಅಪರ್ಣಾ ಕುಮಾರಿ ಅವರಿಗೆ ಬಹುಮಾನ ವಿತರಿಸಿ, ಮಾತನಾಡಿದರು.

'ಕೃತಕ ಬುದ್ಧಿಮತ್ತೆಯ ಅಪಾಯಗಳ ಬಗ್ಗೆ ಅರಿವು ಮುಖ್ಯ. ಈ ತಂತ್ರಜ್ಞಾನದಿಂದ ಎದುರಾಗುವ ಅಪಾಯಗಳನ್ನು ತಪ್ಪಿಸಲು ಸಮಯಕ್ಕೆ ಸರಿಯಾಗಿ ನಮ್ಮ ಜ್ಞಾನವನ್ನು ಬಳಸಿಕೊಳ್ಳಬೇಕು' ಎಂದು ಪಾಟೀಲ ಹೇಳಿದರು.

ಸೌಂದರ್ಯ ಎಜುಕೇಶನ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ವರುಣ್ ಕುಮಾರ್, ಪ್ರಭಾರಿ ಪ್ರಾಂಶುಪಾಲ ಹನುಮಂತೇಗೌಡ ಎನ್.ಎ., ಉಪ ಪ್ರಾಂಶುಪಾಲ ವಿಶ್ವಾಸ್ ಪುಟ್ಟಸ್ವಾಮಿ ಉಪಸ್ಥಿತರಿದ್ದರು.

ಜಿಲ್ಲೆಯಲ್ಲೇ ಸಚಿವರ ಮೊಕ್ಕಾಂಗೆ ಸೂಚಿಸಿ: ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದಲ್ಲಾದ ಭೂ ಕುಸಿತ ಪ್ರಕರಣಗಳಿಂದ ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಜಿಲ್ಲಾ ಉಸ್ತುವಾರಿ ಸಚಿವರು ಆಯಾ ಜಿಲ್ಲಾ ಕೇಂದ್ರಗಳಲ್ಲೇ ಮೊಕ್ಕಾಂ ಹೂಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸಲಹೆ ನೀಡಿದ್ದಾರೆ.

ಅಪಾಯದ ಪ್ರದೇಶಗಳಿಂದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಗೊಳಿಸಬೇಕು. ಜಿಲ್ಲಾಧಿಕಾರಿಗಳು ಸೇರಿ ವಿವಿಧ ಇಲಾಖೆಯ ಅಧಿಕಾರಿಗಳು, ರಕ್ಷಣಾ ಸಿಬ್ಬಂದಿ ದಿನದ 24 ಗಂಟೆಯೂ ಸನ್ನದ್ಧವಾಗಿರಬೇಕು. ಅಪಾಯದ ಸ್ಥಳಗಳಿಂದ ಜನರನ್ನು ತಕ್ಷಣವೇ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿಗೆ ಮನವಿ ಮಾಡಿದ್ದಾರೆ.

ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಸೇರಿ ಕೆಲ ಜಿಲ್ಲೆಗಳಲ್ಲಿ ನಿರಂತರವಾಗಿ ಭೂ ಕುಸಿತ ಸಂಭವಿಸುತ್ತಿವೆ. ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಅಪಾಯದ ಸ್ಥಿತಿ ಇದೆ. ಅನೇಕ ಕಡೆ ರೆಡ್ ಅಲರ್ಟ್ ಘೋಷಿಸಲಾಗಿದೆ. ಇನ್ನೂ ಭಾರಿ ಮಳೆಯ ಮುನ್ಸೂಚನೆ ಇದೆ. ನೆರೆ ರಾಜ್ಯಗಳಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಅಲ್ಲಿನ ಅಣೆಕಟ್ಟೆಗಳಿಂದ ಭಾರಿ ಪ್ರಮಾಣದ ನೀರನ್ನು ಹೊರಬಿಡಲಾಗುತ್ತಿದೆ. ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಪ್ರವಾಹ ಅಪಾಯದ ಮಟ್ಟ ಮೀರಿದ್ದು ನೂರಾರು ಗ್ರಾಮಗಳಿಗೆ ನುಗ್ಗಿ, ಬೆಳೆ ನಾಶವಾಗಿವೆ. ಈ ಕಷ್ಟದ ಸಮಯದಲ್ಲಿ ಎಲ್ಲರೂ ಜನರ ಜತೆಯಲ್ಲಿರಬೇಕು ಎಂದು ಹೇಳಿದ್ದಾರೆ.

ಬಾಲಮಂದಿರದಿಂದ ತಪ್ಪಿಸಿಕೊಂಡು ಸರಗಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಮಂದಿರದಿಂದ ತಪ್ಪಿಸಿಕೊಂಡು ಚಿನ್ನಾಭರಣ, ವಾಹನ ಕಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಕಾನೂನು ಸಂಘರ್ಷಕ್ಕೆ ಒಳಗಾದ ನಾಲ್ವರು ಬಾಲಕರನ್ನು ಪೀಣ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ. ಅವರಿಂದ ₹ 4 ಲಕ್ಷ ಮೌಲ್ಯದ 30 ಗ್ರಾಂ ಚಿನ್ನದ ಸರ, ಎರಡು ದ್ವಿಚಕ್ರ ವಾಹನ ಹಾಗೂ ಆಟೊ ರಿಕ್ಷಾ ವಶಪಡಿಸಿಕೊಂಡಿದ್ದಾರೆ.

'ನಾಲ್ವರನ್ನೂ ಬಾಲ ನ್ಯಾಯ ಮಂಡಳಿ ನ್ಯಾಯಾಧೀಶರ ಎದುರು ಹಾಜರು ಪಡಿಸಲಾಗಿತ್ತು. ನ್ಯಾಯಾಧೀಶರ ನಿರ್ದೇಶನದಂತೆ ಎಲ್ಲರನ್ನೂ ಮಡಿವಾಳದ ಬಾಲಮಂದಿರಕ್ಕೆ ಒಪ್ಪಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹಿಂದೆಯೂ ಸರಗಳ್ಳತನ ಮತ್ತು ದ್ವಿಚಕ್ರ ವಾಹನ ಕಳವು ಪ್ರಕರಣದಲ್ಲಿ ಭಾಗಿಯಾಗಿದ್ದ ನಾಲ್ವರನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿ, ದೇವನಹಳ್ಳಿ ಬಾಲಮಂದಿರಕ್ಕೆ ಕಳುಹಿಸಿದ್ದರು. ಜುಲೈ 9ರಂದು ಅಲ್ಲಿನ ಹಿಂಬಾಗಿಲ ಬೀಗ ಒಡೆದು ತಪ್ಪಿಸಿಕೊಂಡಿದ್ದರು. ಜುಲೈ 14ರಂದು ಕೆಂಪಯ್ಯ ಗಾರ್ಡನ್ ಬಳಿ ಕೆಲಸಕ್ಕೆ ಹೋಗುತ್ತಿದ್ದ ವ್ಯಕ್ತಿಯನ್ನು ಅಡ್ಡಗಟ್ಟಿ, ಕೊರಳಿನಲ್ಲಿದ್ದ 30 ಗ್ರಾಂ. ತೂಕದ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದರು ಎಂದು ವಿವರ ನೀಡಿದರು.

ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲನೆ ನಡೆಸಿದ ಬಳಿಕ ಗಂಗೊಂಡನಹಳ್ಳಿ ಮುಖ್ಯರಸ್ತೆಯಲ್ಲಿ ಕಾನೂನುಸಂಘರ್ಷಕ್ಕೆಒಳಗಾದನಾಲ್ವರು ಬಾಲಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಅವರು ತಪ್ಪೊಪ್ಪಿಕೊಂಡರು. ಅವರಿಂದ ಚಿನ್ನದ ಸರ,ಆಟೊ ರಿಕ್ಷಾ ಹಾಗೂ ಎರಡು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಕುಂಬಳಗೋಡು, ಕೆಂಗೇರಿ, ನಾಯಂಡಹಳ್ಳಿ, ಬ್ಯಾಡರಹಳ್ಳಿಯಲ್ಲಿ ನೆಲೆಸಿರುವ ಈ ಎಲ್ಲರೂ 17 ವರ್ಷದೊಳಗಿನವರು. 6 ರಿಂದ 8 ನೇ ತರಗತಿವರೆಗೆ ಮಾತ್ರ ಓದಿದ್ದಾರೆ. ಇವರ ತಂದೆ, ತಾಯಿ ಕೂಲಿ ಕೆಲಸ ಮಾಡಿಕೊಂಡಿದ್ದಾರೆ. ಮೋಜಿನ ಜೀವನಕ್ಕಾಗಿ ಇವರು ಕಳ್ಳತನಕ್ಕಿಳಿದಿದ್ದಾರೆ. ಕದ್ದ ವಸ್ತುಗಳನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಗಾಂಜಾ, ಮದ್ಯ ಸೇವನೆ ಮಾಡುತ್ತಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಫ್ಲೆಕ್ಸ್, ಬ್ಯಾನರ್‌ಗಳ ನಿಯಂತ್ರಣಕ್ಕೆ ಬಿಬಿಎಂಪಿ–ಪೊಲೀಸ್ ಇಲಾಖೆ ನಡುವೆ ಸಮನ್ವಯ

ಪೊಲೀಸ್ ಠಾಣಾವಾರು ನೋಡಲ್ ಅಧಿಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳ ನಿಯಂತ್ರಣಕ್ಕಾಗಿ ಬಿಬಿಎಂಪಿ ಹಾಗೂ ಪೊಲೀಸ್ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಲಿದ್ದು, ವಲಯ ವ್ಯಾಪ್ತಿಯ ಪೊಲೀಸ್ ಠಾಣಾವಾರು ನೋಡಲ್ ಅಧಿಕಾರಿಯನ್ನು ನಿಯೋಜಿಸಲು ನಿರ್ಧರಿಸಲಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಾಗೂ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ನೇತೃತ್ವದಲ್ಲಿ ಮಂಗಳವಾರ ನಡೆದ ಬಿಬಿಎಂಪಿ ಹಾಗೂ ಪೊಲೀಸ್ ಅಧಿಕಾರಿಗಳ ಸಮನ್ವಯ ಸಭೆಯಲ್ಲಿ ಪ್ರಮಾಣಿತ ಕಾರ್ಯಾಚರಣೆ ವಿಧಾನದ (ಎಸ್‌ಒಪಿ) ಮಾರ್ಗಸೂಚಿಗಳನ್ನು ಹೊರಡಿಸಲು ತೀರ್ಮಾನಿಸಲಾಯಿತು.

ಪ್ರತಿ ಠಾಣೆಯ ವ್ಯಾಪ್ತಿಯಲ್ಲಿ ಪಾಲಿಕೆ ಮತ್ತು ಪೊಲೀಸ್ ಇಲಾಖೆಯಿಂದ ತಲಾ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಲಾಗುತ್ತದೆ. ಇದರಿಂದ ಅಧಿಕಾರಿಗಳ ಮಧ್ಯೆ ಸಮನ್ವಯ ಸಾಧಿಸಲು ನೆರವಾಗುತ್ತದೆ. ಪಾಲಿಕೆ ಅಧಿಕಾರಿಗಳು ಫ್ಲೆಕ್ಸ್ ಮುದ್ರಣ ಘಟಕಗಳ ಪಟ್ಟಿ ಮಾಡಿ, ಪೊಲೀಸ್ ಸಿಬ್ಬಂದಿಯೊಂದಿಗೆ ಘಟಕಗಳಿಗೆ ಭೇಟಿ ನೀಡಿ, ಅನಧಿಕೃತ ಜಾಹೀರಾತುಗಳನ್ನು ಮುದ್ರಿಸದಂತೆ ಎಚ್ಚರಿಕೆ ನೀಡಬೇಕು. ಉಲ್ಲಂಘಿಸಿದವರಿಗೆ ದಂಡ ವಿಧಿಸಿ, ಕಾನೂನು ಕ್ರಮ ಕೈಗೊಳ್ಳಬೇಕು ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ಪಾಲಿಕೆಯ ವಲಯ ವ್ಯಾಪ್ತಿಯಲ್ಲಿ ಅಳವಡಿಸುವ ಅನಧಿಕೃತ ಜಾಹೀರಾತುಗಳ ಮೇಲೆ ರಾತ್ರಿ ವೇಳೆ ನಿಗಾವಹಿಸಲು ಪ್ರಹರಿ ವಾಹನ ನಿಯೋಜಿಸಲಾಗುತ್ತಿದೆ. ಪೊಲೀಸ್ ಸಿಬ್ಬಂದಿಯೂ ರಾತ್ರಿ ವೇಳೆ ಗಸ್ತು ತಿರುಗುತ್ತಿದ್ದು, ಅವರೂ ಈ ಬಗ್ಗೆ ನಿಗಾವಹಿಸಿ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ದಯಾನಂದ ಮಾತನಾಡಿ, 'ಅನಧಿಕೃತವಾಗಿ ಅಳವಡಿಸುತ್ತಿರುವ ಫ್ಲೆಕ್ಸ್, ಬ್ಯಾನರ್‌ಗಳಿಂದ ಸಮಸ್ಯೆಗಳಾಗುತ್ತಿವೆ. ಅದನ್ನು ನಿಯಂತ್ರಿಸುವಲ್ಲಿ ಪಾಲಿಕೆಗೆ ಪೊಲೀಸ್ ಇಲಾಖೆ ಸಂಪೂರ್ಣ ಸಹಕಾರ ನೀಡಲಿದೆ' ಎಂದು ಹೇಳಿದರು

ಅನಧಿಕೃತವಾಗಿ ಫ್ಲೆಕ್ಸ್, ಬ್ಯಾನರ್‌ಗಳನ್ನು ಅಳವಡಿಸುವವರ ವಿರುದ್ಧ ಕರ್ನಾಟಕ ತೆರೆದ ಸ್ಥಳಗಳು ಕಾಯ್ದೆ (ಕೆಒಪಿಡಿ) ಜೊತೆಗೆ ಇತರೆ ಕಾಯ್ದೆ ಅಡಿಯಲ್ಲಿಯೂ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

ಬಿಬಿಎಂಪಿ ವಲಯ ಆಯುಕ್ತರಾದ ಡಾ. ಆರ್.ಎಲ್ ದೀಪಕ್, ರಮೇಶ್, ಶಿವಾನಂದ್, ರಮ್ಯಾ, ಸ್ನೇಹಲ್, ವಿನೋತ್ ಪ್ರಿಯಾ, ಹೆಚ್ಚುವರಿ ಪೊಲೀಸ್ ಕಮಿಷರ್‌ಗಳಾದ ಸತೀಶ್ ಕುಮಾರ್, ರಮಣ ಗುಪ್ತ, ಡಿಸಿಪಿಗಳು, ಎಸಿಪಿಗಳು, ಬಿಬಿಎಂಪಿ ಜಾಹೀರಾತು ವಿಭಾಗದ ಉಪ ಆಯುಕ್ತರು, ಸಹಾಯಕ ಆಯುಕ್ತರು ಸಭೆಯಲ್ಲಿದ್ದರು.


ಸಮನ್ವಯ ಸಭೆಯಲ್ಲಿ ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಾಗೂ ನಗರ ಪೊಲೀಸ್ ಕಮಿಷನರ್ ದಯಾನಂದ್ ಭಾಗವಹಿಸಿದ್ದರು

ಫ್ಲೆಕ್ಸ್ ನಿಯಂತ್ರಣಕ್ಕೆ ಆ್ಯಪ್

ನಗರದಲ್ಲಿ ಅನಧಿಕೃತವಾಗಿ ಅಳವಡಿಸುತ್ತಿರುವ ಫ್ಲೆಕ್ಸ್, ಬ್ಯಾನರ್‌ಗಳನ್ನು ನಿಯಂತ್ರಿಸಲು ಹಾಗೂ ತೆರವುಗೊಳಿಸಲು ಅನುವಾಗುವಂತೆ ಬಿಬಿಎಂಪಿಯಿಂದ ಮೊಬೈಲ್ ಅಪ್ಲಿಕೇಷನ್ ಸಿದ್ದಪಡಿಸಲು ಚಿಂತಿಸಲಾಗಿದೆ ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ನಗರದಲ್ಲಿ ಜುಲೈ 1ರಿಂದ 8,500ಕ್ಕೂ ಹೆಚ್ಚು ಫ್ಲೆಕ್ಸ್/ಬ್ಯಾನರ್ ಗಳನ್ನು ತೆರವುಗೊಳಿಸಿ, 180ಕ್ಕೂ ಹೆಚ್ಚು ಎಫ್ಐಆರ್ ದಾಖಲಿಸಲಾಗಿದೆ ಎಂದು ಹೇಳಿದರು.

ಅನಧಿಕೃತ ಫ್ಲೆಕ್ಸ್/ ಬ್ಯಾನರ್‌ಗಳು ಕಂಡುಬಂದರೆ ಪಾಲಿಕೆಯ ಸಹಾಯವಾಣಿ 1533ಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದರು.

ಬಿಡಿಎ ಕಾಂಪ್ಲೆಕ್ಸ್ ಗುತ್ತಿಗೆ ಆದೇಶ ವಾಪಸ್‌ಗೆ ಆಗ್ರಹ

ಬೊಮ್ಮನಹಳ್ಳಿ: ಎಚ್‌ಎಸ್‌ಆರ್ ಬಡಾವಣೆಯಲ್ಲಿರುವ ಬಿಡಿಎ ವಾಣಿಜ್ಯ ಸಂಕೀರ್ಣವನ್ನು ಖಾಸಗಿಯವರಿಗೆ ಗುತ್ತಿಗೆಗೆ ನೀಡುವ ಆದೇಶವನ್ನು ವಾಪಸ್ ಪಡೆಯುವಂತೆ ಶಾಸಕ ಸತೀಶ್ ರೆಡ್ಡಿ ಸರ್ಕಾರವನ್ನು ಆಗ್ರಹಿಸಿದರು.

ಎಚ್‌ಎಸ್‌ಆರ್ ಬಡಾವಣೆಯ ಬಿಡಿಎ ಕಾಂಪ್ಲೆಕ್ಸ್‌ನಲ್ಲಿ ಮಂಗಳವಾರ 'ಬಿಡಿಎ ಕಾಂಪ್ಲೆಕ್ಸ್ ಉಳಿಸಿ ಹೋರಾಟ ಸಮಿತಿ' ಆಯೋಜಿಸಿದ್ದ ನಾಗರಿಕ ಪ್ರತಿರೋಧ ಸಮಾವೇಶದಲ್ಲಿ ಅವರು ಮಾತನಾಡಿದರು.

'ಹತ್ತು ವರ್ಷಗಳಿಂದಲೂ ಬಿಡಿಎ ಕಾಂಪ್ಲೆಕ್ಸ್ ಖಾಸಗೀಕರಣಗೊಳಿಸುವ ಪ್ರಯತ್ನ ನಡೆದಿದೆ. ಹಿಂದಿನ ಯಾವ ಸರ್ಕಾರಗಳೂ ಇದಕ್ಕೆ ಆಸ್ಪದ ನೀಡಿರಲಿಲ್ಲ. ಈ ವಿಚಾರವಾಗಿ ವಿಧಾನಸಭೆಯಲ್ಲಿ ಚರ್ಚೆಗಾಗಿ ಪ್ರಶ್ನೆ ಕಳುಹಿಸಿದ್ದರೂ, ಬೇಕೆಂದೇ ಚರ್ಚೆಗೆ ತೆಗೆದುಕೊಳ್ಳಲಿಲ್ಲ ಮತ್ತು ಉತ್ತರವನ್ನೂ ನೀಡಿಲ್ಲ' ಎಂದು ಸತೀಶ್ ರೆಡ್ಡಿ ಆರೋಪಿಸಿದರು.

'ಬಿಡಿಎ ಕಾಂಪ್ಲೆಕ್ಸ್‌ಗಳನ್ನು ಗುತ್ತಿಗೆಗೆ ನೀಡಿರುವ ಪ್ರಕ್ರಿಯೆ ಹಿಂದೆ ಸರ್ಕಾರದ ಮಂತ್ರಿಯೊಬ್ಬರಿದ್ದಾರೆ. ಎಂ-ಫಾರ್ ಕಂಪನಿಯಲ್ಲಿ ಕೆಲವು ಮಂತ್ರಿಗಳೂ ಪಾಲುದಾರರು. ಆ ಕಾರಣಕ್ಕಾಗಿಯೇ ಶೈತ್ಯಾಗಾರದಲ್ಲಿದ್ದ ಯೋಜನೆಯನ್ನು ತರಾತುರಿಯಲ್ಲಿ ಜಾರಿಗೆ ತರಲು ಹೊರಟಿದ್ದಾರೆ, ಯಾವ ಕಾರಣಕ್ಕೂ ಈ ಕಾಂಪ್ಲೆಕ್ಸ್ ಗುತ್ತಿಗೆಗೆ ನೀಡಲು ಬಿಡುವುದಿಲ್ಲ' ಎಂದರು.

ಬಹುಜನ ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಆರ್.ಎಂ.ಎನ್. ರಮೇಶ್, 'ಈ ಭಾಗದ ರೈತರು ಬಿಡಿಎಗೆ ವಸತಿ ಉದ್ದೇಶಕ್ಕೆ ನೀಡಿದ್ದಾರೆ. ರೈತರು ಕೊಟ್ಟ ಆಸ್ತಿಯನ್ನು ಖಾಸಗಿ ಕಂಪನಿಗೆ ಕೊಡುವುದು ರೈತರಿಗೆ ಮಾಡುವ ದ್ರೋಹ' ಎಂದರು.

ಹೆಚ್‌ಎಸ್‌ಆರ್ ಬಡಾವಣೆಯ ನಿವಾಸಿಗಳ ಸಂಘದ ಮುಖ್ಯಸ್ಥೆ ಡಾ.ಶಾಂತ ಮಾತನಾಡಿ 'ಬಿಡಿಎ ವಾಣಿಜ್ಯ ಸಂಕೀರ್ಣವನ್ನು ಖಾಸಗಿಯವರಿಗೆ ನೀಡುವುದು ಸರಿಯಲ್ಲ. ಇಲ್ಲಿ ಬೃಹತ್ ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಿಸುವುದರಿಂದ ಇಲ್ಲಿ ಸಂಚಾರ ದಟ್ಟಣೆ ಹೆಚ್ಚಲಿದ್ದು, ಪರಿಸರವೂ ಹಾಳಾಗುತ್ತದೆ' ಎಂದರು.

ಬಿಜೆಪಿ ಮುಖಂಡರಾದ ಮುರಳೀಧರ್, ಸೈಯದ್ ಸಲಾಂ, ನಿವಾಸಿಗಳ ಸಂಘದ ಅಧ್ಯಕ್ಷ ಬಿ.ಎನ್. ಎಸ್.ರೆಡ್ಡಿ, ಹೋರಾಟ ಸಮಿತಿ ಮುಖಂಡ ನಾಗೇಶ್, ದಲಿತ ಮುಖಂಡ ಚಂದ್ರಪ್ಪ, ಕೋರಮಂಗಲ ಧನಪಾಲ್ ಇದ್ದರು.


ಬಿಡಿಎ ಕಾಂಪ್ಲೆಕ್ಸ್ ಉಳಿಸಿ ಹೋರಾಟ ಸಮಿತಿ ಸದಸ್ಯರು ಹಾಗೂ ಎಚ್‌ಎಸ್‌ಆರ್ ಬಡಾವಣೆ ನಿವಾಸಿಗಳು ಶಾಸಕ ಸತೀಶ್ ರೆಡ್ಡಿ ಅವರಿಗೆ ಮನವಿ ಪತ್ರ ನೀಡಿದರು.

ಮುಖ್ಯಮಂತ್ರಿ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತ ವಿರೋಧಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜೀನಾಮೆ ನೀಡಲು ಸೂಚಿಸಬೇಕು. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಆಗಿರುವ ಹಗರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು' ಎಂದು ಆಗ್ರಹಿಸಿ ಸ್ವಾಭಿಮಾನಿ ಎಸ್‌ಸಿ–ಎಸ್‌ಟಿ ಸಂಘಟನೆಗಳ ಒಕ್ಕೂಟವು ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆ.

'ಪರಿಶಿಷ್ಟ ಜಾತಿ, ಪಂಗಡಗಳ ಅಭಿವೃದ್ಧಿಗೆ ಒಂದೇ ನಿಗಮ ಇದ್ದಾಗ ಭ್ರಷ್ಟಾಚಾರ ನಡೆಯದೇ ಈ ಸಮುದಾಯಗಳ ಫಲಾನುಭವಿಗಳಿಗೆ ಯೋಜನೆಗಳ ಉಪಯೋಗ ಸಿಗುತ್ತಿತ್ತು. ಭ್ರಷ್ಟಾಚಾರ ಬಹಳ ಕಡಿಮೆ ಇತ್ತು. ಈ ನಿಗಮ ಜಾತಿ, ಉಪ ಜಾತಿಗಳ ಹೆಸರಲ್ಲಿ ವಿಭಜನೆಗೊಂಡ ಬಳಿಕ ಶಾಸಕರ, ಜಾತಿ ಸಂಘಟನೆಗಳ ಮುಖಂಡರ ಹಿಡಿತಕ್ಕೆ ಸಿಲುಕಿರುವ ಅವು ಲೂಟಿ ಕೇಂದ್ರಗಳಾದವು' ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಅತ್ಯಾಚಾರ: ಗ್ರಾ.ಪಂ. ಸದಸ್ಯ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹಿಣಿ ಮೇಲೆ ಅತ್ಯಾಚಾರ ಮಾಡಿದ ಆರೋಪದಡಿ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿಯ ಗೊಲ್ಲರಹಳ್ಳಿ ಗ್ರಾಮದ ಕರಗುಂದ ಗ್ರಾಮ ಪಂಚಾಯಿತಿ ಸದಸ್ಯ ದಯಾನಂದ ಅಲಿಯಾಸ್ ಡಾಬಾ ದಯಾನಂದ (39) ಎಂಬಾತನನ್ನು ಬಾಗಲಗುಂಟೆ ಪೊಲೀಸರು ಬಂಧಿಸಿದ್ದಾರೆ.


ದಯಾನಂದ

'ನಗರದ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿರುವ ಸಂತ್ರಸ್ತೆಗೆ ಕೆಲ ತಿಂಗಳ ಹಿಂದೆ ಆರೋಪಿ ಪರಿಚಯವಾಗಿದ್ದಾನೆ. ಠಾಣೆಯ ವ್ಯಾಪ್ತಿಯಲ್ಲಿ ವಾಸವಿರುವ ಮಹಿಳೆಗೆ ಯಾವುದೋ ದೋಷವಿದೆ ಎಂದು ಸುಳ್ಳು ಹೇಳಿ ಆಗಾಗ್ಗೆ ನಿಂಬೆಹಣ್ಣು ಮಂತ್ರಿಸಿ, ತಲೆದಿಂಬಿನ ಕೆಳಗೆ ಇಟ್ಟುಕೊಳ್ಳುವಂತೆ ಕೊಡುತ್ತಿದ್ದ. ಹಲವು ಬಾರಿ ಆರೋಪಿ ಬೆಂಗಳೂರಿಗೆ ಬಂದು ಮಹಿಳೆಯನ್ನು ಭೇಟಿ ಮಾಡಿ ಮಂತ್ರಿಸಿದ ನಿಂಬೆಹಣ್ಣು ಕೊಟ್ಟು ಹೋಗುತ್ತಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಈತ ಅರಸೀಕೆರೆಯ ಪುರದಮ್ಮ ದೇವಸ್ಥಾನದಲ್ಲಿ ಅಮಾವಾಸ್ಯೆ ಹಾಗೂ ಇತರೆ ವಿಶೇಷ ದಿನಗಳಲ್ಲಿ ಪೂಜೆ ಮಾಡುತ್ತಿದ್ದ. ಜೈ ಕರ್ನಾಟಕ ಜನಪರ ವೇದಿಕೆ ಎಂಬ ಸಂಘಟನೆಯ ಅರಸೀಕೆರೆ ಘಟಕದ ಅಧ್ಯಕ್ಷನೂ ಆಗಿದ್ದಾನೆ. ದೋಷ ನಿವಾರಣೆ ಪೂಜೆ ಮಾಡುವುದಾಗಿ ಹೇಳಿ ಮಹಿಳೆಯಿಂದ ₹ 1.20 ಲಕ್ಷ ಹಣವನ್ನು ಫೋನ್ ಪೇ ಮೂಲಕ ಹಾಕಿಸಿಕೊಂಡಿದ್ದಾನೆ. ಅಲ್ಲದೇ ಹಲವು ಬಾರಿ ಅವರ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದಾನೆ' ಎಂದು ಪೊಲೀಸರು ಹೇಳಿದ್ದಾರೆ.

'ಮೂರು ದಿನಗಳ ಹಿಂದೆ ಬೆಂಗಳೂರಿಗೆ ಬಂದಿದ್ದ ಆರೋಪಿ, ಮಹಿಳೆಯನ್ನು ಲಾಡ್ಜ್‌ಗೆ ಕರೆದೊಯ್ದು ಅತ್ಯಾಚಾರವೆಸಗಿದ್ದಾನೆ. ಅಲ್ಲದೇ ಅವರ ಬೆತ್ತಲೆ ಚಿತ್ರವನ್ನು ಮೊಬೈಲ್‌ನಲ್ಲಿ ಸೆರೆಹಿಡಿದು, ಯಾರಿಗಾದರೂ ವಿಷಯ ತಿಳಿಸಿದರೆ, ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದಾಗಿ ಬೆದರಿಕೆ ಹಾಕಿದ್ದಾನೆ. ಮಹಿಳೆಗೆ ಈಗಾಗಲೇ ಮದುವೆ ಆಗಿದೆ. ಆದರೂ ಆತ ತನ್ನನ್ನು ಮದುವೆ ಆಗುವಂತೆ ಪೀಡಿಸುತ್ತಿದ್ದ. ಈ ಸಂಬಂಧ ಮಹಿಳೆ ದೂರು ನೀಡಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ನಗರದ ಹಲವೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹಲವು ಪ್ರದೇಶಗಳಲ್ಲಿ ಮಂಗಳವಾರ ಉತ್ತಮ ಮಳೆಯಾಗಿದೆ.

ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣವಿತ್ತು. ಅಲ್ಲಲ್ಲಿ ತುಂತುರು ಮಳೆಯಾಗುತ್ತಿತ್ತು. ಮಧ್ಯಾಹ್ನದ ನಂತರ ರಾತ್ರಿಯವರೆಗೂ ಬಹುತೇಕ ಪ್ರದೇಶಗಳಲ್ಲಿ ಸುಮಾರು 5 ಮಿ.ಮೀ.ನಷ್ಟು ಮಳೆಯಾಗಿದೆ.

ಹೇರೋಹಳ್ಳಿ, ಚೌಡೇಶ್ವರಿ ವಾರ್ಡ್, ಯಲಹಂಕ, ಬಾಗಲಗುಂಟೆ, ಯಶವಂತಪುರ, ಹೆಬ್ಬಾಳ, ಮಾರುತಿ ಮಂದಿರ, ಹಂಪಿನಗರ, ಕೆಂಗೇರಿ, ನಾಯಂಡಹಳ್ಳಿ, ಆರ್.ಆರ್. ನಗರ, ವನ್ನಾರ್‌ಪೇಟೆ, ಬಿಟಿಎಂ ಲೇಔಟ್, ಮಾರತ್‌ಹಳ್ಳಿ, ಮಹದೇವಪುರ, ವಿಜ್ಞಾನನಗರ, ಹೂಡಿ, ಪುಲಕೇಶಿನಗರ, ಸಂಪಂಗಿರಾಮನಗರ, ಕಾಟನ್‌ಪೇಟೆ, ರಾಜಮಹಲ್ ಗುಟ್ಟಹಳ್ಳಿ ಸುತ್ತಮುತ್ತಲ ಪ್ರದೇಶ ಸೇರಿದಂತೆ ವಿವಿಧೆಡೆ ಉತ್ತಮ ಮಳೆ ಸುರಿಯಿತು.


ನಗರದ ಶೇಷಾದ್ರಿಪುರದಲ್ಲಿ ತುಂತುರು ಮಳೆಯಲ್ಲಿ ಬಸ್‌ಗಾಗಿ ಕೊಡೆ ಹಿಡಿದು ಕಾದ ಜನ —ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

2024–25ನೇ ಸಾಲಿನ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ: ಸೀಮಾ ರಾಯ್ಕರ್, ಅತಿಥಿ: ಸಚಿನ್ ಬನವಾಸಿ, ಅಧ್ಯಕ್ಷತೆ: ಎನ್.ಪಿ. ಕಾರ್ತಿಕ್, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 11.30

'ಹಂಸ ಸಾಂಸ್ಕೃತಿಕ ಸೌರಭ', 'ಹಂಸ ಸಮ್ಮಾನ್ ಪ್ರಶಸ್ತಿ' ಪ್ರದಾನ: ಉದ್ಘಾಟನೆ: ಬಸವರಾಜ ಹೊರಟ್ಟಿ, ಅಧ್ಯಕ್ಷತೆ: ಶ್ರೀನಿವಾಸ ಜಿ. ಕಪ್ಪಣ್ಣ, ಅತಿಥಿಗಳು: ಡಾ.ಸಿ. ರಾಮಚಂದ್ರ, ಬಿ.ಆರ್. ಹಿರೇಮಠ, ಅಶೋಕ್ ಎನ್. ಚಲವಾದಿ, ಕೆ. ಶಶಿಕಲಾ, ಎಸ್.ಟಿ. ಉದಯಕುಮಾರ್, ಆರ್. ಚಂದ್ರಶೇಖರ್, ಆಯೋಜನೆ: ಹಂಸಜ್ಯೋತಿ ಟ್ರಸ್ಟ್, ಸ್ಥಳ: ಸಾಂಸ್ಕೃತಿಕ ಸಮುಚ್ಛಯ ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4.30

'ಏಕಲವ್ಯ' ನಾಟಕ ಪ್ರದರ್ಶನ: ರಚನೆ: ಕುವೆಂಪು, ನಿರ್ದೇಶನ: ಶಾಂತಕುಮಾರ್, ಅತಿಥಿಗಳು: ಆನಂದ್, ಗಜೇಂದ್ರ, ಸಂಗಮೇಶ್, ರವೀಂದ್ರ, ಆಯೋಜನೆ: ಕಾವೇರಿ ಕಲಾ ಸಂಘ, ಸ್ಥಳ: ಲಾಸ್ಯ ರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6.30

'ಒಂದಾನೊಂದು ಕಾಲದಲ್ಲಿ' ನಾಟಕ ಪ್ರದರ್ಶನ: ರಚನೆ: ಗಿರೀಶ್ ಕಾರ್ನಾಡ್, ನಿರ್ದೇಶನ: ರಾಜಗುರು ಹೊಸಕೋಟೆ, ಆಯೋಜನೆ: ರಂಗ ಪಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

'ಅಲಿಬಾಬಾ ಮತ್ತು 40 ಕಳ್ಳರು' ನಾಟಕ ಪ್ರದರ್ಶನ: ರಚನೆ: ಚಂದ್ರಶೇಖರ ಕಂಬಾರ, ನಿರ್ದೇಶನ: ಶ್ರೀಮಂತ ಸುರೇಶ, ಆಯೋಜನೆ: ಸಾಫಲ್ಯ, ಸ್ಥಳ: ರಂಗಶಂಕರ, ಸಂಜೆ 7.30

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಅದಿತಿ ದೇವಿಪ್ರಸಾದ್ ಮತ್ತು ತಂಡ, ಆಯೋಜನೆ: ಶಾರದಾ ನೃತ್ಯಾಲಯ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.
nagaradalli_indu@prajavani.co.in

ಅಂಬೇಡ್ಕರ್ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಜ್ಞಾನಪ್ರಕಾಶ ಸ್ವಾಮೀಜಿ ಕಳವಳ

‘ಧರ್ಮಾಧಾರಿತ ದೇಶವಾಗಿಸುವ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತವನ್ನು ಧರ್ಮಾಧಾರಿತ ದೇಶವನ್ನಾಗಿಸುವ ಯತ್ನ ನಡೆಯುತ್ತಿದೆ. ಹಾಗೆ ಮಾಡಲು ಮಾಡಲು ಬಿಟ್ಟರೆ, 500 ವರ್ಷಗಳಷ್ಟು ಹಿಂದೆ ಹೋಗಬೇಕಾಗುತ್ತದೆ. ಅದನ್ನು ತಡೆಯಲು ನಮ್ಮ ಬಳಿ ಇರುವ ರಕ್ಷಾ ಕವಚ ಸಂವಿಧಾನ’ ಎಂದು ಮೈಸೂರಿನ ಉರಿಲಿಂಗಪೆದ್ದಿ ಮಹಾಸಂಸ್ಥಾನ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಕಳವಳ ವ್ಯಕ್ತಪಡಿಸಿದರು.

ಬೆಂಗಳೂರು ಜಲಮಂಡಳಿ ಮತ್ತು ಬೆಂಗಳೂರು ಜಲಮಂಡಳಿ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕ್ಷೇಮಾಭಿವೃದ್ಧಿ ಸಂಘವು ಆಯೋಜಿಸಿದ್ದ ‘ಬಿ.ಆರ್. ಅಂಬೇಡ್ಕರ್ ಅವರ 133ನೇ ಜನ್ಮದಿನಾಚರಣೆ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ನಮ್ಮ ಮಂದಿರ, ಮಠ, ಮಸೀದಿ ಮತ್ತು ಚರ್ಚುಗಳನ್ನೆಲ್ಲಾ ರಕ್ಷಿಸುತ್ತಿರುವುದು ಸಂವಿಧಾನ’ ಎಂದರು.

‘ಭಾರತವನ್ನು ಧರ್ಮಾಧಾರಿತ ದೇಶವನ್ನಾಗಿಸುವ ಯತ್ನಗಳ ಮತ್ತು ಏಕವ್ಯಕ್ತಿ ಪೂಜೆಯ ಅಪಾಯಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕು. 330 ಕೋಟಿ ದೇವರುಗಳು ನಮಗ್ಯಾರಿಗೂ ಯಾವ ಹಕ್ಕು ಮತ್ತು ಅಧಿಕಾರಗಳನ್ನು ನೀಡಿಲ್ಲ. ನಮಗೆಲ್ಲ ರಿಗೂ ಹಕ್ಕುಗಳನ್ನು ಅಂಬೇಡ್ಕರ್ ಮತ್ತು ಸಂವಿಧಾನವನ್ನು ಜೀವಿಸಬೇಕು’ ಎಂದರು.



ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಶಿವಶಂಕರ್ ಡಿ., ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್, ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್ ಮತ್ತು ಉರಿಲಿಂಗಪೆದ್ದಿ ಮಹಾಸಂಸ್ಥಾನ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಬಿ.ಆರ್. ಅಂಬೇಡ್ಕರ್ ಅವರ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ನೀಡಿದ್ದು ಸಂವಿಧಾನ. ನಾವೆಲ್ಲರೂ ‘ಸಂವಿಧಾನ ಮತ್ತು ಮಹಿಳಾ ಹಕ್ಕುಗಳು’ ಕುರಿತು ಮಾತನಾಡಿದ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್ ಅವರು, ‘ಸಂವಿಧಾನವು ದೇಶದ ಎಲ್ಲ ಮಹಿಳೆಯರಿಗೆ ಶಿಕ್ಷಣ, ಉದ್ಯೋಗಾವಕಾಶ, ಸಮಾನತೆ ನೀಡಿದೆ. ವಿವಾಹ, ವಿಚ್ಛೇದನ, ಕೌಟುಂಬಿಕ ದೌರ್ಜನ್ಯ ಸೇರಿ ಎಲ್ಲ ಸಂದರ್ಭಗಳಲ್ಲೂ ಮಹಿಳೆಯ ನೆರವಿಗೆ ನಿಲ್ಲುವ ಕಾನೂನುಗಳನ್ನು ಸಂವಿಧಾನ ಹೊಂದಿದೆ. ಆದರೆ, ಆ ಕಾನೂನುಗಳು ಎಷ್ಟರಮಟ್ಟಿಗೆ ಅನುಷ್ಠಾನ ವಾಗುತ್ತಿವೆ ಎಂಬುದೇ ಕಳವಳಕಾರಿ ವಿಷಯ’ ಎಂದರು.

ಹೋರಾಟದ ಎಚ್ಚರಿಕೆ

‘ಬೆಂಗಳೂರು ಜಲಮಂಡಳಿಯಲ್ಲಿ ಹಲವು ಉನ್ನತ ಹುದ್ದೆಗಳಿಗೆ ನೇಮಕಾತಿ ನಡೆದಿಲ್ಲ. ಬಡ್ತಿ ನೀಡಿ ಆ ಹುದ್ದೆಗೆ ನೇಮಕ ಮಾಡಬಹುದಾದ ಹಲವು ಮಂದಿ ಜಲಮಂಡಳಿಯಲ್ಲಿ ಹಲವರು ಇದ್ದಾರೆ. ಆದರೆ ಬೇರೆಡೆಯಿಂದ ಆ ಹುದ್ದೆಗಳಿಗೆ ನಿಯೋಜನೆ ಮಾಡಲಾಗುತ್ತಿದೆ. ಇದರಿಂದ ಜಲಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನೌಕರರಿಗೆ ಅನ್ಯಾಯವಾಗುತ್ತಿದೆ’ ಎಂದು ಜಲಮಂಡಳಿ ಪರಿಶಿಷ್ಟ ಜಾತಿ ಮತ್ತು ವರ್ಗಗಳ ನೌಕರರ ಸಂಘದ ಅಧ್ಯಕ್ಷ ಸದಾಶಿವ ಕಾಂಬಳೆ ಹೇಳಿದರು.

ಜ್ಞಾನಪ್ರಕಾಶ ಸ್ವಾಮೀಜಿ, ‘ಮಂಡಳಿಯ ಎಲ್ಲ ನೌಕರರ ಪಟ್ಟಿಯನ್ನು ಜ್ಯೇಷ್ಠತೆ ಆಧಾರದಲ್ಲಿ ಮಾಡಬೇಕು. ಎಲ್ಲ ಸಮುದಾಯಗಳ ನೌಕರರಿಗೂ ನ್ಯಾಯ ಸಿಗುವಂತೆ ಮಾಡಬೇಕು. ಇಲ್ಲದೇ ಇದ್ದಲ್ಲಿ ಹೋರಾಟ ನಡೆಸುತ್ತೇವೆ’ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ ಅವರನ್ನು ಉದ್ದೇಶಿಸಿ ಹೇಳಿದರು.

> **ಧರ್ಮಶಾಸ್ತ್ರಗಳು ಮಹಿಳೆಯನ್ನು ಪೂಜನೀಯ ಸ್ಥಾನದಲ್ಲಿ ಇರಿಸಿ, ಆಕೆಯ ಬಾಯಿಮುಚ್ಚಿಸಿವೆ. ಆಕೆಗೆ ಮಾತನಾಡುವ, ದುಡಿಯುವ ಎಲ್ಲ ಹಕ್ಕು ನೀಡಿದ್ದು ಸಂವಿಧಾನ ಮಾತ್ರ**
> **ಮಂಜುಳಾ ಚೆಲ್ಲೂರ್**
> ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ

ಸುದ್ದಿ 2 ನಿಮಿಷ

ವಿದ್ಯುತ್ ಪೂರೈಕೆಯಲ್ಲಿ ದೋಷ ಮೆಟ್ರೊ ಸಂಚಾರದಲ್ಲಿ ವ್ಯತ್ಯಯ

ಬೆಂಗಳೂರು: ವಿದ್ಯುತ್ ಪೂರೈಕೆಯಲ್ಲಿ ದೋಷ ಕಾಣಿಸಿಕೊಂಡಿದ್ದ ಕಾರಣದಿಂದ ‘ನಮ್ಮ ಮೆಟ್ರೊ’ ಹಸಿರು ಮಾರ್ಗದ ಆರ್.ವಿ. ರಸ್ತೆ– ರೈಲ್ವೆ ಸಂಸ್ಥೆ ನಿಲ್ದಾಣಗಳ ಮಧ್ಯೆ ಮಂಗಳವಾರ ಸಂಜೆ 5.33ರಿಂದ 7.05ರವರೆಗೆ ರೈಲು ಸಂಚಾರ ಸ್ಥಗಿತಗೊಂಡಿತ್ತು.

ಆರ್.ವಿ. ರಸ್ತೆಯಿಂದ ಬನಶಂಕರಿ, ಯಲಚೇನಹಳ್ಳಿ, ಕನಕಪುರ ರಸ್ತೆ ಕಡೆಗೆ ಹೋಗಬೇಕಿದ್ದ ಪ್ರಯಾಣಿಕರು ಆರ್.ವಿ.ರಸ್ತೆಯ ಮೆಟ್ರೊ ನಿಲ್ದಾಣ ಸಮೀಪವೇ ಪರದಾಡುವಂತಾಯಿತು. ನಿಲ್ದಾಣದ ರಸ್ತೆಯಲ್ಲಿ ವಾಹನದಟ್ಟಣೆಯೂ ಹೆಚ್ಚಾಗಿತ್ತು.

‘ವಿದ್ಯುತ್ ಪೂರೈಕೆಯ ದೋಷವನ್ನು ಸರಿಪಡಿಸಲಾಗಿದ್ದು, ಹಸಿರು ಮಾರ್ಗದಲ್ಲಿ ಪೂರ್ಣ ಸಂಚಾರ ಸಂಜೆ 7.05ರಿಂದ ಆರಂಭವಾಯಿತು’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

ಕ್ರೇನ್ ಬಿದ್ದು, ಸಂಚಾರಕ್ಕೆ ಅಡಚಣೆ: ‘ನಮ್ಮ ಮೆಟ್ರೊ’ ನೀಲಿ ಮಾರ್ಗದ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿದ್ದ ಕ್ರೇನ್ ಬಿದ್ದು, ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಸಂಚಾರಕ್ಕೆ ಅಡಚಣೆಯಾಯಿತು.

ಎಚ್‌ಎಸ್‌ಆರ್ ಲೇಔಟ್ 5ನೇ ಮುಖ್ಯರಸ್ತೆ ಹಾಗೂ 14ನೇ ಮುಖರಸ್ತೆ ನಡುವಿನ ಸರ್ವೀಸ್ ರಸ್ತೆಯಲ್ಲಿ ಮಂಗಳವಾರ ಬೆಳಿಗ್ಗೆ ಕ್ರೇನ್ ಬಿದ್ದುಹೋಯಿತು. ಈ ಪ್ರದೇಶದಲ್ಲಿ ಬೆಳಿಗ್ಗೆ 8.30ರಿಂದ 10ರವರೆಗೆ ವಾಹನ ದಟ್ಟಣೆ ಹೆಚ್ಚಾಗಿತ್ತು. ರಾಗಿಗುಡ್ಡ ಮತ್ತು ರೇಷ್ಮೆ ಮಂಡಳಿಯಿಂದ ಇಬ್ಲೂರು ಕಡೆಗೂ ಸಂಚಾರ ನಿಧಾನಗತಿಯಲ್ಲಿತ್ತು. ಕ್ರೇನ್ ಅನ್ನು ಮಧ್ಯಾಹ್ನದ ವೇಳೆಗೆ ಸ್ಥಳದಿಂದ ತೆರವುಗೊಳಿಸಲಾಯಿತು. ನಂತರ ವಾಹನ ಸಂಚಾರ ಯಥಾಸ್ಥಿತಿಗೆ ಮರಳಿತು ಎಂದು ಪೊಲೀಸರು ತಿಳಿಸಿದರು.

ಡೆಂಗಿ: ಸಕ್ರಿಯ ಪ್ರಕರಣ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ 395 ಮಂದಿ ಹೊಸದಾಗಿ ಡೆಂಗಿ ಪೀಡಿತರಾಗಿರುವುದು ಮಂಗಳವಾರ ದೃಢಪಟ್ಟಿದ್ದು, ಈ ಜ್ವರ ಪೀಡಿತರಲ್ಲಿ 469 ಮಂದಿ ಗುಣಮುಖರಾಗಿದ್ದಾರೆ. ಇದರಿಂದಾಗಿ ಸಕ್ರಿಯ ಡೆಂಗಿ ಪ್ರಕರಣಗಳ ಸಂಖ್ಯೆ 2,737ಕ್ಕೆ ಇಳಿಕೆಯಾಗಿದೆ.

ಡೆಂಗಿ ಪೀಡಿತರಲ್ಲಿ ಸದ್ಯ 2,271 ಮಂದಿ ಮನೆ ಆರೈಕೆಗೆ ಒಳಗಾದರೆ, ತೀವ್ರ ನಿಗಾ ಘಟಕದಲ್ಲಿರುವ 8 ಮಂದಿ ಸೇರಿ 466 ಮಂದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 24 ಗಂಟೆಗಳ ಅವಧಿ ಯಲ್ಲಿ 2,462 ಪರೀಕ್ಷೆ ನಡೆಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 216 ಸೇರಿ 26 ಜಿಲ್ಲೆಗಳಲ್ಲಿ ಹೊಸ ಡೆಂಗಿ ಪ್ರಕರಣಗಳು ಖಚಿತಪಟ್ಟಿವೆ. ರಾಮನಗರ (26), ಕಲಬುರಗಿಯಲ್ಲಿ (25) ಅಧಿಕ ಪ್ರಕರಣಗಳು ವರದಿ ಆಗಿವೆ.

‘ಕನ್ನಡದ ಬಗ್ಗೆ ಜಾಗೃತಿ ಮೂಡಿಸಿದ್ದ ಜವರೇಗೌಡ’

ಪ್ರಜವಾಣಿ ವಾರ್ತೆ

ಬೆಂಗಳೂರು: ‘ದೇ. ಜವರೇಗೌಡ ಅವರು ಕುವೆಂಪು ಅವರಿಂದ ದೀಕ್ಷೆ ಪಡೆದುಕೊಂಡು ಎಲ್ಲ ಕ್ಷೇತ್ರಗಳಲ್ಲಿ ಕನ್ನಡ ಭಾಷೆಯನ್ನು ಕಟ್ಟಿ ಬೆಳೆಸಿ, ಕನ್ನಡಕ್ಕಿರುವ ಆತಂಕಗಳ ಬಗ್ಗೆ ಜಾಗೃತಿ ಮೂಡಿಸಿದ್ದರು’ ಎಂದು ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಹೇಳಿದರು.

ಕರ್ನಾಟಕ ವಿಕಾಸ ರಂಗ, ಕನ್ನಡ ಗೆಳೆಯರ ಬಳಗ ಮಂಗಳವಾರ ಆಯೋಜಿಸಿದ್ದ ‘ಕನ್ನಡ ಬಾವುಟ ಹಾರಿಸಿದವರು ಮಾಲಿಕೆ–17’ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಜವರೇಗೌಡರು ಮೈಸೂರು ವಿಶ್ವವಿದ್ಯಾಲಯದಲ್ಲಿ ಕುಲಪತಿಗಳಾಗಿದ್ದ ಸಂದರ್ಭದಲ್ಲಿ ಎಲ್ಲ ಜ್ಞಾನ ಶಿಸ್ತುಗಳನ್ನು ಕನ್ನಡದಲ್ಲಿ ತರುವ ಉದ್ದೇಶದಿಂದ ವಿಶ್ವಕೋಶಗಳು, ಕರ್ನಾಟಕ ವಿಷಯ ವಿಶ್ವಕೋಶ, ಬೃಹತ್ ನಿಘಂಟು, ವಿಜ್ಞಾನ ಪಠ್ಯಗಳನ್ನು ಕನ್ನಡದಲ್ಲಿ ಪ್ರಕಟಿಸಿದರು. ಕನ್ನಡಿಗರು ವಿಶ್ವದಲ್ಲಿ ತಲೆ ಎತ್ತಿ ನಿಲ್ಲುವಂತೆ ಮಾಡಿದ ಕೀರ್ತಿ ಜವರೇಗೌಡರಿಗೆ ಸಲ್ಲುತ್ತದೆ’ ಎಂದರು.

ಲೇಖಕ ರಾ.ನಂ. ಚಂದ್ರಶೇಖರ, ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಭಾಗವಹಿಸಿದ್ದರು.

‘ಕ್ಯಾನ್ಸರ್ ಚಿಕಿತ್ಸೆಗೆ ಎಐ ತಂತ್ರಜ್ಞಾನ ಸಹಕಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ಯಾನ್ಸರ್ ತಪಾಸಣೆ, ರೋಗ ನಿರ್ಣಯ ಮತ್ತು ಚಿಕಿತ್ಸೆಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ (ಎಐ) ಸಹಕಾರಿಯಾಗಿದ್ದು, ಈ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು’ ಎಂದು ವೈದ್ಯಕೀಯ ತಜ್ಞರು ಹಾಗೂ ವಿಜ್ಞಾನಿಗಳು ಅಭಿಮತ ವ್ಯಕ್ತಪಡಿಸಿದ್ದಾರೆ.

ವಿಶ್ವ ತಲೆ ಮತ್ತು ಕುತ್ತಿಗೆ ಕ್ಯಾನ್ಸರ್ ದಿನದ ಪ್ರಯುಕ್ತ ಬಯೋಕಾನ್ ಸಮೂಹವು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಸಹಯೋಗದಲ್ಲಿ ನಗರದಲ್ಲಿ ಹಮ್ಮಿಕೊಂಡಿದ್ದ ಬಾಯಿ ಕ್ಯಾನ್ಸರ್ ಕಾರ್ಯಪಡೆಯ ಸಮ್ಮೇಳನದಲ್ಲಿ ‘ಬಾಯಿ ಕ್ಯಾನ್ಸರ್‌ನಲ್ಲಿ ಕೃತಕ ಬುದ್ಧಿಮತ್ತೆ’ ವಿಷಯದ ಮೇಲೆ ಚರ್ಚಿಸಲಾಯಿತು.

ಐಐಎಸ್ಸಿ ವಿಜ್ಞಾನಿ ದೇವನಾಥ್ ಪಾಲ್ ಮಾತನಾಡಿ, ‘ಎಐ ತಂತ್ರಜ್ಞಾನದಿಂದ ವೈದ್ಯಕೀಯ ಕ್ಷೇತ್ರದಲ್ಲಿ ಸುಧಾರಣೆಯಾಗುವ ಜತೆಗೆ ರೋಗಿಗಳಿಗೂ ಗುಣಮಟ್ಟದ ವೈದ್ಯಕೀಯ ಸೇವೆ ದೊರೆಯಲಿದೆ. ಚಿಕಿತ್ಸೆಗೆ ಸಂಬಂಧಿಸಿದಂತೆ ಎದುರಾಗುವ ಸವಾಲುಗಳನ್ನು ಸುಲಭವಾಗಿ ಎದುರಿಸಲು ಸಾಧ್ಯವಾಗುತ್ತದೆ’ ಎಂದು ಹೇಳಿದರು.

ಐಐಎಸ್ಸಿಯ ಇಇಸಿಎಸ್ ವಿಭಾಗದ ಡೀನ್ ಪ್ರೊ. ರಾಜೇಶ್ ಸುಂದರೇಶನ್ ಮಾತನಾಡಿ, ‘ಕ್ಯಾನ್ಸರ್‌ನಂತಹ ಕಾಯಿಲೆಗಳ ನಿರ್ವಹಣೆಗೆ ಎಐ ತಂತ್ರಜ್ಞಾನ ಸಹಕಾರಿಯಾಗಲಿದೆ’ ಎಂದು ತಿಳಿಸಿದರು.

ಟಾಟಾ ಮೆಮೋರಿಯಲ್ ಆಸ್ಪತ್ರೆಯ ಕ್ಯಾನ್ಸರ್ ತಜ್ಞ ಡಾ. ಕುಮಾರ್ ಪ್ರಭಾಸ್ ಮಾತನಾಡಿ, ‘ಕ್ಯಾನ್ಸರ್‌ಗೆ ಸಂಬಂಧಿಸಿದ ಸಂಶೋಧನೆಗೂ ಎಐ ತಂತ್ರಜ್ಞಾನ ಸಹಕಾರಿ. ಈ ತಂತ್ರಜ್ಞಾನದ ನೆರವಿನಿಂದ ನಿಖರ ಚಿಕಿತ್ಸೆಯನ್ನು ನೀಡಬಹುದು’ ಎಂದು ಹೇಳಿದರು.

ಮಲಿನಗೊಂಡ ವೃಷಭಾವತಿ ನದಿ ಸಂರಕ್ಷಣೆ, ಒತ್ತುವರಿ ತೆರವುಗೊಳಿಸಲು ಕೋರಿ ಹೈಕೋರ್ಟ್‌ಗೆ ಪಿಐಎಲ್

ಜಂಟಿ ಕ್ರಿಯಾ ಯೋಜನೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಮಹಾನಗರದ ವಿವಿಧ ಪ್ರದೇಶಗಳಲ್ಲಿ ವೃಷಭಾವತಿ ನದಿ ಮತ್ತು ಅದರ ಉಪ ನದಿಗಳ ಪಾತ್ರದ ಪ್ರದೇಶಗಳ ಒತ್ತುವರಿ ತೆರವುಗೊಳಿಸುವ ನಿಟ್ಟಿನಲ್ಲಿ ಜಂಟಿ ಕ್ರಿಯಾ ಯೋಜನೆ ಸಿದ್ಧಪಡಿಸಿ' ಎಂದು ಹೈಕೋರ್ಟ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಾಗೂ ನಗರ ಜಿಲ್ಲಾಡಳಿತಕ್ಕೆ ನಿರ್ದೇಶಿಸಿದೆ.

'ಮಲಿನಗೊಂಡಿರುವ ವೃಷಭಾವತಿ ನದಿ ಸಂರಕ್ಷಣೆ ಹಾಗೂ ಒತ್ತುವರಿ ತೆರವುಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಿ ಹೈಕೋರ್ಟ್ ವಕೀಲೆ ಗೀತಾ ಮಿಶ್ರಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್ ಮಂಡಿಸಿದ ವಾದಕ್ಕೆ ಪ್ರತಿಯಾಗಿ ಬಿಬಿಎಂಪಿ ಪರ ವಕೀಲರು ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಪೀಠಕ್ಕೆ ಪ್ರಮಾಣ ಪತ್ರ ಸಲ್ಲಿಸಿದರು.

'ವೃಷಭಾವತಿ ನದಿ ವ್ಯಾಪ್ತಿಯಲ್ಲಿ 17 ಎಕರೆ 25 ಗುಂಟೆ ಉಪ ನದಿಗಳ ನಾಲೆ ಒತ್ತುವರಿಯಾಗಿದೆ. ನದಿ ಕಣಿವೆಯಲ್ಲಿ 10 ಎಕರೆ 25 ಗುಂಟೆ ಒತ್ತುವರಿಯಾಗಿದ್ದು, ಇದರಲ್ಲಿ 7 ಎಕರೆ 28 ಗುಂಟೆ ಬಿಬಿಎಂಪಿ ವ್ಯಾಪ್ತಿಗೆ ಒಳಪಡುತ್ತದೆ. ನದಿ ವ್ಯಾಪ್ತಿಗೆ ಬರುವ ಕೆರೆಗಳಲ್ಲಿ 52 ಎಕರೆ 21 ಗುಂಟೆ ಒತ್ತುವರಿಯಾಗಿದ್ದು, 48 ಎಕರೆ 31 ಗುಂಟೆ ಪ್ರದೇಶ ಬಿಬಿಎಂಪಿ ವ್ಯಾಪ್ತಿಗೆ ಒಳಪಡುತ್ತದೆ. ಒತ್ತುವರಿ ತೆರವಿಗೆ ಬಿಬಿಎಂಪಿಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

ರಾಜ್ಯ ಸರ್ಕಾರದ ಪರ ವಕೀಲರು, 'ಈ ವಿಷಯಕ್ಕೆ ಸಂಬಂಧಿಸಿದಂತೆ ಬಿಬಿಎಂಪಿಯಿಂದ ಜಿಲ್ಲಾಡಳಿತಕ್ಕೆ ಬರೆಯಲಾಗಿರುವ ಪತ್ರದ ಕುರಿತಾಗಿ ಜಿಲ್ಲಾಧಿಕಾರಿ ಕಚೇರಿಯಿಂದ ಮಾಹಿತಿ ಪಡೆದುಕೊಳ್ಳಲು ಸಮಯಾವಕಾಶ ನೀಡಬೇಕು' ಎಂದು ಕೋರಿದರು.

ಇದಕ್ಕೆ ಒಪ್ಪಿಗೆ ಸೂಚಿಸಿದ ನ್ಯಾಯಪೀಠ, 'ವೃಷಭಾವತಿ ನದಿಯ ಒತ್ತುವರಿ ತೆರವುಗೊಳಿಸುವ ಸಂಬಂಧ ಜಂಟಿ ಕ್ರಿಯಾ ಯೋಜನೆಯೊಂದಿಗೆ ಬನ್ನಿ' ಎಂದು ಬಿಬಿಎಂಪಿ ಹಾಗೂ ನಗರ ಜಿಲ್ಲಾಡಳಿತಕ್ಕೆ ನಿರ್ದೇಶಿಸಿ ವಿಚಾರಣೆಯನ್ನು ಆಗಸ್ಟ್ 29ಕ್ಕೆ ಮುಂದೂಡಿತು.

ರಾಹುಲ್ ವಿರುದ್ಧ ಕ್ರಮ: ಪಿಐಎಲ್



ಬೆಂಗಳೂರು: 'ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಟೀಕಿಸುವ ಭರದಲ್ಲಿ ಮಹಿಳೆಯರ ಮಾನ ಹಾನಿಯಾಗುವಂತಹ ಹೇಳಿಕೆ ನೀಡಿದ್ದಾರೆ' ಎಂದು ಆರೋಪಿಸಿದ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು ಎಂದು ಕೋರಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ.

ಈ ಸಂಬಂಧ, 'ಆಲ್ ಇಂಡಿಯಾ ದಲಿತ್ ಆಕ್ಷನ್ ಕಮಿಟಿ' ರಾಷ್ಟ್ರೀಯ ಅಧ್ಯಕ್ಷ ಚಿ.ನಾ.ರಾಮು ಮತ್ತು ರಾಷ್ಟ್ರೀಯ ಮಹಿಳಾ ಘಟಕದ ಅಧ್ಯಕ್ಷೆ ಸುಶೀಲಾ ದೇವರಾಜ್ ಈ ಪಿಐಎಲ್ ಸಲ್ಲಿಸಿದ್ದು ಇದು ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

ಅರ್ಜಿಯಲ್ಲಿ ರಾಹುಲ್ ಗಾಂಧಿ, ರಾಷ್ಟ್ರೀಯ ಮತ್ತು ರಾಜ್ಯ ಮಹಿಳಾ ಆಯೋಗ, ರಾಜ್ಯ ಗೃಹ ಇಲಾಖೆ ಮತ್ತು ರಾಜ್ಯ ಪೊಲೀಸ್ ಮಹಾನಿರ್ದೇಶಕರನ್ನು ಪ್ರತಿವಾದಿಗಳನ್ನಾಗಿ ಹೆಸರಿಸಲಾಗಿದೆ.

'ದ್ವೇಷ ಭಾಷಣದ ಮೂಲಕ ಮಹಿಳೆಯರ ಘನತೆಗೆ ಚ್ಯುತಿ ಉಂಟು ಮಾಡಿರುವ, ಭಾರತೀಯ ಮಹಿಳೆಯರಿಗೆ ಅಗೌರವ ತೋರಿರುವ ರಾಹುಲ್ ಗಾಂಧಿ ವಿರುದ್ಧ ಕ್ರಮ ಕೈಗೊಳ್ಳಲು ರಾಷ್ಟ್ರೀಯ ಮತ್ತು ರಾಜ್ಯ ಮಹಿಳಾ ಆಯೋಗ, ರಾಜ್ಯ ಗೃಹ ಇಲಾಖೆ ಮತ್ತು ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

'ಆರೋಪಿ ಬುಲಾವ್‌ಗೆ ಚೆಕ್ ಲಿಸ್ಟ್ ಕಡ್ಡಾಯ'

ಬೆಂಗಳೂರು: 'ಯಾವುದೇ ಆರೋಪಕ್ಕೆ ಸಂಬಂಧಿಸಿದಂತೆ ಪೊಲೀಸರು ಆರೋಪಿಯನ್ನು ಠಾಣೆಗೆ ಕರೆಸಿಕೊಳ್ಳುವಾಗ ನೀಡುವ ನೋಟಿಸ್‌ನಲ್ಲಿ ಕ್ರೈಂ ನಂಬರ್, ಎಫ್‌ಐಆರ್ ಪ್ರತಿ, ಅಪರಾಧ ಏನು ಎಂಬ ಬಗೆಗಿನ ಮಾಹಿತಿ ಮತ್ತು ದೂರಿನ ಸಂಕ್ಷಿಪ್ತ ರೂಪವನ್ನು ಒಳಗೊಂಡ ಚೆಕ್ ಲಿಸ್ಟ್ ಅನ್ನು ಕಡ್ಡಾಯವಾಗಿ ನೀಡಬೇಕು. ಈ ನಿಟ್ಟಿನಲ್ಲಿ ಸಾರ್ವಜನಿಕರ ಅವಗಾಹನೆಗಾಗಿ ರಾಜ್ಯ ಗೃಹ ಕಾರ್ಯದರ್ಶಿ ಮತ್ತು ಡಿಜಿ–ಐಜಿಪಿ ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸಬೇಕು' ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ಅಮೃತಹಳ್ಳಿ ಠಾಣೆಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮೊಬೈಲ್ ಫೋನ್‌ನಲ್ಲಿ ವಾಟ್ಸ್‌ಆ್ಯಪ್ ಮೂಲಕ, ನಾಳೆ ನೀವು ಠಾಣೆಗೆ ಹಾಜರಾಗಬೇಕು' ಎಂದು ಕಳುಹಿಸಿದ್ದ ಸಂದೇಶವನ್ನು ಪ್ರಶ್ನಿಸಿ ಪತ್ರಕರ್ತ ಟಿ.ಆರ್.ಶಿವಪ್ರಸಾದ್ ಸಲ್ಲಿಸಿದ್ದ ರಿಟ್ ಅರ್ಜಿ (ಡಬ್ಲ್ಯು.ಪಿ.15125/2024 ಜಿಎಂ–ಆರ್‌ಇಎಸ್) ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ–2023ರ ಕಲಂ 35ರ ಅನುಸಾರ ಆರೋಪಿಗೆ ಚೆಕ್ ಲಿಸ್ಟ್ ಒದಗಿಸದೇ ಹೋದಲ್ಲಿ ಅಂತಹ ಆರೋಪಿಯು ಠಾಣಾಧಿಕಾರಿ ಮುಂದೆ ಹಾಜರಾಗುವ ಅವಶ್ಯಕತೆ ಇಲ್ಲ. ಅಂತೆಯೇ, ಪೊಲೀಸರು ಇಂತಹ ಆರೋಪಿಯ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳುವಂತಿಲ್ಲ' ಎಂದು ನ್ಯಾಯಪೀಠ ಆದೇಶದಲ್ಲಿ ತಿಳಿಸಿದೆ. ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ವಾದ ಮಂಡಿಸಿದ್ದರು.

ಪ್ರಕರಣವೇನು?: 'ನನಗೆ ಹಾಗೂ ನನ್ನ ಕುಟುಂಬದ ಸದಸ್ಯರಿಗೆ ಜೀವ ಬೆದರಿಕೆ ಹಾಕಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸಮಯ ಟಿ.ವಿ ಚಾನಲ್‌ನ ಸಿಇಒ ವಿಜಯ್ ಟಾಟಾ ನೀಡಿದ ದೂರಿನ ಅನುಸಾರ ಅಮೃತಹಳ್ಳಿ ಠಾಣೆಯ ಪೊಲೀಸರು ಟಿ.ಆರ್.ಶಿವಪ್ರಸಾದ್ ಮೊಬೈಲ್ ಫೋನ್‌ನಲ್ಲಿ ವಾಟ್ಸ್‌ಆ್ಯಪ್ ಮೂಲಕ ಸಂದೇಶ ಕಳುಹಿಸಿ, 'ನಾಳೆ ನೀವು ಠಾಣೆಗೆ ಹಾಜರಾಗಬೇಕು' ಎಂದು ಸೂಚಿಸಿದ್ದರು.

ಮನೆ ಊಟ: ನಟ ದರ್ಶನ್ ಹೊಸ ಅರ್ಜಿ

'ಮನೆಯಿಂದ ಊಟ, ಬಟ್ಟೆ ಮತ್ತು ಹಾಸಿಗೆ ತರಿಸಿಕೊಳ್ಳಲು ಅನುಮತಿ ನೀಡಲು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧೀಕ್ಷಕರಿಗೆ ನಿರ್ದೇಶಿಸಬೇಕು' ಎಂದು ಕೋರಿ ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಹೈಕೋರ್ಟ್‌ಗೆ ಹೊಸ ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಅರ್ಜಿಯಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧೀಕ್ಷಕರು ಮತ್ತು ಕಾಮಾಕ್ಷಿಪಾಳ್ಯದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಅವರನ್ನು ಪ್ರತಿವಾದಿಗಳನ್ನಾಗಿಸಲಾಗಿದೆ. ಹೈಕೋರ್ಟ್ ವಕೀಲ ಸಂಜೀವಿನಿ ಪಿ.ನಾವದಗಿ ವಕಾಲತ್ತು ವಹಿಸಿರುವ ಈ ಅರ್ಜಿಯು ಮಂಗಳವಾರ (ಜುಲೈ 31) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಿದೆ.

'ಮ್ಯಾಜಿಸ್ಟ್ರೇಟ್ ಕೋರ್ಟ್ ಆದೇಶ ರದ್ದುಪಡಿಸಬೇಕು. ಮನೆಯಿಂದ ಊಟ, ಬಟ್ಟೆ ಮತ್ತು ಹಾಸಿಗೆ ತರಿಸಿಕೊಳ್ಳಲು ನನಗೆ ಅನುಮತಿ ನೀಡುವಂತೆ ಕಾರಾಗೃಹದ ಅಧಿಕಾರಿಗಳಿಗೆ ನಿರ್ದೇಶಿಸಬೇಕು' ಎಂದು ದರ್ಶನ್ ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.



ಭಾವಸಾರ ಕ್ಷತ್ರಿಯ ಜನಾಂಗದ ಕುಲದೇವತೆ ಹಿಂಗುಲಾಂಬಿಕಾ ಮಾತೆಯ ಪೂಜಾ ಕಾರ್ಯಕ್ರಮಕ್ಕೆ ಹೈಕೋರ್ಟ್ ನ್ಯಾಯಮೂರ್ತಿ ಸಂಜೀವ್ ಕುಮಾರ್ ಅಂಚಿಟಿ ಬಸವನಗುಡಿಯಲ್ಲಿ ಚಾಲನೆ ನೀಡಿದರು. ಹಿಂಗುಲಾಂಬಿಕಾ ಭಾವಸಾರ ಕ್ಷತ್ರಿಯ ಸೇವಾ ಸಮಿತಿ ಗೌರವಾಧ್ಯಕ್ಷ ತಾರಾನಾಥ್ ಜಾಧವ್, ಅಧ್ಯಕ್ಷ ಪಿ.ಎನ್.ವಿಶ್ವನಾಥ್ ರಾವ್, ಪ್ರಧಾನ ಕಾರ್ಯದರ್ಶಿ ನಾಗೇಶ್ವರ್ ರಾವ್ ಕೆ.ಆರ್, ಉಪಾಧ್ಯಕ್ಷ ಹರೀಶ್ ಎಸ್ ಭೋಂಗಾಳೆ ಭಾಗವಹಿಸಿದ್ದರು.

ಚಿನ್ನ, ವಜ್ರ ಕಳವು ಮಾಡಿದ್ದ ಮನೆಕೆಲಸದಾಕೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮಾಲೀಕರ ಮನೆಯಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನ, ವಜ್ರದ ಆಭರಣಗಳನ್ನು ಕಳ್ಳತನ ಮಾಡಿದ್ದ ಮನೆ ಕೆಲಸದಾಕೆ ಸೇರಿ ಮೂವರನ್ನು ಮಾರತ್ತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮನೆ ಕೆಲಸದಾಕೆ ದಿವ್ಯಾ ಹಾಗೂ ಕೃತ್ಯಕ್ಕೆ ಸಹಕರಿಸಿದ ಮಂಜು ಹಾಗೂ ಜೋಮನ್ ಅವರನ್ನು ಬಂಧಿಸಿ, ₹ 30 ಲಕ್ಷ ಮೌಲ್ಯದ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ.

ದಿವ್ಯಶ್ರೀ ಟೆಕ್ ಪಾರ್ಕ್‌ನ ವಿಲ್ಲಾವೊಂದರಲ್ಲಿ ನೆಲೆಸಿದ್ದ ಉದ್ಯಮಿ ಮನೆಯಲ್ಲಿ ದಿವ್ಯಾ 2 ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ರಜೆ ಕಾರಣ ಮಾಲೀಕರ ಕುಟುಂಬ ಪ್ರವಾಸಕ್ಕೆ ತೆರಳಿತ್ತು. ವಾಪಸ್ ಮನೆಗೆ ಬಂದು ಪರಿಶೀಲಿಸಿದಾಗ ವಜ್ರ ಸೇರಿ ಲಕ್ಷಾಂತರ ಮೌಲ್ಯದ ಚಿನ್ನಾಭರಣ ಕಳ್ಳತನವಾಗಿರುವುದು ಗೊತ್ತಾಗಿದೆ.

ಮನೆಯಲ್ಲಿ ಕೆಲಸ ಮಾಡುತ್ತಿದ್ದ ಏಳು ಮಂದಿಯನ್ನು ವಿಚಾರಣೆಗೆ ಒಳಪಡಿಸಿದಾಗ ದಿವ್ಯಾ ಕಳ್ಳತನ ಮಾಡಿದ್ದು ಬಹಿರಂಗಗೊಂಡಿದೆ ಎಂದಿದ್ದಾರೆ ಪೊಲೀಸರು.

ಮಾಲೀಕರ ಮಕ್ಕಳನ್ನು ನೋಡಿಕೊಳ್ಳುತ್ತಿದ್ದ ದಿವ್ಯಾ, ಆರು ತಿಂಗಳಿಂದ ಹಂತ ಹಂತವಾಗಿ ಚಿನ್ನಾಭರಣ ಕಳವು ಮಾಡಿದ್ದಾಗಿ ವಿಚಾರಣೆ ವೇಳೆ ತಿಳಿಸಿದ್ದಾರೆ. ವಿಚಾರಣೆ ವೇಳೆ ಕೃತ್ಯ ಒಪ್ಪಿಕೊಂಡಿದ್ದಾಳೆ. ಕದ್ದ ಆಭರಣಗಳನ್ನು ತನ್ನ ದೊಡ್ಡಮ್ಮ ಮಂಜು ಅವರಿಗೆ ನೀಡಿದ್ದರು. ಅವರು ತನ್ನ ಪರಿಚಯದ ವ್ಯಕ್ತಿ ಜೋಮನ್ ಎಂಬುವವರಿಗೆ ಮಾರಲು ನೀಡಿದ್ದರು. ಆತ ಗಿರವಿ ಅಂಗಡಿಗೆ ಮಾರಾಟ ಮಾಡಿದ್ದು, ₹30 ಲಕ್ಷ ಮೌಲ್ಯದ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಸಿಎಸ್‌ಬಿ ರಚನೆಗೆ ಪಿಐಎಲ್: ಮಾಹಿತಿ ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿರ್ದಿಷ್ಟ ಸ್ಥಳ ಮತ್ತು ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವ ಐಎಎಸ್ ಅಧಿಕಾರಿಗಳ ಕನಿಷ್ಠ ಸೇವಾವಧಿಯನ್ನು ನಿಗದಿಪಡಿಸುವ ಮತ್ತು ಕರ್ತವ್ಯ ನಿರ್ವಹಣೆಯ ವೇಳೆ ಅವರ ಹಿತಕಾಯುವ ಉದ್ದೇಶ ಹೊಂದಿದ, 'ನಾಗರಿಕ ಸೇವಾ ಮಂಡಳಿ' (ಸಿಎಸ್‌ಬಿ) ದೇಶದ ಬೇರೆ ಯಾವ ರಾಜ್ಯಗಳಲ್ಲಿ ಚಾಲ್ತಿಯಲ್ಲಿದೆ ಎಂಬ ಮಾಹಿತಿಯನ್ನು ಒದಗಿಸಿ' ಎಂದು ಹೈಕೋರ್ಟ್, ಪ್ರಕರಣದ ಅರ್ಜಿದಾರರಿಗೆ ಸೂಚಿಸಿದೆ.

'ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ ಕರ್ನಾಟಕದಲ್ಲಿ ನಾಗರಿಕ ಸೇವಾ ಮಂಡಳಿ ರಚಿಸಬೇಕು ಹಾಗೂ ನಾಗರಿಕರ ಸೇವಾ ಅಧಿಕಾರಿಗಳ ಕನಿಷ್ಠ ಸೇವಾವಧಿ ನಿಗದಿಪಡಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಸಾಮಾಜಿಕ ಕಾರ್ಯಕರ್ತರೂ ಆದ ನಗರದ ರಿಷಬ್ ಟ್ರಕ್ರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ನಚಿಕೇತ್ ಜೋಶಿ ವಾದ ಮಂಡಿಸಿ, 'ಐಎಎಸ್ ಅಧಿಕಾರಿಗಳನ್ನು ಆಡಳಿತಾತ್ಮಕ ಮೇಲಧಿಕಾರಿಗಳು, ರಾಜಕಾರಣಿಗಳು ಹಾಗೂ ಇತರರ ನ್ಯಾಯಬಾಹಿರ ಹಾಗೂ ನಿರಂಕುಶ ಒತ್ತಡದಿಂದ ರಕ್ಷಿಸಬೇಕು. ಅವರು ಯಾವುದೇ ಮೌಖಿಕ ಸೂಚನೆ, ಆದೇಶ, ಅಭಿಪ್ರಾಯ ಅಥವಾ ಪ್ರಸ್ತಾವನೆಗಳನ್ನು ಆಧರಿಸಿ ಕೆಲಸ ಮಾಡುವಂತಾಗಬಾರದು' ಎಂದು ನ್ಯಾಯಪೀಠಕ್ಕೆ ಅರುಹಿದರು.

'ಈ ದಿಸೆಯಲ್ಲಿ ಮಾರ್ಗಸೂಚಿ ನಿಗದಿಪಡಿಸಲು ಕೇಂದ್ರ ಸರ್ಕಾರದಂತೆ ಎಲ್ಲ ರಾಜ್ಯ ಸರ್ಕಾರಗಳು, ಕೇಂದ್ರಾಡಳಿತ ಪ್ರದೇಶಗಳೂ ನಾಗರಿಕ ಸೇವಾ ಮಂಡಳಿ (ಸಿಎಸ್‌ಬಿ) ರಚಿಸಬೇಕು ಎಂದು 2013ರಲ್ಲಿ ಸುಪ್ರೀಂ ಕೋರ್ಟ್ ಆದೇಶಿಸಿದೆ. ಇದಕ್ಕೆ 2021ರ ಹೈಕೋರ್ಟ್ ನಿರ್ದೇಶನವೂ ಇದೆ. ಆದರೂ, ನಾಗರಿಕ ಸೇವಾ ಮಂಡಳಿಯನ್ನು ರಾಜ್ಯದಲ್ಲಿ ಇನ್ನೂ ರಚಿಸಿಲ್ಲ. ಆದ್ದರಿಂದ, ಇದರ ರಚನೆಗೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಸುಪ್ರೀಂ ಕೋರ್ಟ್ ನಿರ್ದೇಶನದಂತೆ ದೇಶದ ಬೇರೆ ಯಾವ ರಾಜ್ಯಗಳಲ್ಲಿ ನಾಗರಿಕ ಸೇವಾ ಮಂಡಳಿ ರಚಿಸಲಾಗಿದೆ' ಎಂದು ನಚಿಕೇತ್ ಅವರನ್ನು ಪ್ರಶ್ನಿಸಿತು. 'ಇತ್ತೀಚೆಗೆ ಪಂಜಾಬ್ ರಾಜ್ಯದಲ್ಲಿ ಸಿಎಸ್‌ಬಿ ರಚಿಸಲಾಗಿದೆ. ಉಳಿದ ರಾಜ್ಯಗಳ ಬಗೆಗಿನ ಮಾಹಿತಿ ಸದ್ಯಕ್ಕಿಲ್ಲ' ಎಂದು ನಚಿಕೇತ್ ಉತ್ತರಿಸಿದರು. 'ಹಾಗಾದರೆ, ಬೇರೆ ಯಾವ ರಾಜ್ಯಗಳಲ್ಲಿ ಸಿಎಸ್‌ಬಿ ರಚಿಸಲಾಗಿದೆ, ಸದ್ಯದ ವಸ್ತುಸ್ಥಿತಿ ಏನಿದೆ ಎಂಬ ಬಗ್ಗೆ ಮಾಹಿತಿ ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿ' ಎಂದು ಸೂಚಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಹಿಜಾಬ್: ಆಂಗ್ಲ ಭಾಷೆಯಲ್ಲಿ ದಾಖಲೆ ಒದಗಿಸಲು ನಿರ್ದೇಶನ

ಬೆಂಗಳೂರು: ಶಾಲಾ ಕಾಲೇಜುಗಳಲ್ಲಿ ಹಿಜಾಬ್ ಧರಿಸುವ ಕುರಿತಂತೆ ತೀರ್ಪು ನೀಡಿದ್ದ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಬೆದರಿಕೆ ಹಾಕಿದ ಆರೋಪದಡಿ ತಮಿಳುನಾಡಿನ ಇಬ್ಬರು ಆರೋಪಿಗಳ ವಿರುದ್ಧದ ಪ್ರಕರಣದಲ್ಲಿ; ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುವ ದೋಷಾರೋಪ ಪಟ್ಟಿಯ ಆಂಗ್ಲ ಭಾಷೆಯ ಅನುವಾದಿತ ಪ್ರತಿಗಳನ್ನು ಒದಗಿಸುವಂತೆ ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ಪ್ರಕರಣದ ಆರೋಪಿಗಳಾದ ಆರ್.ರಹಮತ್‌ಉಲ್ಲಾ ಮತ್ತು ಜಮಾಲ್ ಮೊಹಮ್ಮದ್ ಉಸ್ಮಾನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ವೇಲನ್, 'ನಮ್ಮ ಕಕ್ಷಿದಾರರಿಗೆ ಕನ್ನಡ ಭಾಷೆ ಅರ್ಥವಾಗುವುದಿಲ್ಲ,ಓದಲು ಅಥವಾ ಬರೆಯಲೂ ಬರುವುದಿಲ್ಲ. ಆದ್ದರಿಂದ, ಆಂಗ್ಲ ಭಾಷೆಗೆ ಅನುವಾದಿಸಲಾದ ಪ್ರತಿಗಳನ್ನು ಒದಗಿಸಬೇಕು' ಎಂದು ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ದೋಷಾರೋಪ ಪಟ್ಟಿಯ ಭಾಷಾಂತರ ಪ್ರತಿಗಳು ಮತ್ತು ದೋಷಾರೋಪ ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿರುವ ವಿಷಯಗಳನ್ನು ಅರ್ಜಿದಾರರ ಪರ ವಕೀಲರಿಗೆ ಆಂಗ್ಲ ಭಾಷೆಯಲ್ಲಿ ಒದಗಿಸಿ' ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿತು.

ಪುನೀತ್ ಕೆರೆಹಳ್ಳಿಗೆ ಜಾಮೀನು

ಬೆಂಗಳೂರು : ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಪ್ರಕರಣದಲ್ಲಿ ಬಂಧಿತರಾಗಿದ್ದ ಪುನೀತ್ ಕೆರೆಹಳ್ಳಿಗೆ ಐದನೇ ಎಸಿಎಂಎಂ ಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ಮಂಗಳವಾರ ನಡೆಸಿತು. ಪ್ರತಿ ತಿಂಗಳ ಮೊದಲ ಭಾನುವಾರದಂದು ಠಾಣೆಗೆ ಹಾಜರಾಗಿ ಸಹಿ ಮಾಡಬೇಕು, ವಿಚಾರಣೆ ಮುಗಿಯುವವರೆಗೂ ದೇಶಬಿಟ್ಟು ಹೋಗಬಾರದು, ಬಿಡುಗಡೆ ಬಳಿಕ ಸಾಕ್ಷಿಗಳ ಮೇಲೆ ಪ್ರಭಾವ ಬೀರಬಾರದು. ಮತ್ತೆ ಇಂತಹದ್ದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಬಾರದು ಎಂಬ ಷರತ್ತುಗಳನ್ನು ವಿಧಿಸಿದೆ.

ಪುನೀತ್ ಕೆರೆಹಳ್ಳಿ ಪರ ವಕೀಲ ಪ್ರಕಾಶ್ ಶೆಟ್ಟಿ ವಾದಿಸಿದರು.

ಜೈಪುರದಿಂದ ಬೆಂಗಳೂರಿಗೆ ತರಲಾಗಿದ್ದ ಮಾಂಸದ ಬಾಕ್ಸ್‌ಗಳಲ್ಲಿ ಕುರಿ ಮಾಂಸದೊಂದಿಗೆ ನಾಯಿ ಮಾಂಸ ಮಿಶ್ರಣ ಮಾಡಲಾಗಿದೆ ಎಂದು ಆರೋಪಿಸಿ ಪುನೀತ್ ಕೆರೆಹಳ್ಳಿ ನೇತೃತ್ವದಲ್ಲಿ ಗುಂಪೊಂದು ಪ್ರತಿಭಟನೆ ನಡೆಸಿತ್ತು. ಗಲಾಟೆ ವೇಳೆ ಪರಿಸ್ಥಿತಿ ನಿಯಂತ್ರಣಕ್ಕೆ ತರಲು ಯತ್ನಿಸಿದ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಪುನೀತ್ ಕೆರೆಹಳ್ಳಿ ಅವರನ್ನು ಪೊಲೀಸರು ಬಂಧಿಸಿದ್ದರು.



ಶ್ರೀಪಟಾಲಮ್ಮದೇವಿ ಉತ್ಸವದಲ್ಲಿ ಮಹಿಳೆಯರು ತಂಬಿಟ್ಟು ಆರತಿ ಹೊತ್ತು ಸಾಗಿದರು

ಸಂಭ್ರಮದ ಶ್ರೀಪಟಾಲಮ್ಮ ದೇವಿ ಉತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಗುಂಜೂರು ಗ್ರಾಮದ ಗ್ರಾಮ ದೇವತೆ ಶ್ರೀಪಟಲಾಮ್ಮ ದೇವಿಯ ಉತ್ಸವವು ವಿಜೃಂಭಣೆಯಿಂದ ನಡೆಯಿತು.

ಗುಂಜೂರು ಮತ್ತು ಬಳಗೆರೆ, ಗುಂಜೂರುಪಾಳ್ಯ, ಗುಂಜೂರು ಹೊಸಹಳ್ಳಿ ಗ್ರಾಮಗಳ ಸಾವಿರಕ್ಕೂ ಹೆಚ್ಚು ಮಹಿಳೆಯರು ತಂಬಿಟ್ಟಿನ ಕಳಸ ಹೊತ್ತು ಮೆರವಣಿಗೆ ಸಾಗಿದರು. ಗ್ರಾಮಗಳ ಪ್ರಮುಖ ಬೀದಿಗಳಲ್ಲಿ ನಡೆದ ತಂಬಿಟ್ಟಿನ ಆರತಿ ಮೆರವಣಿಗೆ ನೋಡುಗರ ಗಮನ ಸೆಳೆಯಿತು.

ದೇವರಿಗೆ ವಿಶೇಷ ಪೂಜೆ ಸಲ್ಲಿಸುವ ಜೊತೆಗೆ ಹೂವಿನ ಅಲಂಕಾರ ಮಾಡಲಾಗಿತ್ತು. ಮೆರವಣಿಗೆಯಲ್ಲಿ ಮಂಗಳ ವಾದ್ಯ, ತಮಟೆ, ಡೊಳ್ಳು ಕುಣಿತ, ವೀರಗಾಸೆ ವಾದ್ಯದ ತಂಡಗಳು ಮೆರಗು ನೀಡಿದವು. ತಮಟೆ ಸದ್ದಿಗೆ ಯುವಕರು ಕುಣಿದರು. ಉತ್ಸವದಲ್ಲಿ ಭಕ್ತರು ಉತ್ಸುಕತೆಯಿಂದ ಭಾಗವಹಿಸಿದ್ದರು.

ಈ ಸಂಧರ್ಭದಲ್ಲಿ ಗ್ರಾಮದ ಮುಖಂಡರಾದ ಮನೋಹರರೆಡ್ಡಿ, ನಾಗೇಶ್, ರಾಜಾರೆಡ್ಡಿ, ಗುಂಜೂರು ರಾಮಕೃಷ್ಣಪ್ಪ, ಕಿಶೋರ್ ಕುಮಾರ್ ರೆಡ್ಡಿ ಇದ್ದರು.

ಗಲಾಟೆ: ಮೂವರ ಬಂಧನ

ಬೆಂಗಳೂರು: ವಿಡಿಯೊ ಮಾಡಿಕೊಳ್ಳುವ ವಿಚಾರಕ್ಕೆ ಬಾರ್‌ನಲ್ಲಿ ನಡೆದ ಜಗಳದಲ್ಲಿ ತಲ್ವಾರ್‌ನಿಂದ ಹಲ್ಲೆಗೆ ಯತ್ನಿಸಿದ್ದ ಮೂವರನ್ನು ಕೆ.ಪಿ. ಅಗ್ರಹಾರ ಪೊಲೀಸರು ಬಂಧಿಸಿದ್ದಾರೆ.

ನಗರದ ನಿವಾಸಿಗಳಾದ ಸೈಯದ್ ಅಮನ್, ರೆಹಮತ್ ಪಾಷಾ, ಸೈಯದ್ ಕಬೀರ್ ಬಂಧಿತರು.

ಆರೋಪಿಗಳು ಜುಲೈ 26 ರಂದು ಕೆ.ಪಿ.ಅಗ್ರಹಾರ ಠಾಣಾ ವ್ಯಾಪ್ತಿಯ ಬಾರ್‌ಗೆ ಬಂದಿದ್ದರು. ಈ ವೇಳೆ ಅಪರಿಚಿತ ಯುವಕನೊಬ್ಬ ವಿಡಿಯೊ ಮಾಡಿಕೊಳ್ಳುತ್ತಿರುವುದನ್ನು ಪ್ರಶ್ನಿಸಿ, ಆತನಿಂದ ಮೊಬೈಲ್ ಕಸಿದುಕೊಂಡಿದ್ದರು. ಇದರಿಂದ ಆತಂಕಗೊಂಡ ಯುವಕ, 'ಕಳ್ಳ' ಎಂದು ಕೂಗಿಕೊಂಡಿದ್ದಾನೆ.

ಸ್ಥಳದಲ್ಲಿದ್ದವರು ಯುವಕನ ನೆರವಿಗೆ ಧಾವಿಸಿ ಆರೋಪಿಗಳನ್ನು ಅಲ್ಲಿಂದ ಕಳುಹಿಸಿದ್ದಾರೆ. ಈ ಪೈಕಿ ಒಬ್ಬನನ್ನು ಸಾರ್ವಜನಿಕರು ಹಿಡಿದುಕೊಂಡರು. ಪರಾರಿಯಾಗಿದ್ದ ಮೂವರು, ಗೆಳೆಯನನ್ನು ಬಿಡಿಸಲು ಮತ್ತೆ ಬಾರ್‌ಗೆ ಬಂದು ಹಲವರ ಮೇಲೆ ತಲ್ವಾರ್ ಬೀಸಿದ್ದಾರೆ. ಈ ದೃಶ್ಯಗಳು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಈ ಸಂಬಂಧ ದೂರು ದಾಖಲಾಗಿತ್ತು. ಪೊಲೀಸರು ಆರೋಪಿಗಳನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ.

₹8 ಲಕ್ಷ ಬೆಲೆ ಬಾಳುವ 101 ಗ್ರಾಂ ಚಿನ್ನಾಭರಣ, ಎರಡು ಲ್ಯಾಪ್‌ಟಾಪ್ ವಶ

ಅರಸೀಕೆರೆಯಿಂದ ರೈಲಿನಲ್ಲಿ ಬಂದು ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗಳ ಬೀಗ ಒಡೆದು ಚಿನ್ನಾಭರಣ ಹಾಗೂ ಲ್ಯಾಪ್‌ಟಾಪ್‌ಗಳನ್ನು ಕಳವು ಮಾಡಿದ್ದ ಆರೋಪಿಯನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಾಸನ ಜಿಲ್ಲೆಯ ಅರಸೀಕೆರೆಯ ಶೋಯೆಬ್ ಪಾಷಾ ಬಂಧಿತ ಆರೋಪಿ. ₹8 ಲಕ್ಷ ಬೆಲೆ ಬಾಳುವ 101 ಗ್ರಾಂ ತೂಕದ ಚಿನ್ನಾಭರಣ, ಎರಡು ಲ್ಯಾಪ್‌ಟಾಪ್ ಹಾಗೂ ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರವಾಹನವನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿ ವಿರುದ್ಧ ಈಗಾಗಲೇ ಮನೆಗಳ್ಳತನ ಸೇರಿದಂತೆ ಐದು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದರು.

ಆರೋಪಿ ಹಾಸನ ಜಿಲ್ಲೆಯ ಅರಸೀಕೆರೆಯಿಂದ ತುಮಕೂರಿನವರೆಗೆ ರೈಲಿನಲ್ಲಿ ಬಂದು, ಅಲ್ಲಿಂದ ನೆಲಮಂಗಲದವರೆಗಿನ ಪ್ರಯಾಣಕ್ಕೆ ಬೈಕ್ ಬಳಸುತ್ತಿದ್ದುದು ತನಿಖೆಯಲ್ಲಿ ಗೊತ್ತಾಗಿದೆ. ನೆಲಮಂಗಲದ ಲಾಡ್ಜ್‌ವೊಂದರಲ್ಲಿ ಕೊಠಡಿ ಬಾಡಿಗೆ ಪಡೆದು ಉಳಿದುಕೊಳ್ಳುತ್ತಿದ್ದ ಪಾಷಾ, ಬೀಗ ಹಾಕಿದ ಮನೆಗಳನ್ನು ಪತ್ತೆ ಮಾಡಿ ಕಳ್ಳತನಕ್ಕೆ ಸಂಚು ರೂಪಿಸುತ್ತಿದ್ದು, ರಾತ್ರಿ ವೇಳೆ ಮನೆಗಳ ಬೀಗ ಒಡೆದು ಚಿನ್ನಾಭರಣ ಕಳವು ಮಾಡಿಕೊಂಡು ಪರಾರಿಯಾಗುತ್ತಿದ್ದುದು ತನಿಖೆಯಲ್ಲಿ ಪತ್ತೆಯಾಗಿದೆ.

ಕಳವಿನ ಬಳಿಕ ಲಾಡ್ಜ್‌ಗೆ ವಾಪಸ್ ಆಗಿ ಒಂದು ದಿನ ಆರೋಪಿಯ ವಾಸ್ತವ್ಯ ನೆಲಮಂಗಲದ ಲಾಡ್ಜ್‌ನಲ್ಲೇ ಇರುತ್ತಿತ್ತು. ಮರುದಿನ ಬೈಕ್‌ನಲ್ಲಿ ತುಮಕೂರು ರೈಲು ನಿಲ್ದಾಣದವರೆಗೆ ಹೋಗುತ್ತಿದ್ದ ಪಾಷಾ, ಅಲ್ಲಿಂದ ರೈಲು ಏರಿ ಅರಸೀಕೆರೆ ತಲುಪುತ್ತಿದ್ದುದ್ದನ್ನು ತನಿಖಾ ತಂಡ ಪತ್ತೆಮಾಡಿದೆ. ಪ್ರತಿ ಬಾರಿಯೂ ಇದೇ ಮಾದರಿಯ ಕಳ್ಳತನ ನಡೆಸಿರುವುದು ತನಿಖೆಯಲ್ಲಿ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಕಳ್ಳತನ ನಡೆದ ಪ್ರದೇಶಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ ಆರೋಪಿಯ ಸುಳಿವು ದೊರೆಯಿತು. ನೆಲಮಂಗಲದ ಕುಣಿಗಲ್ ಬೈಪಾಸ್ ರಸ್ತೆಯ ಬಳಿ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡ. ಆತನ ಮನೆಯಲ್ಲಿದ್ದ 51 ಗ್ರಾಂ ಚಿನ್ನಾಭರಣ ಹಾಗೂ ಗಿರವಿ ಅಂಗಡಿಯಲ್ಲಿ ಮಾರಾಟ ಮಾಡಿದ್ದ ಆಭರಣವನ್ನು ವಶ ಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ವಿವರಿಸಿದರು.

ಮಾರಾಟ ಪ್ರತಿನಿಧಿ ಸೆರೆ

ರಾಮಮೂರ್ತಿ ನಗರ ರಸ್ತೆಯಲ್ಲಿರುವ ಷೋರೂಂನಿಂದ ಲ್ಯಾಪ್‌ಟಾಪ್ ಹಾಗೂ ಪೆನ್‌ಡ್ರೈವ್‌ಗಳನ್ನು ಕಳ್ಳತನ ಮಾಡಿದ್ದ ಮಾರಾಟ ಪ್ರತಿನಿಧಿಯನ್ನು ಪೊಲೀಸರು ಬಂಧಿಸಿ, ಮೂರು ಲ್ಯಾಪ್‌ಟಾಪ್ ಹಾಗೂ 11 ಪೆನ್‌ಡ್ರೈವ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ಷೋರೂಂನ ಕೆಲಸ ಮಾಡುತ್ತಿದ್ದ ಮಾರಾಟ ಪ್ರತಿನಿಧಿ ಶ್ರೀನಿವಾಸ್ ಎಂಬಾತನನ್ನು ರಾಮಮೂರ್ತಿ ನಗರ ಠಾಣೆ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ನಾಲ್ಕು ಲ್ಯಾಪ್‌ಟಾಪ್, 16 ಪೆನ್‌ಡ್ರೈವ್ ಕಳವು ಮಾಡಿರುವುದನ್ನು ಒಪ್ಪಿಕೊಂಡಿದ್ದಾನೆ. ಈ ಪೈಕಿ ಒಂದು ಲ್ಯಾಪ್‌ಟಾಪ್ ಹಾಗೂ 11 ಪೆನ್‌ಡ್ರೈವ್‌ಗಳನ್ನು ಮಾರಾಟ ಮಾಡಿ, ಬಂದ ಹಣವನ್ನು ನಿತ್ಯದ ಖರ್ಚಿಗೆ ಬಳಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳಗಿನ ಜಾವ ಮನೆ, ಪಿ.ಜಿ, ಅಂಗಡಿಗಳಲ್ಲಿ ಕಳ್ಳತನ

ಇಬ್ಬರ ಬಂಧನ: 45 ಮೊಬೈಲ್ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ, ಪೇಯಿಂಗ್ ಗೆಸ್ಟ್ ಕಟ್ಟಡಗಳು, ಗ್ಯಾರೇಜ್, ಅಂಗಡಿ ಹಾಗೂ ಇತರೆಡೆ ಮೊಬೈಲ್‌ಗಳನ್ನು ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿ, ₹ 6 ಲಕ್ಷ ಮೌಲ್ಯದ 45 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಗಾಂಜಾ ಸೇವನೆಗಾಗಿ ಮೊಬೈಲ್ ಕಳ್ಳತನ ಮಾಡುತ್ತಿದ್ದ ಬಿಹಾರದ ಅಬ್ದುಲ್ ರಜಾಕ್‌ನನ್ನು ವೈಟ್‌ಫೀಲ್ಡ್ ಪೊಲೀಸರು ಬಂಧಿಸಿ, ₹4.50 ಲಕ್ಷ ಮೌಲ್ಯದ 32 ಮೊಬೈಲ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ನಗರದ ಕಾಡುಗೋಡಿಯಲ್ಲಿ ವಾಸವಾಗಿರುವ ಈತ, ಬೆಳಗಿನ ಜಾವ ಹೆಚ್ಚು ಕಳ್ಳತನ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಎರಡು ವರ್ಷಗಳಿಂದ ನಗರದ ಪೇಯಿಂಗ್ ಗೆಸ್ಟ್, ಕಾರು ಪಾರ್ಕಿಂಗ್ , ಕಟ್ಟಡ ನಿರ್ಮಾಣ ಸ್ಥಳ ಹಾಗೂ ಇತರೆಡೆ ಕಳವು ಮಾಡಿದ ಮೊಬೈಲ್‌ಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ, ಬಂದ ಹಣದಲ್ಲಿ ಗಾಂಜಾ ಖರೀದಿಸುತ್ತಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಇಬ್ಬರು ನಾಪತ್ತೆ: ಮತ್ತೊಂದು ಪ್ರಕರಣದಲ್ಲಿ ಡೆಲಿವರಿ ಬಾಯ್ ಒಬ್ಬರಿಗೆ ಚಾಕು ತೋರಿಸಿ ಬೆದರಿಸಿ ಮೊಬೈಲ್ ಕಿತ್ತುಕೊಂಡು ಹೋಗಿದ್ದ ಆರೋಪಿ ಅಜಯ್ ಎಂಬಾತನನ್ನು ಮಹದೇವಪುರ ಪೊಲೀಸರು ಬಂಧಿಸಿ ₹1.50 ಲಕ್ಷ ಮೌಲ್ಯದ 13 ಮೊಬೈಲ್ ವಶಪಡಿಸಿಕೊಂಡಿದ್ದಾರೆ. ಮತ್ತಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಠಾಣಾ ವ್ಯಾಪ್ತಿಯ ಬಿ.ನಾರಾಯಣಪುರದಲ್ಲಿ ಡೆಲಿವರಿ ಬಾಯ್ ಒಬ್ಬರಿಗೆ ಮೂವರು ಚಾಕು ತೋರಿಸಿ, ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಬುಧವಾರ • ಜುಲೈ 31, 2024 ಪ್ರಜಾವಾಣಿ

ಅಸಹನೆಯಿಂದ ದಿಮ್ಮಿ ಒದ್ದು, ಮೇಲೇರಲು ಯತ್ನ • ಅತ್ತಿಂದಿತ್ತ ಓಡಾಟ • ಪತ್ತೆಯಾಗದ 'ಕೋಳಿ ಒಂಟೆ'

ಸೆರೆಯಲ್ಲಿ ಪುಂಡಾನೆ: ತಣಿಯದ ಕೋಪ

ಪ್ರಜಾವಾಣಿ ವಾರ್ತೆ

ಆನೇಕಲ್: ಹತ್ತು ದಿನಗಳ ಒಳಗೆ ಇಬ್ಬರನ್ನು ಕೊಂದ ಕಾಡಾನೆ ಮಕ್ನಾ (ಗಂಡು ಅಲ್ಲದ, ಹೆಣ್ಣೂ ಅಲ್ಲದ ದಂತವಿಲ್ಲದ ಆನೆ) ಸೆರೆ ಹಿಡಿದಿರುವ ಅರಣ್ಯ ಇಲಾಖೆ ಸಿಬ್ಬಂದಿ ಅದನ್ನು ಪಳಗಿಸುತ್ತಿದ್ದಾರೆ.

ಅರಣ್ಯದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿದ್ದ ಪುಂಡಾನೆ ಮಂಗಳವಾರ ಇಡೀ ದಿನವನ್ನು ಬನ್ನೇರುಘಟ್ಟ ಜೈವಿಕ ಉದ್ಯಾನದ ಸೀಗೆಕಟ್ಟೆಯಲ್ಲಿ ಮರದ ದಿಮ್ಮಿಗಳಿಂದ ನಿರ್ಮಿಸಲಾಗಿರುವ ಕ್ರಾಲ್‌ನಲ್ಲಿ ಕಳೆಯಿತು.

ಕ್ರಾಲ್‌ನಿಂದ ಹೊರ ಬರಲು ಮಕ್ನಾ ದಿಮ್ಮಿಗಳನ್ನು ಒದೆಯುವುದು, ಮೇಲೇರಲು ಪ್ರಯತ್ನಿಸುತ್ತಿದೆ. ನಿಂತಲ್ಲಿ ನಿಲ್ಲದೆ ಅಸಹನೆಯಿಂದ ಅತ್ತಿಂದಿತ್ತ ಓಡಾಡುತ್ತಿದೆ.

ಗೋಣಿ, ಬಿಸ್ತ್ರಿ ಮರದ ರೆಂಬೆ, ಎಲೆ ಮತ್ತು ಬಿದಿರನ್ನು ಆಹಾರವಾಗಿ ನೀಡಲಾಗುತ್ತಿದೆ. ಆನೆ ಪಳಗಿಸಲು ಒಬ್ಬ ಮಾವುತ ಮತ್ತು ಕಾವಡಿ ನಿಯೋಜಿಸಲಾಗಿದೆ. ಬೆಳಿಗ್ಗೆ ಮತ್ತು ಸಂಜೆ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ ಸ್ವಚ್ಛತೆಗೆ ಗಮನ ಹರಿಸಲಾಗಿದೆ. ಬೆಳಗ್ಗೆ ಬಿಸಿ ನೀರು ಹಾಕಿ ಶಾಖ ನೀಡಲಾಗುತ್ತಿದೆ.

ಸಾಮಾನ್ಯವಾಗಿ ಆನೆ ಪಳಗಿಸಲು ಮೂರರಿಂದ ನಾಲ್ಕು ತಿಂಗಳು ಬೇಕಾಗಬಹುದು. ಒಂದು ತಿಂಗಳು ಮುಚಾಡಿಯಿಂದ ಬಂಧಿಸಿದ ಪಳಗಿಸಿದ ತರುವಾಯ ನೀಡಲಿದ್ದಾರೆ. ನಂತರ ಆನೆ ಪಳಗಿಸಿ ಜೈವಿಕ ಉದ್ಯಾನದ ಆನೆಗಳ ಜೊತೆ ಗೂಡಿಸಬೇಕಾಗುತ್ತದೆ. ಇದೊಂದು ಸವಾಲಿನ ಕೆಲಸವಾಗಿದೆ. ಅತ್ಯಂತ ಎಚ್ಚರಿಕೆಯಿಂದ ಕಾಡಾನೆ ಪಳಗಿಸಬೇಕಾಗುತ್ತದೆ ಎಂದು ಉದ್ಯಾನದ ಅಧಿಕಾರಿಗಳು ತಿಳಿಸಿದ್ದಾರೆ.

ಮತ್ತೊಂದು ಪುಂಡಾನೆ 'ಕೋಳಿ ಒಂಟೆ' ಸೆರೆ ಹಿಡಿಯಲು ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಮಂಗಳವಾರ ಇಡೀ ದಿನ ಗಸ್ತು ನಡೆಸಿದರೂ ಅದರ ಸುಳಿವು ಸಿಗಲಿಲ್ಲ. ಹಾಗಾಗಿ ಕಾರ್ಯಾಚರಣೆಗೆ ದಿನ ನಿಗದಿಯಾಗಿಲ್ಲ. ಆನೆ ಇರುವ ಜಾಗ ಪತ್ತೆಯಾಗುತ್ತಿದ್ದಂತೆಯೇ ಕಾರ್ಯಾಚರಣೆ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ದುಬಾರೆ ಮತ್ತು ಮತ್ತಿಗೋಡು ಆನೆ ಶಿಬಿರದಿಂದ ಬಂದಿರುವ ಎಂಟು ಕುಮ್ಕಿ (ತರಬೇತಿ ಪಡೆದ ಪಳಗಿದ ಆನೆ) ಆನೆಗಳು ಮತ್ತು ಸಿಬ್ಬಂದಿ ಬನ್ನೇರುಘಟ್ಟದಲ್ಲಿ ವಿಶ್ರಾಂತಿ ಪಡೆಯುತ್ತಿದ್ದು, ಮುಂದಿನ ಕಾರ್ಯಾಚರಣೆಗಾಗಿ ಕಾಯುತ್ತಿದ್ದಾರೆ.



ಕ್ರಾಲ್‌ನಲ್ಲಿ ಬಂಧಿಯಾಗಿರುವ ಕಾಡಾನೆ ಮಕ್ನಾ

ಹೀಗಿತ್ತು 'ಮಕ್ನಾ' ಸೆರೆ ಕಾರ್ಯಾಚರಣೆ

ಆನೇಕಲ್: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ ಕಳೆದ ಕೆಲವು ದಿನಗಳಿಂದ ಉಪಟಳ ನೀಡುತ್ತಿದ್ದ ಪುಂಡಾನೆ ಮಕ್ನಾ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಸೋಮವಾರ ಯಶಸ್ವಿಯಾಗಿದ್ದರು.



ಸೆರೆ ಸಿಕ್ಕ ಕಾಡಾನೆ ಮಕ್ನಾಗೆ ವೈದ್ಯರಿಂದ ತಪಾಸಣೆ

- ದುಬಾರೆ ಮತ್ತು ಮತ್ತಿಗೋಡು ಆನೆ ಶಿಬಿರದಿಂದ ಬಂದಿದ್ದ ಎಂಟು ಕುಮ್ಕಿ ಆನೆಗಳಿಗೆ ಸೋಮವಾರ ಬೆಳಗ್ಗೆ ಬನ್ನೇರುಘಟ್ಟ ಸೀಗೆಕಟ್ಟೆಯ ಬಳಿ ಮಾವುತರು, ಕಾವಾಡಿಗರು, ವೈದ್ಯರು, ಅರಣ್ಯ ಇಲಾಖೆಯ ಸಿಬ್ಬಂದಿ ಪೂಜೆ ನೆರವೇರಿಸಿದ್ದರು.
- ಸುಮಾರು 100ಕ್ಕೂ ಹೆಚ್ಚು ಮಂದಿ ಇದ್ದ ತಂಡದಿಂದ 'ಆಪರೇಷನ್ ಮಕ್ನಾ' ಕಾರ್ಯಾಚರಣೆ ಆರಂಭವಾಗಿತ್ತು. ಕ್ಯಾಪ್ಟನ್ ಆನೆಗಳಾದ ಭೀಮ ಮತ್ತು ಮಹೇಂದ್ರ ನೇತೃತ್ವದಲ್ಲಿ ಎಂಟು ಕುಮ್ಕಿ ಆನೆ ಭಾಗಿಯಾಗಿದ್ದವು.
- ಕಾಡಾನೆ ಮಕ್ನಾ ಬೀಡುಬಿಟ್ಟಿದ್ದ ಸ್ಥಳವನ್ನು ಡ್ರೋನ್ ಮೂಲಕ ಭಾನುವಾರ ಗುರುತಿಸಲಾಗಿತ್ತು. ಆನೆ ಇದ್ದ ತಟ್ಟಗುಪ್ಪೆ ಸಮೀಪದ ಮುಳ್ಳುಮರದ ಬಳಿಗೆ ಬೆಳಗ್ಗೆ 10ಕ್ಕೆ ತೆರಳಿದ ಆನೆಗಳ ತಂಡ ಕಾಡಾನೆಯಿದ್ದ ಪ್ರದೇಶ ಸುತ್ತುವರಿದವು.
- ಪಳಗಿತ ಮಾವುತರು ಮತ್ತು ಕಾವಾಡಿಗಳು ಕರಾರುವಾಕ್ಕಾಗಿ ಮಕ್ನಾ ಸುತ್ತಲೂ ವ್ಯೂಹ ರಚಿಸಿದರು. ಮಕ್ನಾ ಚಲನವಲನ ಗಮನಿಸಿದ ಡಾ.ರಮೇಶ್ ಮತ್ತು ತಂಡ, ತಗ್ಗು ಪ್ರದೇಶದಲ್ಲಿದ್ದ ಆನೆಗೆ ದಿಬ್ಬದ ಮೇಲೆ ನಿಂತು ಅರಿವಳಿಕೆ ತಜ್ಞ ರಂಜನ್ ಅವರು ಬಂದೂಕಿನಿಂದ ಅರಿವಳಿಕೆ ಮದ್ದು ಇರುವ ಬಾಣ ಹೊಡೆದರು.
- ಬಾಣ ನಾಟುತ್ತಲೆ ಕೆರಳಿದ ಮಕ್ನಾ ಓಡಲು ಆರಂಭ. ಸ್ವಲ್ಪ ದೂರ ಓಡಿದ ನಂತರ ನಿತ್ರಾಣಗೊಂಡು ಮಂಪರಿನಿಂದ ಕುಸಿದು ಬಿದ್ದ ಆನೆ. ಈ ವೇಳೆಗೆ ಮಕ್ನಾ ಸುತ್ತುವರೆದ ಭೀಮ ಮತ್ತು ಮಹೇಂದ್ರ ನೇತೃತ್ವದ ಎಂಟು ಕುಮ್ಕಿ ಆನೆಗಳ ತಂಡ.
- ಒಂದೂ ಮುಕ್ಕಾಲು ತಾಸಿನಲ್ಲಿ (ಬೆಳಗ್ಗೆ 11.45ಕ್ಕೆ) ಕಾಡಾನೆ ಸೆರೆ ಕಾರ್ಯಾಚರಣೆ ಯಶಸ್ವಿ. ಮಂಪರಿನಲ್ಲಿದ್ದ ಕಾಡಾನೆ ನಾಲ್ಕು ಕಾಲುಗಳಿಗೆ ಹಗ್ಗ ಕಟ್ಟಿ ಕುಮ್ಕಿ ಆನೆಗಳ ಸಹಾಯದಿಂದ ಎಳೆದು ಲಾರಿಯ ಮೂಲಕ ಬನ್ನೇರುಘಟ್ಟ ಉದ್ಯಾನದ ಸೀಗೆಕಟ್ಟೆಯ ಬಳಿಗೆ ತರಲಾಯಿತು.

ಸುದ್ದಿ 2 ನಿಮಿಷ

'ಬಿಜೆಪಿ ಅವಧಿಯ ಹಗರಣಗಳನ್ನು ಬಹಿರಂಗಪಡಿಸುತ್ತೇವೆ'

ಬೆಂಗಳೂರು: 'ಬಿಜೆಪಿ- ಜೆಡಿಎಸ್ ನಾಯಕರು ಪಾದಯಾತ್ರೆ ಮೂಲಕ ರಾಜಕೀಯ ನಾಟಕ ಮಾಡುತ್ತಿದ್ದಾರೆ' ಎಂದು ವಿಧಾನ ಪರಿಷತ್‌ನ ಮುಖ್ಯ ಸಚೇತಕ ಸಲೀಂ ಅಹಮದ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಯಾವ ಪುರುಷಾರ್ಥಕ್ಕೆ ಅವರು ಪಾದಯಾತ್ರೆ ಮಾಡುತ್ತಿದ್ದಾರೊ ಗೊತ್ತಿಲ್ಲ' ಎಂದು ಕಿಡಿಕಾರಿದರು.

'ಬಿಜೆಪಿ- ಜೆಡಿಎಸ್‌ನವರಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ನಾಲ್ಕು ವರ್ಷಗಳ ಅವರ ಅಧಿಕಾರ ಅವಧಿಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದೆ. ಅದಕ್ಕೆ ಜನ ಕಾಂಗ್ರೆಸ್‌ಗೆ ಅವಕಾಶ ನೀಡಿದ್ದಾರೆ. ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಹಿಟ್ ಆ್ಯಂಡ್ ರನ್ ಮಾಡುತ್ತಿದ್ದಾರೆ' ಎಂದರು.



'ಸಿದ್ದರಾಮಯ್ಯ ಮೇಲಿನ ಆರೋಪ ನಿರಾಧಾರ. ಕೇಂದ್ರ ಸರ್ಕಾರದ ನೇತೃತ್ವ ವಹಿಸಿರುವ ಮೋದಿಯವರು ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಷಡ್ಯಂತ್ರ ಮಾಡುತ್ತಿದ್ದಾರೆ. ಇದಕ್ಕೆ ನಾವು ಹೆದರುವುದಿಲ್ಲ. ಬಿಜೆಪಿ ಅವಧಿಯ ಭ್ರಷ್ಟಾಚಾರಗಳನ್ನು ಬಯಲಿಗೆಳೆಯುವ ಕೆಲಸ ಮಾಡಿ, ಅವರನ್ನು ಬೆತ್ತಲೆ ಮಾಡುತ್ತೇವೆ' ಎಂದರು.

'ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವ 21 ಹಗರಣಗಳ ಬಗ್ಗೆ ನಾವು ತನಿಖೆ ಮಾಡುತ್ತೇವೆ. ತಮ್ಮ ಅವಧಿಯ ಕರ್ಮಕಾಂಡ ಮುಚ್ಚಿಹಾಕಿಕೊಳ್ಳಲು ನಮ್ಮ ಮೇಲೆ ಬಿಜೆಪಿಯವರು ಆರೋಪ ಮಾಡುತ್ತಿದ್ದಾರೆ' ಎಂದರು.

'ಅಕ್ರಮವಾಗಿ ನೆಲೆಸಿದ ಬಾಂಗ್ಲಾದೇಶಿಗರ ವಿರುದ್ಧ ಕ್ರಮ'

ಬೆಂಗಳೂರು: 'ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ದೇಶದ ಪ್ರಜೆಗಳನ್ನು ಗುರುತಿಸಿ, ಬಂಧನ ಕೇಂದ್ರಗಳಿಗೆ ಕಳುಹಿಸಲಾಗುವುದು ಮತ್ತು ಗಡೀಪಾರು ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಬಾಂಗ್ಲಾದೇಶದಿಂದ ಕರ್ನಾಟಕಕ್ಕೆ ಬರುವವರನ್ನು ಪೊಲೀಸರು ಗುರುತಿಸಲಿದ್ದಾರೆ. ಅವರು ಪಾಸ್‌ಪೋರ್ಟ್, ವೀಸಾದಂತಹ ಅಧಿಕೃತ ದಾಖಲೆಗಳನ್ನು ಹೊಂದಿಲ್ಲದೇ ಇದ್ದರೆ ತಕ್ಷಣ ಬಂಧಿಸಿ, ಬಂಧನ ಕೇಂದ್ರಗಳಿಗೆ ಕಳುಹಿಸಲಾಗುವುದು. ಬಳಿಕ ಈ ಬಗ್ಗೆ ಬಾಂಗ್ಲಾದೇಶದ ರಾಯಭಾರಿಗೆ ಮಾಹಿತಿ ನೀಡುತ್ತೇವೆ. ಜೊತೆಗೆ, ಗಡೀಪಾರು ಮಾಡಲು ಅನುಮತಿ ಪಡೆಯುತ್ತೇವೆ' ಎಂದರು.

'ಬಾಂಗ್ಲಾದೇಶ ಪ್ರಜೆಗಳು ಬೆಂಗಳೂರಿನಲ್ಲಿ ಅಕ್ರಮವಾಗಿ ನೆಲೆಸಿರುವುದು ರಾಜ್ಯ ಮತ್ತು ರಾಷ್ಟ್ರ ಎರಡಕ್ಕೂ ಅಪಾಯ ತಂದೊಡ್ಡಿದೆ' ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿಕೆಗೆ ಪ್ರತಿಕ್ರಿಯಿಸಿದ ಪರಮೇಶ್ವರ, 'ಅಕ್ರಮವಾಗಿ ತಂಗಿರುವ ಬಾಂಗ್ಲಾದೇಶಿಯರ ಮೇಲೆ ಪೊಲೀಸರು ಕ್ರಮಕೈಗೊಳ್ಳುವುದು ನಿತ್ಯವೂ ನಡೆಯುತ್ತಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಬಿಗಿಗೊಳಿಸುತ್ತಿದ್ದೇವೆ' ಎಂದರು.

'ಬಾಂಗ್ಲಾ ಪ್ರಜೆಗಳು ರಾಜಕೀಯ ಬೆಂಬಲ ಹೊಂದಿರುವುದರಿಂದ ಅವರನ್ನು ಗಡೀಪಾರು ಮಾಡಲು ಸಾಧ್ಯವಾಗಿಲ್ಲ' ಎಂಬ ಬೆಂಗಳೂರು ಮಾಜಿ ಪೊಲೀಸ್ ಕಮಿಷನರ್, ಬಿಜೆಪಿ ನಾಯಕ ಬಿ. ಭಾಸ್ಕರ್ ರಾವ್ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿದ ಪರಮೇಶ್ವರ, 'ಅವರು ಕಮಿಷನರ್ ಆಗಿದ್ದ ಅವಧಿಯಲ್ಲಿ ಅವರಿಂದ ಸಾಧ್ಯವಾಗದಿದ್ದ ಕಾರ್ಯವನ್ನು ಈಗ ನಾವು ಮಾಡುತ್ತಿದ್ದೇವೆ' ಎಂದರು.

ಬಿಬಿಎಂಪಿ ಯೋಜನೆಗೆ ರಕ್ಷಣಾ ಜಾಗ: ರಾಜನಾಥ್‌ಗೆ ಮನವಿ

ನವದೆಹಲಿ: ಬೆಂಗಳೂರಿನಲ್ಲಿ ಮೂಲಸೌಕರ್ಯ ಒದಗಿಸುವ ಯೋಜನೆಗಳಿಗೆ ರಕ್ಷಣಾ ಇಲಾಖೆ ಹೆಚ್ಚುವರಿ ಭೂಮಿ ಒದಗಿಸಬೇಕು ಎಂದು ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು.

ಈಜಿಪುರ ರಿಂಗ್ ರಸ್ತೆಯಿಂದ ಸರ್ಜಾಪುರ ಮುಖ್ಯ ರಸ್ತೆ ವರೆಗೆ ನೂತನ ರಸ್ತೆ ನಿರ್ಮಿಸಲು ರಕ್ಷಣಾ ಇಲಾಖೆಯು 17.50 ಎಕರೆ ಜಾಗ ನೀಡಬೇಕು. ಬಾಣಸವಾಡಿಯಲ್ಲಿ ಈಗಿರುವ ಆರ್‌ಒಬಿಗೆ ಹೆಚ್ಚುವರಿ ಲೂಪ್ ನಿರ್ಮಿಸಲು 796 ಚದರ ಮೀಟರ್ ಜಾಗದ ಅಗತ್ಯ ಇದೆ. ಬೈಯಪ್ಪನಹಳ್ಳಿಯಲ್ಲಿ ಆರ್‌ಒಬಿ ನಿರ್ಮಾಣಕ್ಕೆ 4454 ಚದರ ಮೀಟರ್ ಜಾಗ ಬೇಕಿದೆ. ಬೆಂಗಳೂರು ಉಪನಗರ ರೈಲು ಯೋಜನೆಯ ಕಾರಿಡಾರ್- 2ಕ್ಕೆ 0.11 ಎಕರೆ ಜಾಗದ ಅಗತ್ಯ ಇದೆ. ಬೆಂಗಳೂರಿನ ಸಂಚಾರ ದಟ್ಟಣೆ ಕಡಿಮೆ ಮಾಡಲು ಈ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನ ಮಾಡಬೇಕಿದೆ. ಇದಕ್ಕಾಗಿ ರಕ್ಷಣಾ ಇಲಾಖೆ ಶೀಘ್ರದಲ್ಲಿ ಜಾಗ ಒದಗಿಸಬೇಕು ಎಂದು ಅವರು ಮನವಿ ಮಾಡಿದರು.

'ಬಿಜೆಪಿ– ಜೆಡಿಎಸ್ ಪ್ರತ್ಯೇಕ ಆಗುವರು'

ಹುಬ್ಬಳ್ಳಿ: 'ಬಿಜೆಪಿ– ಜೆಡಿಎಸ್ ಒಂದಿಲ್ಲ, ಒಂದು ದಿನ ಬೇರೆ ಬೇರೆ ಆಗುತ್ತಾರೆ. ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಬೇರೆ ಬೇರೆ ಆಗಬೇಕಾಗುತ್ತದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ್ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಎರಡೂ ಪಕ್ಷದವರು ಸ್ವಲ್ಪದಿನ ಒಟ್ಟಿಗೆ ಇರಬಹುದು. ಆ ನಂತರ ಬೇರೆ ಆಗುತ್ತಾರೆ. ಜೆಡಿಎಸ್‌ನವರು ಹಿಂದೆ ನಮ್ಮ ಜೊತೆ ಸೇರಿದ್ದರು. ಸರ್ಕಾರವನ್ನೂ ರಚಿಸಿದ್ದರು. ಕೆಲದಿನಗಳ ನಂತರ ನಮ್ಮನ್ನು ಬಿಟ್ಟುಹೋದರು. ಅದೇ ರೀತಿ ಈ ಸಲವೂ ಆಗುತ್ತದೆ' ಎಂದು ಹೇಳಿದರು.

'ಮುಡಾ ಪ್ರಕರಣದಲ್ಲಿ ಕಾನೂನು ಬಾಹಿರವಾಗಿ ಏನೂ ನಡೆದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಬಿಜೆಪಿ, ಜೆಡಿಎಸ್‌ನ ಕೆಲವರಿಗೆ ಅರ್ಥವಾಗಿದೆ. ಆದರೆ, ಕೆಲವರಿಗೆ ಅರ್ಥವಾಗಿಲ್ಲ. ಪ್ರತಿಭಟನೆ ನಡೆಸಿದ್ದಾರೆ' ಎಂದರು.

ವಾಲ್ಮೀಕಿ ನಿಗಮ, ಮುಡಾ ಹಗರಣ: ಸಂಸತ್ತಿನಲ್ಲಿಯೂ ಪ್ರಸ್ತಾಪದಿಂದ ಮುಜುಗರ

ರಾಜ್ಯ ನಾಯಕರ ವಿರುದ್ಧ ರಾಹುಲ್ ಗರಂ

ಪ್ರಜಾವಾಣಿ ವಾರ್ತೆ

ನವದೆಹಲಿ: ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣ, ಮುಡಾ ಹಗರಣ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆಯ ನಿಧಿಯನ್ನು ಅನ್ಯ ಉದ್ದೇಶಕ್ಕೆ ಬಳಸಿರುವುದಕ್ಕೆ ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ರಾಜ್ಯದ ನಾಯಕರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ಮಂಗಳವಾರ ರಾತ್ರಿ ನಡೆದ ಸಭೆಯಲ್ಲಿ ಮಾತನಾಡಿದ ರಾಹುಲ್, 'ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ರಾಜ್ಯದ ಮತದಾರರು ದೊಡ್ಡ ಮಟ್ಟದ ಬಹುಮತ ನೀಡಿದ್ದಾರೆ. ಬಿಜೆಪಿ ಸರ್ಕಾರದ ಭ್ರಷ್ಟಾಚಾರಗಳಿಂದ ಬೇಸತ್ತು ಜನರು ನಮ್ಮ ಕೈ ಹಿಡಿದಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾಗಿ 14 ತಿಂಗಳುಗಳಷ್ಟೇ ಆಗಿವೆ. ಈ ಕಿರು ಅವಧಿಯಲ್ಲೇ ಸರ್ಕಾರಕ್ಕೆ ಕಳಂಕ ತಟ್ಟಿದೆ. ಈ ವಿಷಯವನ್ನು ಮುಂದಿಟ್ಟುಕೊಂಡು ಬಿಜೆಪಿ ನಾಯಕರು ನಿತ್ಯ ವಾಗ್ದಾಳಿ ನಡೆಸುತ್ತಿದ್ದಾರೆ. ಸಂಸತ್‌ನಲ್ಲಿ ನಿತ್ಯ ಚರ್ಚೆಯಾಗುತ್ತಿದೆ. ನಾವೆಲ್ಲ ಮುಜುಗರ ಅನುಭವಿಸುವಂತಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.



ಎಐಸಿಸಿ ಅಧ್ಯಕ್ಷರ ನಿವಾಸದಲ್ಲಿ ನಡೆದ ಸಭೆಯಲ್ಲಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆ.ಸಿ.ವೇಣುಗೋಪಾಲ್, ರಾಹುಲ್ ಗಾಂಧಿ, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಶಿವಕುಮಾರ್ ಭಾಗಿಯಾದರು

'ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಹಿಂದುಳಿದ ವರ್ಗಗಳ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ನಾವು ಲೋಕಸಭಾ ಚುನಾವಣೆ ಎದುರಿಸಿದ್ದೇವೆ. ಈ ಸಮುದಾಯಗಳ ಮತಗಳ ನೆರವಿನಿಂದ ಪಕ್ಷ ಉತ್ತಮ ಸಾಧನೆ ಮಾಡಿದೆ. ಅವರ ಕಲ್ಯಾಣವೇ ನಮ್ಮ ಗುರಿ. ಆದರೆ, ವಾಲ್ಮೀಕಿ ನಿಗಮದ ಹಗರಣವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ದಲಿತರಿಗೆ ಅನ್ಯಾಯ ಮಾಡುತ್ತಿದೆ ಎಂದು ಬಿಜೆಪಿ ಬಿಂಬಿಸುತ್ತಿದೆ. ಈ ಪ್ರಕರಣಗಳನ್ನು ರಾಜ್ಯ ಸರ್ಕಾರ ಸಮರ್ಥವಾಗಿ ನಿಭಾಯಿಸಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಈ ಹಗರಣಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೈಕಮಾಂಡ್‌ನ ನಾಯಕರಿಗೆ ಮಂಗಳವಾರ ಸುದೀರ್ಘ ವಿವರಣೆ ನೀಡಿದರು. ಈ ವಿಷಯಗಳನ್ನು ಮುಂದಿಟ್ಟುಕೊಂಡು ಸರ್ಕಾರ ಅಸ್ಥಿರಗೊಳಿಸಲು ಬಿಜೆಪಿ ಯತ್ನಿಸುತ್ತಿದೆ ಎಂದೂ ರಾಜ್ಯ ನಾಯಕರು ಸಮಜಾಯಿಷಿ ನೀಡಿದರು. ಈ ಮಾತುಗಳಿಂದ ರಾಹುಲ್ ಸಮಾಧಾನಗೊಳ್ಳಲಿಲ್ಲ. ಬಿಜೆಪಿ ತಂತ್ರಗಳಿಗೆ ತಕ್ಕ ತಿರುಗೇಟು ನೀಡಬೇಕು ಎಂದು ರಾಷ್ಟ್ರೀಯ ನಾಯಕರು ಸೂಚಿಸಿದರು. ಬಿಜೆಪಿ ಸರ್ಕಾರದ ಅವಧಿಯ ಅಕ್ರಮಗಳ ತನಿಖೆ ಕಥೆ ಏನಾಯಿತು ಎಂದೂ ಪ್ರಶ್ನಿಸಿದರು ಎಂದು ಗೊತ್ತಾಗಿದೆ.

ರಾಜ್ಯದಲ್ಲಿ ಇತ್ತೀಚೆಗೆ ನಡೆದ ಬೆಳವಣಿಗೆ ಹಾಗೂ ರಾಜ್ಯ ಸರ್ಕಾರಕ್ಕೆ ಅಂಟಿದ ಕಳಂಕಗಳ ಕುರಿತು ಹೈಕಮಾಂಡ್ ವರದಿ ಈಗಾಗಲೇ ತರಿಸಿಕೊಂಡಿದೆ. ರಾಜ್ಯದ ಜತೆಗೆ ನಿಕಟ ಸಂಪರ್ಕ ಹೊಂದಿರುವ ಸಂಸದರನ್ನು ಈ ಕೆಲಸಕ್ಕೆ ನಿಯೋಜಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಆರಂಭದಲ್ಲಿ ಖರ್ಗೆ ಅವರು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರೊಂದಿಗೆ ಚರ್ಚೆ ನಡೆಸಿದರು. ರಾತ್ರಿ 8ರಿಂದ 9.30ರ ವರೆಗೆ ನಡೆದ ಸಭೆಯಲ್ಲಿ ರಾಹುಲ್ ಗಾಂಧಿ, ಖರ್ಗೆ, ಸಿದ್ದರಾಮಯ್ಯ, ಶಿವಕುಮಾರ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಹಾಗೂ ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಭಾಗಿಯಾದರು.

'ರಾಜಕೀಯ ಬೆಳವಣಿಗೆ ಬಗ್ಗೆ ಚರ್ಚೆ'

'ರಾಜ್ಯದ ರಾಜಕೀಯ ಬೆಳವಣಿಗೆ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡಲಾಯಿತು. ವಾಲ್ಮೀಕಿ ನಿಗಮದ ವಿಷಯವನ್ನು ಮುಂದಿಟ್ಟುಕೊಂಡು ಬಿಜೆಪಿಯವರು ನನ್ನ ಗುರಿ ಮಾಡುತ್ತಿದ್ದಾರೆ. ಪರಿಶಿಷ್ಟ ಪಂಗಡದವರಿಗೆ ಅನ್ಯಾಯವಾಗಿದೆ ಎಂದು ಬಿಂಬಿಸಲು ಹೊರಟಿದ್ದಾರೆ. ಮುಡಾದಲ್ಲಿ ಯಾವುದೇ ಅಕ್ರಮ ಆಗಿಲ್ಲ. ಎಲ್ಲವೂ ಕಾನೂನುಬದ್ಧವಾಗಿ ನಡೆದಿದೆ. ಹಗರಣದಲ್ಲಿ ಸರ್ಕಾರದ ಅಥವಾ ಹಣಕಾಸು ಇಲಾಖೆಯ ಪಾತ್ರ ಇಲ್ಲ. ಇದನ್ನು ಹೈಕಮಾಂಡ್ ಗಮನಕ್ಕೆ ತರಲಾಗಿದೆ' ಎಂದು ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಸಿದ್ದರಾಮಯ್ಯ ತಿಳಿಸಿದರು.

'ಕೇಂದ್ರ ಸರ್ಕಾರದ ಬಜೆಟ್ ಬಗ್ಗೆ ಚರ್ಚೆ ನಡೆಸಲಾಗಿದೆ. ಈ ಬಜೆಟ್‌ನಿಂದ ಕರ್ನಾಟಕಕ್ಕೆ ನಯಾಪೈಸೆ ಉಪಯೋಗ ಆಗಿಲ್ಲ. ನಮ್ಮ ಸಂಸದರು ಇದನ್ನು ಸಂಸತ್ತಿನಲ್ಲಿ ಪ್ರಸ್ತಾಪ ಮಾಡಿದ್ದಾರೆ' ಎಂದರು.

'ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾದವರು. ಅವರು ರಾಜ್ಯದ ಹಿತ ಕಾಪಾಡಿಲ್ಲ' ಎಂದು ಕಿಡಿಕಾರಿದರು.

ದಯಾನಂದರ 'ಬುದ್ಧನ ಕಿವಿ'ಗೆ ಶಾಂತಾರಾಮ್ ಸಾಹಿತ್ಯ ಪ್ರಶಸ್ತಿ

ಕುಂದಾಪುರ: ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜು ವತಿಯಿಂದ ನೀಡುವ 'ಡಾ.ಎಚ್.ಶಾಂತಾರಾಮ್ ಸಾಹಿತ್ಯ ಪ್ರಶಸ್ತಿ'ಗೆ ಕತೆಗಾರ ದಯಾನಂದ ಅವರ 'ಬುದ್ಧನ ಕಿವಿ' ಕಥಾ ಸಂಕಲನ ಆಯ್ಕೆಯಾಗಿದೆ.



ಪ್ರಶಸ್ತಿಯು ₹15ಸಾವಿರ ನಗದು ಹಾಗೂ ಬೆಳ್ಳಿ ಫಲಕ ಒಳಗೊಂಡಿದೆ. ಲೇಖಕರಾದ ಎಚ್.ಆರ್. ಸುಜಾತ, ಪ್ರೊ. ಕೆ. ಫಣಿರಾಜ್, ಟಿ.ಎಸ್. ಗೊರವರ ತೀರ್ಪುಗಾರರಾಗಿದ್ದರು.

ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ನಡೆಯುವ ಸಾಹಿತ್ಯ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಪ್ರಶಸ್ತಿ ಆಯ್ಕೆ ಸಮಿತಿ ತಿಳಿಸಿದೆ.

'ಕೈ ನಾಯಕರು ಕರ್ನಾಟಕ ಸರ್ಕಾರಕ್ಕೆ ಪ್ರಶ್ನೆ ಕೇಳಲಿ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕೇಂದ್ರ ಸರ್ಕಾರವು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಅನುದಾನ ಕಡಿತ ಮಾಡಿದೆಎಂದು ಆರೋಪಿಸುವ ಕಾಂಗ್ರೆಸ್‌ನ ನಾಯಕರು ಕರ್ನಾಟಕದಲ್ಲಿರುವ ತಮ್ಮದೇ ಸರ್ಕಾರದ ಹಗರಣಗಳ ಬಗ್ಗೆ ಮೊದಲು ಪ್ರಶ್ನೆ ಮಾಡಬೇಕು' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿರುಗೇಟು ನೀಡಿದರು.

ಲೋಕಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಗೆ ಮಂಗಳವಾರ ಉತ್ತರ ನೀಡಿದ ಅವರು, 'ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಈ ಸಲ ಅನುದಾನ ಕಡಿಮೆಯಾಗಿದೆ ಎಂದು ವಿಪಕ್ಷ ನಾಯಕರು ಆರೋಪಿಸಿದ್ದಾರೆ. ಕಾಂಗ್ರೆಸ್ ಸಂಸದ ಚರಣ್‌ಜಿತ್ ಸಿಂಗ್ ಚನ್ನಿ ಸಹ ಇದೇ ಧಾಟಿಯಲ್ಲಿ ಮಾತನಾಡಿದ್ದಾರೆ. ಕರ್ನಾಟಕದಲ್ಲಿ ನಡೆದಿರುವ ಹಗರಣಗಳ ಬಗ್ಗೆ ಅವರು ಮೊದಲು ಅಲ್ಲಿನ ನಾಯಕರನ್ನು ಪ್ರಶ್ನಿಸಬೇಕು. ಅದು ಬಿಟ್ಟು ಇಲ್ಲಿ ಆರೋಪ ಮಾಡುವುದು ಸರಿಯಲ್ಲ' ಎಂದರು.



ನಿರ್ಮಲಾ ಸೀತಾರಾಮನ್

'ಈ ಸಲದ ಕೇಂದ್ರ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅನುದಾನವನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಈಗ ಈ ಸಮುದಾಯಗಳ ಅನುದಾನ ಕಡಿಮೆಯಾಗಿದೆ ಎಂದು ಗುಲ್ಲೆಬ್ಬಿಸುತ್ತಿರುವ ಕಾಂಗ್ರೆಸ್ ನಾಯಕರಿಗೆ ನಾನೊಂದು ಪ್ರಶ್ನೆ ಕೇಳಲು ಬಯಸುತ್ತೇನೆ' ಎಂದರು. 'ಕರ್ನಾಟಕದಲ್ಲಿ ಈ ಸಲದ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ₹9,980 ಕೋಟಿ ಅನುದಾನ ಮೀಸಲಿಡಲಾಗಿದೆ. ಅದರಲ್ಲಿ ₹4,301 ಕೋಟಿಯನ್ನು ಅನ್ಯ ಉದ್ದೇಶಕ್ಕೆ ಬಳಸಲಾಗಿದೆ. ಪರಿಶಿಷ್ಟರ ಉಪ ಯೋಜನೆಯ ಈ ಹಣ ಎಲ್ಲಿಗೆ ಹೋಗಿದೆ ಎಂಬುದನ್ನು ದೇವರೇ ಬಲ್ಲ' ಎಂದು ವ್ಯಂಗ್ಯವಾಗಿ ಹೇಳಿದರು. ಆಗ ಬಿಜೆಪಿ ಸದಸ್ಯರು, 'ಇದು ಕಾಂಗ್ರೆಸ್‌ನ ಭ್ರಷ್ಟಾಚಾರ. ಶೇಮ್ ಶೇಮ್' ಎಂದು ಘೋಷಣೆ ಕೂಗಿದರು.

ಕರ್ನಾಟಕದಲ್ಲಿ ಇನ್ನೊಂದು ಬಹುದೊಡ್ಡ ಹಗರಣ ನಡೆದಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಪರಿಶಿಷ್ಟರ ಕಲ್ಯಾಣ ಅಭಿವೃದ್ಧಿಗೆ ಮೀಸಲಿಟ್ಟ ಹಣ ಖಾಸಗಿ ಖಾತೆಗೆ ವರ್ಗಾವಣೆಯಾಗಿದೆ. ಸಾಮಾನ್ಯವಾಗಿ ಆಡಳಿತ ನಡೆಸುವವರು ಹಗರಣ ನಡೆದೇ ಇಲ್ಲ ಎಂದು ಸಮರ್ಥಿಸಿಕೊಳ್ಳುತ್ತಾರೆ. ಆದರೆ, ಕರ್ನಾಟಕದ ಮುಖ್ಯಮಂತ್ರಿ ಅದು ₹187 ಕೋಟಿ ಹಗರಣ ಅಲ್ಲ, ಕೇವಲ ₹89 ಕೋಟಿ ಎಂದು ಸಮರ್ಥಿಸಿಕೊಂಡಿದ್ದಾರೆ. ಅವರ ಅಮಿತ ವಿಶ್ವಾಸ ನೋಡಿ. ಹಗರಣ ನಡೆಸಿಯೂ ಅವರು ವಾದ ಮಾಡುತ್ತಾರೆ. ಜತೆಗೆ, ಇಲ್ಲಿಗೆ ಬಂದು ಭಾಷಣ ಬಿಗಿಯುತ್ತಾರೆ' ಎಂದು ಅವರು ಲೇವಡಿ ಮಾಡಿದರು. ಈ ಮಾತಿಗೆ ಬಿಜೆಪಿ ಸದಸ್ಯರು ಮೇಜು ಗುದ್ದಿ ಬೆಂಬಲ ವ್ಯಕ್ತಪಡಿಸಿದರು. ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. 'ಕಳೆದ ಬಿಜೆಪಿ ಸರ್ಕಾರದಲ್ಲಿ ಎಷ್ಟೊಂದು ಹಗರಣಗಳು ನಡೆದಿವೆ. ಅದರ ಬಗ್ಗೆಯೂ ಪ್ರಸ್ತಾಪಿಸಿ' ಎಂದು ಕಾಂಗ್ರೆಸ್ ಸಂಸದರೊಬ್ಬರು ಕಾಲೆಳೆದರು. ಅದಕ್ಕೆ ನಿರ್ಮಲಾ ಪ್ರತಿಕ್ರಿಯಿಸಲಿಲ್ಲ.

ಕೆರೆ ಒತ್ತುವರಿ ತೆರವಿಗೆ ಶಾಸಕರ ಸೂಚನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಶಾಸಕ ಎಸ್. ಮುನಿರಾಜು, ಬಿಡಿಎ ಮತ್ತು ಪುರಸಭೆ ಅಧಿಕಾರಿಗಳೊಂದಿಗೆ ಪರಿಶೀಲಿಸಿದರು.

105 ಎಕರೆ ವಿಸ್ತೀರ್ಣದಲ್ಲಿರುವ ಈ ಕೆರೆಯ ಅಭಿವೃದ್ಧಿಗೆ ಬಿಡಿಎ ₹12.60 ಕೋಟಿ ಮತ್ತು ಪುರಸಭೆ ₹2 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ.

ಕೆರೆಯ ನೀಲ ನಕ್ಷೆಯನ್ನು ಪರಿಶೀಲಿಸಿದ ಶಾಸಕ ಮುನಿರಾಜು, ಸರ್ವೆ ಅಧಿಕಾರಿಗಳಿಂದ ಕೆರೆ ಒತ್ತುವರಿ ಕುರಿತು ಮಾಹಿತಿ ಪಡೆದರು. ಮುಲಾಜಿಲ್ಲದೆ ಒತ್ತುವರಿಯನ್ನು ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.



ಚಿಕ್ಕಬಾಣಾವರ ಕೆರೆಯ ಜಮೀನಿನ ನಕ್ಷೆ ವೀಕ್ಷಿಸಿದ ಶಾಸಕ ಎಸ್. ಮುನಿರಾಜು ಅವರು ಒತ್ತುವರಿ ಕುರಿತು ಮಾಹಿತಿ ಪಡೆದರು

ಬಿಡಿಎ ಎಂಜಿನಿಯರ್ ಅರವಿಂದ್, 'ಚಿಕ್ಕಬಾಣಾವರ ಕೆರೆಯ ಒತ್ತುವರಿ ಜಾಗವನ್ನು ಮತ್ತೊಮ್ಮೆ ಭೂಮಾಪನ ಮಾಡಿಸಿ ಸ್ಥಳ ಗುರುತಿಸಿದರೆ, ಅದನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುತ್ತೇವೆ' ಎಂದರು.

ಪುರಸಭೆ ಮುಖ್ಯಾಧಿಕಾರಿ ಎಚ್.ಎ. ಕುಮಾರ್, ಎಂಜಿನಿಯರ್‌ಗಳಾದ ಸುಮತಿ, ಹರೀಶ್, ಉಪ ತಹಸೀಲ್ದಾರ್ ಉಷಾ, ಬಿಡಿಎ ಎಂಜಿನಿಯರ್‌ಗಳಾದ ನವೀನ್, ಸ್ಥಳೀಯ ಮುಖಂಡರು ಇದ್ದರು.

ಜಾರ್ಖಂಡ್: ರೈಲು ಹಳಿ ತಪ್ಪಿ ಇಬ್ಬರ ಸಾವು

ಜಮ್‌ಶೆಡ್‌ಪುರ/ರಾಂಚಿ/ಕೋಲ್ಕತ್ತ (ಪಿಟಿಐ): ಜಾರ್ಖಂಡ್‌ನ ಸರಾಯ್‌ಕೆಲಾ–ಖರ್ಸಾವಾನ್ ಜಿಲ್ಲೆಯಲ್ಲಿ ಮಂಗಳವಾರ ಮುಂಜಾನೆ ಹೌರಾ–ಮುಂಬೈ ರೈಲಿನ ಕನಿಷ್ಠ 18 ಬೋಗಿಗಳು ಹಳಿ ತಪ್ಪಿದ ಪರಿಣಾಮ ಇಬ್ಬರು ಮೃತಪಟ್ಟು, 20 ಮಂದಿ ಗಾಯಗೊಂಡಿದ್ದಾರೆ. ಆಗ್ನೇಯ ರೈಲ್ವೆಯ ಚಕ್ರಧರಪುರ ವಿಭಾಗದ ಜಮ್‌ಶೆಡ್ ಪುರದಿಂದ ಸುಮಾರು 80 ಕಿ.ಮೀ ದೂರದಲ್ಲಿರುವ ಬಡಾಬಂಬೊ ಬಳಿ ಮುಂಜಾನೆ 3.45ರ ಸುಮಾರಿಗೆ ಅವಘಡ ಸಂಭವಿಸಿದೆ.

ಮೈಸೂರು ರೇಸ್

ಗೋಲ್ಡ್ ರೈಡ್ ಗೆಲ್ಲುವ ನಿರೀಕ್ಷೆ

ಮೈಸೂರು ಫಿಲ್ಲೀಸ್ ಟ್ರಯಲ್ ಸ್ಟೇಕ್ಸ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗೋಲ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಎಗೆನ್‌ಸ್ಟ್ ಆಲ್ ಆಡ್ಸ್ 1, ನಿಶ್ಕ್ 3, ಡಿ ಅಡ್ಮಿರಲ್ 2
2ನೇ ರೇಸ್: ಸ್ಪೆಕ್ಟಾಕ್ಯುಲರ್ 3, ಫೆರೆಟ್ಟಿ 4, ಕವರೊಜ್ಜಿ 5
3ನೇ ರೇಸ್: ಆರ್ಮಮೆಂಟ್ 5, ಎನ್‌ಆರ್‌ಐ ಟಚ್ 2, ಪರ್ಫೆಕ್ಟ್ ಎಂಪ್ರೆಸ್ 9
4ನೇ ರೇಸ್: ಜನ್ಯೆರೊ 1, ಸೆರಾಯ್ 2, ಓ ಮಂಚಲಿ 3
5ನೇ ರೇಸ್: ಗೋಲ್ಡ್ ರೈಡ್ 1, ಕ್ಸೈಲಿ 3
6ನೇ ರೇಸ್: ಸಿಲ್ವರ್ ಸ್ಪ್ರಿಂಗ್ 2, ಗೋಲ್ಡ್ ಕ್ರೆಸ್ಟ್ 3, ಮೇಬರಿ 5
7ನೇ ರೇಸ್: ಮಿಸ್ಟಿಕಲ್ ಬಾಂಡ್ 1, ಹಿಸ್ ಎಮಿನೆನ್ಸ್ 2, ಹೀರೊಯಿಸ್ಮ್ 3

ಉತ್ತಮ ಬೆಟ್: ಮಿಸ್ಟಿಕಲ್ ಬಾಂಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಎಎಪಿ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರಿಂದ ಪ್ರತಿಭಟನೆ

ಕೇಜ್ರಿವಾಲ್ ಬಿಡುಗಡೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ಅಕ್ರಮವಾಗಿ ಬಂಧಿಸಿಡಲಾಗಿದೆ ಎಂದು ಆರೋಪಿಸಿ ಆಮ್ ಆದ್ಮಿ ಪಕ್ಷ (ಎಎಪಿ) ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಎಎಪಿ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಮಾತನಾಡಿ, 'ಅರವಿಂದ ಕೇಜ್ರಿವಾಲ್ ಅವರ ಬಂಧನ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ ನಡೆಯನ್ನು ಸುಪ್ರೀಂ ಕೋರ್ಟ್ ಆಕ್ಷೇಪಿಸಿದೆ. ಆದರೆ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕೇಜ್ರಿವಾಲ್ ಅವರ ಜೈಲಿನಲ್ಲಿಯೇ ಇರಿಸಿದೆ. ಅವರನ್ನು ಜೈಲಿನಲ್ಲೇ ಕೊಲೆ ಮಾಡಲು ಕೇಂದ್ರ ಸರ್ಕಾರ ಸಂಚು ರೂಪಿಸಿದೆ' ಎಂದು ಆರೋಪಿಸಿದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಎಎಪಿ, ಸಿಪಿಐ, ಎಸ್‌ಡಿಪಿಐ ಪಕ್ಷಗಳ ಕಾರ್ಯಕರ್ತರು ಹಾಗೂ ವಿವಿಧ ಸಂಘಟನೆಗಳ ಮುಂಡರು – ಪ್ರಜಾವಾಣಿ ಚಿತ್ರ

'ಕೇಜ್ರಿವಾಲ್ ಅವರ ಆರೋಗ್ಯ ಹದಗೆಡುತ್ತಿದ್ದರೂ ಅವರು ಚಿಕಿತ್ಸೆ ಪಡೆಯಲು ಅವಕಾಶ ನೀಡದೇ, ಕೇಂದ್ರ ಸರ್ಕಾರ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತಿದೆ. ಕೇಜ್ರಿವಾಲ್ ಅವರನ್ನು ಬಿಡುಗಡೆಗೊಳಿಸಿ, ಚಿಕಿತ್ಸೆ ಪಡೆಯಲು ಅವಕಾಶ ನೀಡಬೇಕು' ಎಂದು ಆಗ್ರಹಿಸಿದರು.

ಎಎಪಿ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಪೃಥ್ವಿ ರೆಡ್ಡಿ ಮಾತನಾಡಿ, 'ಅರವಿಂದ್ ಕೇಜ್ರಿವಾಲ್ ಅವರ ಆರೋಗ್ಯ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ಅವರು ಮಧುಮೇಹದಿಂದ ಬಳಲುತ್ತಿದ್ದು, ಅವರ ಪ್ರಾಣಕ್ಕೆ ಮಾರಕವಾಗುವ ಸಾಧ್ಯತೆ ಇದೆ' ಎಂದು ಆತಂಕ ವ್ಯಕ್ತಪಡಿಸಿದರು.

ಎಸ್‌ಡಿಪಿಐ ರಾಜ್ಯ ಘಟಕದ ಅಧ್ಯಕ್ಷ ಅಬ್ದುಲ್ ಮಜೀದ್, ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ ಮಾತನಾಡಿದರು. ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ, ಸಿಪಿಐಎಂ ಮುಖಂಡ ಬಸವರಾಜು, ಸಿಪಿಐ ಸಹ ಕಾರ್ಯದರ್ಶಿ ಅಮ್ಜದ್ ಖಾನ್, ಭಾಸ್ಕರ್ ಪ್ರಸಾದ್, ದಲಿತ ಮುಖಂಡ ಹರಿರಾಮ್, ನಾಟಕ ಅಕಾಡೆಮಿ ಅಧ್ಯಕ್ಷ ನಾಗರಾಜ ಮೂರ್ತಿ ಭಾಗವಹಿಸಿದ್ದರು.

ನಿಧನ ವಾರ್ತೆ

ಸತ್ಯನಾರಾಯಣ ಗೌಡ

ನೆಲಮಂಗಲ: ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಸಿ.ಡಿ. ಸತ್ಯನಾರಾಯಣ ಗೌಡ(83) ಅವರು ಮಂಗಳವಾರ ಹೃದಯಾಘಾತದಿಂದ ತಮ್ಮ ಸ್ವಗೃಹದಲ್ಲಿ ನಿಧನರಾದರು.



ಅವರಿಗೆ ಪತ್ನಿ, ಮೂವರು ಪುತ್ರರಿದ್ದಾರೆ. ದೊಡ್ಡಬಳ್ಳಾಪುರ ತಾಲ್ಲೂಕಿನ ಚನ್ನಾದೇವಿ ಅಗ್ರಹಾರದ ಅವರ ಜಮೀನಿನಲ್ಲಿ ಮಂಗಳವಾರ ಸಂಜೆ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ಶಾಸಕ ಧೀರಜ್ ಮುನಿರಾಜು, ರಾಜ್ಯ ವಕೀಲರ ಸಂಘದ ಅಧ್ಯಕ್ಷ ವಿವೇಕರೆಡ್ಡಿ, ಮಾಜಿ ಅಧ್ಯಕ್ಷ ಎ.ಪಿ.ರಂಗನಾಥ್, ಮಾಜಿ ಶಾಸಕ ವೆಂಕಟರಮಣಯ್ಯ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು.

ಫಕೀರಪ್ಪ ವರವಿ

ಶಿರಹಟ್ಟಿ: 'ಗುಬ್ಬಿ ವೀರಣ್ಣ ಪ್ರಶಸ್ತಿ' ಪ್ರಶಸ್ತಿ ಪುರಸ್ಕೃತ ರಂಗಕರ್ಮಿ ಫಕೀರಪ್ಪ ವರವಿ (83) ತಾಲ್ಲೂಕಿನ ವರವಿ ಗ್ರಾಮದಲ್ಲಿ ಮಂಗಳವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಸಂಜೆ ಅಂತ್ಯಕ್ರಿಯೆ ನೆರವೇರಿತು.



ಬಾಲ್ಯದಿಂದ ರಂಗಭೂಮಿಯ ಬಗ್ಗೆ ಆಸಕ್ತಿ ಬೆಳೆಸಿಕೊಂಡ ಫಕೀರಪ್ಪ ಅವರು ನಾಟಕ ಕಂಪನಿಗಳಲ್ಲಿ ಅಭಿನಯಿಸಿದ್ದರು. 1977ರಲ್ಲಿ 'ರಾಘವೇಂದ್ರ ವಿಜಯ ನಾಟ್ಯಸಂಘ' ಸ್ಥಾಪಿಸಿದ್ದರು. ಅವರು 100ಕ್ಕೂ ಹೆಚ್ಚು ಆಡಿಯೊ ಕ್ಯಾಸೆಟ್‌ಗಳಿಗೆ ಕಂಠದಾನ ಮಾಡುವುದರ ಜೊತೆಗೆ ಚಲನಚಿತ್ರಗಳಲ್ಲಿ ನಟಿಸಿದ್ದರು. 'ಗುಬ್ಬಿ ವೀರಣ್ಣ ಪ್ರಶಸ್ತಿ', 'ಹಾಸ್ಯ ಚಕ್ರವರ್ತಿ', 'ಕೆ.ಹಿರಣ್ಣಯ್ಯನವರ ದತ್ತಿ ರಂಗಪ್ರಶಸ್ತಿ' ಸೇರಿ ಹಲವು ಪುರಸ್ಕಾರಗಳು ಅವರಿಗೆ ಸಂದಿವೆ.

ಕನ್ನಡ ವಿಶ್ವವಿದ್ಯಾಲಯ, ಹಂಪಿ.ವಿದ್ಯಾರಣ್ಯ 583276
ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ.

ಸಂಖ್ಯೆ:ಕವಿಹಂ:ಕುಸ:ಪ.ಪ್ರ:೨೦೨೪-೨೫ ದಿನಾಂಕ: ೨೯.೦೭.೨೦೨೪

ಪ್ರವೇಶ ಪ್ರಕಟಣೆ

೨೦೨೪-೨೫ನೇ ಶೈಕ್ಷಣಿಕ ಸಾಲಿನಲ್ಲಿ ಈ ಕೆಳಕಂಡ ಸ್ನಾತಕ ಕಾರ್ಯಕ್ರಮಗಳ ಪ್ರವೇಶಾತಿಗಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು uucms ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ	ಕಾರ್ಯಕ್ರಮ	In take	ಸ್ಥಾನಗಳ ಸಂಖ್ಯೆ	ಕೇಂದ್ರ/ಸಂಸ್ಥೆ
1	ಬಿ.ಪಿ.ಎ ಹಿಂದೂಸ್ತಾನಿ ಗಾಯನ	೪೦	೨೦	ವಿದ್ಯಾರಣ್ಯ
			೧೦	ಭಾರತೀಯ ಮಾತಂಗ ಸಾಮಾಜಿಕ, ಸಾಂಸ್ಕೃತಿಕ ಅಕಾಡೆಮಿ, ಹುಮನಾಬಾದ್
			೧೦	ಶ್ರೀ ಗಾನಯೋಗಿ ಪಂಚಾಕ್ಷರ ಪ್ರತಿಷ್ಠಾನ(ರಿ), ವಿಜಯಪುರ
2	ಬಿ.ವಿ.ಎ. ಶಿಲ್ಪಕಲೆ	೪೦	೨೦	ವಿದ್ಯಾರಣ್ಯ
			೨೦	ಬಾದಾಮಿ ವಿಸ್ತರಣಾ ಕೇಂದ್ರ, ಬಾದಾಮಿ
3	ಬಿ.ವಿ.ಎ. ಚಿತ್ರಕಲೆ	೪೦	೨೦	ವಿದ್ಯಾರಣ್ಯ
			೨೦	ಬಾದಾಮಿ ವಿಸ್ತರಣಾ ಕೇಂದ್ರ, ಬಾದಾಮಿ

ಈ ಮೇಲಿನ ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸುವ ಎಲ್ಲ ಅಭ್ಯರ್ಥಿಗಳು ಕನ್ನಡ ವಿಶ್ವವಿದ್ಯಾಲಯದ ಕ್ಯಾಂಪಸ್ ಕಾಲೇಜಿಗೆ ಎಂದು ಆಯ್ಕೆ ಮಾಡಿ ಪ್ರವೇಶಕ್ಕೆ ಅರ್ಜಿ ಸಲ್ಲಿಸತಕ್ಕದ್ದು. ವಿದ್ಯಾರಣ್ಯ ಹಾಗೂ ವಿವಿಧ ಕೇಂದ್ರಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದನ್ನು ವಿಶ್ವವಿದ್ಯಾಲಯವೇ ಅಂತಿಮಗೊಳಿಸುತ್ತದೆ. ಪ್ರತಿ ಕಾರ್ಯಕ್ರಮಕ್ಕೆ ಕನಿಷ್ಠ ಐದು(೫) ವಿದ್ಯಾರ್ಥಿಗಳ ಪ್ರವೇಶ ಅಗತ್ಯವಾಗಿದೆ.

೧. **ಪ್ರವೇಶಾತಿಯ ಆರಂಭ ದಿನಾಂಕ: ೨೯.೦೭.೨೦೨೪ ಆಗಿರುತ್ತದೆ.**
೨. **ಕೊನೆಯ ದಿನಾಂಕ: ೦೯.೦೮.೨೦೨೪ ಆಗಿರುತ್ತದೆ.**
೩. **ದಂಡ ಶುಲ್ಕ ರೂ : ೨೦೦/- ಗಳೊಂದಿಗೆ ಕೊನೆಯ ದಿನಾಂಕ: ೧೬.೦೮.೨೦೨೪**

ವಿದ್ಯಾರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು **https://uucms.karnataka.gov.in/** ಗೆ ಹೋಗಿ Register ಮಾಡಿಕೊಂಡು uucms ಮೂಲಕ ಅರ್ಜಿಗಳನ್ನು ಸಲ್ಲಿಸುವುದು. ಅಥವಾ ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್ www.kannadauniversity.org ಗೆ ಹೋಗಿ ಅಲ್ಲಿಂದ uucms ಮೂಲಕ ಸಲ್ಲಿಸುವುದು.

ಸಹಿ/-ಕುಲಸಚಿವರು

ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/163

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ವೈದ್ಯಾಧಿಕಾರಿಗಳ ಕಛೇರಿ, ಕುಷ್ಠರೋಗ ಆಸ್ಪತ್ರೆ, ಮಾಗಡಿ ರಸ್ತೆ, ಬೆಂಗಳೂರು-23
ಇ-ಮೇಲ್: moleprosyhospital@gmail.com ದೂ: 080-23350239

ಸಂಖ್ಯೆ: ಕುಆ/ಪಥ್ಯಾಹಾರ/13/2024-25 ದಿನಾಂಕ: 29.07.2024

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2024-25ನೇ ಸಾಲಿನ ಕುಷ್ಠರೋಗ ಆಸ್ಪತ್ರೆ, ಮಾಗಡಿ ರಸ್ತೆ, ಬೆಂಗಳೂರು ಒಳರೋಗಿಗಳಿಗೆ ಪಥ್ಯಾಹಾರ ಪದಾರ್ಥಗಳು ಹಾಗೂ ಬ್ರೆಡ್ ಪದಾರ್ಥಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರ್ಮ್‌ನಲ್ಲಿ ಟೆಂಡರ್ ಕರೆಯಲಾಗಿದೆ.
ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಾಸ್ತಾನುವೇಜುಗಳ ವಿವರಗಳನ್ನು ವೆಬ್‌ಸೈಟ್: https://kppp.karnataka.gov.in ನಲ್ಲಿ ವೀಕ್ಷಿಸಬಹುದಾಗಿರುತ್ತದೆ ಹಾಗೂ ಮೇಲ್ಕಂಡ ವಿಳಾಸದ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.

ಸಹಿ/-
ಆಡಳಿತ ವೈದ್ಯಾಧಿಕಾರಿಗಳು

DIPR/CP/1151/SPAN/2024-25

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)

ಅಂತಿಮ ಕರೆ ಪತ್ರ

ಶ್ರೀ. ವೈ.ವೆಂಕಟೇಶ್, ಮೆಕ್ಯಾನಿಕ್ ದರ್ಜೆ-2, ಕಾ ಮತ್ತು ಪಾ ಘಟಕ-3, ನಗರ ಉಪ-ವಿಭಾಗ, ಬೆವಿಕಂ, ಶಿಡ್ಲಘಟ್ಟ, ಆದ ನೀವು **ದಿನಾಂಕ: 16.01.2023** ರಿಂದ ಇಂದಿನವರೆಗೂ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿದ್ದು, ಇದುವರೆಗೂ 03 ಮರುಕರೆ ಸೂಚನಾ ಪತ್ರಗಳನ್ನು ನಿಮ್ಮ ವಿಳಾಸಕ್ಕೆ ಜಾರಿಗೊಳಿಸಿದ್ದರೂ ಸಹ ಅವು ನಿಮ್ಮ ವಿಳಾಸದಲ್ಲಿ ನೀವು ಲಭ್ಯವಿಲ್ಲದ ಕಾರಣ ಸ್ವೀಕೃತವಾಗದೇ ಹಿಂದಿರುಗಿರುತ್ತವೆ.

ಆದ್ದರಿಂದ ನಿಮ್ಮ ಅನಧಿಕೃತ ಗೈರು ಹಾಜರಿಗೆ ಸಮಂಜಸವಾದ ಕಾರಣ ಮತ್ತು ಸೂಕ್ತ ದಾಖಲೆಗಳೊಂದಿಗೆ ಈ ಪತ್ರಿಕಾ ಪ್ರಕಟಣೆಯು ಪ್ರಕಟವಾದ ದಿನಾಂಕದಿಂದ 07 ದಿನಗಳ ಒಳಗಾಗಿ ಈ ಕೆಳಕಂಡ ಸಹಿದಾರರ ಮುಂದೆ ಸಮಕ್ಷಮ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಈ ಪ್ರಕಟಣೆಯು ಅಂತಿಮ ಕರೆಯೋಲೆ ಪತ್ರವೆಂದು ಪರಿಗಣಿಸಿ, ಕ.ವಿ.ಮಂ ನೌಕರರ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಬಂಧನೆಗಳು 1987ರ ನಿಯಮಾವಳಿಯ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಯಾವುದೇ ಪರಿಹಾರ ನೀಡದೆ ನಿಮ್ಮನ್ನು ಕೆಲಸದಿಂದ ವಜಾಗೊಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ & ಪಾಲನಾ, ವಿಭಾಗ, ಬೆ.ವಿ.ಕಂ, ಚಿಂತಾಮಣಿ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಪರಿಸರ ಭವನ, ನಂ.49, ಚರ್ಚ್ ರಸ್ತೆ, ಬೆಂಗಳೂರು-560001
ದೂರವಾಣಿ : 080-25581383, ಫ್ಯಾಕ್ಸ್ : 080-25586321

ಟೆಂಡರ್ ಸಂಖ್ಯೆ: CEL/CEO-3/08/XVFC/2023-24/1816 ದಿನಾಂಕ: 24.07.2024

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ-2ನೇ ಕರೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಸದಸ್ಯ ಕಾರ್ಯದರ್ಶಿಗಳು (ಖರೀದಿದಾರರು), ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಇವರು ಅರ್ಹ ಸರಬರಾಜುದಾರರಿಂದ ಮಂಡಳಿಗೆ ನಾಲ್ಕು ಬಿಎಸ್ – VI ವಾಯು ಗುಣಮಟ್ಟ ಮಾಪನ ಮಾಡುವ ವಾಹನಗಳನ್ನು ಖರೀದಿಸಲು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಆಹ್ವಾನಿಸಿದ್ದಾರೆ. ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: **08.08.2024** (ಸಂಜೆ 4:00 ಗಂಟೆಯುವರೆಗೆ). ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಸಹಿ/-
ವಾ.ಸಾ.ಸಂ.ಇ/ವಾಪ್ರ/1171/ಆಕಾರ್/2024-25 ಸದಸ್ಯ ಕಾರ್ಯದರ್ಶಿಗಳು, ಕರಾಮಾನಿಮಂ

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ : ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ನಗರಸಭಾ ಕಾರ್ಯಾಲಯ, ಹಿರಿಯೂರು-577598
ಫೋನ್ ನಂ. 08193-263220, ಸಹಾಯವಾಣಿ: 08193-260020,
E-mail:tmchiriyur@yahoo.in Webist: hiriyurcity.gov.in

ನಂ.ನ.ಸ.ಹಿ/ತಾ.ವಿ/ಎಸ್.ಡಬ್ಲ್ಯೂ.ಎಂ/2.0/ಟೆಂ.ಸಿಆರ್:07/2024-25
ದಿನಾಂಕ:29/07/2024

ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-4 ರ ನಿಬಂಧನೆಗಳಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಹಿರಿಯೂರು ನಗರಸಭೆ ವಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ (ನಗರ) 2.0 ಯೋಜನೆಯಲ್ಲಿ ಇಂಡೆಂಟ್ ನಂ.: DMA/2024-25/BD/WORK_INDENT19435 ಅಂದಾಜು ಮೊತ್ತ ರೂ.115.50 ಲಕ್ಷಗಳು, ಇಎಂಡಿ ಮೊತ್ತ ರೂ.2,00,000/-ಗಳು. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:13/08/2024ರ ಸಂಜೆ 05:00ರ ವರೆಗೆ, ಬಿಡ್‌ಗಳನ್ನು ತೆರೆಯುವ ದಿನಾಂಕ:14/08/2024ರ ಸಂಜೆ 05:15ರ ನಂತರ. ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karantaka.gov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.
ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಅಭಿಯಂತರರನ್ನು ಸಂಪರ್ಕಿಸಬಹುದು

ಸಹಿ/- ಆಡಳಿತಾಧಿಕಾರಿಗಳು, ನಗರಸಭೆ, ಹಿರಿಯೂರು.
ಸಹಿ/- ಪೌರಾಯುಕ್ತರು, ನಗರಸಭೆ, ಹಿರಿಯೂರು.
DIPR/CTA/KSMCA/154/2024-25

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು-560070.

ಸಂ: ಕಾಅ/ಪಂರಾಇಂವಿ/ಬೆಂನ/ಎಇ-1/ಟೆಂಡರ್/09/2024-25 ದಿನಾಂಕ: 29.07.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 09/2024-25
(ದ್ವಿ ಲಕೋಟೆ ಪದ್ಧತಿ) (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MWD Grants 4225-04-102-0-01 (386) Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ-ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **14.08.2024ರ ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ, ಬೆಂಗಳೂರು

DIPR/CP/1156/SPAN/2024-25

ಬೆಳಗಾವಿ ಮಹಾನಗರ ಪಾಲಿಕೆ
ಸುಭಾಷನಗರ, ಬೆಳಗಾವಿ – 590016
Email : itstaff_ulb_belgaum@yahoo.com. Website : www.belgaumcity.mrc.gov.in

ಗುತ್ತಿಗೆ ಸಂಖ್ಯೆ:ಮನಪಾಬೆ/ಲೋ.ಶಾ/ಕಾಅ/ಡಿಎಮ್/ಟಿಎನ್‌ಡಿ/ಇಪ್ರೋ-04/2024-25 ದಿನಾಂಕ: 29-07-2024

ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999 – 2000 ಪ್ರಕಾರ ಆಕ್ಟ್ 2000 ನಿಯಮದಂತೆ ಮಹಾನಗರ ಪಾಲಿಕೆ ಬೆಳಗಾವಿಗೆ ನಿಗದಿಪಡಿಸಲಾದ 2024-25ನೇ ಸಾಲಿನ 15ನೇ ಹಣಕಾಸಿನ ಸಾಮಾನ್ಯ ಮೂಲ ಅನುದಾನದ, ಎಸ್.ಎಫ್.ಸಿ (ಎಸ್.ಸಿ.ಪಿ / ಟಿ.ಎಸ್.ಪಿ), ಎಸ್.ಎಫ್.ಸಿ ಕುಡಿಯುವ ನೀರು 2023-24, ಎಸ್.ಬಿ.ಎಮ್.2.0 ಹಾಗೂ ಮಹಾನಗರ ಪಾಲಿಕೆಯ ನಿಧಿಯಡಿ ಅಭಿವೃದ್ಧಿ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಪಡೆಯಬಹುದಾಗಿದೆ ಹೆಚ್ಚಿನ ವಿವರಗಳಿಗೆ ಆನ್‌ಲೈನ್ ವೆಬ್‌ಸೈಟ್ **(https://www.kppp.karnataka.gov.in)** ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು.
1) ಟೆಂಡರ್ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ: **09-08-2024 ರಂದು ಸಂಜೆ 5.00 ಗಂಟೆಯವರೆಗೆ.** 2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **16-08-2024 ರಂದು ಸಂಜೆ 4.00 ಗಂಟೆಯವರೆಗೆ.** 3) ಟೆಂಡರಿನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **19-08-2024 ರಂದು ಮುಂಜಾನೆ 11.00 ಗಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ.** 4) ಟೆಂಡರಿನ ಆರ್ಥಿಕ ಬಿಡ್ ತೆರೆಯುವ ದಿನಾಂಕ: **21-08-2024 ರಂದು ಮುಂಜಾನೆ 11.00 ಗಂಟೆಗೆ, ಆಯುಕ್ತರು ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ.**

ಸಹಿ/- ಆಯುಕ್ತರು
ಮಹಾನಗರ ಪಾಲಿಕೆ, ಬೆಳಗಾವಿ

ವಾಸಾಸಂಇ/ಬೆಳಗಾವಿ/496/ಅಡ್ವರ್ಟೋರ್/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ-ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	ದಕ್ಷಿಣ ಪಶ್ಚಿಮ-1	ಬೆಂಜಮಂ/ಕಾನಿಅ(ದ.ಪ.-1)/ತಾಂಅ/ಪಿಬಿ/1202/2024-25, ದಿನಾಂಕ: 29.07.2024 (ಪರಿಶಿಷ್ಟ ಪಂಗಡಕ್ಕೆ ಮೀಸಲು)	1	ರೂ.97,94,644/- / ರೂ.1,15,577/-	08.08.2024ರ ಮಧ್ಯಾಹ್ನ 3:00 ಗಂಟೆಯವರೆಗೆ	12.08.2024ರ ಮಧ್ಯಾಹ್ನ 3:00 ಗಂಟೆಯ ನಂತರ
2		ಬೆಂಜಮಂ/ಕಾನಿಅ(ದ.ಪ.-1)/ತಾಂಅ/ಪಿಬಿ/1202/2024-25, ದಿನಾಂಕ: 29.07.2024	2	ರೂ.49,55,066/- / ರೂ.1,16,940/-		
3			3	ರೂ.69,66,514/- / ರೂ.1,64,409/-		
4			4	ರೂ.39,81,513/- / ರೂ.93,964/-		
5		ಬೆಂಜಮಂ/ಕಾನಿಅ(ದ.ಪ.-1)/ತಾಂಅ/ಪಿಬಿ/1202/2024-25, ದಿನಾಂಕ: 29.07.2024 (ಪರಿಶಿಷ್ಟ ಪಂಗಡಕ್ಕೆ ಮೀಸಲು)	5	ರೂ.40,71,317/- / ರೂ.48,042/-		
6		ಬೆಂಜಮಂ/ಕಾನಿಅ(ದ.ಪ.-1)/ತಾಂಅ/ಪಿಬಿ/1202/2024-25, ದಿನಾಂಕ: 29.07.2024 (ಪರಿಶಿಷ್ಟ ಜಾತಿಗೆ ಮೀಸಲು)	6	ರೂ.16,78,472/- / ರೂ.24,760/-		
7		ಬೆಂಜಮಂ/ಕಾನಿಅ(ದ.ಪ.-1)/ತಾಂಅ/ಪಿಬಿ/1202/2024-25, ದಿನಾಂಕ: 29.07.2024	7	ರೂ.18,56,918/- / ರೂ.54,780/-		
8		ಬೆಂಜಮಂ/ಕಾನಿಅ(ದ.ಪ.-1)/ತಾಂಅ/ಪಿಬಿ/1202/2024-25, ದಿನಾಂಕ: 29.07.2024 (ಪರಿಶಿಷ್ಟ ಜಾತಿಗೆ ಮೀಸಲು)	8	ರೂ.19,27,240/- / ರೂ.28,430/-		
9		ಬೆಂಜಮಂ/ಕಾನಿಅ(ದ.ಪ.-1)/ತಾಂಅ/ಪಿಬಿ/1202/2024-25, ದಿನಾಂಕ: 29.07.2024	9	ರೂ.20,02,950/- / ರೂ.50,000/-		
10			10	ರೂ.38,33,840/- / ರೂ.90,479/-		
11			11	ರೂ.14,63,683/- / ರೂ.43,180/-		
12			12	ರೂ.19,36,517/- / ರೂ.57,130/-		

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ ಪಶ್ಚಿಮ-1)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/BCPL/1172/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ-ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ಕಾಮಗಾರಿಗಳ ವಿವರ	ಕಾಮಗಾರಿಗಿಟ್ಟ ಮೊತ್ತ / ಇಎಂಡಿ ಮೊತ್ತ
	ಮುಖ್ಯ ಅಭಿಯಂತರರ ಕಛೇರಿ (ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು – 560 009	
	ಸಂ: ಬೆಂ.ಜ.ಮಂ/ಪ್ರಮುಅ/ಮುಅ(ಉ)/ಅಮುಅ(ಉ)-I/ಉಮುಅ(ನಿ)-II//ತಾಂಸ(ಉ)/1904/2024-25 ದಿನಾಂಕ:29.07.2024	
1	ಸಕಾನಿಅ (ಕೇಂದ್ರ-1-2) ಉಪ ವಿಭಾಗದ ಪಿಳ್ಳಣ್ಣ ಗಾರ್ಡನ್-1 ಸೇವಾ ಠಾಣೆ ವ್ಯಾಪ್ತಿಯಲ್ಲಿ ಬರುವ ಟ್ಯಾನರಿ ರಸ್ತೆಯ ದೊಡ್ಡಿ ವೃತ್ತದಿಂದ ವೆಂಕಟೇಶಪುರ ವೃತ್ತದವರೆಗೆ (ಎಡಭಾಗ) 300 ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ-3 ಪೈಪ್ ಲೈನ್ ಅನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ. 123.40 ಲಕ್ಷಗಳು / ರೂ. 2.18 ಲಕ್ಷಗಳು
	ಸಂ: ಬೆಂ.ಜ.ಮಂ/ಪ್ರಮುಅ/ಮುಅ(ಉ)/ಅಮುಅ(ಉ)-I/ಉಮುಅ(ನಿ)-II//ತಾಂಸ(ಉ)/1905/2024-25 ದಿನಾಂಕ:29.07.2024	
2	ಸಕಾನಿಅ (ಕೇಂದ್ರ-1-2) ಉಪ ವಿಭಾಗದ ಪಿಳ್ಳಣ್ಣ ಗಾರ್ಡನ್-1 ಸೇವಾ ಠಾಣೆ ವ್ಯಾಪ್ತಿಯಲ್ಲಿ ಬರುವ ಟ್ಯಾನರಿ ರಸ್ತೆಯ (ಎಡಭಾಗ) ದೊಡ್ಡಿ ವೃತ್ತದಿಂದ ಕೆ.ಜಿ. ಹಳ್ಳಿ ಪೊಲೀಸ್ ಸ್ಟೇಷನ್‌ವರೆಗೆ 300 ಮಿಮೀ ವ್ಯಾಸದ ಎಂಎಸ್ ನೀರು ಸರಬರಾಜು ಪೈಪ್ ಲೈನ್ ಅನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ.290.66 ಲಕ್ಷಗಳು / ರೂ. 5.14 ಲಕ್ಷಗಳು
	ಸಂ: ಬೆಂ.ಜ.ಮಂ/ಪ್ರಮುಅ/ಮುಅ(ಉ)/ಅಮುಅ(ಉ)-I/ಉಮುಅ(ನಿ)-II//ತಾಂಸ(ಉ)/1906/2024-25 ದಿನಾಂಕ:29.07.2024	
3	ಸಕಾನಿಅ (ಕೇಂದ್ರ-1-2) ಉಪ ವಿಭಾಗದ ಪಿಳ್ಳಣ್ಣ ಗಾರ್ಡನ್-2 ಸೇವಾ ಠಾಣೆ ವ್ಯಾಪ್ತಿಯಲ್ಲಿ ಬರುವ ಟ್ಯಾನರಿ ರಸ್ತೆಯ (ಬಲಭಾಗ) ಬಿಎಸ್‌ಎ ರಸ್ತೆಯಿಂದ ವಿನಾಯಕ ದೇವಸ್ಥಾನ ರಸ್ತೆಯವರೆಗೆ 300 ಮಿಮೀ ವ್ಯಾಸದ ಎಂಎಸ್ ನೀರು ಸರಬರಾಜು ಪೈಪ್ ಲೈನ್ ಅನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ. 290.66 ಲಕ್ಷಗಳು / ರೂ. 5.14 ಲಕ್ಷಗಳು
	ಸಂ: ಬೆಂ.ಜ.ಮಂ/ಪ್ರಮುಅ/ಮುಅ(ಉ)/ಅಮುಅ(ಉ)-I/ಉಮುಅ(ನಿ)-II//ತಾಂಸ(ಉ)/1907/2024-25 ದಿನಾಂಕ:29.07.2024	
4	ಸಕಾನಿಅ (ಕೇಂದ್ರ-1-2) ಉಪ ವಿಭಾಗದ ಪಿಳ್ಳಣ್ಣ ಗಾರ್ಡನ್-2 ಸೇವಾ ಠಾಣೆ ವ್ಯಾಪ್ತಿಯಲ್ಲಿ ಬರುವ ಟ್ಯಾನರಿ ರಸ್ತೆಯ (ಬಲಭಾಗ) ಪಿಕೆ ಕಾಲೋನಿಯಿಂದ ವಿನೋಬ ನಗರ ಮುಖ್ಯರಸ್ತೆಯವರೆಗೆ 250 ಮಿಮೀ ವ್ಯಾಸದ ಎಂಎಸ್ ನೀರು ಸರಬರಾಜು ಪೈಪ್ ಲೈನ್ ಅನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ. 217.23 ಲಕ್ಷಗಳು / ರೂ. 3.84 ಲಕ್ಷಗಳು

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **16.08.2024ರ ಸಂಜೆ 4.00 ಗಂಟೆಯವರೆಗೆ.** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **17.08.2024 ರ ಸಂಜೆ 4.00 ಗಂಟೆಯ ನಂತರ.**

ಸಹಿ/-
ಮುಖ್ಯ ಅಭಿಯಂತರರು(ಉತ್ತರ)

ಕ್ರ.ಸಂ.	ಕಾಮಗಾರಿಗಳ ವಿವರ	ಕಾಮಗಾರಿಗಿಟ್ಟ ಮೊತ್ತ / ಇಎಂಡಿ ಮೊತ್ತ
	ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ-ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು – 560 009	
	ಸಂ: ಬೆಂ.ಜ.ಮಂ/ಮುಅ(ತ್ಯಾನೀನಿ-ಪ)/ಅಮುಅ(ತ್ಯಾನೀನಿ-ಎನ್-ಪ)/ಉಮುಅ(ತ್ಯಾನೀನಿ-ಪೂ&ಪ)/ತಾಂಸ-2/489/2024-25 ದಿನಾಂಕ:30.07.2024	
5	ಚಾಮರಾಜಪೇಟೆಯ 3ನೇ ಮುಖ್ಯ ರಸ್ತೆಯ ಉದ್ದಕ್ಕೂ ಪಿಎಂಕೆ ರಸ್ತೆಯಿಂದ 9ನೇ ಅಡ್ಡರಸ್ತೆಯವರೆಗೆ 450ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ-3 ದರ್ಜೆಯ ಒಳಚರಂಡಿ ಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ. 124.11 ಲಕ್ಷಗಳು / ರೂ. 1.87 ಲಕ್ಷಗಳು
	ಸಂ: ಬೆಂ.ಜ.ಮಂ/ಮುಅ(ತ್ಯಾನೀನಿ-ಪ)/ಅಮುಅ(ತ್ಯಾನೀನಿ-ಎನ್-ಪ)/ಉಮುಅ(ತ್ಯಾನೀನಿ-ಪೂ&ಪ)/ತಾಂಸ-2/490/2024-25 ದಿನಾಂಕ:30.07.2024	
6	ಚಾಮರಾಜಪೇಟೆಯ 5ನೇ ಮುಖ್ಯ ರಸ್ತೆಯಿಂದ ಸಮೀರಪುರ ಮುಖ್ಯರಸ್ತೆಯವರೆಗೆ 600ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ-3 ದರ್ಜೆಯ ಒಳಚರಂಡಿ ಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ. 103.16 ಲಕ್ಷಗಳು / ರೂ. 1.55 ಲಕ್ಷಗಳು
	ಸಂ: ಬೆಂ.ಜ.ಮಂ/ಮುಅ(ತ್ಯಾನೀನಿ-ಪ)/ಅಮುಅ(ತ್ಯಾನೀನಿ-ಎನ್-ಪ)/ಉಮುಅ(ತ್ಯಾನೀನಿ-ಪೂ&ಪ)/ತಾಂಸ-2/491/2024-25 ದಿನಾಂಕ:30.07.2024	
7	ಎನ್‌ಹೆಚ್ 44 ಸರ್ವೀಸ್ ರಸ್ತೆಯಿಂದ ಜಕ್ಕೂರು ಮುಖ್ಯರಸ್ತೆಯಲ್ಲಿ ಹಾಲಿ ಇರುವ 600ಮಿಮೀ ವ್ಯಾಸದ ಒಳಚರಂಡಿ ಮಾರ್ಗಕ್ಕೆ ಸಂಪರ್ಕಿಸಲು 600ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ-3 ದರ್ಜೆಯ ಒಳಚರಂಡಿ ಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ. 196.74 ಲಕ್ಷಗಳು / ರೂ. 2.95 ಲಕ್ಷಗಳು
	ಸಂ: ಬೆಂ.ಜ.ಮಂ/ಮುಅ(ತ್ಯಾನೀನಿ-ಪ)/ಅಮುಅ(ತ್ಯಾನೀನಿ-ಎನ್-ಪ)/ಉಮುಅ(ತ್ಯಾನೀನಿ-ಪೂ&ಪ)/ತಾಂಸ-2/492/2024-25 ದಿನಾಂಕ:30.07.2024	
8	ಯಲಹಂಕದ ಬಸವಲಿಂಗಪ್ಪ ಸಮಾಧಿಯಿಂದ ಎನ್‌ಹೆಚ್ 44 ಸರ್ವೀಸ್ ರಸ್ತೆಯ ಉದ್ದೇಶಿತ 600ಮಿಮೀ ವ್ಯಾಸದ ಒಳಚರಂಡಿ ಮಾರ್ಗಕ್ಕೆ ಸಂಪರ್ಕಿಸಲು 600ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ-3 ದರ್ಜೆಯ ಒಳಚರಂಡಿ ಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ.206.72 ಲಕ್ಷಗಳು / ರೂ. 3.10 ಲಕ್ಷಗಳು

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **14.08.2024ರ ಸಂಜೆ 4.00 ಗಂಟೆಯವರೆಗೆ.** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **16.08.2024 ರ ಸಂಜೆ 4.30 ಗಂಟೆಗೆ.**

ಸಹಿ/-
ಮುಖ್ಯ ಅಭಿಯಂತರರು(ತ್ಯಾನೀನಿ-ಪಶ್ಚಿಮ)

ಟೆಂಡರ್ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು **https://kppp.karnataka.gov.in** ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.
ವಾಸಾಸಂಇ/ವಾಪ್ರ/ಜಿಎ/1160/2024-25

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತರ ಕಛೇರಿ ಕಲಬುರಗಿ

ಸಂಖ್ಯೆ: ಸಿ7(5) (ಸಿ5(2)/01/ಟೆಂಡರ್/2024-25 ದಿನಾಂಕ: 29.07.2024

:: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ ::

1) ಕಾಮಗಾರಿಯ ವಿವರ: ಕಲಬುರಗಿ ಜಿಲ್ಲೆಯಲ್ಲಿನ ಸರ್ಕಾರಿ ಪ್ರೌಢ ಶಾಲೆಗಳಲ್ಲಿ 8ನೇ ತರಗತಿ ವಿದ್ಯಾರ್ಥಿಗಳಿಗಾಗಿ "ಕಲಿಕಾ ಆಸರೆ" ಅಭ್ಯಾಸ ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಕೆ.ಪಿ.ಪಿ. ಪ್ರೋರ್ಟಲ್-2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ-I, ರ ಟೆಂಡರ್‌ನ್ನು ದ್ವಿ ಲಕೋಟೆಯಲ್ಲಿ (Two Cover) ಆಮಂತ್ರಿಸಲಾಗಿದೆ. 2) ಲೆಕ್ಕ ಶೀರ್ಷಿಕೆ : 2024-25ನೇ ಸಾಲಿನ 8ನೇ ತರಗತಿ ವಿದ್ಯಾರ್ಥಿಗಳಿಗೆ ಕಲಿಕಾ ಆಸರೆ ಪುಸ್ತಕ ಪೂರೈಕೆ, 3) ಟೆಂಡರಗಿಟ್ಟ ಮೊತ್ತ (ರೂ. ಗಳಲ್ಲಿ): **ರೂ. 84,96,948/- (ಎಲ್ಲಾ ತೆರಿಗೆಗಳನ್ನು ಸೇರಿ),** 4) ಗುತ್ತಿಗೆದಾರರ ಅರ್ಹತೆ: Class-IV And Above, 5) ಟೆಂಡರ ಸಲ್ಲಿಸಲು ಅಂತಿಮ ದಿನಾಂಕ: **06.08.2024 ಸಾಯಂಕಾಲ 5:30 ಗಂಟೆಯವರೆಗೆ,** 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಟೆಂಡರ ಫಾರಂ ಬೆಲೆ As per Karnataka Public Procurement Portal EMD ಮೊತ್ತ ರೂ. 1,69,939/-, 7) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **08.08.2024 ಬೆ: 11:00 ಗಂಟೆಗೆ,** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **08.08.2024 ಸಾ: 4:00 ಗಂಟೆಗೆ,** 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಅಪರ ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಐವಾನ್-ಎ-ಷಾಹಿ ಬಡಾವಣೆ, ರಾಜಾಪೂರ ರಸ್ತೆ, ಕಲಬುರಗಿ, 97391-58664, 98866-10577, 9) ಅಂತರಜಾಲ ತಾಣದ ವಿಳಾಸ: https://kppp.karnataka.gov.in

ಸಹಿ/- ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/263/ಕೆ.ಎಸ್.ಎಂ.ಸಿ.&ಎ/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಯಿಂದ ದ್ವಿ-ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಮುಖ್ಯ ಅಭಿಯಂತರರ ಕಚೇರಿ (ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560 009.

ಕ್ರ ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)- II /ಉಮುಅ(ನಿ) -II/ತಾಂಸ(ಉ)/1909/2024-25 ದಿನಾಂಕ: 29.07.2024	
1.	(ಸಕಾನಿಅ-ಉ-ಪು-1) ಉಪ-ವಿಭಾಗದ ಮಲ್ಲೇಶ್ವರಂ ಸೇವಾಠಾಣೆಯಡಿ ಬರುವ ಬಾಷ್ಯಂ ವೃತ್ತದಿಂದ ವೈಯಾಲಿಕಾವಲ್ 2ನೇ ಮುಖ್ಯರಸ್ತೆಯವರೆಗೆ ವೈಟ್ ಟಾಪಿಂಗ್ ಸೌಲಭ್ಯಕ್ಕಾಗಿ 300ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ3 ಒಳಚರಂಡಿ ಮಾರ್ಗ ಒದಗಿಸುವ ಮತ್ತು ಅಳವಡಿಸುವ ಕಾಮಗಾರಿ.	₹ 104.13 ಲಕ್ಷಗಳು / ₹ 2.00 ಲಕ್ಷಗಳು
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)- I /ಉಮುಅ(ನಿ) -II/ತಾಂಸ(ಉ)/1910/2024-25 ದಿನಾಂಕ: 29.07.2024	
2.	ಕುಮಾರ ಪಾರ್ಕ್ ಸೇವಾಠಾಣೆಯಡಿ ಬರುವ ಸುಬೇದಾರ್ ಚತ್ರಂ ರಸ್ತೆಯಿಂದ ರಾಜೀವ್-ಗಾಂಧಿ ವೃತ್ತದವರೆಗೆ ಉದ್ದೇಶಿತ ವೈಟ್ ಟಾಪಿಂಗ್‌ನಲ್ಲಿ ನಷ್ಟವಾಗುವುದನ್ನು ಕಡಿಮೆ-ಗೊಳಿಸಲು ಮತ್ತು ಸಂಪರ್ಕ ಸಾಮರ್ಥ್ಯವನ್ನು ವೃದ್ಧಿಸಲು ಪ್ರಸ್ತುತವಿರುವ ನೀರು ಸರಬರಾಜು ಸಂಪರ್ಕ ಜಾಲವನ್ನು ಉನ್ನತೀಕರಣ/ಬದಲಾಯಿಸುವುದು, ನಿಯಂತ್ರಣ ವಾಲ್ವ್ ಅಳವಡಿಸುವುದರೊಂದಿಗೆ 450ಮಿಮೀ, 200ಮಿಮೀ, 100ಮಿಮೀ ವ್ಯಾಸದ ನೀರು ಸರಬರಾಜು ಮಾರ್ಗವನ್ನು ಒದಗಿಸುವುದು ಅಳವಡಿಸುವುದು ಮತ್ತು ಸಂಪರ್ಕಿಸುವ ಕಾಮಗಾರಿ.	₹ 86.86 ಲಕ್ಷಗಳು / ₹ 2.00 ಲಕ್ಷಗಳು
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)- I /ಉಮುಅ(ನಿ) -II/ತಾಂಸ(ಉ)/1911/2024-25 ದಿನಾಂಕ: 29.07.2024	
3.	(ಸಕಾನಿಅ-ಉ-ಪು-2) ಉಪ-ವಿಭಾಗದ ಸಂಜಯನಗರ ಸೇವಾಠಾಣೆಯಡಿ ಬರುವ ಭೂಪಸಂದ್ರ ಮುಖ್ಯರಸ್ತೆಯಲ್ಲಿ ಹೆಬ್ಬಾಳ ಮೇಲ್ಸೇತುವೆಯಿಂದ ನಾಗಶೆಟ್ಟಿಹಳ್ಳಿ ಜಂಕ್ಷನ್‌ವರೆಗೆ ಉದ್ದೇಶಿತ ವೈಟ್ ಟಾಪಿಂಗ್‌ನಲ್ಲಿ ನಷ್ಟವಾಗುವುದನ್ನು ಕಡಿಮೆಗೊಳಿಸಲು ಮತ್ತು ಸಂಪರ್ಕ ಸಾಮರ್ಥ್ಯವನ್ನು ವೃದ್ಧಿಸಲು ಪ್ರಸ್ತುತವಿರುವ ನೀರು ಸರಬರಾಜು ಸಂಪರ್ಕ ಜಾಲವನ್ನು ಉನ್ನತೀಕರಣ/ಬದಲಾಯಿಸುವದು, ನಿಯಂತ್ರಣ ವಾಲ್ವ್ ಅಳವಡಿಸುವುದರೊಂದಿಗೆ 450ಮಿಮೀ, 200ಮಿಮೀ, 100ಮಿಮೀ ವ್ಯಾಸದ ನೀರು ಸರಬರಾಜು ಮಾರ್ಗವನ್ನು ಒದಗಿಸುವುದು ಅಳವಡಿಸುವುದು ಮತ್ತು ಸಂಪರ್ಕಿಸುವ ಕಾಮಗಾರಿ.	₹ 151.53 ಲಕ್ಷಗಳು / ₹ 2.68 ಲಕ್ಷಗಳು
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)- I /ಉಮುಅ(ನಿ) -II/ತಾಂಸ(ಉ)/1912/2024-25 ದಿನಾಂಕ: 29.07.2024	
4.	(ಸಕಾನಿಅ-ಉ-ಪು-1) ಉಪ-ವಿಭಾಗದ ಮಲ್ಲೇಶ್ವರಂ ಸೇವಾಠಾಣೆಯಡಿ ಬರುವ 1) ಮಲ್ಲೇಶ್ವರಂ 8ನೇ ಮುಖ್ಯರಸ್ತೆಯ 18ನೇ ಅಡ್ಡರಸ್ತೆಯಿಂದ ಚಿತ್ರಾಪುರ ಮಠದವರೆಗೆ 2) ಮಲ್ಲೇಶ್ವರಂ 8ನೇ ಮುಖ್ಯರಸ್ತೆಯ 18ನೇ ಅಡ್ಡರಸ್ತೆ ಜಂಕ್ಷನ್‌ಯಿಂದ 11ನೇ ಮುಖ್ಯರಸ್ತೆ ಜಂಕ್ಷನ್‌ವರೆಗೆ 100ಮಿಮೀ ವ್ಯಾಸ, 300ಮಿಮೀ ಡಿಐ ನೀರು ಸರಬರಾಜು ಮಾರ್ಗವನ್ನು ಅಳವಡಿಸುವ ಮತ್ತು ಒದಗಿಸುವ ಕಾಮಗಾರಿ.	₹ 101.19 ಲಕ್ಷಗಳು / ₹ 2.00 ಲಕ್ಷಗಳು
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)- I /ಉಮುಅ(ನಿ) -II/ತಾಂಸ(ಉ)/1913/2024-25 ದಿನಾಂಕ: 29.07.2024	
5.	(ಸಕಾನಿಅ-ಉ-ಪು-2) ಉಪ-ವಿಭಾಗದ ಕುಮಾರ ಪಾರ್ಕ್ ಸೇವಾಠಾಣೆಯಡಿ ಬರುವ ಲಿಂಕ್ ರಸ್ತೆಯಲ್ಲಿ ಸಂಪಿಗೆ ರಸ್ತೆಯಿಂದ (ಬಿಗ್ ಬಜಾರ್ ಜಂಕ್ಷನ್) ಶೇಷಾದ್ರಿಪುರಂವರೆಗೆ ಉದ್ದೇಶಿತ ವೈಟ್ ಟಾಪಿಂಗ್‌ನಲ್ಲಿ ನಷ್ಟವಾಗುವುದನ್ನು ಕಡಿಮೆಗೊಳಿಸಲು ಮತ್ತು ಸಂಪರ್ಕ ಸಾಮರ್ಥ್ಯವನ್ನು ವೃದ್ಧಿಸಲು ಪ್ರಸ್ತುತವಿರುವ ನೀರು ಸರಬರಾಜು ಸಂಪರ್ಕ ಜಾಲವನ್ನು ಉನ್ನತೀಕರಣ/ಬದಲಾಯಿಸುವುದು, ನಿಯಂತ್ರಣ ವಾಲ್ವ್ ಅಳವಡಿಸುವುದರೊಂದಿಗೆ 450ಮಿಮೀ, 200ಮಿಮೀ, 100ಮಿಮೀ ವ್ಯಾಸದ ನೀರು ಸರಬರಾಜು ಮಾರ್ಗವನ್ನು ಒದಗಿಸುವುದು ಅಳವಡಿಸುವುದು ಮತ್ತು ಸಂಪರ್ಕಿಸುವ ಕಾಮಗಾರಿ.	₹ 132.08 ಲಕ್ಷಗಳು / ₹ 2.33 ಲಕ್ಷಗಳು
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)- I /ಉಮುಅ(ನಿ) -II/ತಾಂಸ(ಉ)/1914/2024-25 ದಿನಾಂಕ: 29.07.2024	
6.	(ಸಕಾನಿಅ-ಉ-ಪು-2) ಉಪ-ವಿಭಾಗದ ಕೆಜಿಟಿ ಸೇವಾಠಾಣೆಯಡಿ ಬರುವ ಸದಾಶಿವನಗರ ಜೀವರಾಜ್ ಆಳ್ವ ರಸ್ತೆ (10ನೇ ಮುಖ್ಯರಸ್ತೆಯಿಂದ) ವಿನಾಯಕ ವೃತ್ತದವರೆಗೆ ಬಾಷ್ಯಂ ವೃತ್ತದ ಮಾರ್ಗವಾಗಿ 100ಮಿಮೀ ವ್ಯಾಸ, 150ಮಿಮೀ ವ್ಯಾಸದ ಡಿಐ ಕೊಳಮಾರ್ಗವನ್ನು ಅಳವಡಿಸುವ ಮತ್ತು ಒದಗಿಸುವ ಕಾಮಗಾರಿ.	₹ 102.22 ಲಕ್ಷಗಳು / ₹ 2.00 ಲಕ್ಷಗಳು
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)- II /ಉಮುಅ(ನಿ) -II/ತಾಂಸ(ಉ)/1915/2024-25 ದಿನಾಂಕ: 29.07.2024	
7.	(ಸಕಾನಿಅ-ಉ-ಪು-2) ಉಪ-ವಿಭಾಗದ ಕೆಜಿಟಿ ಸೇವಾಠಾಣೆಯಡಿ ಬರುವ ಸದಾಶಿವನಗರ ಜೀವರಾಜ್ ಆಳ್ವ ರಸ್ತೆ (10ನೇ ಮುಖ್ಯರಸ್ತೆಯಿಂದ) ವಿನಾಯಕ ವೃತ್ತದವರೆಗೆ (ಆರ್‌ಹೆಚ್‌ಎಸ್) ಬಾಷ್ಯಂ ವೃತ್ತದ ಮಾರ್ಗವಾಗಿ ವೈಟ್ ಟಾಪಿಂಗ್ ಸೌಲಭ್ಯಕೋಸ್ಕರ 300ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ3 ಒಳಚರಂಡಿ ಮಾರ್ಗವನ್ನು ಅಳವಡಿಸುವ ಮತ್ತು ಒದಗಿಸುವ ಕಾಮಗಾರಿ.	₹ 100.81 ಲಕ್ಷಗಳು / ₹ 2.00 ಲಕ್ಷಗಳು
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)- I /ಉಮುಅ(ನಿ) -II/ತಾಂಸ(ಉ)/1917/2024-25 ದಿನಾಂಕ: 29.07.2024	
8.	ಕುಮಾರ ಪಾರ್ಕ್ ಸೇವಾಠಾಣೆಯಡಿ ಬರುವ ಫ್ಲಾಟ್‌ಫಾರಂ ರಸ್ತೆಯಲ್ಲಿ ವಾಟಲ್ ನಾಗರಾಜ ರಸ್ತೆ ಟಿ ಜಂಕ್ಷನ್‌ನಿಂದ ಮಂತ್ರಿಮಾಲ್‌ವರೆಗೆ ಉದ್ದೇಶಿತ ವೈಟ್ ಟಾಪಿಂಗ್‌ನಲ್ಲಿ ನಷ್ಟವಾಗುವುದನ್ನು ಕಡಿಮೆಗೊಳಿಸಲು ಮತ್ತು ಸಂಪರ್ಕ ಸಾಮರ್ಥ್ಯವನ್ನು ವೃದ್ಧಿಸಲು ಪ್ರಸ್ತುತವಿರುವ ನೀರು ಸರಬರಾಜು ಸಂಪರ್ಕ ಜಾಲವನ್ನು ಉನ್ನತೀಕರಣ/ಬದಲಾ-ಯಿಸುವುದು, ನಿಯಂತ್ರಣ ವಾಲ್ವ್ ಅಳವಡಿಸುವುದರೊಂದಿಗೆ 450ಮಿಮೀ, 200ಮಿಮೀ, 100ಮಿಮೀ ವ್ಯಾಸದ ನೀರು ಸರಬರಾಜು ಮಾರ್ಗವನ್ನು ಒದಗಿಸುವುದು ಅಳವಡಿಸುವುದು ಮತ್ತು ಸಂಪರ್ಕಿಸುವ ಕಾಮಗಾರಿ.	₹ 127.91 ಲಕ್ಷಗಳು / ₹ 2.26 ಲಕ್ಷಗಳು

ಈ ಮೇಲ್ಕಂಡ ಕಾಮಗಾರಿಗಳಿಗೆ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸುವ ದಿನಾಂಕ **16.08.2024**ರ ಸಂಜೆ **4:00** ಗಂಟೆಯವರೆಗೆ. ಬಿಡ್‌ಗಳನ್ನು ದಿನಾಂಕ **17.08.2024**ರ ಸಂಜೆ **4:00** ಗಂಟೆಯ ನಂತರ ತೆರೆಯಲಾಗುವುದು.

ಸಹಿ/- ಮುಖ್ಯ ಅಭಿಯಂತರರು (ಉತ್ತರ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ಡಿ.ಐ.ಪಿ.ಆರ್/ಸ್ಪೆಕ್ಟ್ರಮ್/1147/2024-25

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ ಬೆಂಗಳೂರು-27

ಸಂಖ್ಯೆ: ಬೆಂಮಸಾಸಂಸ್ಥೆ/ಕೇಕ/ಉ&ಖನಿ/04 /2024-25 ದಿನಾಂಕ: 30.07.2024

ಟೆಂಡರ್ ಆಹ್ವಾನ ಪ್ರಕಟಣೆ

ಬೆ.ಮ.ನ.ಸಾ.ಸಂಸ್ಥೆಗೆ ಅವಶ್ಯಕವಿರುವ ಈ ಕೆಳಗೆ ತೋರಿಸಲಾಗಿರುವ ಸರಕುಗಳನ್ನು ಪಡೆಯಲು KPPP ನ ಮೂಲಕ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ ಮತ್ತು ದಿನಾಂಕ	ವಿವರಣೆ	ಟೆಂಡರ್ (ಅಂದಾಜು) ಮೌಲ್ಯ ಕೋಟಿಗಳಲ್ಲಿ	ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್ಡನ್ನು ಸಲ್ಲಿಸಲು ಕೊನೆ ದಿನಾಂಕ
		ನಿಯಮಿತ ಟೆಂಡರ್		
1	BMTC/2024-25/IND0094	ಟ್ಯಾಲಿ ಬ್ರಾಂಡ್ ರಿಬ್ಬನ್ ಕಾರ್ಟ್ರಿಡ್ಜ್, ಕ್ಯೋಸೆರಾ ಕಾರ್ಟ್ರಿಡ್ಜ್ ಮತ್ತು ಎಪ್ಸನ್ ರಿಬ್ಬನ್ ಕಾರ್ಟ್ರಿಡ್ಜ್ ಖರೀದಿ ಬಗ್ಗೆ.	0.36	14.08.2024 at 14.30Hrs
2	BMTC/2024-25/IND0096	ಅಲ್ಯೂಮಿನಿಯಂ ಪಾಪ್ ರಿವೆಟ್ಸ್‌ಗಳ ಖರೀದಿ ಬಗ್ಗೆ.	0.09	14.08.2024 at 14.30Hrs
3	BMTC/2024-25/IND0097	PCTR ಮತ್ತು ಸಂಬಂಧಿತ ವಸ್ತುಗಳ ಖರೀದಿ ಬಗ್ಗೆ.	3.70	05.09.2024 at 14.30Hrs
		ಅಲ್ಪಾವಧಿ ಟೆಂಡರ್		
1	BMTC/2024-25/IND0095	ಟೈರ್, ಟ್ಯೂಬ್ ಮತ್ತು ಫ್ಲಾಪ್ ಸೆಟ್ಸ್, ಟ್ಯೂಬಲೆಸ್ ರೇಡಿಯಲ್ ಟೈರ್‌ಗಳು ಮತ್ತು ಹೆಚ್ಚುವರಿ ಟ್ಯೂಬ್ ಮತ್ತು ಫ್ಲಾಪ್‌ಗಳ ಖರೀದಿ ಮಾಡುವ ಬಗ್ಗೆ.	16.00	08.08.2024 at 14.30Hrs

ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು **https://kppp.karanataka.gov.in** ನಿಂದ ಪಡೆಯಬಹುದು.

ಮುಂದುವರೆದು, ಸಾಮಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕದಲ್ಲಿ ಯಾವುದೇ ಸೇರ್ಪಡೆ / ತಿದ್ದುಪಡಿ ಇದ್ದಲ್ಲಿ kpp-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಸರಬರಾಜುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಅಥವಾ ದೂರವಾಣಿ ಸಂಖ್ಯೆ: 080-22230960/22234115. ಗೆ ಕರೆಮಾಡಿ/ support@eprochelpdesk.com, ಇ-ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ. ಹೆಚ್. ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು-560 079, ದೂರವಾಣಿ ಸಂಖ್ಯೆ: +91-80-29619801
ಮಿಂಚ್ ಅಂಚೆ : md.ksmscl@gmail.com

No: HFW/KSMSCL/EQPT/CH/TND/03/2024_25 Dt: 30-07-2024

ಟೆಂಡರ್ ಪ್ರಕಟಣೆ

ಉಲ್ಲೇಖ: 1. ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/EQPT/CH /SNCU/TND/ 03/ 2024-25 , Dated: 30-07-2024 (IND-0148)
2. HFW/KSMSCL/EQPT/CH /CLMC/TND/ 04/ 2024-25, Dated: 30-07-2024 (IND-0149)
3. HFW/KSMSCL/EQPT/SBC /ICDT/TND/ 05/ 2024-25, Dated: 30-07-2024 (IND-0150)

ಇ-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ-ಟೆಂಡರ್ ಕರೆಯಲಾಗಿದೆ.

1. **2024-25 ಹಾಗು 2025-26 ನೇ ಸಾಲಿನ ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ SNCU ಉಪಕರಣಗಳನ್ನು ಖರೀದಿಸಿ ಸರಬರಾಜು ಮಾಡುವ ಬಗ್ಗೆ**
2. **2024-25 ಹಾಗು 2025-26 ನೇ ಸಾಲಿನ ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ CLMC ಉಪಕರಣಗಳನ್ನು ಖರೀದಿಸಿ ಸರಬರಾಜು ಮಾಡುವ ಬಗ್ಗೆ**
3. **2024-25 ನೇ ಸಾಲಿನ ರಾಜ್ಯ ರಕ್ತ ಕೋಶ ಕಾರ್ಯಕ್ರಮದಡಿಯಲ್ಲಿ 02 Integrated Centre for Diagnostics and Treatment for Hemoglobin-opathies and Hemophilia (ICDT) ಕೇಂದ್ರಗಳನ್ನು ಸ್ಥಾಪಿಸಲು ಅವಶ್ಯವಿರುವ ಉಪಕರಣಗಳನ್ನು ಖರೀದಿಸಿ ಸರಬರಾಜು ಮಾಡುವ ಬಗ್ಗೆ**

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ-ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://kppp.karnataka.gov.in** ನಲ್ಲಿ ದಿನಾಂಕ: **30.07.2024** ರಿಂದ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಮ್.ಎಸ್.ಸಿ.ಎಲ್., ಬೆಂಗಳೂರು.

DIPR/CP/AAPL/RO1177/24-25

ಕರ್ನಾಟಕ ಸರಕಾರ

ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯ, ಮುಂಡರಗಿ-582118

ಸಂ : ಸಕೃನಿ(ಮು)/ಇ-ಪೋರ್ಟಲ್/ಹೊ.ಗು.ಸಿ.ಸೇ/2024-25.
ದಿನಾಂಕ : 29/07/2024

ಟೆಂಡರ್ ಪ್ರಕಟಣೆ (ಇ ಪ್ರೊಕ್ಯರ್‌ಮೆಂಟ್ ಮೂಲಕ)


ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 2000 ರನ್ವಯ ಸರಕಾರದಿಂದ ನೊಂದಾಯಿಸಲ್ಪಟ್ಟ ಅರ್ಹ ಸಂಸ್ಥೆಯವರು 2024-25 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಈ ಕಚೇರಿ ಅಧೀನದ ರೈತ ಸಂಪರ್ಕ ಕೇಂದ್ರಗಳಿಗೆ ಲೆಕ್ಕ ಸಹಾಯಕರು, ಸಂಚಾರಿ ಸಸ್ಯ ಚಿಕಿತ್ಸಾ ವಾಹನಗಳ ತಾಂತ್ರಿಕ ಸಿಬ್ಬಂದಿ, ಸಂಚಾರಿ ಸಸ್ಯ ಚಿಕಿತ್ಸಾ ವಾಹನಗಳ ಚಾಲಕರ ಹುದ್ದೆ ಹಾಗೂ ಈ ಕಚೇರಿಗೆ ಗ್ರುಪ್ ಡಿ ಸಿಬ್ಬಂದಿಯನ್ನು ಒದಗಿಸಲು ಇ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.kppp.karnataka.gov.in** ವೆಬ್‌ಸೈಟ್ ಮುಖಾಂತರ ಇ ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ಗೆ ಸಂಬಂಧಿಸಿದಂತೆ ಮಾಹಿತಿಗಾಗಿ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು. ಹೆಚ್ಚಿನ ವಿವರಗಳಿಗಾಗಿ **www.kppp.karnataka.gov.in** ವೆಬ್‌ಸೈಟ್‌ನಲ್ಲಿ ಮತ್ತು ಈ ಕಛೇರಿಯಲ್ಲಿ ಪಡೆಯಬಹುದು.

ಇ-ಪ್ರೊಕ್ಯರ್‌ಮೆಂಟ್ ಪೋರ್ಟಲ್ ನಲ್ಲಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಗಿನಂತಿವೆ. : (1) ಟೆಂಡರ್ ಕರೆದ ವಿವರ : ಹೊರಗುತ್ತಿಗೆ ಆಧಾರದ ಮೇಲೆ ರೈತ ಸಂಪರ್ಕ ಕೇಂದ್ರಗಳಿಗೆ ಲೆಕ್ಕ ಸಹಾಯಕರು, ಸಂಚಾರಿ ಸಸ್ಯ ಚಿಕಿತ್ಸಾ ವಾಹನದ ತಾಂತ್ರಿಕ ಸಿಬ್ಬಂದಿ, ಸಂಚಾರಿ ಸಸ್ಯ ಚಿಕಿತ್ಸಾ ವಾಹನ ಚಾಲಕರ ಹುದ್ದೆ ಹಾಗೂ ಈ ಕಚೇರಿಗೆ ಗ್ರುಪ್ ಡಿ ಸಿಬ್ಬಂದಿ ಸೇವೆ ಪೂರೈಸುವ ಕುರಿತು, (2) ಇಎಮ್‌ಡಿ ಮೊತ್ತ : **40000/-** (3) ಇ- ಟೆಂಡರ್ ನಲ್ಲಿ ಭಾಗವಹಿಸಲು ಪ್ರಾರಂಭವಾಗುವ ದಿನಾಂಕ : **29/07/2024.** (4) ಇ- ಟೆಂಡರ್ ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ ಮತ್ತು ಸಮಯ : **06/08/2024** ಸಮಯ 4-00 ಘಂಟೆ. (5) ಇ- ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **07/08/2024** ಸಮಯ 4.00 ಘಂಟೆ. (6) ಇ- ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **09/08/2024** ಸಮಯ 4.00 ಘಂಟೆ

ಸಹಿ/- ಸಹಾಯಕ ಕೃಷಿ ನಿರ್ದೇಶಕರು,
ಮುಂಡರಗಿ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/120/2024-25

ತಂತ್ರಜ್ಞಾನ



ದುಂಬಿಗಳಿಗೆ ಒಂದು ಹೊಸ ವಿಷ!



ಎಐ ಚಿತ್ರ: ಕಣಕಾಲಮಠ

ಕೊಳ್ಳೇಗಾಲ ಶರ್ಮ

'ಆರ್ಗ್ಯಾನಿಕ್' ಎನ್ನುವ ಪದ ಈಗ ಕನ್ನಡದ್ದೇ ಎನ್ನುವಷ್ಟು ಪರಿಚಿತವಾಗಿಬಿಟ್ಟಿದೆ. ಇದಕ್ಕೆ ಕಾರಣ ಕೀಟನಾಶಕಗಳು ಹಾಗೂ ರಾಸಾಯನಿಕ ಗೊಬ್ಬರಗಳಿಂದಾದ ಹಾನಿ. ಇವುಗಳಿಲ್ಲದೆಯೇ ಬೆಳೆದ ಕೃಷಿ ಬೆಳೆಗಳಿಗೆ 'ಆರ್ಗ್ಯಾನಿಕ್' ಲೇಬಲ್ಲು ಕೊಡಲಾಗುತ್ತಿದೆ. ಇದೀಗ ಅಮೆರಿಕೆಯಿಂದ ಹೊಸದೊಂದು ಸುದ್ದಿ ಬಂದಿದೆ. ಈಗ ಇರುವ ವಿಷ ಕೀಟನಾಶಕಗಳ ಬದಲಿಗೆ ಐಆರ್‌ಎನ್‌ಎ ತಂತ್ರಜ್ಞಾನದಿಂದ ಅಭಿವೃದ್ಧಿಪಡಿಸಿದ ಹೊಸ ಜೈವಿಕ ಕೀಟನಾಶಕವನ್ನು ಬಳಸಲು ಅಲ್ಲಿ ಸಿದ್ಧತೆಗಳು ನಡೆದಿವೆ ಎಂದು ಸೈನ್ಸ್ ಪತ್ರಿಕೆ ವರದಿ ಮಾಡಿದೆ.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಎರಡನೆಯ ಮಹಾಯುದ್ಧದ ಕಾಲದಲ್ಲಿ ಸೊಳ್ಳೆಗಳ ಕಾಟ ತಡೆಯಲೆಂದು ರೂಪಿಸಿದ ಡಿಡಿಟಿಯಿಂದ ಆರಂಭಿಸಿ ವಿಯೆಟ್ನಾಂ ಯುದ್ಧದ ವೇಳೆ ಕಾಡಿನಲ್ಲಿ ಅವಿತುಕೊಂಡು ಅಮೆರಿಕದ ಸೇನೆಯನ್ನು ಕಂಗೆಡಿಸುತ್ತಿದ್ದ ವಿಯೆಟ್ನಾಂನ ಗೆರಿಲ್ಲಾ ಸೈನಿಕರು ಬಚ್ಚಿಟ್ಟುಕೊಳ್ಳದಿರಲಿ ಎಂದು ರೂಪಿಸಿದ ಗಿಡ-ಮರಗಳ ಎಲೆಗಳನ್ನು ಬರಿದು ಮಾಡುವ ಕಳೆನಾಶಕಗಳವರೆಗೆ ಹಲವು ಬಗೆಯ ವಿಷರಾಸಾಯನಿಕಗಳನ್ನು ಕೃಷಿಯಲ್ಲಿ ಬಳಸಲಾಗಿದೆ. ಇವುಗಳ ವಿಷಪರಿಣಾಮ ಇತರೆ ಜೀವಿಗಳನ್ನೂ ಕಾಡುವುದನ್ನು ಕಂಡು, ಬದಲಿಗೆ ನಿಸರ್ಗದಲ್ಲಿಯೇ ಇರುವ ವೈರಿಗಳನ್ನು ಬಳಸಿಕೊಳ್ಳುವ ಉಪಾಯಗಳನ್ನೂ ಕೀಟನಿಯಂತ್ರಣಕ್ಕೆ ಬಳಸಲಾಗಿತ್ತು. ನಮ್ಮಲ್ಲಿಯೂ ತೊಂಬತ್ತರ ದಶಕದಲ್ಲಿ ಸೂರ್ಯಕಾಂತಿ ಬೆಳೆಗೆ ಕಾಟ ಕೊಡುತ್ತಿದ್ದ ಕೊರೆ ಹುಳುವನ್ನು ನಿಯಂತ್ರಿಸಲು ಮೆಕ್ಸಿಕೊದಿಂದ ದುಂಬಿಗಳನ್ನು ಆಮದು ಮಾಡಿಕೊಳ್ಳಲಾಗಿತ್ತು. ಅನಂತರ ಜೈವಿಕ ಎನ್ನುವ ಕುಲಾಂತರಿ ತಂತ್ರಜ್ಞಾನವೂ ಬಂತು. ಗಿಡವೇ ಕೊರೆಹುಳುಗಳಿಗೆ ವಿಷವಾಗುವಂತೆ ಅದನ್ನು ಬದಲಿಸಲಾಗಿತ್ತು.

ಹಾಗಿದ್ದೂ ಕೀಟನಾಶಕ ಹಾಗೂ ಕಳೆನಾಶಕಗಳ ಬಳಕೆ ಕಡಿಮೆಯಾಗಿಲ್ಲ. ಕೀಟಗಳ ಕೋಟಲೆಯೂ ಕಡಿಮೆಯಾಗಿಲ್ಲ. ಫಲವಾಗಿ ಕೀಟಗಳನ್ನು ನಿಯಂತ್ರಿಸಲು ಹೊಸ, ಹೊಸ ತಂತ್ರ ಇಲ್ಲವೇ ಔಷಧಗಳನ್ನು ಶೋಧಿಸುವ ಕೆಲಸ ಸಾಗಿಯೇ ಇದೆ. ಇದೀಗ ಜೈವಿಕ ತಂತ್ರಜ್ಞಾನದ್ದೇ ಇನ್ನೊಂದು ರೂಪವಾದ ಐಆರ್‌ಎನ್‌ಎ ತಂತ್ರವನ್ನು ಕೀಟನಿಯಂತ್ರಣಕ್ಕೆ ಬಳಸಲು ಅಮೆರಿಕೆಯ ಗ್ರೀನ್‌ಲೈಟ್ಸ್ ಬಯೋಸೈನ್ಸಸ್ ಕಂಪೆನಿಯು ಇದೇ ಜನವರಿಯಲ್ಲಿ 'ಕಾಲಾಂತಾ' ಎನ್ನುವ ಕಳೆನಾಶಕವನ್ನು ಬಳಸಲು ಪರವಾನಗಿ ಪಡೆಯಿತು. ನಾಲ್ಕು ವರ್ಷಗಳವರೆಗೆ ಪರೀಕ್ಷೆಗೊಳಪಟ್ಟಿದ್ದ ಈ ಕೀಟನಾಶಕವನ್ನು ಉತ್ಪಾದಿಸುವ ಘಟಕ ಕಾರ್ಯಾರಂಭಿಸಿದೆ.



ತನ್ನ ಸಂಗಾತಿಯ ಜತೆ 'ಕೊಲರಡೊ' ದುಂಬಿ

ಕಾಲಾಂತಾವನ್ನು ಸಾಧಾರಣ ಕೀಟನಾಶಕದ ರೀತಿಯಲ್ಲಿಯೇ ಗಿಡಗಳ ಮೇಲೆ ಸಿಂಪಡಿಸಿದರೆ ಸಾಕು, ಅದು ಗಿಡದಲ್ಲಿ ನೆಲೆಸಿರುವ ಕೀಟಗಳನ್ನು ಕೆಲವೇ ದಿನಗಳಲ್ಲಿ ಕೊಲ್ಲುತ್ತದೆ ಎಂದು ಈ ಪರೀಕ್ಷೆಗಳು ತಿಳಿಸಿವೆ. ಕಾಲಾಂತಾವನ್ನು ಸದ್ಯಕ್ಕೆ ಅಮೆರಿಕದಲ್ಲಿ ಆಲೂಗೆಡ್ಡೆ ಬೆಳೆಯನ್ನು ಕಾಡಿ, ನಷ್ಟವನ್ನುಂಟುಮಾಡುವ 'ಕೊಲೆರಡೊ' ದುಂಬಿಗಳ ನಿಯಂತ್ರಣಕ್ಕೆಂದು ರೂಪಿಸಲಾಗಿದೆ. ಪರೀಕ್ಷೆಗಳಲ್ಲಿ ಇವುಗಳನ್ನು ಸಿಂಪಡಿಸಿದ ಗಿಡಗಳ ಮೇಲೆ ನೆಲೆಸಿದ್ದ ದುಂಬಿಗಳಷ್ಟೆ ನಷ್ಟವಾಗಿ, ದುಂಬಿಗಳ ಲಾರ್ವಗಳನ್ನು ತಿನ್ನುವ ಹಾಗೂ ಚಿಟ್ಟೆಗಳಿಗೆ ಯಾವ ಹಾನಿಯೂ ಆಗುವುದಿಲ್ಲವೆಂದು ಸ್ಪಷ್ಟವಾಗಿದೆ ಎನ್ನುತ್ತದೆ, ಗ್ರೀನ್‌ಲೈಟ್ ಬಯೋಸೈನ್ಸಸ್ ಕಂಪೆನಿ.

ಕಾಲಾಂತಾ ಕೆಲಸ ಮಾಡುವುದು ಹೀಗೆ. ಇದನ್ನು ಸೇವಿಸಿದ ದುಂಬಿಯ ಜೀವಕೋಶಗಳಲ್ಲಿನ ಕೆಲವು ಕ್ರಿಯೆಗಳು ಸ್ಥಗಿತಗೊಳ್ಳುತ್ತವೆ. ಕೊಲರಡೊ ದುಂಬಿಯಲ್ಲಿ ಇರುವ 'ಪಿಎಸ್‌ಎಂಬಿ5' ಎನ್ನುವ ಪ್ರೊಟೀನನ್ನು ಕಾಲಾಂತಾ ಐಆರ್‌ಎನ್‌ಎ ಬಾಧಿಸುತ್ತದೆ. ಸಾಮಾನ್ಯವಾಗಿ ಕೋಶದಲ್ಲಿ ಬಳಕೆಯಾಗಿ ಉಳಿದ ತ್ಯಾಜ್ಯ ಪ್ರೊಟೀನುಗಳನ್ನು ಈ ಪ್ರೊಟೀನು ದೇಹದಿಂದ ಹೊರಚೆಲ್ಲುತ್ತವೆ. ಕಾಲಾಂತಾದಿಂದಾಗಿ ಪಿಎಸ್‌ಎಂಬಿ5 ಎನ್ನುವ ಪ್ರೊಟೀನು ತಯಾರಿಕೆಯೇ ಸ್ಥಗಿತವಾಗುತ್ತದೆ. ಕೆಲಸಕ್ಕೆ ಬಾರದ ಪ್ರೊಟೀನುಗಳನ್ನು ಹೀಗೆ ಸಂಗ್ರಹಿಸಿಟ್ಟುಕೊಂಡ ಕೋಶಗಳು ಉಳಿಯುವುದಿಲ್ಲ. ಹೀಗಾಗಿ ಲಾರ್ವಗಳೂ ಉಳಿಯುವುದಿಲ್ಲ. ಕೇವಲ ಆರೇ ದಿನಗಳಲ್ಲಿ ಕಾಲಾಂತಾ ಸಿಂಪಡಿಸಿಕೊಂಡ ಲಾರ್ವಗಳಲ್ಲಿ ಶೇ. ತೊಂಬತ್ತರಷ್ಟು ಸತ್ತವು ಎಂದು ಪ್ರಯೋಗಗಳು ತಿಳಿಸಿವೆ.

ಹಾಗಿದ್ದರೆ ಇನ್ನೇನು? ಇವನ್ನು ಸಿಂಪಡಿಸಬಹುದೇ? ಇದುವರೆಗಿನ ಪ್ರಯೋಗಗಳು ಈ ಕೀಟನಾಶಕಗಳು ಕೊಲರಡೊ ದುಂಬಿಯನ್ನಷ್ಟೆ ಕೊಲ್ಲುವುದಕ್ಕೆ ಸಮರ್ಥವೆಂದೂ, ಇತರೆ ಜೀವಿಗಳಿಗೆ ಹಾಗೂ ಸಸ್ಯಗಳಿಗೆ ತೊಂದರೆಯನ್ನು ಉಂಟುಮಾಡುವುದಿಲ್ಲ ಎಂದೂ ತಿಳಿಸಿವೆ. ಆದರೆ ಮುಂದೆ ಈ ದುಂಬಿ ಆರ್‌ಎನ್‌ಎಐ ಔಷಧಕ್ಕೂ ಒಗ್ಗಿಕೊಂಡು ಬಿಡಬಹುದೋ? ಜರ್ಮನಿಯಲ್ಲಿ ಕೆಲವು ದಶಕಗಳ ಹಿಂದೆ ಅಮೆರಿಕದಿಂದ ವಲಸೆ ಬಂದ ಇದೇ ಕೊಲೆರಡೊ ದುಂಬಿ ದಾಂಧಲೆ ನಡೆಸಿತ್ತು. ಆಗ ಅದನ್ನು ನಿರ್ನಾಮ ಮಾಡಲು ಯಥೇಚ್ಛವಾಗಿ ಕೀಟನಾಶಕಗಳನ್ನು ಬಳಸಲಾಗಿತ್ತು. ಆದರೆ ಈ ದುಂಬಿ ಈಗಲೂ ಜರ್ಮನಿಯಲ್ಲಿ ಉಳಿದಿದೆ. ಯಾವುದೇ ಕೀಟನಾಶಕಕ್ಕೂ ಜಗ್ಗದೆ ಬೆಳೆಗಳನ್ನು ಕಬಳಿಸುತ್ತಿದೆ. ಅದೇ ಗತಿ ಆರ್‌ಎನ್‌ಎಐ ಔಷಧಕ್ಕೂ ಬರಬಹುದೋ? ಗೊತ್ತಿಲ್ಲ.

ಆರ್‌ಎನ್‌ಎಐ ತಂತ್ರಜ್ಞಾನ ಕೇವಲ ನಿರ್ದಿಷ್ಟ ಕೀಟವನ್ನಷ್ಟೆ ತಾಕಬಲ್ಲುದು ಎಂಬುದು ವಿಜ್ಞಾನಿಗಳ ನಂಬಿಕೆ. 'ಸೈನ್ಸ್' ಪತ್ರಿಕೆ ಇದಕ್ಕೆ ಪರಿಪೂರ್ಣ ಕೀಟನಾಶಕ ಎಂಬ ಬಿರುದನ್ನೂ ಕೊಟ್ಟುಬಿಟ್ಟಿದೆ. ಕಾರಣ. ಕಾಲಾಂತಾ ಕೀಟದಲ್ಲಿರುವ ನಿರ್ದಿಷ್ಟ ಪ್ರೊಟೀನು ತಯಾರಿಕೆಯನ್ನಷ್ಟೆ ನಿಲ್ಲಿಸುವುದರಿಂದ ಬೇರೆ ಕೀಟಗಳಿಗೆ, ಜೀವಿಗಳಿಗೆ ತೊಂದರೆ ಇಲ್ಲ. ಹೀಗಾಗಿ ಈ ತಂತ್ರಜ್ಞಾನವನ್ನೇ ಸೊಳ್ಳೆ, ಕಾಂಡಕೊರಕ ದುಂಬಿಗಳು ಹಾಗೂ ಕಿತ್ತಳೆ, ನಿಂಬೆ ಗಿಡಗಳನ್ನು ತಾಕುವ ಸಿಲ್ಲಿಡ್ ಕೀಟಗಳನ್ನು ನಿಯಂತ್ರಿಸಲು ಬಳಸಬಹುದು ಎನ್ನುವ ಆಸೆ ಬಹಳಷ್ಟು ವಿಜ್ಞಾನಿಗಳಿಗೆ ಇದೆ.

ಆದರೆ ಈ ಆಸೆ ಎಲ್ಲರಲ್ಲಿಯೂ ಇಲ್ಲ. ಏಕೆಂದರೆ ಸಸ್ಯಗಳಿಗೆ ಬಹುತೇಕ ತೊಂದರೆ ಕೊಡುವ ಚಿಟ್ಟೆ, ಪತಂಗಗಳಿಗೆ ಇವು ಮಾರಕವೇ ಅಲ್ಲ. ಏಕೆಂದರೆ ಕಾಲಾಂತಾದಲ್ಲಿ ಬಳಸುವ ಆರ್‌ಎನ್‌ಎಐ, ಒಂದು ಪುಟ್ಟ ಆರ್‌ಎನ್‌ಎ ತುಣುಕಿನ ಜೊತೆಗೆ ತಳುಕಿಕೊಂಡ ಪುಟ್ಟ ಪ್ರೊಟೀನಿನ ಪೊಟ್ಟಣ. ಚಿಟ್ಟೆ, ಪತಂಗಗಳಲ್ಲಿರುವ ಒಂದು ಕಿಣ್ವ ಈ ಪೊಟ್ಟಣವನ್ನು ಸುಲಭವಾಗಿ ಒಡೆದು ಬಿಡುವುದರಿಂದ, ಈ ತಂತ್ರಜ್ಞಾನ ಅಲ್ಲಿ ಕೆಲಸ ಮಾಡುವುದಿಲ್ಲ. ದುಂಬಿಗಳೂ ಹೀಗೆಯೇ ಪ್ರತಿರೋಧವನ್ನು ಬೆಳೆಸಿಕೊಳ್ಳಬಹುದೋ? ಗೊತ್ತಿಲ್ಲ.

ಆದರೂ ಈಗ ವಿಷ ಕೀಟನಾಶಕಗಳ ಹೊಡೆತದಿಂದ ತಪ್ಪಿಸಿಕೊಳ್ಳಲು ಬಳಸಬಹುದಾದ ಪರ್ಯಾಯಗಳಲ್ಲಿ ಸುರಕ್ಷಿತವಾದದ್ದು ಎಂದರೆ ಆರ್‌ಎನ್‌ಎಐ ಎನ್ನುತ್ತಾರೆ, ವಿಜ್ಞಾನಿಗಳು. ಹೌದೇ? ಕಾಲವೇ ಹೇಳಬೇಕು. ಗ್ರೀನ್‌ಲೈಟ್ ಬಯೋಸೈನ್ಸ್ ಸದ್ಯಕ್ಕೆ ಎರಡು ಮೆಟ್ರಿಕ್ ಟನ್ನು ಈ ಕೀಟನಾಶಕವನ್ನು ತಯಾರಿಸಲು ಹೊರಟಿದೆ. 'ಇ.ಕೋಲಿ' ಎನ್ನುವ ಬ್ಯಾಕ್ಟೀರಿಯಾದೊಳಗೆ 'ಪಿಎಸ್‌ಎಂಬಿ5' ಪ್ರೊಟೀನಿನ ಮಾಹಿತಿ ಇರುವ ಜೀನ್ ಅನ್ನು ಕೂಡಿಸಿದೆ. ಬ್ಯಾಕ್ಟೀರಿಯಾ ತಯಾರಿಸುವ ಆರ್‌ಎನ್‌ಎಯನ್ನು ಪ್ರತ್ಯೇಕಿಸಿ, ಅದನ್ನು ಒಂದು ಪ್ರೊಟೀನಿನೊಟ್ಟಿಗೆ ಪೊಟ್ಟಣ ಕಟ್ಟಲಿದೆ. ಇವನ್ನು ವಿಶೇಷ ದ್ರಾವಣವೊಂದರಲ್ಲಿ ಕರಗಿಸಿ, ಸಿಂಪಡಿಸಲು ಸಿದ್ಧಪಡಿಸಲಿದೆ. ದ್ರಾವಣ ಎಂಥದ್ದು ಎನ್ನುವುದು ಸದ್ಯಕ್ಕೆ ಕಂಪನಿಯ ಗುಟ್ಟು. ವರ್ಷದ ಕೊನೆಗೆ ಇದರ ಹತ್ತು ಪಟ್ಟು ಕೀಟನಾಶಕಕ್ಕೆ ಬೇಡಿಕೆ ಬರಲಿದೆ ಎನ್ನುವ ವಿಶ್ವಾಸ ಕಂಪೆನಿಗೆ ಇದೆಯಂತೆ.

ಮುಂದಿನ ವರ್ಷ ಅಮೆರಿಕದ ರೈತರಿಗೆ ಕೊಲೆರಡೊ ದುಂಬಿಯಿಂದ ಮುಕ್ತಿ ದೊರೆಯಲಿದೆಯೇ? ಕಾದು ನೋಡೋಣ.

❖

ಕಂಪ್ಯೂಟರಿನಲ್ಲಿರುವ 'ಕೋಪೈಲಟ್'

ಅವಿನಾಶ್ ಬಿ.

ಈಗಾಗಲೇ ಅರಿತೋ ಅರಿಯದೆಯೋ 'ಎಐ' (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ – ಕೃತಕ ಬುದ್ಧಿಮತ್ತೆ) ಅನ್ನು ದೈನಂದಿನ ಕೆಲಸ ಕಾರ್ಯಗಳಲ್ಲಿ ಬಳಸಲಾರಂಭಿಸಿದ್ದೇವೆ. ಈ ತಂತ್ರಜ್ಞಾನದ ಧಾವಂತವನ್ನು ಮನಗಂಡ ಮೈಕ್ರೋಸಾಫ್ಟ್ ಕಂಪನಿಯು ತನ್ನ ವಿಂಡೋಸ್ 11 ಕಾರ್ಯಾಚರಣಾ ವ್ಯವಸ್ಥೆಯ ಕಂಪ್ಯೂಟರುಗಳಲ್ಲಿ 'ಕೋಪೈಲಟ್' ಎಂಬ ಎಐ ತಂತ್ರಜ್ಞಾನವನ್ನು ಅಳವಡಿಸಿಯೇ ಜನರಿಗೆ ನೀಡಲಾರಂಭಿಸಿದೆ.

ಈ ವೈಶಿಷ್ಟ್ಯವನ್ನು ಜನಸಾಮಾನ್ಯರು ಹೇಗೆ ಬಳಸಬಹುದು, ಅನುಕೂಲಗಳೇನು ಎಂಬ ಬಗ್ಗೆ ಕೆಲವೊಂದಿಷ್ಟು ಸುಳಿವುಗಳು ಇಲ್ಲಿವೆ.

ಎಲ್ಲಿದೆ, ಹೇಗೆ ಆರಂಭಿಸುವುದು?: ವಿಂಡೋಸ್ 11 ಕಾರ್ಯಾಚರಣಾ ವ್ಯವಸ್ಥೆಯಲ್ಲಿ (ವಿಂಡೋಸ್ 10ರಿಂದ 11ಕ್ಕೆ ಅಪ್‌ಗ್ರೇಡ್ ಮಾಡಲಾದ ಸಿಸ್ಟಂಗಳೂ ಸೇರಿದಂತೆ) ಕೆಲಸ ನಿರ್ವಹಿಸುವ ಕಂಪ್ಯೂಟರುಗಳಲ್ಲಿ, ಟಾಸ್ಕ್ ಬಾರ್‌ನಲ್ಲಿ (ಕೆಳಭಾಗದ ಬಲ ಮೂಲೆಯಲ್ಲಿ) ವರ್ಣರಂಜಿತವಾದ ಐಕಾನ್ ಕೆಳಗೆ PRE ಎಂದು ಬರೆದಿರುತ್ತದೆ. ಅದನ್ನು ಕ್ಲಿಕ್ ಮಾಡಿದರಾಯಿತು. ಆಗ ಪಾಪ್-ಅಪ್ ವಿಂಡೋದ ಬಾಕ್ಸ್‌ನಲ್ಲಿ ನಮಗೆ ಬೇಕಾದ ವಿಷಯಗಳ ಕುರಿತಾಗಿ ಮಾಹಿತಿ ಕೇಳಬಹುದು. ಅದರ ಆಧಾರದಲ್ಲಿ ಕೋಪೈಲಟ್ ನಿಮಗೆ ಇಡೀ ಜಾಲತಾಣಗಳ ಪ್ರಪಂಚವನ್ನು ಜಾಲಾಡಿ, ಬೇಕಾದ ಮಾಹಿತಿಯನ್ನು 'ವ್ಯವಸ್ಥಿತವಾಗಿ' ತಂದು ನಮ್ಮ ಮುಂದಿಡುತ್ತದೆ. ಉದಾಹರಣೆಗೆ, 'ಜಗತ್ತಿನ ಪ್ರಮುಖ ದೇಶಗಳ ಸ್ವಾತಂತ್ರ್ಯ ದಿನಗಳ ಪಟ್ಟಿ ಕೊಡು' ಎಂದು ಬರೆದರೆ, ಜಾಲತಾಣಗಳನ್ನೆಲ್ಲ ಜಾಲಾಡಿ, ತನಗೆ ಸಿಗುವ ಮಾಹಿತಿಯನ್ನು ಮುಂದಿಡುತ್ತದೆ. ಕನ್ನಡದಲ್ಲಿ ಕೇಳುವುದಕ್ಕಿಂತಲೂ ಇಂಗ್ಲಿಷಿನಲ್ಲಿ ಕೇಳಿದರೆ ನಿಮಗೆ ಹೆಚ್ಚು ನಿಖರವಾದ ಮಾಹಿತಿ ದೊರೆಯುತ್ತದೆ (ಇದು ಸದ್ಯದ ಮಟ್ಟಿಗೆ).

ಇಷ್ಟೇ ಅಲ್ಲ, ನಿರ್ದಿಷ್ಟ ವಿಷಯದ ಕುರಿತು 'ಪ್ರಬಂಧ ಬರೆದುಕೊಡು' ಅಂತ ಕೇಳಿದರೂ ಅದು ಒಳ್ಳೆಯ ಲೇಖನವನ್ನು ನಿಮ್ಮ ಮುಂದಿಡುತ್ತದೆ. ನಿಮಗೆ ಯಾವುದೇ ವಾಕ್ಯದ ಸಂರಚನೆ ಇಷ್ಟವಾಗಲಿಲ್ಲವೋ? ಅದನ್ನು ಬದಲಾಯಿಸಿಕೊಡು (Re-phrase/Rewrite) ಅಂತ ಕೇಳಿದರೆ, ಅದನ್ನು ಮತ್ತೊಂದು ರೂಪದಲ್ಲಿ ಬರೆಯುತ್ತದೆ.

ಈ ರೀತಿಯಾಗಿ ಕೇಳುವ (ಟೈಪ್ ಮಾಡುವ) ಪ್ರಶ್ನೆಗಳನ್ನು 'ಪ್ರಾಂಪ್ಟ್' (Prompt) ಎನ್ನಲಾಗುತ್ತದೆ. ಈ ಪ್ರಾಂಪ್ಟ್‌ನಲ್ಲಿ ಸರಿಯಾದ ಕೀವರ್ಡ್‌ಗಳು (ಅಂದರೆ ಪ್ರಮುಖವಾದ ಪದಗಳು) ಇದ್ದರೆ, ನಮಗೆ ದೊರೆಯುವ ಮಾಹಿತಿ ಹೆಚ್ಚು ನಿಖರವಾಗಿರುತ್ತದೆ. ಹಲವು ವಾಕ್ಯಗಳಲ್ಲಿಯೂ ನಾವು ಪ್ರಶ್ನೆಗಳನ್ನು ಕೇಳಿ, ನಮ್ಮ ಪ್ರಾಂಪ್ಟ್‌ಗಳನ್ನು ರೂಪಿಸಿ, ನಿಖರ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಯಾವುದೇ ಭಾಷೆಯ ವಿಷಯವನ್ನು ಅಲ್ಲಿ ಪೇಸ್ಟ್ ಮಾಡಿ, ನಿರ್ದಿಷ್ಟ ಭಾಷೆಗೆ ಅನುವಾದಿಸಿಕೊಡು ಅಂತ ಹೇಳಿದರೆ, ಅದನ್ನೂ ಮಾಡಿ ನಮ್ಮ ಮುಂದಿಡುತ್ತದೆ

ಇದಲ್ಲದೆ, ಒಂದು ಸುದೀರ್ಘ ಲೇಖನವನ್ನು ನೀಡಿ, ಅದರ ಸಾರಾಂಶ (Summary) ಮಾಡಿಕೊಡು ಎಂದರೆ, ಅದನ್ನೂ ತಕ್ಷಣ ತಯಾರಿಸಿಕೊಡುತ್ತದೆ ಕೋಪೈಲಟ್. ಇದರ ಮುಂದುವರಿದ ಭಾಗವಾಗಿ (ಪ್ರೊ ಆವೃತ್ತಿ), ಮಾಹಿತಿ ತುಂಬಿರುವ ಫೈಲುಗಳನ್ನು (ಪಿಡಿಎಫ್, ಎಕ್ಸೆಲ್, ವರ್ಡ್ ಮುಂತಾದವು) ಅಪ್‌ಲೋಡ್ ಮಾಡಿ, ಇದರ ಸಾರಾಂಶ ಕೊಡು ಅಂತ ಕೇಳಿದರೂ ಈ ಕೃತಕ ಬುದ್ಧಿಮತ್ತೆಯು ಮಾಡಿಕೊಡುತ್ತದೆ. ಇಷ್ಟಲ್ಲದೆ, ಎಕ್ಸೆಲ್ ಎಂಬ ಪದಪರಿಷ್ಕಾರಕ ತಂತ್ರಾಂಶದ ಕೆಲವೊಂದು ಸೂತ್ರಗಳನ್ನು ಕೇಳಿದರೂ ಕೊಡುತ್ತದೆ, ತಂತ್ರಜ್ಞರಿಗೆ ಅಗತ್ಯವಾದ ನಿರ್ದಿಷ್ಟವಾದ ಕೋಡ್‌ಗಳನ್ನು ಅದು ತಿಳಿಸಿಕೊಡುತ್ತದೆ.



'ಪ್ರಾಂಪ್ಟ್'ನಿಂದ ಕೋಪೈಲಟ್ ತಯಾರಿಸಿದ ಚಿತ್ರ

ಇದು ಪಠ್ಯದ (ಟೆಕ್ಸ್ಟ್) ವಿಷಯವಾಯಿತು. ಇನ್ನು, 'ಒಂದು ಚಿತ್ರ ಮಾಡಿಕೊಡು. ಅದರಲ್ಲಿ ಇಂತಿಂಥ ವಿಷಯಗಳಿರಬೇಕಾಗುತ್ತದೆ' ಅಂತ ಹೇಳಿದರೆ, ಈ 'ಪ್ರಾಂಪ್ಟ್'ಗಳಿಂದ ಚಿತ್ರವನ್ನೂ ನಮಗಾಗಿ ತಯಾರಿಸಿಕೊಡುತ್ತದೆ ಕೋಪೈಲಟ್. ಇದು ಬಿಂಗ್ ಸರ್ಚ್ ಎಂಜಿನ್‌ನ ಇಮೇಜಸ್ (https://www.bing.com/images/create/) ಮೂಲಕ ಕೆಲಸ ಮಾಡುತ್ತದೆ.

ಇದೇ ರೀತಿಯಲ್ಲಿ, ನಮಗೇನಾದರೂ ವಿಷಯದ ಬಗ್ಗೆ ಪವರ್ ಪಾಯಿಂಟ್ ಪ್ರೆಸೆಂಟೇಶನ್ (ಮೈಕ್ರೋಸಾಫ್ಟ್ ಆಫೀಸ್ ತಂತ್ರಾಂಶದ ಭಾಗ) ಮಾಡಬೇಕಿದ್ದರೆ, ನಿರ್ದಿಷ್ಟ ವಿಷಯವನ್ನು ಒಂದು ವಾಕ್ಯದಲ್ಲಿ ತಿಳಿಸಿದರೆ, ಸ್ಲೈಡ್‌ಗಳಿಗೆ ಬೇಕಾದ ಪಠ್ಯವನ್ನು ಈ ಜನರೇಟಿವ್ ಎಐ ತಂತ್ರಾಂಶವು ಸಿದ್ಧಪಡಿಸಿಕೊಡುತ್ತದೆ. ನಿರ್ದಿಷ್ಟ ವಿಷಯಗಳನ್ನು ನೀಡಿದರೆ, ವಿಡಿಯೊ ಮಾಡಲು ಸ್ಕ್ರಿಪ್ಟ್ ಕೂಡ ತಯಾರಿಸಿಕೊಡಬಲ್ಲುದು.

ಸರ್ಚ್ ಎಂಜಿನ್‌ಗಿಂತ ಹೇಗೆ ಭಿನ್ನ?

ಗೂಗಲ್, ಬಿಂಗ್, ಯಾಹೂ ಅಥವಾ ಯಾಂಡೆಕ್ಸ್ ಮುಂತಾದ ಸರ್ಚ್ ಎಂಜಿನ್‌ಗಳಲ್ಲಿ ನಾವು ಪ್ರಶ್ನೆ ಕೇಳಿದರೆ, ಅದಕ್ಕೆ ಸಂಬಂಧಿಸಿದ ಮಾಹಿತಿ ಇರುವ ಜಾಲತಾಣಗಳ ಎಲ್ಲ ಲಿಂಕ್‌ಗಳನ್ನು ಅವುಗಳು ನಮ್ಮ ಮುಂದೆ ತೋರಿಸುತ್ತವೆ. ಹೆಚ್ಚು ನಿಖರವಾದ ಮಾಹಿತಿ ಎಲ್ಲೋ ಇರಬಹುದು. ಆದರೆ, ಕೋಪೈಲಟ್‌ನಂತಹ ಜನರೇಟಿವ್ ಎಐ (ಚಾಟ್ ಜಿಪಿಟಿ, ಮೆಟಾ ಎಐ, ಜೆಮಿನಿ ಮುಂತಾದವು) ತಂತ್ರಜ್ಞಾನದಲ್ಲಿ ಹೀಗಲ್ಲ. ನಮಗೆ ಬೇಕಾದ ಮಾಹಿತಿಯು ವ್ಯವಸ್ಥಿತ ರೂಪದಲ್ಲಿ, ಒಂದು ಲೇಖನ ರೂಪದಲ್ಲಿ, ಪಟ್ಟಿ ರೂಪದಲ್ಲಿ ಲಭ್ಯ. ಅದಕ್ಕಾಗಿ ಯಾವ ಜಾಲತಾಣದ ಮೂಲವನ್ನು ಬಳಸಿಕೊಳ್ಳಲಾಯಿತು ಎಂಬ ಮಾಹಿತಿಯು ಹೈಪರ್-ಲಿಂಕ್ ಮೂಲಕ ನಮಗೆ ದೊರೆಯುತ್ತದೆ. ಹೀಗಾಗಿ, ಅದರಲ್ಲಿ ಲಭ್ಯವಾಗುವ ಮಾಹಿತಿಯು ವಿಶ್ವಾಸಾರ್ಹವೇ – ಎಂಬುದನ್ನು ನಾವು ಖಚಿತಪಡಿಸಿಕೊಳ್ಳಬಹುದು.

ಇವುಗಳು ಕೋಪೈಲಟ್ ಅಥವಾ ಬೇರಾವುದೇ ಜನರೇಟಿವ್ ಎಐ ತಂತ್ರಜ್ಞಾನದಿಂದಾಗುವ ಲಾಭಗಳ ಒಂದು ಝಲಕ್ ಅಷ್ಟೇ. ಇದರ ಅಗಾಧ ಸಾಮರ್ಥ್ಯ ಬೆಳೆಯುತ್ತಲೇ ಇದೆ.

ಎಲ್ಲಕ್ಕೂ ಮುಖ್ಯವಾಗಿ ಗಮನಿಸಬೇಕಾದು ಎಂದರೆ, ಅಂತರ್ಜಾಲದಲ್ಲಿ ಲಭ್ಯವಾಗುವ ಯಾವುದೇ ವಿಷಯಗಳು ವಿಶ್ವಾಸಾರ್ಹವೇ ಆಗಿರಬೇಕೆಂದಿಲ್ಲ ಎಂಬ ನಿರ್ಣಯ 'ಎಐ' ತಂತ್ರಜ್ಞಾನಕ್ಕೂ ಅನ್ವಯಿಸುತ್ತದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ನಿಯಂತ್ರಣ ಮತ್ತು ಸಹಭಾಗಿತ್ವ

12) ಬೆಳವಣಿಗೆಯನ್ನು ಉತ್ತೇಜಿಸುವ ಸಸ್ಯ ಹಾರ್ಮೋನ್‌ಗಳಿಗೆ ಉದಾಹರಣೆ ಕೊಡಿ


ಉತ್ತರ:– ಆಕ್ಸಿನ್ ಬೆಳವಣಿಗೆಯನ್ನು ಉತ್ತೇಜಿಸುವ ಸಸ್ಯ ಹಾರ್ಮೋನ್‌ಗಳ ಉದಾಹಣೆಯಾಗಿದೆ.

13) ಸಸ್ಯಗಳ ಬೆಳವಣಿಗೆ ನಿಲ್ಲಲು ಯಾವ ಹಾರ್ಮೋನು ಕಾರಣವಾಗುತ್ತದೆ?

ಉತ್ತರ:– ಅಬ್ಸಿಸಿಕ್ ಆಮ್ಲ (abscisic acid) ಎಂಬ ಹಾರ್ಮೋನ್

14) ಮಾನವ ಮಿದುಳಿನ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



15) ಯಾವುದು ಮಿದುಳು ಬಳ್ಳಿಯನ್ನು ಯಾವುದು ರಕ್ಷಿಸುತ್ತದೆ?

ಉತ್ತರ:– ಕಶೇರು ಸ್ತಂಭ ಅಥವಾ ಬೆನ್ನು ಮೂಳೆ

16) ಸಸ್ಯಗಳಲ್ಲಿರುವ ಗುತ್ವಾನುವರ್ತನೆಯ ಬಗ್ಗೆ ಬರೆಯಿರಿ.


ಉತ್ತರ:– ಸಸ್ಯದ ಬೇರುಗಳು ಯಾವಾಗಲೂ ಕೆಳಮುಖವಾಗಿ ಬೆಳೆಯುತ್ತವೆ ಹಾಗೆಯೇ ಚಿಗುರುಗಳು ಸಾಮಾನ್ಯವಾಗಿ ಭೂಮಿಯಿಂದ ದೂರಕ್ಕೆ ಮೇಲ್ಮುಖವಾಗಿ ಬೆಳೆಯುತ್ತವೆ. ಭೂಮಿಯ ಅಥವಾ ಗುರುತ್ವದ ಸೆಳೆತಕ್ಕೆ ಪ್ರತಿಕ್ರಿಯೆಯಾಗಿ ಚಿಗುರುಗಳ ಮೇಲ್ಮುಖ ಬೆಳವಣಿಗೆ ಮತ್ತು ಬೇರುಗಳ ಕೆಳಮುಖ ಬೆಳವಣಿಗೆಯನ್ನು ಗುರುತ್ವಾನುವರ್ತನೆ (geotropism) ಎಂದು ಹೇಳಬಹುದು

17) ಸಸ್ಯಗಳಲ್ಲಿರುವ ಹಾರ್ಮೋನ್‌ಗಳ ಕುರಿತು ಬರೆಯಿರಿ.

ಉತ್ತರ:– ಸಸ್ಯಗಳು ಬೆಳಕನ್ನು ಗ್ರಹಿಸಿದಾಗ ಅದರ ಕಾಂಡದ ತುದಿಯಲ್ಲಿ ಆಕ್ಸಿನ್ (auxin) ಎಂಬ ಹಾರ್ಮೋನ್ ಸಂಶ್ಲೇಷಿಸಲ್ಪಟ್ಟು ಜೀವಕೋಶಗಳು ಉದ್ದವಾಗಿ ಬೆಳೆಯಲು ಸಹಾಯ ಮಾಡುತ್ತದೆ. ಯಾವಾಗ ಬೆಳಕು ಸಸ್ಯದ ಒಂದು ಕಡೆಯಿಂದ ಪಸರಿಸಲು ಪ್ರಾರಂಭಿಸುತ್ತದೋ, ಆಕ್ಸಿನ್ ಕಾಂಡದ ನೆರಳಿನ ಭಾಗದ ಕಡೆಗೆ ವಿಸರಣೆಗೊಳ್ಳುತ್ತದೆ. ಆಕ್ಸಿನ್‌ನ ಈ ಸಾಂದ್ರತೆಯು ಬೆಳಕಿನಿಂದ ದೂರವಿರುವ ಕಾಂಡದ ಭಾಗದಲ್ಲಿರುವ ಜೀವಕೋಶಗಳನ್ನು ಉದ್ದವಾಗಿ ಬೆಳೆಯಲು ಪ್ರಚೋದಿಸುತ್ತದೆ. ಹೀಗೆ ಸಸ್ಯವು ಬೆಳಕಿನ ಕಡೆಗೆ ಬಾಗಿದಂತೆ ಕಾಣುತ್ತದೆ. ಆಕ್ಸಿನ್‌ಗಳಂತೆಯೇ ಕಾಂಡದ ಬೆಳವಣಿಗೆಯಲ್ಲಿ ಸಹಕರಿಸುವ ಸಸ್ಯ ಹಾರ್ಮೋನ್‌ಗಳಿಗೆ ಮತ್ತೊಂದು ಉದಾಹರಣೆ ಎಂದರೆ ಜಿಬ್ಬರ್‌ಲಿನ್‌ಗಳು (gibberellins). ಸೈಟೋಕೈನಿನ್‌ಗಳು (cytokinin) ಕೋಶವಿಭಜನೆಯನ್ನು ಉತ್ತೇಜಿಸುತ್ತವೆ ಮತ್ತು ಸಾಮಾನ್ಯವಾಗಿ ಇವು ಹಣ್ಣು ಮತ್ತು ಬೀಜಗಳಂತಹ ತೀವ್ರ ಕೋಶವಿಭಜನೆಗೆ ಒಳಪಡುವ ಪ್ರದೇಶಗಳಲ್ಲಿ ಅತಿ ಹೆಚ್ಚಿನ ಸಾಂಧ್ರತೆಯಲ್ಲಿ ಕಂಡುಬರುತ್ತವೆ. ಇವು ಸಸ್ಯಗಳಲ್ಲಿ ಬೆಳವಣಿಗೆಯನ್ನು ಉತ್ತೇಜಿಸಲು ಸಹಾಯ ಮಾಡುವ ಹಾರ್ಮೋನ್‌ಗಳಿಗೆ ಕೆಲವು ಉದಾಹರಣೆಗಳಾಗಿವೆ. ಆದರೆ, ಸಸ್ಯಗಳಿಗೆ ಬೆಳವಣಿಗೆಯನ್ನು ನಿಲ್ಲಿಸಲೂ ಸಹ ಸಂಕೇತಗಳ ಅಗತ್ಯವಿದೆ. ಒಂದು ಉದಾಹರಣೆ ಎಂದರೆ ಅಬ್ಸಿಸಿಕ್ ಆಮ್ಲ (abscisic acid) ಎಂಬ ಹಾರ್ಮೋನ್, ಅದು ಬೆಳವಣಿಗೆಯನ್ನು ಪ್ರತಿಬಂಧಿಸುತ್ತದೆ. ಇದರ ಪರಿಣಾಮಗಳು ಎಲೆಗಳ ಬಾಡುವಿಕೆಯನ್ನೂ ಕಾಣಬಹುದು.

18) ಮಾನವನಲ್ಲಿರುವ ಅಂತಃಸ್ರಾವಕ ಗ್ರಂಥಿಗಳ ಚಿತ್ರ ಬರೆದು ಗುರುತಿಸಿ

ಉತ್ತರ:–



ಗಮನಿಸಿ:– ಮೊದಲ ಚಿತ್ರವು ಪುರುಷ ಹಾಗೂ ದ್ವಿತೀಯ ಚಿತ್ರವು ಸ್ತ್ರೀಯದ್ದಾಗಿದೆ

9) ಮಾನವನಿಗೆ ಆಯೋಡಿನ ಮಹತ್ವವೇನು?

ಉತ್ತರ:– ಥೈರಾಕ್ಸಿನ್ ಉತ್ಪತ್ತಿ ಮಾಡಲು ಥೈರಾಯ್ಡ್ ಗ್ರಂಥಿಗೆ ಅಯೋಡಿನ್ ಅಗತ್ಯವಾಗಿ ಬೇಕು. ನಮ್ಮ ದೇಹದಲ್ಲಿ ಕಾರ್ಬೋಹೈಡ್ರೇಟ್, ಪ್ರೋಟಿನ್ ಮತ್ತು ಕೊಬ್ಬಿನ ಚಯಾಪಚಯ ಕ್ರಿಯೆಯನ್ನು ಥೈರಾಕ್ಸಿನ್ ನಿಯಂತ್ರಿಸಿ ಬೆಳವಣಿಗೆಗಾಗಿ ಅತ್ಯುತ್ತಮ ಸಮತೋಲನವನ್ನು ಒದಗಿಸುತ್ತದೆ. ಥೈರಾಕ್ಸಿನ್‌ನ ಸಂಶ್ಲೇಷಣೆಗೆ ಅಯೋಡಿನ್ ಅಗತ್ಯವಾಗಿ ಬೇಕು. ನಮ್ಮ ಆಹಾರದಲ್ಲಿ ಅಯೋಡಿನ್‌ನ ಕೊರತೆ ಉಂಟಾದರೆ ಗಳಗಂಡ ರೋಗಕ್ಕೆ ತುತ್ತಾಗುವ ಸಂಭವವಿದೆ.

10) ಪಿಟ್ಯೂಟರಿ ಗ್ರಂಥಿಯ ಹೊರಸೂಸುವ ಹಾರ್ಮೋನನ್ನು ಏನೆಂದು ಕರೆಯುವರು ಮತ್ತು ಏಕೆ?

ಉತ್ತರ::– ಪಿಟ್ಯುಟರಿ ಗ್ರಂಥಿಯ ಹಾರ್ಮೋನ್‌ಗಳಲ್ಲಿ ಬೆಳವಣಿಗೆಯ ಹಾರ್ಮೋನ್ ಕೂಡಾ ಒಂದು. ಅದರ ಹೆಸರೇ ಸೂಚಿಸುವಂತೆ ಬೆಳವಣಿಗೆಯ ಹಾರ್ಮೋನ್. ಇದು ದೇಹದ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ನಿಯಂತ್ರಿಸುತ್ತದೆ. ಒಂದೊಮ್ಮೆ ಬಾಲ್ಯದಲ್ಲಿ ಈ ಹಾರ್ಮೋನಿನ ಕೊರತೆಯಾದರೆ ಕುಬ್ಜತೆ ಉಂಟಾಗುತ್ತದೆ.

ಬಹು ಆಯ್ಕೆ ಪ್ರಶ್ನೆಗಳು

1) ಮಿದುಳಿನ ಯಾವ ಭಾಗವು ದೇಹದ ಭಂಗಿ ಮತ್ತು ಸಮತೋಲನವನ್ನು ನಿರ್ವಹಿಸುತ್ತದೆ?

ಎ) ಹಿಮ್ಮಿದುಳಿನ ಅನುಮಸ್ತಿಷ್ಕ ಬಿ) ಮುಮ್ಮಿದಳು

ಸಿ) ಕಣ್ಣುಗಳು ಡಿ) ಮೇಲಿನ ಯಾವುದು ಅಲ್ಲ

ಉತ್ತರ:–(ಎ) ಹಿಮ್ಮಿದುಳಿನ ಅನುಮಸ್ತಿಷ್ಕ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ವರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC BIOLOGY

MOLECULAR BASIS OF INHERITANCE

9. Mention the nucleosides present in DNA?

Ans:- The nucleosides of DNA are adenosine, guanosine, thymidine and cytidine.

10. What is the function of the enzyme Ligase?

Ans:- Ligase is an enzyme that catalyses the formation of a covalent bond between the free ends of two nucleic acids.

11. What is the chemical composition of RNA?

Ans:- RNA is made up of ribose sugars, phosphoric acid molecules and nitrogenous bases which are purines and pyramidines.

12. Mention the purine bases present in RNA?

Ans:- Adenine (A) and guanine (G).

13. Mention the pyramidine bases present in RNA?

Ans:- Cytosine (C) and Uracil (U).

14. Mention the nucleosides present in RNA?

Ans:- The nucleosides of RNA are adenosine, guanosine, uridine and cytidine.

15. What is the function of the enzyme Protease?

Ans:- The function of the enzyme Protease is to catalyse the cleavage of a polypeptide or protein into smaller polypeptides.

16. What is Unique DNA?

Ans:- Unique DNA are those DNA segments whose base sequences are present only in single copy per genome i.e., their base sequences are not repeated in the genome.

17. What is Pallindromic DNA?

Ans:- Pallindromic DNA is a segment of DNA in which the base pair sequence reads the same in both directions from a point of symmetry.

18. What is Genetic RNA?

Ans:- Genetic RNAs are single stranded polynucleotide chains or rings with 5' phosphate – 3' –OH polarity. They exist in virus as single copy or two copy RNA. They do show the secondary structure and are always associated with capsid proteins. As these RNAs combine, replicate, undergo mutation and recombinations, they are called Genetic RNA.

19. Where is Genetic RNA found?

Ans:- Genetic RNA is found in some viruses – such as Tobacco Mosaic Virus (TMV), Rous sarcoma virus (RSV), Human AIDS virus, influenza virus etc.

20. What is a nucleoside ?

Ans:- A Nucleoside is a ribose or deoxyribose molecule attached to any purine or pyramidine base through the first carbon atom of the sugar.

21. What is a nucleotide ?

Ans:- A nucleotide is a building block of the nucleic acid having a pentose sugar, a nitrogenous base and phosphoric acid.

22. Which RNA carries amino acid to the ribosome during protein synthesis?

Ans:- Transfer RNA (tRNA)s carry amino acid to the ribosome during protein synthesis.

23. Which RNA carries the message of the DNA for protein synthesis?

Ans:- Messenger RNA (mRNA)s carry the message of the DNA in the form of triplet codons for protein synthesis.

24. Which RNA co-ordinates the function of protein synthesis and helps in the formation of peptide bonds?

Ans:- Ribosomal RNA (rRNA)s co-ordinate the function of protein synthesis and helps in the formation of peptide bonds.

25. How many types of replications are observed in DNA?

Ans:- Replications observed in DNA are of three types, they are - Conservative replication, Disruptive replication and Semiconservative replication.

26. What is RNA Polmerase I?

Ans:- RNA Polmerase I is the enzyme located in the nucleolus and is responsible for the transcription of ribosomal RNA.

27. What is RNA Polmerase II?

Ans:- RNA polymerase II is the enzyme located in the nucleoplasm which is part of the nucleus other than nucleolus. This enzyme is the major component of RNA polymerase activity and it transcribes all the genes that produce mRNA.

28. What is RNA Polmerase III?

Ans:- RNA polymerase III is the enzyme that occurs in the nucleoplasm and transcribe RNA and 5 RNA genes. It is inhibited by high level of amanitin in animal cells but not in the yeast and insects.

29. How is genetic code universal?

Ans:- The genetic code is universal because a given codon in DNA and mRNA specifies same amino acid in all organisms like prokaryotes, eukaryotes including viruses.

30. What is a Codon?

Ans:- Codon is a unit of message found in mRNA that codes for specific aminoacid during protein synthesis.

31. What is a triplet Codon?

Ans:- A triplet codon is a sequence of nucleotides on an mRNA and it codes for an amino acid during protein synthesis. *(Contd/-)*

ಮಳೆ: ನಲುಗಿದ ಕಾಫಿನಾಡು





ಭಾಗಮಂಡಲದ ಭಗಂಡೇಶ್ವರ ದೇಗುಲದ ಮೆಟ್ಟಿಲುಗಳು ಮುಳುಗಡೆಯಾಗಿವೆ (ಎಡಚಿತ್ರ) ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ನೆಮ್ಮಾರ್ ಬಳಿ ಅಡಿಕೆ ತೋಟಕ್ಕೆ ತುಂಗಾ ನದಿ ನೀರು ನುಗ್ಗಿದೆ – ಪ್ರಜಾವಾಣಿ ಚಿತ್ರ/ರಾಘವೇಂದ್ರ ಕೆ.ಎನ್

ಬೆಳಗಾವಿ: ಕಾಳಜಿ ಕೇಂದ್ರದಲ್ಲಿ 2,500ಕ್ಕೂ ಹೆಚ್ಚು ಕುಟುಂಬಗಳು

ಕುಶಾಲನಗರದ ಮನೆಯೊಂದರಲ್ಲಿ ಸಿಲುಕಿದ್ದ 19 ಮಂದಿ ರಕ್ಷಣೆ

ಕೊಡಗಿನ ಕಾವೇರಿ ನಿಸರ್ಗಧಾಮ ದುಬಾರೆ, 31, ಆ.1ರಂದು ಬಂದ್

ಲಕ್ಕವಳ್ಳಿಯ ಭದ್ರಾ ಜಲಾಶಯ ಬಹುತೇಕ ಭರ್ತಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು/ಮಂಗಳೂರು: ಸೋಮವಾರ ರಾತ್ರಿ ಅಬ್ಬರಿಸಿದ ಮಳೆಗೆ ಕಾಫಿನಾಡು ನಲುಗಿದೆ. ತುಂಗಾ ಮತ್ತು ಭದ್ರಾ ನದಿಗಳು ಉಕ್ಕಿ ಹರಿಯುತ್ತಿದ್ದು, ಹಲವು ರಸ್ತೆಗಳ ಸಂಪರ್ಕ ಕಡಿತಗೊಂಡಿವೆ. ಶೃಂಗೇರಿ ಮತ್ತು ಬಾಳೆಹೊನ್ನೂರು ಪಟ್ಟಣಗಳ ಕೆಲ ಪ್ರದೇಶ ಜಲಾವೃತಗೊಂಡಿವೆ.

ಕಳಸ ಪಟ್ಟಣಕ್ಕೆ ಜಲದಿಗ್ಬಂಧನವೇ ಉಂಟಾಗಿದ್ದು, ಕಳಸದಿಂದ ಕುದುರೆಮುಖ, ಹೊರನಾಡು, ಶೃಂಗೇರಿ, ಬಾಳೆಹೊನ್ನೂರು ಸಂಪರ್ಕಿಸುವ ರಸ್ತೆಗಳು ಜಲಾವೃತಗೊಂಡಿವೆ. ಹೊರನಾಡು-ಕಳಸ ಸಂಪರ್ಕಿಸುವ ಹೆಬ್ಬಾಳೆ ಸೇತುವೆ ಸಂಪೂರ್ಣ ಮುಳುಗಿದೆ.

ಶೃಂಗೇರಿ ತಾಲ್ಲೂಕಿನ ಮೆಣಸೆ- ಹಾಲಂದೂರು ನಡುವೆ ನಾಲ್ಕು ಕಡೆ ಭೂಕುಸಿತ ಉಂಟಾಗಿದೆ. ನೆಮ್ಮಾರ್ ಬಳಿ ರಸ್ತೆ ಜಲಾವೃತಗೊಂಡು ಶೃಂಗೇರಿ -ಮಂಗಳೂರು ಸಂಪರ್ಕ ಕಡಿತಗೊಂಡಿದೆ. ಪಟ್ಟಣದ ಭಾರತೀತೀರ್ಥ ರಸ್ತೆ, ಗಾಂಧಿ ಮೈದಾನ, ಕುರುಬಗೇರಿ ರಸ್ತೆ ಸಂಪೂರ್ಣ ಜಲಾವೃತಗೊಂಡಿವೆ. ನದಿಯಂಚಿನಲ್ಲಿರುವ ಮನೆಗಳಲ್ಲಿದ್ದ ಜನರನ್ನು ಬೋಟ್‌ಗಳ ಮೂಲಕ ಸುರಕ್ಷಿತ ಪ್ರದೇಶಕ್ಕೆ ಕರೆತರಲಾಗಿದೆ.

ಭದ್ರಾ ನದಿಯ ನೀರು ಉಕ್ಕಿದ್ದು ಬಾಳೆಹೊನ್ನೂರಿನ ಹಳವದ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಸಂತೆ ಮಾರುಕಟ್ಟೆ ಮುಳುಗಡೆಯಾಗಿದೆ. ಕಳಸ-ಬಾಳೆಹೊನ್ನೂರು, ಜಯಪುರ-ಹೊರನಾಡು, ಶೃಂಗೇರಿ-ಕೆರೆಕಟ್ಟೆ ರಸ್ತೆಗಳಲ್ಲಿ ನೀರು ಹರಿಯುತ್ತಿದ್ದು, ವಾಹನ ಸಂಚಾರ ಬಂದ್ ಮಾಡಲಾಗಿದೆ. ಎಲ್ಲೆಡೆ ಕಾಫಿ ತೋಟ, ಅಡಿಕೆ ತೋಟಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದ ಬೆಳೆಹಾನಿಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳವಾರ ಇಡೀ ದಿನ ಮಳೆ ಸುರಿಯಿತು. ಅಲ್ಲಲ್ಲಿ ಗುಡ್ಡ ಕುಸಿಯುತ್ತಿದೆ. ಚಾರ್ಮಾಡಿಯಲ್ಲಿ ರಸ್ತೆ ಮೇಲೆ ಮರ ಬಿದ್ದು, ಒಂದು ತಾಸು ಸಂಚಾರ ಸ್ಥಗಿತಗೊಂಡಿತು. ಕುಕ್ಕೆ ಸುಬ್ರಹ್ಮಣ್ಯದಲ್ಲಿ ಕುಮಾರಧಾರಾ ನದಿ ಉಕ್ಕಿ ಹರಿಯುತ್ತಿದ್ದು, ಸ್ನಾನಘಟ್ಟ ಮುಳುಗಡೆಯಾಗಿದೆ.

ಉಡುಪಿ ಜಿಲ್ಲೆಯಾದ್ಯಂತ ದಿನವಿಡೀ ಬಿಟ್ಟು ಬಿಟ್ಟು ಧಾರಾಕಾರವಾಗಿ ಸುರಿಯಿತು.

ಶಿವಮೊಗ್ಗ ವರದಿ: ಸತತ ಮಳೆ ಕಾರಣ ತುಂಗಾ, ಭದ್ರಾ, ವರದಾ, ಶರಾವತಿ, ಕುಮುದ್ವತಿ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ.

ತುಂಗಾ ನದಿಯಲ್ಲಿ ಪ್ರವಾಹದ ಆತಂಕ ಸೃಷ್ಟಿಯಾಗಿದೆ. ತೀರ್ಥಹಳ್ಳಿಯ ಐತಿಹಾಸಿಕ ರಾಮಮಂಟಪ ಹಾಗೂ ಶಿವಮೊಗ್ಗ ನಗರದ ಕೋರ್ಪಲಯ್ಯನ ಛತ್ರಗಳು ಮುಳುಗಿವೆ. ಗಾಜನೂರಿನ ತುಂಗಾ ಜಲಾಶಯಕ್ಕೆ ಒಳಹರಿವು ಮಂಗಳವಾರ ಸಂಜೆ 80,000 ಕ್ಯುಸೆಕ್ ದಾಖಲಾಗಿದೆ. ಜಲಾಶಯ ಭರ್ತಿ ಆಗಿರುವುದರಿಂದ ಅಷ್ಟೇ ಪ್ರಮಾಣದ ನೀರನ್ನು ನದಿಗೆ ಹರಿಸಲಾಗುತ್ತಿದೆ. ಮಳೆಯ ಆರ್ಭಟ ಹೆಚ್ಚಾಗಿರುವುದರಿಂದ ತುಂಗಾ ನದಿಯಲ್ಲಿ ರಾತ್ರಿ ವೇಳೆಗೆ 90,000 ಕ್ಯುಸೆಕ್ ಒಳಹರಿವು ದಾಖಲಾಗಬಹುದು. ಹೀಗಾಗಿ ಶಿವಮೊಗ್ಗ ನಗರದೊಳಗೆ ನದಿಯ ನೀರು ನುಗ್ಗುವ ಸಾಧ್ಯತೆ ಇದ್ದು, ನದಿ ತೀರದಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ.

ಮಂಗಳವಾರ ಲಕ್ಕವಳಿಯ ಭದ್ರಾ ಜಲಾಶಯದ ನಾಲ್ಕು ಕ್ರಸ್ಟ್‌ಗೇಟ್‌ಗಳನ್ನು ತೆರೆದು ನದಿಗೆ 40,000 ಕ್ಯುಸೆಕ್ ನೀರು ಹರಿಸಲಾಯಿತು. ಎರಡು ವರ್ಷಗಳಲ್ಲಿ ಮೊದಲ ಬಾರಿಗೆ ಭದ್ರಾ ಜಲಾಶಯ ಭರ್ತಿ ಆಗಿದೆ.

ಹಾಸನ ವರದಿ: ಬೇಲೂರು ತಾಲ್ಲೂಕಿನಲ್ಲಿ ಸೋಮವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದ ಸುಳ್ಳಕ್ಕಿ ಗ್ರಾಮದ ರಸ್ತೆ ಕೊಚ್ಚಿ ಹೋಗಿದ್ದು, ಸುಳ್ಳಕ್ಕಿ-ಮೈಲಹಳ್ಳಿ, ಆಲೂರು-ಬೇಲೂರು-ಕೋನೆರ್ಲು ಗ್ರಾಮಗಳ ಸಂಪರ್ಕ ಕಡಿತವಾಗಿದೆ. ನಾಟಿ ಮಾಡಿದ್ದ ಭತ್ತದ ಸಸಿಗಳು ಕೊಚ್ಚಿ ಹೋಗಿವೆ.

ಬೆಳಗಾವಿ ವರದಿ : ಬೆಳಗಾವಿ ಜಿಲ್ಲೆಯಲ್ಲಿ ಅಲ್ಲದೇ ಮಹಾರಾಷ್ಟ್ರ ಘಟ್ಟ ಪ್ರದೇಶದಲ್ಲಿ ಮಂಗಳವಾರ ಮಳೆ ಅಬ್ಬರ ತಗ್ಗಿದೆ. ಕೃಷ್ಣಾ ಹಾಗೂ ಅದರ ಉಪನದಿಗಳ ಹರಿವು ತುಸು ತಗ್ಗಿದೆ. ಆದರೆ, ಪ್ರವಾಹದ ನೀರು ಕಡಿಮೆಯಾಗಿಲ್ಲ. ಮಂಗಳವಾರ ಕೂಡ ಕೃಷ್ಣಾ ನದಿಗೆ 2.97 ಲಕ್ಷ ಕ್ಯುಸೆಕ್ ನೀರು ಹರಿದಿದೆ.

'ಕೃಷ್ಣಾ, ಘಟಪ್ರಭಾ, ದೂಧಗಂಗಾ, ವೇದಗಂಗಾ, ಮಾರ್ಕಂಡೇಯ ನದಿಗಳ ನೀರು 42 ಗ್ರಾಮಗಳಿಗೆ ಬಾಧಿಸಿದೆ. ಜಲಾವೃತವಾದ ಗ್ರಾಮಗಳಲ್ಲಿ ಯಾಂತ್ರಿಕ ಬೋಟ್ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ನೋಡಲ್ ಅಧಿಕಾರಿ ತಿಳಿಸಿದ್ದಾರೆ.





ಲಕ್ಕವಳ್ಳಿ ಬಳಿ ಭದ್ರಾ ಜಲಾಶಯದಿಂದ ಮಂಗಳವಾರ ನಾಲ್ಕು ಕ್ರಸ್ಟ್‌ಗೇಟ್‌ಗಳನ್ನು ತೆರೆದು ನದಿಗೆ ನೀರು ಹರಿಸಲಾಯಿತು –ಪ್ರಜಾವಾಣಿ ಚಿತ್ರ/ಶಿವಮೊಗ್ಗ ನಾಗರಾಜ್ (ಎಡಚಿತ್ರ)
ದಕ್ಷಿಣ ಕನ್ನಡ ಜಿಲ್ಲೆ ಗುಂಡ್ಯ, ಸುಬ್ರಹ್ಮಣ್ಯ ಹೆದ್ದಾರಿಯ ಚೇರು ಎಂಬಲ್ಲಿ ಶಾಲಾ ವಿದ್ಯಾರ್ಥಿಯನ್ನು ಪೋಷಕರೊಬ್ಬರು ಎತ್ತಿಕೊಂಡು ಮನೆಗೆ ಕರೆದೊಯ್ದರು

ಸುರಕ್ಷಿತ ಸ್ಥಳಗಳಿಗೆ ತೆರಳಲು ಸೂಚನೆ

ಮೈಸೂರು: ಭಾರಿ ಮಳೆಯಾಗುತ್ತಿರುವುದರಿಂದ ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಜನ ಹಾಗೂ ಕಾವೇರಿ ನದಿ ಪಾತ್ರದ ತಗ್ಗು ಪ್ರದೇಶದಲ್ಲಿರುವ ಹಾಗೂ ನದಿ ದಂಡೆಗಳಲ್ಲಿರುವ ಸಾರ್ವಜನಿಕರು ಹಾಗೂ ರೈತರು ಆಸ್ತಿ, ಜಾನುವಾರುಗಳ ರಕ್ಷಣೆಗೆ ಎಚ್ಚರಿಕೆ ವಹಿಸಬೇಕು. ಮುಂಜಾಗ್ರತೆಯಿಂದ ಸುರಕ್ಷಿತ ಸ್ಥಳಗಳಿಗೆ ತೆರಳಬೇಕು ಎಂದು ಕಾವೇರಿ ನೀರಾವರಿ ನಿಗಮ ತಿಳಿಸಿದೆ.

ಭಾಗಮಂಡಲದಲ್ಲಿ ತ್ರಿವೇಣಿ ಸಂಗಮ ಭರ್ತಿಯಾಗಿ ನೀರು ಭಗಂಡೇಶ್ವರದ ಮೆಟ್ಟಿಲುಗಳನ್ನು ಆವರಿಸಿದೆ. ಕಾಶಿ ಮಠದಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದೆ. ಬೇತ್ರಿಯ ಕಾವೇರಿ ನದಿ ಹಿನ್ನೀರಿನಲ್ಲಿ ಸಿಲುಕಿದ್ದ 6 ಮಂದಿಯನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಬೋಟ್ ಮೂಲಕ ರಕ್ಷಿಸಿದ್ದಾರೆ. ಕುಶಾಲನಗರದ ಸಾಯಿ ಬಡಾವಣೆ ಜಲಾವೃತಗೊಂಡಿದೆ. ದೊಡ್ಡತ್ತೂರು ಗ್ರಾಮದ ಕೆರೆ ಬಿರುಕು ಬಿಟ್ಟಿದ್ದರೆ, ರೊಂಡೆಕೆರೆ ಏರಿ ಮತ್ತೊಮ್ಮೆ ಒಡೆದು, ಜಮೀನುಗಳಿಗೆ ನೀರು ನುಗ್ಗಿದೆ. ಮಡಿಕೇರಿ– ವಿರಾಜಪೇಟೆ ನಡುವಿನ ಭೇತ್ರಿ ಸೇತುವೆಗುಂಟ ನೀರು ಹರಿಯುತ್ತಿದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಹತ್ತು ಗ್ರಾಮಗಳಲ್ಲಿ ನೂರಾರು ಎಕರೆ ಕೃಷಿ ಭೂಮಿ ಜಲಾವೃತವಾಗಿದೆ.

'ಶಿರೂರು: ನದಿ ಹೂಳೆತ್ತಲು ಯಂತ್ರದ ನೆರವು ಅಗತ್ಯ'

ಕಾರವಾರ: 'ಶಿರೂರು ಗುಡ್ಡ ಕುಸಿತದಿಂದ ಗಂಗಾವಳಿ ನದಿ ಸೇರಿರುವ ವ್ಯಾಪಕ ಪ್ರಮಾಣದ ಮಣ್ಣಿನ ರಾಶಿಯ ಹೂಳೆತ್ತಿ, ಅದರಡಿ ಸಿಲುಕಿರಬಹುದಾದ ಲಾರಿ ಮತ್ತು ಕಾಣೆಯಾದ ವ್ಯಕ್ತಿಗಳನ್ನು ಹುಡುಕಲು ಅಗ್ರೋ ಡ್ರೆಡ್ಜ್ ಕ್ರಾಫ್ಟ್ ಯಂತ್ರ ಅಗತ್ಯವಿದೆ ಎಂಬ ವರದಿಯನ್ನು ಕೇರಳ ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ಕೇರಳದ ತ್ರಿಶ್ಶೂರು ಕೃಷಿ ವಿಶ್ವವಿದ್ಯಾಲಯದ ಸಹಾಯಕ ನಿರ್ದೇಶಕ ವಿಪಿನ್.ಸಿ ತಿಳಿಸಿದರು.

ಅಂಕೋಲಾ ತಾಲ್ಲೂಕಿನ ಶಿರೂರಿಗೆ ಮಂಗಳವಾರ ಭೇಟಿ ನೀಡಿದ ಕೇರಳ ಸರ್ಕಾರದ ಪರ ತಜ್ಞರ ತಂಡದ ನೇತೃತ್ವ ವಹಿಸಿದ್ದ ಅವರು, ಗಂಗಾವಳಿ ನದಿಯ ಹರಿವು ಮತ್ತು ಅಲ್ಲಿನ ಸ್ಥಿತಿಗತಿಯ ಕುರಿತು ಪರಿಶೀಲಿಸಿದರು. ಸಮಿತಿಯ ಸಹ ಸದಸ್ಯರಾದ ಪ್ರದೀಶ, ಯಂತ್ರದ ವಿನ್ಯಾಸಕ ಮತ್ತು ನಿರ್ವಾಹಕ ನಿತಿನ್ ಜತೆಗಿದ್ದರು.

ಶಾಲೆಗೆ ಸಿಗದ ರಜೆ ಪೋಷಕರ ಪರದಾಟ

ಸುಬ್ರಹ್ಮಣ್ಯ: ಮಂಗಳವಾರ ಬೆಳಿಗ್ಗೆಯಿಂದ ಕಡಬ, ಸುಬ್ರಹ್ಮಣ್ಯ, ಸುಳ್ಯ ಪರಿಸರದಲ್ಲಿ ಭಾರಿ ಮಳೆಯಾಗಿದ್ದರೂ ಶಾಲಾ–ಕಾಲೇಜುಗಳಿಗೆ ರಜೆ ನೀಡದ ಕಾರಣ ಮನೆಗೆ ತೆರಳುವಾಗ ವಿದ್ಯಾರ್ಥಿಗಳು ಸಂಕಷ್ಟ ಅನುಭವಿಸಿದರು.

ಸುಬ್ರಹ್ಮಣ್ಯ - ಗುಂಡ್ಯ ಹೆದ್ದಾರಿ ಜಲಾವೃತಗೊಂಡಿದ್ದರಿಂದ ಆ ಭಾಗದ ವಿದ್ಯಾರ್ಥಿಗಳು ಸಮಸ್ಯೆ ಅನುಭವಿಸಿದರು. ಕೈಕಂಬದಲ್ಲೂ ಸೇತುವೆ ಮುಳುಗಡೆಯಾಗಿತ್ತು. ಇದರಿಂದ ಮಕ್ಕಳನ್ನು ಹೆತ್ತವರು ಎತ್ತಿಕೊಂಡು ಮನೆಗೆ ಕರೆದೊಯ್ಯಬೇಕಾಯಿತು.

ಗುಂಡ್ಯ - ಸುಬ್ರಹ್ಮಣ್ಯ ಹೆದ್ದಾರಿಯ ಚೇರು ಸಮೀಪದ ಶಾಲಾ ವಿದ್ಯಾರ್ಥಿಯನ್ನು ಪೋಷಕರು ಎತ್ತಿಕೊಂಡು ಹೋದ ಚಿತ್ರ ವೈರಲ್ ಆಗಿದೆ. ಅಪಾಯಕಾರಿ ಪರಿಸ್ಥಿತಿಯಲ್ಲಿ ಶಾಲಾ ಕಾಲೇಜುಗಳಿಗೆ ರಜೆ ನೀಡಬೇಕು. ಈ ಮೂಲಕ ಅನಾಹುತ ತಪ್ಪಿಸಬೇಕು ಎಂದು ಕಿಶೋರ್ ಶಿರಾಡಿ ಒತ್ತಾಯಿಸಿದ್ದಾರೆ.

5 ಜಿಲ್ಲೆಗಳಿಗೆ 'ರೆಡ್ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ ಸೇರಿ ವಿವಿಧೆಡೆ ಮುಂದಿನ ಒಂದು ವಾರ ಭಾರಿ ಮಳೆಯಾಗುವ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಐದು ಜಿಲ್ಲೆಗಳಿಗೆ ಬುಧವಾರ 'ರೆಡ್ ಅಲರ್ಟ್' ಘೋಷಿಸಿದೆ.

ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗೆ 'ರೆಡ್ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಭಾರಿ ಗಾಳಿಯೊಂದಿಗೆ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಕನ್ನಡ ಹಾಗೂ ಹಾಸನಕ್ಕೆ 'ಆರೆಂಜ್ ಅಲರ್ಟ್', ಬೆಳಗಾವಿ ಮತ್ತು ಮೈಸೂರು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಭಾರಿ ಮಳೆಯೊಂದಿಗೆ ಗಾಳಿಯ ವೇಗವು 40ರಿಂದ 50 ಕಿ.ಮೀ. ತಲುಪುವ ಸಾಧ್ಯತೆಯಿದೆ. ದಕ್ಷಿಣ ಹಾಗೂ ಉತ್ತರ ಒಳನಾಡಿನ ಉಳಿದ ಜಿಲ್ಲೆಗಳ ಹಲವು ಸ್ಥಳಗಳಲ್ಲಿ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿ ಉದ್ದಕ್ಕೂ ಬಿರುಗಾಳಿಯಿಂದ ಕೂಡಿದ ಹವಾಮಾನ ಇರಲಿದೆ. ಗಂಟೆಗೆ 35ರಿಂದ 55 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ, ಮೀನುಗಾರರು ಎಚ್ಚರಿಕೆ ವಹಿಸಬೇಕು. ಸಮುದ್ರ ಕಾರ್ಯಾಚರಣೆ ಹಾಗೂ ದಡದಲ್ಲಿ ಮನರಂಜನೆ ಚಟುವಟಿಕೆ ನಡೆಸುವಾಗ ಜಾಗರೂಕರಾಗಿರಬೇಕು ಎಂದು ಇಲಾಖೆ ಹೇಳಿದೆ.

ಗುರುವಾರವೂ ರಾಜ್ಯದ ವಿವಿಧೆಡೆ ಭಾರಿ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ಕರಾವಳಿಯ ಮೂರು ಜಿಲ್ಲೆಗಳು ಸೇರಿ ಐದು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಹಾಗೂ ಬೆಳಗಾವಿ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	122.80	68,192	1,07,783
ಹಾರಂಗಿ	2,859	2,855.16	12,460	27,500
ಕಬಿನಿ	2,284.00	2,283.14	57,819	80,000
ಹೇಮಾವತಿ	2,922	2,920.98	46,670	80,000
ಲಿಂಗನಮಕ್ಕಿ	1,819	1,810.50	50,710	3,757.16
ಸೂಪಾ(ಮೀ)	564	552.50	36,663	-
ಮಾಣಿ	595	585.88	8,811	-
ತುಂಗಭದ್ರಾ	1,633	1,631.72	86,327	93,684
ಮಲಪ್ರಭಾ	2,079.5	2,074.10	7,707	3,594
ಘಟಪ್ರಭಾ	2175	2,170.08	38,012	35,721
ಭದ್ರಾ*	186	183.2	20,774	40,000
ಆಲಮಟ್ಟಿ(ಮೀ)	519.6	515.50	3,02,573	3,02,573
ನಾರಾಯಣಪುರ(ಮೀ)	492.25	489.85	2,90,000	2,77,869

* ನೆಲಮಟ್ಟದಿಂದ

ತಮಿಳುನಾಡಿಗೆ ಆಗಸ್ಟ್ ಪಾಲಿನ ನೀರೂ ಬಿಡಲಾಗಿದೆ: ಕರ್ನಾಟಕ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕಾವೇರಿ ಜಲವಿವಾದ ನ್ಯಾಯಮಂಡಳಿ ಆದೇಶದ ಪ್ರಕಾರ, ತಮಿಳುನಾಡಿಗೆ ಜುಲೈ ಅಂತ್ಯದ ವರೆಗೆ 40.43 ಟಿಎಂಸಿ ಅಡಿ ನೀರು ಬಿಡಬೇಕಿತ್ತು. ಈ ವರ್ಷ ಇಲ್ಲಿಯವರೆಗೆ 86.17 ಟಿಎಂಸಿ ಅಡಿ ನೀರು ಹರಿಸಲಾಗಿದೆ. ಈ ಮೂಲಕ ಆಗಸ್ಟ್ ತಿಂಗಳ ಪಾಲನ್ನೂ ನೀಡಿದಂತಾಗಿದೆ' ಎಂದು ಕರ್ನಾಟಕ ಸರ್ಕಾರ ಪ್ರತಿಪಾದಿಸಿದೆ.

ನವದೆಹಲಿಯಲ್ಲಿ ಮಂಗಳವಾರ ನಡೆದ ಕಾವೇರಿ ನೀರು ನಿಯಂತ್ರಣ ಸಮಿತಿಯ ಸಭೆಯಲ್ಲಿ ಕರ್ನಾಟಕ ಸರ್ಕಾರ ಈ ವಾದ ಮುಂದಿಟ್ಟಿತು.

ಕಾವೇರಿ ನ್ಯಾಯಮಂಡಳಿಯ 1995ರ ಆದೇಶದಂತೆ ಹಾಗೂ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ ಮೊದಲನೇ ಸಭೆಯ ನಿರ್ಣಯದಂತೆ ಈ ಹೆಚ್ಚುವರಿ ನೀರಿನ ಪ್ರಮಾಣವನ್ನು ಮುಂಬರುವ ತಿಂಗಳುಗಳಲ್ಲಿ ಕರ್ನಾಟಕ ರಾಜ್ಯವು ಹರಿಸಬೇಕಾದ ನೀರಿನ ಮೊತ್ತಕ್ಕೆ ಜಮೆ ಮಾಡಿಕೊಳ್ಳತಕ್ಕದ್ದು ಎಂದು ಹೇಳಿತು.

ತಮಿಳುನಾಡು ಸರ್ಕಾರ, 'ಮೆಟ್ಟೂರು ಜಲಾಶಯದಿಂದ ನೀರಾವರಿಗಾಗಿ ನೀರು ಹರಿಸಲಾಗುತ್ತಿದೆ. ಪ್ರಸ್ತುತ, 23,000 ಕ್ಯುಸೆಕ್ ನೀರನ್ನು ಜಲಾಶಯದಿಂದ ಬಿಡಲಾಗುತ್ತಿದೆ. ಕಾವೇರಿ ನ್ಯಾಯಮಂಡಳಿ ಆದೇಶದ ಪ್ರಕಾರ, ಮುಂದಿನ ತಿಂಗಳುಗಳಲ್ಲಿ ರಾಜ್ಯಕ್ಕೆ ನೀರು ಹರಿಸುವಂತೆ ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು' ಎಂದು ಕೋರಿತು.

'ಬಿಳಿಗುಂಡ್ಲುವಿನ ಹರಿವಿನಲ್ಲಿ ಯಾವುದೇ ಆತಂಕ ಇಲ್ಲ ಹಾಗೂ ಹರಿವು ಸಾಮಾನ್ಯವಾಗಿದೆ. ಮುಂದಿನ ತಿಂಗಳ ಸಭೆಯಲ್ಲಿ ಹರಿವಿನ ಪರಿಸ್ಥಿತಿಯನ್ನು ಮತ್ತೊಮ್ಮೆ ಅವಲೋಕಿಸಲಾಗುವುದು' ಎಂದು ಸಮಿತಿ ಅಭಿಪ್ರಾಯಪಟ್ಟಿತು.

ಮುಂಗಾರು ಮಳೆ 48 ಜನರ ಸಾವು

ಬಾಗಲಕೋಟೆ ವರದಿ: 'ಮುಂಗಾರು ಹಂಗಾಮಿನಲ್ಲಿ ಮಳೆಯಿಂದಾದ ವಿವಿಧ ಅನಾಹುತಗಳಲ್ಲಿ 48 ಜನರು ಮೃತಪಟ್ಟಿದ್ದಾರೆ. ಆದ್ದರಿಂದ ನೀರಿಗಿಳಿದು ಸಾಹಸ ಮಾಡುವವರ ವಿರುದ್ಧ ಲಾಠಿ ಪ್ರಹಾರ ಮಾಡಿಯಾದರೂ ತಡೆಯುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಜಿಲ್ಲೆಯ ಮುಧೋಳ ಬಳಿ ಮುಳುಗಡೆಯಾಗಿರುವ ಯಾದವಾಡ ಸೇತುವೆ, ಕಾಳಜಿ ಕೇಂದ್ರ, ಮಳಲಿ ಗ್ರಾಮಕ್ಕೆ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಉಕ್ಕಿ ಹರಿಯುವ ನೀರಿಗೆ ಇಳಿದು 12 ಮಂದಿ, ಸಿಡಿಲು ಬಡಿದು ಎಂಟು, ಮರ ಬಿದ್ದು ಆರು, ಮನೆಗಳು ಕುಸಿದು ಬಿದ್ದು 16 ಸೇರಿ ಒಟ್ಟು 48 ಜನರು ಮೃತರಾಗಿದ್ದಾರೆ' ಎಂದರು.

'ರಾಜ್ಯದಲ್ಲಿ 64 ಆರೈಕೆ ಕೇಂದ್ರಗಳು ಚಾಲ್ತಿಯಲ್ಲಿವೆ. 10 ಸಾವಿರ ಜನರು ಆಶ್ರಯ ಪಡೆದಿದ್ದಾರೆ. 44 ಸಾವಿರ ಹೆಕ್ಟೇರ್ ಬೆಳೆ ನಾಶವಾಗಿದೆ. ಇನ್ನೂ ಬೆಳೆ ಹಾನಿಯ ಸರ್ವೆ ಮುಂದುವರಿದಿದೆ. 832 ಮನೆಗಳು ಕುಸಿದುಬಿದ್ದಿವೆ' ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಇದ್ದರು.

53,816 ಕಂಬಗಳು, 3,924 ವಿದ್ಯುತ್ ಪರಿವರ್ತಕಗಳಿಗೆ ಹಾನಿ – ಸಚಿವ ಕೆ.ಜೆ. ಜಾರ್ಜ್

ಅತಿವೃಷ್ಟಿ: ಇಂಧನ ಇಲಾಖೆಗೆ ₹96 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ



ಕೆ.ಜೆ.ಜಾರ್ಜ್

ಬೆಂಗಳೂರು: 'ಭಾರಿ ಮಳೆ ಹಾಗೂ ಬಿರುಗಾಳಿಯಿಂದಾಗಿ ರಾಜ್ಯದ ಹಲವೆಡೆ ಸಾವಿರಾರು ವಿದ್ಯುತ್ ಕಂಬಗಳು, ಪರಿವರ್ತಕಗಳು ಮತ್ತು ವಿದ್ಯುತ್ ಸರಬರಾಜು ಮಾರ್ಗಗಳಿಗೆ ಹಾನಿಯಾಗಿದ್ದು, ವಿದ್ಯುತ್ ಸರಬರಾಜು ಕಂಪನಿಗಳಿಗೆ (ಎಸ್ಕಾಂ) ಒಟ್ಟು ₹96.61 ಕೋಟಿಯಷ್ಟು ನಷ್ಟ ಉಂಟಾಗಿದೆ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಇಲಾಖೆಗೆ ಅತಿವೃಷ್ಟಿಯಿಂದ ಆಗಿರುವ ನಷ್ಟ ಮತ್ತು ವಿದ್ಯುತ್ ಪೂರೈಕೆಯಲ್ಲಿನ ಸಮಸ್ಯೆಗಳ ಕುರಿತು ಇಲಾಖೆ ಹಾಗೂ ಎಲ್ಲ ಎಸ್ಕಾಂಗಳ ಹಿರಿಯ ಅಧಿಕಾರಿಗಳ ಜತೆ ಮಂಗಳವಾರ ಸಭೆ ನಡೆಸಿದ ಬಳಿಕ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

'ಮಳೆ ಮತ್ತು ಗಾಳಿಯಿಂದ 53,816 ಕಂಬಗಳು, 3,924 ವಿದ್ಯುತ್ ಪರಿವರ್ತಕಗಳು, 1,120 ಕಿ.ಮೀ. ಉದ್ದದ ವಿದ್ಯುತ್ ತಂತಿಗಳು ಹಾನಿಗೊಳಗಾಗಿವೆ. ಈ ಪೈಕಿ 51,119 ಕಂಬಗಳು, 3,918 ಪರಿವರ್ತಕ ಗಳು ಮತ್ತು 1,063 ಕಿ.ಮೀ. ಉದ್ದದ ವಿದ್ಯುತ್ ತಂತಿಗಳನ್ನು ದುರಸ್ತಿಗೊಳಿಸಲಾಗಿದೆ' ಎಂದರು.

'ಚಿಕ್ಕಮಗಳೂರು, ಉಡುಪಿ, ಶಿವಮೊಗ್ಗ, ಹಾಸನ, ಸಕಲೇಶಪುರ, ಕೊಡಗು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಹೆಚ್ಚು ಹಾನಿ ಸಂಭವಿಸಿದೆ. ಈ ಪ್ರದೇಶಗಳಿಗೆ ಹೆಚ್ಚುವರಿಯಾಗಿ ಗ್ಯಾಂಗ್‌ಮೆನ್, ಲೈನ್‌ಮೆನ್ ನೇಮಿಸುವುದರ ಜೊತೆಗೆ, ವಿದ್ಯುತ್ ಕಾಮಗಾರಿಗಳ ಗುತ್ತಿಗೆದಾರರ ನೆರವಿನೊಂದಿಗೆ ದುರಸ್ತಿ ಕೆಲಸ ಮಾಡಲಾಗುತ್ತಿದೆ' ಎಂದು ಅವರು ವಿವರಿಸಿದರು.

ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ, ಕರ್ನಾಟಕ ನವೀಕರಿಸಬಹುದಾದ ಇಂಧನಗಳ ಅಭಿವೃದ್ಧಿ ನಿಗಮದ (ಕ್ರೆಡೆಲ್) ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಉಪಸ್ಥಿತರಿದ್ದರು.

₹1,403 ಕೋಟಿ ಮೌಲ್ಯದ ವಿದ್ಯುತ್ ಮಾರಾಟ

'ರಾಜ್ಯದ ಇಂಧನ ಇಲಾಖೆ ಫೆಬ್ರವರಿ – ಜುಲೈ ಮಧ್ಯೆ ₹1,403 ಕೋಟಿ ಮೌಲ್ಯದ ವಿದ್ಯುತ್ ಮಾರಾಟ ಮಾಡಿದೆ. ಇದೇ ಅವಧಿಯಲ್ಲಿ ₹2,293 ಕೋಟಿ ಮೌಲ್ಯದ ವಿದ್ಯುತ್ ಖರೀದಿ ಮಾಡಿದೆ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಮಾಹಿತಿ ನೀಡಿದರು.

'ರಾಜ್ಯದಲ್ಲಿ ನಿತ್ಯ ಸರಾಸರಿ 250 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಈ ಪೈಕಿ 20 ದಶಲಕ್ಷ ಯೂನಿಟ್ ಅನ್ನು ಬೇಸಿಗೆಯಲ್ಲಿ ವಿನಿಮಯದ ಆಧಾರದ ಮೇಲೆ ವಿದ್ಯುತ್ ಪಡೆದುಕೊಂಡಿದ್ದ ಪಂಜಾಬ್ ಮತ್ತು ಉತ್ತರ ಪ್ರದೇಶ ರಾಜ್ಯಕ್ಕೆ ಪೂರೈಸಲಾಗುತ್ತಿದೆ' ಎಂದು ವಿವರಿಸಿದರು.

'ರಾಜ್ಯದ ಮೂರು ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ 2022-23ನೇ ಸಾಲಿನಲ್ಲಿ 18,419 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಿ ₹9,326 ಕೋಟಿ ಆದಾಯ ಬಂದಿತ್ತು. 2023-24ನೇ ಸಾಲಿನಲ್ಲಿ 22,313 ದಶಲಕ್ಷ ಯೂನಿಟ್ ಉತ್ಪಾದನೆ ಮಾಡಿ ₹10,916 ಕೋಟಿ ಆದಾಯ ಗಳಿಸಲಾಗಿದೆ' ಎಂದು ತಿಳಿಸಿದರು.

ವಿದ್ಯುತ್ ಉಳಿತಾಯಕ್ಕೆ ಎಐ ಬಳಕೆ

ಕೃತಕ ಬುದ್ಧಿ ಮತ್ತೆ (ಎಐ), ಮಷೀನ್ ಲರ್ನಿಂಗ್ ಲ್ಯಾಂಗ್ವೇಜ್‌ನಂತಹ ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ವಿದ್ಯುತ್ ನಿರ್ವಹಣಾ ನಷ್ಟ ತಗ್ಗಿಸುವ ಹಾಗೂ ಭವಿಷ್ಯದ ವಿದ್ಯುತ್ ಬೇಡಿಕೆ, ಪೂರೈಕೆ ಕುರಿತು ಮುನ್ಸೂಚನೆ ನೀಡುವಂತಹ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಲು ಇಂಧನ ಇಲಾಖೆ ಮುಂದಾಗಿದೆ.

'ಇದಕ್ಕಾಗಿ ಕ್ಯೂನೆಕ್ಸ್ಟ್ ಎಂಬ ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ವಿದ್ಯುತ್ ಉಳಿತಾಯಕ್ಕಾಗಿ ಎಐ ಬಳಕೆ ಜುಲೈ 11ರಿಂದ ಪ್ರಾಯೋಗಿಕವಾಗಿ ಆರಂಭವಾಗಿದೆ. ಆರು ತಿಂಗಳ ನಂತರ ಸ್ಪಷ್ಟ ಚಿತ್ರಣ ಸಿಗಲಿದೆ' ಎಂದು ಜಾರ್ಜ್ ತಿಳಿಸಿದರು. ವಂಚನೆ ಆರೋಪ ಎದುರಿಸುತ್ತಿರುವ ಕ್ಯೂನೆಕ್ಸ್ಟ್ ಕಂಪನಿ ಜತೆ ಟೆಂಡರ್ ಪ್ರಕ್ರಿಯೆ ಇಲ್ಲದೆ ಒಪ್ಪಂದ ಮಾಡಿಕೊಂಡಿರುವ ಕುರಿತ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, 'ಆರೋಪದ ಕುರಿತು ನಮಗೆ ಮಾಹಿತಿ ಇಲ್ಲ. ನಾವು ಆ ಕಂಪನಿಯಿಂದ ದತ್ತಾಂಶಗಳನ್ನು ಮಾತ್ರ ಪಡೆಯುತ್ತೇವೆ. ಆರೋಪದ ಕುರಿತು ಪರಿಶೀಲಿಸಿ, ನಿರ್ಧಾರಕ್ಕೆ ಬರುತ್ತೇವೆ' ಎಂದರು.

ಸಂಕ್ಷಿಪ್ತ ಸುದ್ದಿ

ಒಂದೆರಡು ದಿನದಲ್ಲಿ ನೀಟ್– ಸಿಇಟಿ ವೇಳಾಪಟ್ಟಿ ಪ್ರಕಟ

ಚಿಂತಾಮಣಿ: ಒಂದೆರಡು ದಿನಗಳಲ್ಲಿ ಸಿಇಟಿ ಕೌನ್ಸೆಲಿಂಗ್ ವೇಳಾಪಟ್ಟಿ ಪ್ರಕಟಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದ್ದಾರೆ.

ತಾಲ್ಲೂಕಿನ ವೈಜಕೂರಿನಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ನೀಟ್ ಕೌನ್ಸೆಲಿಂಗ್ ವೇಳಾಪಟ್ಟಿ ಸೋಮವಾರ ಪ್ರಕಟವಾಗಿದ್ದು, ಆ.14 ರಿಂದ ಕೌನ್ಸೆಲಿಂಗ್ ಆರಂಭವಾಗಲಿದೆ. ಅಕ್ಟೋಬರ್ ಅಂತ್ಯದವರೆಗೂ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಇದನ್ನು ಗಮನದಲ್ಲಿ ಇಟ್ಟುಕೊಂಡು ಉನ್ನತ ಶಿಕ್ಷಣ ಇಲಾಖೆ ಸಿಇಟಿ ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ಪ್ರಕಟಿಸಲಿದೆ ಎಂದರು. ಕೋವಿಡ್ ವರ್ಷಗಳಲ್ಲಿ ಸಿಇಟಿ ಕೌನ್ಸೆಲಿಂಗ್ ವೇಳಾಪಟ್ಟಿ ತಡವಾಗುತ್ತಿತ್ತು. ಇದರಿಂದ ಶೈಕ್ಷಣಿಕ ವರ್ಷವೂ ತಡವಾಗಿ ಆರಂಭವಾಗುತ್ತಿತ್ತು. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿತ್ತು. ಈ ವರ್ಷ ಎಲ್ಲ ಪರೀಕ್ಷೆಗಳನ್ನು ಮುಂಚೆ ಮುಗಿಸಿಕೊಂಡು ಆಗಸ್ಟ್ ವೇಳೆಗೆ ಕಾಲೇಜು ಆರಂಭಿಸಲು ಸಿದ್ಧತೆ ಮಾಡಿಕೊಂಡಿದ್ದೆವು. ಆದರೆ ಕೇಂದ್ರ ನೀಟ್ ಕೌನ್ಸೆಲಿಂಗ್ ವೇಳಾಪಟ್ಟಿ ತಡವಾದ ಕಾರಣ ರಾಜ್ಯದ ಸಿಇಟಿ ಕೌನ್ಸೆಲಿಂಗ್ ಸಹ ತಡವಾಗಿದೆ ಎಂದು ತಿಳಿಸಿದರು.

ಧರ್ಮಸ್ಥಳದ ವತಿಯಿಂದ 1030 ಅತಿಥಿ ಶಿಕ್ಷಕರ ನೇಮಕ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನದೀಪ ಶಿಕ್ಷಣ ಕಾರ್ಯಕ್ರಮದಡಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರ ಕೊರತೆ ಇರುವ ಗ್ರಾಮೀಣ ಶಾಲೆಗಳಿಗೆ 1,030 ಅತಿಥಿ ಶಿಕ್ಷಕರನ್ನು ನೇಮಿಸಲಾಗಿದೆ ಎಂದು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್ ಕುಮಾರ್ ಎಸ್.ಎಸ್. ತಿಳಿಸಿದ್ದಾರೆ.

ಈ ಶಿಕ್ಷಕರಿಗೆ ಧರ್ಮಸ್ಥಳದ ಯೋಜನೆಯ ವತಿಯಿಂದಲೇ ತಿಂಗಳ ಗೌರವಧನ ನೀಡಲಾಗುತ್ತಿದೆ. 30 ವರ್ಷಗಳ ಹಿಂದೆ ಜ್ಞಾನದೀಪ ಶಿಕ್ಷಣ ಕಾರ್ಯಕ್ರಮ ಆರಂಭಿಸಿದ್ದು, ಶಿಕ್ಷಕರ ಗೌರವಧನಕ್ಕಾಗಿ ಇದುವರೆಗೆ ₹21.33 ಕೋಟಿ ವಿನಿಯೋಗಿಸಲಾಗಿದೆ ಎಂದರು.

ವಿಷ ಸೇವಿಸಿದ್ದ ಯಕ್ಷಗಾನ ಕಲಾವಿದ ಸಾವು



ಗುರುಪ್ರಸಾದ್

ಬ್ರಹ್ಮಾವರ (ಉಡುಪಿ): ವಿಷ ಸೇವಿಸಿದ್ದ ಯಕ್ಷಗಾನ ಯುವ ಕಲಾವಿದ ಗುರುಪ್ರಸಾದ ನೀರ್ಜೆಡ್ಡು (26) ಅವರು ಮಂಗಳವಾರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಜುಲೈ 27ರಂದು ಇಲಿ ಪಾಷಾಣ ಸೇವಿಸಿ, ಅಸ್ವಸ್ಥರಾಗಿದ್ದ ಅವರನ್ನು ಉಡುಪಿಯ ಅಜ್ಜರಕಾಡು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಮಂದಾರ್ತಿ, ಮಡಾಮಕ್ಕಿ, ಅಮೃತೇಶ್ವರಿ, ಸಾಲಿಗ್ರಾಮ ಹಾಗೂ ಮಾರಣಕಟ್ಟೆ ಮೇಳಗಳಲ್ಲಿ ಸುಮಾರು 12 ವರ್ಷ ಸ್ತ್ರೀವೇಷಧಾರಿಯಾಗಿದ್ದರು.

ಮಂದಾರ್ತಿ ಯಕ್ಷಗಾನ ತರಬೇತಿ ಕೇಂದ್ರದಲ್ಲಿ ಹಾರಾಡಿ ರಮೇಶ ಗಾಣಿಗರಿಂದ ಯಕ್ಷಗಾನ ನೃತ್ಯಾಭ್ಯಾಸ ಮಾಡಿದ್ದರು. ಭರವಸೆಯ ಕಲಾವಿದರಾಗಿದ್ದ ಅವರು ಮುಂದಿನ ತಿರುಗಾಟಕ್ಕೆ ಹಾಲಾಡಿ ಮೇಳಕ್ಕೆ ನೇಮಕಗೊಂಡಿದ್ದರು.

ಅವರಿಗೆ ತಾಯಿ ಹಾಗೂ ತಮ್ಮ ಇದ್ದಾರೆ.

ಸುಧಾ, ಮಯೂರ ಓದಿರಿ

ಉದ್ಯೋಗ ವಾಣಿ



ಸುಭಾಷಿತ

ಈ ಪ್ರಪಂಚದಲ್ಲಿ ಒಳ್ಳೆಯದನ್ನೆಲ್ಲ ಹೇಳಿ ಆಗಿದೆ. ಉಳಿದಿರುವುದು ಆಚರಣೆ ಮಾತ್ರ.

-ಸಿದ್ಧೇಶ್ವರ ಸ್ವಾಮೀಜಿ

ಇ–ಸ್ವತ್ತು ಹೊಸ ತಂತ್ರಾಂಶ ಪಂಚಾಯಿತಿ ಮೇಲಿನ ವಿಶ್ವಾಸ ಹೆಚ್ಚಲಿ

ರಾಜ್ಯದ ಗ್ರಾಮೀಣ ಪ್ರದೇಶಗಳು ಮತ್ತು ನಗರ ಪ್ರದೇಶಗಳ ಹೊರವಲಯಗಳಲ್ಲಿ ಅನಧಿಕೃತ ಬಡಾವಣೆಗಳ ನಿರ್ಮಾಣ ಕೆಲವು ದಶಕಗಳಿಂದ ವ್ಯಾಪಕವಾಗಿ ಹೆಚ್ಚುತ್ತಿದೆ. ಭೂಪರಿವರ್ತನೆಯ ಆದೇಶ ಪಡೆಯದೆ ಮತ್ತು ಸಕ್ಷಮ ಪ್ರಾಧಿಕಾರಗಳಿಂದ ನಕ್ಷೆಗೆ ಅನುಮೋದನೆ ಪಡೆಯದೆ ಬಡಾವಣೆ ನಿರ್ಮಿಸುವ ರಿಯಲ್ ಎಸ್ಟೇಟ್ ಉದ್ಯಮಿಗಳು, ಇ-ಸ್ವತ್ತು ದಾಖಲೆ ನೀಡುವ ವ್ಯವಸ್ಥೆಯಲ್ಲಿನ ನ್ಯೂನತೆಗಳನ್ನೇ ಬಂಡವಾಳ ಮಾಡಿಕೊಂಡು ನಿವೇಶನಗಳನ್ನು ಮಾರಾಟ ಮಾಡುತ್ತಿದ್ದಾರೆ. ಪೂರಕ ದಾಖಲೆಗಳ ಕೊರತೆಯ ಮಧ್ಯೆಯೂ ಇ-ಸ್ವತ್ತು ದಾಖಲೆ ಪಡೆಯಲು ಇರುವ ಅವಕಾಶವನ್ನು ಈ ರೀತಿ ಬಡಾವಣೆ ನಿರ್ಮಿಸುವವರು ದೊಡ್ಡ ಪ್ರಮಾಣದಲ್ಲಿ ದುರ್ಬಳಕೆ ಮಾಡಿಕೊಂಡಿದ್ದಾರೆ. ನಿಯಮಾನುಸಾರ ಅನುಮತಿಯನ್ನೇ ಪಡೆಯದೆ ಅನಧಿಕೃತವಾಗಿ ನಿರ್ಮಾಣ ಮಾಡಿದ ಬಡಾವಣೆಗಳಲ್ಲಿನ ನಿವೇಶನಗಳನ್ನು ಮಾರಾಟ ಮಾಡುವುದನ್ನು ತಡೆಯಲು ಅಂತಹ ಆಸ್ತಿಗಳ ನೋಂದಣಿ ನಿಯಂತ್ರಿಸುವಂತೆ ಹೈಕೋರ್ಟ್ 2012ರ ಜುಲೈನಲ್ಲಿ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಕೃಷಿಯೇತರ ಆಸ್ತಿಗಳಿಗೆ ಇ-ಸ್ವತ್ತು ದಾಖಲೆಗಳನ್ನು ನೀಡುವ ವ್ಯವಸ್ಥೆಯನ್ನು 2013ರ ಜೂನ್‌ನಲ್ಲಿ ಜಾರಿಗೆ ತರಲಾಗಿತ್ತು. ಇದಕ್ಕಾಗಿಯೇ ತಂತ್ರಾಂಶವೊಂದನ್ನು ರೂಪಿಸಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಅದರ ಮೂಲಕವೇ ಇ-ಸ್ವತ್ತು ದಾಖಲೆಯನ್ನು ಸೃಜಿಸಿ, ಸಂಬಂಧಿಸಿದವರಿಗೆ ನೀಡಲು ಅವಕಾಶ ಕಲ್ಪಿಸಿತ್ತು. ಆದರೆ, ಇ-ಸ್ವತ್ತು ತಂತ್ರಾಂಶದಲ್ಲಿನ ನ್ಯೂನತೆಗಳು ಅನಧಿಕೃತ ಬಡಾವಣೆಗಳನ್ನು ನಿರ್ಮಿಸುವವರಿಗೆ ವರದಾನವಾಗಿ ಪರಿಣಮಿಸಿದ್ದವು. ಆಸ್ತಿಯ ಮೂಲ, ತೆರಿಗೆ ಪಾವತಿ ಮಾಹಿತಿ, ಆಸ್ತಿಯ ಫೋಟೊಗಳಿಲ್ಲದೇ ಇ-ಸ್ವತ್ತು ನೀಡುವ ಅವಕಾಶ ಇತ್ತು. ಇದು ಗ್ರಾಮ ಪಂಚಾಯಿತಿಗಳಲ್ಲಿ ಇ-ಸ್ವತ್ತು ದಾಖಲೆ ನೀಡಿಕೆಯಲ್ಲಿ ಭಾರಿ ಪ್ರಮಾಣದ ಭ್ರಷ್ಟಾಚಾರಕ್ಕೂ ಬಾಗಿಲು ತೆರೆಯಿತು. ಪರಿಣಾಮವಾಗಿ ಗ್ರಾಮ ಪಂಚಾಯಿತಿಗಳು ನೀಡುವ ಇ-ಸ್ವತ್ತು ದಾಖಲೆಯನ್ನು ನಂಬಿ ಆಸ್ತಿ ಖರೀದಿಸಲು ಹೆದರುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. 11 ವರ್ಷಗಳಾದರೂ ಇ-ಸ್ವತ್ತು ತಂತ್ರಾಂಶದಲ್ಲಿನ ನ್ಯೂನತೆ, ಗೊಂದಲಗಳಿಗೆ ಪರಿಹಾರ ದೊರಕಿರಲಿಲ್ಲ. ಇದರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅನಧಿಕೃತ ಬಡಾವಣೆಗಳ ನಿರ್ಮಾಣ, ಅವುಗಳಲ್ಲಿನ ಆಸ್ತಿಗಳ ಮಾರಾಟ ಸಲೀಸಾಗಿ ಮುಂದುವರಿದಿತ್ತು.



ಇ-ಸ್ವತ್ತು ದಾಖಲೆ ನೀಡಿಕೆ ವ್ಯವಸ್ಥೆ ದುರ್ಬಳಕೆ ಆಗದಂತೆ ಬಿಗಿಯಾದ ನಿಗಾ ಇರಿಸಬೇಕು

ಇ-ಸ್ವತ್ತು ದಾಖಲೆ ನೀಡಿಕೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸುವುದಕ್ಕಾಗಿ ಹೊಸ ತಂತ್ರಾಂಶವನ್ನು ರೂಪಿಸಿದ್ದು, ಸದ್ಯದಲ್ಲೇ ಅದರ ಬಳಕೆ ಆರಂಭವಾಗಲಿದೆ. ಆಸ್ತಿಗಳ ಮಾಲೀಕತ್ವ ಲಭಿಸಿದ ಬಗೆ, ತೆರಿಗೆ ಪಾವತಿ ಮತ್ತು ಬಾಕಿ, ಭೂ ಪರಿವರ್ತನೆ ಹಾಗೂ ಬಡಾವಣೆ ನಕ್ಷೆ ಅನುಮೋದನೆಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದರೆ ಮಾತ್ರವೇ ಹೊಸ ತಂತ್ರಾಂಶದಲ್ಲಿ ಇ-ಸ್ವತ್ತು ದಾಖಲೆ ಸೃಜಿಸಲು ಅವಕಾಶವಿದೆ. ಆಸ್ತಿಯ ಫೋಟೊ ಒದಗಿಸುವುದನ್ನೂ ಕಡ್ಡಾಯಗೊಳಿಸಲಾಗಿದೆ. ಈ ಕ್ರಮದಿಂದ ಗ್ರಾಮೀಣ ಪ್ರದೇಶಗಳಲ್ಲಿ ಭೂ ಪರಿವರ್ತನೆ ಮತ್ತು ನಕ್ಷೆ ಅನುಮೋದನೆ ಇಲ್ಲದೆ ಅನಧಿಕೃತ ಬಡಾವಣೆಗಳನ್ನು ನಿರ್ಮಿಸುವುದನ್ನು ನಿಯಂತ್ರಿಸಲು ಸಾಧ್ಯವಾಗಲಿದೆ. ಅಂತಹ ಆಸ್ತಿಗಳಿಗೆ ಇ-ಸ್ವತ್ತು ದಾಖಲೆ ಸೃಜಿಸಲು ಸಾಧ್ಯವಾಗದೇ ಇದ್ದರೆ, ಅವುಗಳನ್ನು ಮಾರುವುದಕ್ಕೂ ಅವಕಾಶ ದೊರಕದು. ಆಗ ಅನಧಿಕೃತ ಬಡಾವಣೆಗಳೂ ನಿರ್ಮಾಣ ಆಗಲಾರವು. ಆಸ್ತಿಗಳ ಮೇಲಿನ ವ್ಯಾಜ್ಯ, ಸಾಲ, ಕಾನೂನು ತೊಡಕುಗಳು, ಗುತ್ತಿಗೆಗೆ ನೀಡಿರುವ ಮಾಹಿತಿಯನ್ನೂ ಇ-ಸ್ವತ್ತು ದಾಖಲೆಯಲ್ಲಿ ನಮೂದಿಸುವುದು ಕಡ್ಡಾಯವಾಗಲಿದೆ. ಇದರಿಂದ ಖರೀದಿದಾರರು ಮೋಸ ಹೋಗುವ ಸಾಧ್ಯತೆ ಕಡಿಮೆಯಾಗಲಿದೆ. ಹಳೆಯ ತಂತ್ರಾಂಶದಲ್ಲಿ ಆಸ್ತಿಗಳ ವರ್ಗೀಕರಣದಲ್ಲಿ ಇದ್ದ ಸಮಸ್ಯೆಯಿಂದಾಗಿ ಕೃಷಿ ಜಮೀನಿನಲ್ಲಿ ನಿರ್ಮಿಸಿದ ಕಟ್ಟಡಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ತರುವುದು ಸವಾಲಾಗಿತ್ತು. ಇದರಿಂದ ಗ್ರಾಮ ಪಂಚಾಯಿತಿಗಳ ತೆರಿಗೆ ವರಮಾನದ ಸೋರಿಕೆ ಆಗುತ್ತಿತ್ತು. ಈಗ ಹೊಸ ತಂತ್ರಾಂಶದಲ್ಲಿ ಇಂತಹ ಕಟ್ಟಡಗಳಿಗಾಗಿಯೇ ಪ್ರತ್ಯೇಕ ಪ್ರವರ್ಗವನ್ನು ಸೃಜಿಸಲಾಗಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಜಮೀನುಗಳಲ್ಲಿರುವ ಎಲ್ಲ ಕಟ್ಟಡಗಳನ್ನೂ ಆಸ್ತಿ ತೆರಿಗೆ ವ್ಯಾಪ್ತಿಗೆ ತರಲು ಸಾಧ್ಯವಾಗಲಿದೆ.

ಈವರೆಗೆ ಬಳಕೆಯಲ್ಲಿದ್ದ ಇ-ಸ್ವತ್ತು ತಂತ್ರಾಂಶದಲ್ಲಿನ ನ್ಯೂನತೆಗಳು ಮತ್ತು ಅವುಗಳ ಪರಿಣಾಮವಾಗಿ ಉಂಟಾದ ಗೊಂದಲಗಳಿಗೆ ಹೊಸ ಇ-ಸ್ವತ್ತು ತಂತ್ರಾಂಶವು ಪರಿಹಾರ ದೊರಕಿಸುವ ಭರವಸೆ ಮೂಡಿದೆ. ತಳಮಟ್ಟದಲ್ಲಿ ಸಮಸ್ಯೆಗಳನ್ನು ಅರಿಯಲು ದೀರ್ಘಕಾಲ ಶ್ರಮವಹಿಸಿ ಇ-ಸ್ವತ್ತು ದಾಖಲೆ ನೀಡಿಕೆಯಲ್ಲಿನ ಎಲ್ಲ ನ್ಯೂನತೆಗಳಿಗೂ ಪರಿಹಾರ ಒದಗಿಸಬಹುದಾದ ತಂತ್ರಾಂಶವೊಂದನ್ನು ಅಭಿವೃದ್ಧಿಪಡಿಸಿ, ಬಳಕೆಗೆ ತಂದಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕ್ರಮ ಶ್ಲಾಘನೀಯ. ಆದರೆ, ಅನಧಿಕೃತ ಬಡಾವಣೆಗಳನ್ನು ನಿರ್ಮಿಸುವವರು ಮತ್ತು ಪಂಚಾಯಿತಿಗಳ ಅಧಿಕಾರಿವರ್ಗ ಹೊಸ ತಂತ್ರಾಂಶವನ್ನೂ ದುರ್ಬಳಕೆ ಮಾಡಲು ಯತ್ನಿಸುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು. ಇಲಾಖೆಯು ತಂತ್ರಾಂಶ ರೂಪಿಸುವಲ್ಲಿ ತೋರಿದ ಮುತುವರ್ಜಿಯನ್ನು ಅದರ ಅನುಷ್ಠಾನದಲ್ಲೂ ತೋರಬೇಕು. ಇ-ಸ್ವತ್ತು ದಾಖಲೆ ನೀಡಿಕೆ ವ್ಯವಸ್ಥೆ ದುರ್ಬಳಕೆ ಆಗದಂತೆ ಬಿಗಿಯಾದ ನಿಗಾ ಇರಿಸಬೇಕು. ಅನಧಿಕೃತ ಆಸ್ತಿಗಳಿಗೆ ಇ-ಸ್ವತ್ತು ದಾಖಲೆ ಸೃಜಿಸುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಆಗ ಗ್ರಾಮ ಪಂಚಾಯಿತಿಗಳು ನೀಡುವ ಇ-ಸ್ವತ್ತು ದಾಖಲೆಯ ವಿಶ್ವಾಸ ವೃದ್ಧಿಯಾಗುವುದರ ಜತೆಯಲ್ಲೇ ಅನಧಿಕೃತ ಬಡಾವಣೆಗಳ ನಿರ್ಮಾಣ ಹಾಗೂ ಅಲ್ಲಿನ ನಿವೇಶನಗಳ ನೋಂದಣಿಗೆ ಕಡಿವಾಣ ಬೀಳುತ್ತದೆ.

ಹುಸಿತನವನೆ ಹೊಸತನವಾಗಿಸುವ ಮಾಯಾಪ್ರಪಂಚದಾಚೆಗೊಂದು ಅನುಭವ ಮಂಟಪ ಹುಟ್ಟಲಿ

ಅರುಹಿನ ಮಥನವಾಗುವುದೇ ಮಾತು?



ವಿಶ್ಲೇಷಣೆ

ಸಬಿತಾ ಬನ್ನಾಡಿ

‘ಮಾತು ಮಾತು ಮಥಿಸಿ ಬಂತು ನಾದದ ನವನೀತ’- ಬೇಂದ್ರೆಯವರ ಈ ಸಾಲಿನಂತೆ ಮಾತು ನವನೀತವಾಗುವುದು ಒಂದು ಮುಕ್ತ ಸಂವಾದ ಸಾಧ್ಯವಾದ ಸ್ಥಿತಿಯಲ್ಲಿ ಮಾತ್ರ. ಮುಕ್ತ ಸಂವಾದವೆಂದರೆ, ಅಲ್ಲಿ ಆಡುವ ಮಾತಿಗೊಂದು ಮಾನವೀಯ ಸ್ಪರ್ಶದ ಗಹನ ಉದ್ದೇಶ ಇರಬೇಕು ಮತ್ತು ಶರಣರ ಅನುಭವ ಮಂಟಪದಂತೆ, ಅಲ್ಲಿರುವವರು ಯಾವುದೇ ವಲಯದವರಾದರೂ ಸರ್ವರಿಗೂ ಸಮಾನ ಅವಕಾಶವಿರಬೇಕು. ಕೇಳುವ ಪ್ರಶ್ನೆಗಳಿಗೆ ಎದೆಯೊಡ್ಡುವ ದಿಟ್ಟತನವಿರಬೇಕು. ಆದರೆ ಅದೇ ಸಮಯದಲ್ಲಿ ಕೇಳುವವರ ಪ್ರಶ್ನೆಯ ಬಾಣಗಳಿಗೆ ಕೊಲೆಯ ಕುಹಕವಿಲ್ಲದೆ, ಕಟ್ಟುವ, ಮಾಗುವ ಮೊನಚಿರಬೇಕು. ಹೀಗಾದಾಗ, ಆಳದ ಬಗ್ಗಡವೂ ತಿಳಿಯಾಗಿ ಜೀವಜಲ ಉಕ್ಕುತ್ತದೆ. ನವಸಮಾಜದ, ಸಮಸಮಾಜದ ಬೆಳಗು ಕಾಣಿಸಿಕೊಳ್ಳುತ್ತದೆ.

ಹೀಗೊಂದು ಸಂಚಲನ ನಮ್ಮ ಇದೇ ನೆಲದಲ್ಲಿ ಆಗಿ ಹೋಗಿದೆ. ನಾವು ಪ್ರತಿ ಬಾರಿ ಆ ಸಂಚಲನಕ್ಕೆ ಮರು ಭೇಟಿ ಕೊಟ್ಟಾಗಲೂ ಅದು ಇನ್ನೊಂದೇ ಹೊಸ ಹೊಳಹನ್ನು ನಮ್ಮೊಳಗೆ ಬೆಳಗುವಷ್ಟು ಇಂದಿಗೂ ಜೀವಂತವಾಗಿದೆ. ಸಂವಾದವೇ ಸಾಧ್ಯವಿಲ್ಲದ ಇಂದಿನ ಪರಿಸ್ಥಿತಿಯಲ್ಲಿ ವಚನಕಾರರ ನಡೆ ‘ನಿಚ್ಚಂ ಪೊಸತು’ ಎಂಬಂತೆ ದಾರಿ ತೋರುತ್ತಲೇ ಇರುತ್ತದೆ. ಸಂವಾದವು ಎಂತೆಂತಹ ಜೀವದಾಯಿ ಚಿಂತನೆಗಳನ್ನು ಹೊಮ್ಮಿಸಬಹುದು ಎಂಬುದಕ್ಕೆ ಅಲ್ಲಿ ಹಲವು ಕುರುಹುಗಳಿವೆ.

ಸಂವಾದ ಸಾಧ್ಯವಾಗುವುದೆಂದರೆ ಅದಕ್ಕೆ ಪೂರ್ವಭಾವಿಯಾಗಿ ನಮಗೆ ಕಲಿಯುವ, ತಿಳಿಯುವ ಮನಸ್ಸು, ಶ್ರದ್ಧೆ ಮತ್ತು ಇತರರು ತಿಳಿದುಕೊಂಡಿರುವುದರ ಬಗೆಗೆ ಪ್ರಾಮಾಣಿಕ ನಂಬಿಕೆ ಇರಬೇಕಾಗುತ್ತದೆ. ಕೇಳಿಸಿಕೊಳ್ಳದೇ ಹೇಳುವುದರೆಡೆಗೆ ಮಾತ್ರ ಗಮನವಿದ್ದರೆ ಮಾತು ಬರೀ ಸದ್ದಾಗಿರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ತಾವು ಕುಳಿತ ಜಾಗವು ಹೇಳುವುದಕ್ಕಾಗಿ ಮಾತ್ರ ಇರುವುದು, ಕೇಳುವುದಕ್ಕಲ್ಲ ಎಂಬಂತೆ ಅಧಿಕಾರವನ್ನು ತಮಗೆ ತಾವೇ ಕೊಟ್ಟುಕೊಳ್ಳುವ ನಡೆಯನ್ನು ಇಂದು ಸಾಮಾನ್ಯಗೊಳಿಸಲಾಗುತ್ತಿದೆ. ಹೇಳುವವನು/ ಕೇಳುವವನು ಎಂಬ ದ್ವಿದಾಭಾವವನ್ನು ಆಳುವವನು/ ಆಳಿಸಿಕೊಳ್ಳುವವನು ಎಂಬಂತೆ ಅರ್ಥೈಸಿಕೊಳ್ಳಲಾಗುತ್ತಿದೆ.

ಗುಲಾಮಗಿರಿಯ ಭಾವವು ನಮ್ಮ ಅಂತರಾಳವನ್ನೇ ಅಡಗುತಾಣವನ್ನಾಗಿಸಿಕೊಂಡಿದೆ. ಈ ಕಾರಣದಿಂದಲೇ ವಾದ ಮತ್ತು ಆಕ್ರಮಣಗಳು ಸಂವಾದದ ಜಾಗವನ್ನು ನಾಶ ಮಾಡುತ್ತಿವೆ. ಮೇಲ್ನೋಟಕ್ಕೆ ಚರ್ಚೆ ಎಂಬ ಹೆಸರು ಇದೆಯೇ ವಿನಾ ಆಗುತ್ತಿರುವುದು ಚರ್ಚೆಯ ಹೆಸರಿನಲ್ಲಿ ಆಕ್ರಮಣವಷ್ಟೇ. ಕೆಲವು ಟಿ.ವಿ. ಚಾನೆಲ್‌ಗಳು ಟಿಆರ್‌ಪಿಗಾಗಿ ಆರಂಭಿಸಿದ ಈ ಮಾದರಿ ಇಂದು ಸಾಮಾಜಿಕ ಮಾಧ್ಯಮಗಳಿಗೂ ಹಬ್ಬಿ, ವ್ಯಕ್ತಿಗತ ನೆಲೆಯಲ್ಲಿಯೂ ದಾಳಿ ಮಾಡುವುದೇ ವಾದದ ಲಕ್ಷಣವಾಗಿ ಹೋಗಿದೆ. ಅಷ್ಟೇ ಅಲ್ಲ, ಇದು ಇಬ್ಬರು ವ್ಯಕ್ತಿಗಳಿಂದ ಹಿಡಿದು ಸಂಸತ್ತಿನ ತನಕವೂ ಸುಳ್ಳೋ ಪಳ್ಳೋ, ಏನಾದರೂ ಸರಿ ತಮ್ಮ ಸಮರ್ಥನೆ, ಎದುರಿರುವವರ ಮೇಲಿನ ಆಕ್ರಮಣ ಎಂಬ ವಿಕ್ಷಿಪ್ತ ಮಾದರಿಯನ್ನು ಹುಟ್ಟುಹಾಕಿದೆ. ಇದರ ಫಲಿತ ಏನು? ಈ ಬಗ್ಗೆ ಚಿಂತಿಸುತ್ತಿದ್ದೇವೆಯೇ?

ಇದೆಲ್ಲ ಎಷ್ಟು ನಿಸ್ಸಾರ ಎಂಬುದು ಅರಿವಾಗುವಂತೆ ವಚನಕಾರರ ಚರ್ಚೆಗಳು ನಡೆಯುತ್ತಿದ್ದವು. ಅಲ್ಲಿ ಯಾರೂ ಸ್ವಸಮರ್ಥನೆ ಮಾಡಿಕೊಳ್ಳುತ್ತಿರಲಿಲ್ಲ. ವರ್ಗ, ಜಾತಿ, ಲಿಂಗವನ್ನು ಗಣನೆಗೆ ತೆಗೆದುಕೊಳ್ಳದೆ ಪ್ರತಿಯೊಬ್ಬರ ಮಂಡನೆಗೂ ಅವಕಾಶ ಮಾತ್ರವಲ್ಲ, ತಮಗಿಂತ ಭಿನ್ನ ನೆಲೆಯ ಆರೋಗ್ಯಕರ ಚಿಂತನೆಗೆ ಮನ್ನಣೆಯೂ ಇದ್ದುದರಿಂದ ಅದು ಹಲವು ಹೊಸ ಹೊಳಹುಗಳನ್ನು ಹುಟ್ಟಿಸಲು ಸಾಧ್ಯವಾಯಿತು. ಒಂದು ಉದಾಹರಣೆ ನೋಡೋಣ. ಸಾಮಾಜಿಕ ವಲಯದಲ್ಲಿ ಮನ್ನಣೆ ಪಡೆದ ವರ್ಗದಿಂದ ಬಂದ ಬಸವಣ್ಣ ‘ಕಾಯವೇ ಕೈಲಾಸ’ ಎನ್ನುತ್ತಾ ದೇವಾಲಯವು ದೇಹದ ಹೊರಗಿಲ್ಲ ಒಳಗಿದೆ ಎಂಬ ಮಂಡನೆ ಮಾಡುತ್ತಾನೆ. ಆದರೆ ಸಾಮಾಜಿಕ ವಲಯದಲ್ಲಿ ತಮ್ಮ ಇರುವಿಗಷ್ಟೇ ಮನ್ನಣೆ ಪಡೆಯದ ಶ್ರಮಜೀವಿ ಆಯ್ದಕ್ಕಿ ಮಾರಯ್ಯ ‘ಕಾಯಕವೇ ಕೈಲಾಸ’ ಎನ್ನುತ್ತಾ ಸರ್ವರನ್ನೂ ಒಳಗೊಳ್ಳುವ, ದುಡಿದುಣ್ಣುವುದನ್ನು ಉನ್ನತೀಕರಿಸುವ ಮಹಾನ್ ಚಿಂತನೆಯೊಂದಕ್ಕೆ ನಾಂದಿಯಾಗುತ್ತಾನೆ (ಆದರೆ ಇಂದಿಗೂ ಹಲವರು ಮಾರಯ್ಯನ ಸಾಲನ್ನು ಬಸವಣ್ಣನ ಸಾಲೆಂದು ತಪ್ಪಾಗಿ ಓದಿಕೊಂಡಿರುವುದು ಬೇರೆ ವಿಷಯ).

ಇದು ಲಿಂಗತಾರತಮ್ಯದ ವಿಷಯದಲ್ಲೂ ಯೋಚಿಸಬೇಕಾದ ನಡೆಯಾಗಿದೆ. ಮಣಿಪುರದ ದುಃಸ್ಥಿತಿಯ ಬಗೆಗೆ ಅಲ್ಲಿನ ಸಂಸದರೊಬ್ಬರು ಸಂಸತ್ತಿನಲ್ಲಿ ಭಾವುಕವಾಗಿ ಪ್ರಶ್ನೆ ಎತ್ತಿದರು. ಈ ಸಂದರ್ಭದಲ್ಲಿ ಮಾಡುವ ಚರ್ಚೆಯು ಅಂತಹ ಸಂಗತಿಗಳು ಇನ್ನೆಲ್ಲೂ ಮರುಕಳಿಸದಂತೆ ನಿಗಾ ವಹಿಸುವುದರತ್ತ ಕೇಂದ್ರೀಕರಿಸಿಕೊಂಡಿರಬೇಕಿತ್ತು. ಎರಡು ಕೋಮುಗಳ ನಡುವಿನ ಸಂಘರ್ಷವು ಅಲ್ಲಿನ ಮಹಿಳೆಯರನ್ನು ಆಕ್ರಮಿಸುವಂತೆ ಯಾಕೆ ಪ್ರಚೋದಿಸುತ್ತಿದೆ ಎಂಬ ಬಗ್ಗೆ ಅತ್ಯಂತ ಜವಾಬ್ದಾರಿಯುತವಾಗಿ ಎಲ್ಲ ಪಕ್ಷಗಳ ಸಂಸದರೂ ಚಿಂತಿಸಬೇಕಾಗಿತ್ತು. ಆದರೆ ಚರ್ಚಿಸಲು ಸಾಧ್ಯವಾಯಿತೇ? ಶಾಸನ ಮಾಡುವವರಿಗೆ ಇಲ್ಲದ ಗಾಂಭೀರ್ಯ ಅವರನ್ನು ಅನುಸರಿಸುವವರಿಗೆ ಬರುವುದು ಹೇಗೆ ಸಾಧ್ಯ? ಬದಲಿಗೆ ನಾವು ‘ಅಲ್ಲಿ ಮಾತ್ರ ಆಗಿದ್ದೇ? ಬೇರೆ ಪಕ್ಷಗಳು ಆಳುವಲ್ಲಿ ಆಗುತ್ತಿಲ್ಲವೇ?’ ಎಂಬ ಮರುದಾಳಿಗೆ ಹೊರಡುತ್ತೇವೆ.

ಅಮಾನುಷ ಘಟನೆಗಳನ್ನು ತಡೆಯುವ ದಾರಿಗಳನ್ನು ಚರ್ಚಿಸುವುದರೆಡೆಗೆ ಮಹಿಳಾ ಸಂಸದರನ್ನೂ ಸೇರಿಸಿಕೊಂಡು ಆಳುವವರೆಲ್ಲರಲ್ಲೂ ತೀವ್ರ ನಿರಾಸಕ್ತಿ ಕಾಣಿಸುತ್ತದೆ. ಮಾನಸಿಕ ಪಿತೃಪ್ರಧಾನ ನಡೆಯ ಫಲವಾದ ಇಂತಹ ಚಿಂತನೆಗಳು ವ್ಯಾಪಿಸುತ್ತಿರುವ ದುರಂತವನ್ನು ಈಗಲೇ ತಡೆಯಬೇಕಿದೆ. ಹೆಂಗಸರೂ ಧ್ರುವೀಕರಣ ರಾಜಕಾರಣದ ಪಿತೂರಿಗೆ ಬಲಿಯಾಗಿ ತಮ್ಮೊಳಗೆ ಒಡಕುಗಳನ್ನು ಪೋಷಿಸಿ, ಬೆಳೆಸಿಕೊಳ್ಳುತ್ತಾ ಹಾಗೆ ಮಾಡುವವರಿಗೆ ಬುದ್ಧಿ ಹೇಳುವುದಕ್ಕೂ ಅರ್ಹತೆಯನ್ನು ಕಳೆದುಕೊಳ್ಳುತ್ತಾರೆ ಎಂದಾದರೆ, ಅಂತಹ ಪ್ರಕರಣಗಳು ಆದಾಗ ಬರೀ ಆಘಾತ ವ್ಯಕ್ತಪಡಿಸುವುದಕ್ಕೆ ಅವರಿಗೆ ಯಾವ ಹಕ್ಕೂ ಇರುವುದಿಲ್ಲ. ಅಂತಹ ಬಳಸು ದಾರಿಗಳನ್ನು ಬಿಟ್ಟು ಗಂಡುಮಕ್ಕಳ ಜೊತೆಗೆ ಹೆಚ್ಚೆಚ್ಚು ಸಂವಾದವನ್ನು ಮಾಡಬೇಕಾಗಿದೆ.




ಗಂಡಸರೂ ಹೆಂಗಸರೂ ಮುಕ್ತವಾಗಿ ಚರ್ಚಿಸುವ ಅವಕಾಶವಿದ್ದ ವಚನ ಪರಂಪರೆಯಲ್ಲಿ ಎಲ್ಲ ವಲಯದ ಮಹಿಳೆಯರೂ ನೇರವಾಗಿ, ನಿಷ್ಠುರವಾಗಿ ಆಡುತ್ತಿದ್ದ ಮಾತುಗಳು ಅಲ್ಲಿನ ಪುರುಷರ ಚಿಂತನೆಯನ್ನು ಬದಲಿಸಿ ದ್ದಕ್ಕೆ ದಾಖಲೆಗಳಿವೆ. ಎಲ್ಲಕ್ಕಿಂತ ಹೆಚ್ಚಾಗಿ, ‘ಗಂಡುತನ ಮತ್ತು ಹೆಣ್ಣುತನವು ಮಾನವ ಗುರುತುಗಳೇ ಅಲ್ಲ. ಅವು ಬರೀ ಸಾಂಸ್ಕೃತಿಕ ರಚನೆಗಳು’ ಎಂಬ ಕೇಟ್‌ಮಿಲೆಟ್‌ರ ಮಾತುಗಳನ್ನು ನೆನಪಿಸುವಂತಿರುವ ಅಕ್ಕಮಹಾದೇವಿಯ ವಚನವೊಂದನ್ನು ನಾವಿನ್ನೂ ಸರಿಯಾಗಿ ಕೇಳಿಸಿಕೊಂಡೇ ಇಲ್ಲ. ‘ಗಂಡ ಮನೆಯೊಡೆಯನೆಂದು ಹೇಳಿದರೆ ಆಗ ಹೆಂಡತಿ ಸೇವಕಿ ಎನಿಸುತ್ತಾಳೆ. ಹೆಂಡತಿ ಮನೆಯೊಡತಿಯೆಂದು ಹೇಳಿದರೆ ಆಗ ಗಂಡ ಸೇವಕನಾಗುತ್ತಾನೆ. ಆಗ ಅವರ ನಡುವೆ ಗಂಡ ಹೆಂಡತಿಯ ಸಂಬಂಧ ಇರುವುದೇ ಇಲ್ಲ. ಹೀಗಾಗಿ, ಒಡೆಯರೆಂಬ ಭಾವವನ್ನು ಇಬ್ಬರೂ ತೊರೆದರೆ ಅಲ್ಲಿ ಗಂಡ ಹೆಂಡಿರ ಸ್ನೇಹ, ಪ್ರೀತಿಯ ಭಾವ ಹುಟ್ಟುತ್ತದೆ’ ಎನ್ನುವ ಆಕೆ ಇಬ್ಬರ ಇರುವಿಕೆಯ ಮೌಲ್ಯವು ಸಮಾನವಾಗಿರುವುದರ ಜೊತೆಗೇ ಪ್ರೀತಿಯ ಉತ್ಕಟತೆಯನ್ನು ನಾಶ ಮಾಡುವುದು ಪರಸ್ಪರ ಆಳುವ ಗರ್ವ, ಆಕ್ರಮಣ ಎಂದು ಪ್ರತಿಪಾದಿಸುತ್ತಾಳೆ.

ಇಂತಹ ನಿಲುವುಗಳನ್ನು ಅಂದಿನ ಚರ್ಚೆಯು ಹುಟ್ಟುಹಾಕಿದೆ ಎಂದಾದರೆ, ಇಂದೇಕೆ ನಾವು ಅಂತಹ ಪ್ರಯತ್ನಗಳನ್ನು ಮಾಡಬಾರದು? ಜಗತ್ತು ಆಧುನಿಕವಾದಂತೆಯೇ ಒಂದೆಡೆ ಶೋಷಣೆ ಇನ್ನೊಂದೆಡೆ ಪರಸ್ಪರ ಅಪನಂಬಿಕೆಯ ಲೋಕವೊಂದು ನಿರ್ಮಾಣ ಆಗುತ್ತಿರುವುದು ನಮ್ಮೆಲ್ಲರ ಅನುಭವಕ್ಕೆ ಬರುತ್ತಿದೆಯಲ್ಲವೇ?

ಜಗತ್ತಿನಾದ್ಯಂತ ನಡೆದ ಹಲವು ಹೋರಾಟಗಳು, ಕ್ರಾಂತಿಗಳು, ಸಾಮಾಜಿಕ ಪಲ್ಲಟಗಳು ಮಹಿಳೆಯರನ್ನೂ ಸೇರಿಸಿಕೊಂಡು ಹತ್ತು ಹಲವು ದಮನಿತ ವರ್ಗಗಳಿಗೆ ನವ ಪಲ್ಲವಗಳಾಗಿ ಒದಗಿಬಂದವು. ಅಲ್ಲೆಲ್ಲಾ ಮಾತು ಆಡುವ, ಕೇಳಿಸಿಕೊಳ್ಳುವ ಪ್ರಕ್ರಿಯೆಯೊಂದು ಚಲಾವಣೆಯಲ್ಲಿ ಇದ್ದಿದ್ದರಿಂದ ಇವೆಲ್ಲವೂ ಹಲವು ಅಡೆತಡೆಗಳ ನಡುವೆಯೂ ಮುನ್ನೆಲೆಗೆ ಬಂದವು. ಹಾಗಾದರೆ, ಇಂದು ಮಾತಿನ ಮಥನ ಮುಗಿದು ಹೋಗಿದೆಯೇ? ಇಲ್ಲ. ಮಾತು ವ್ಯಾಪಾರಕ್ಕೆ ಕುಳಿತಿದೆ.

ನವ ಶ್ರೀಮಂತಿಕೆ, ನವ ಪಾಳೆಗಾರಿಕೆ, ನವ ಮಾನಸಿಕ ಪಿತೃಪ್ರಧಾನ ನಡೆ, ನವ ಗುಲಾಮಿತನ ತಕ್ಕಡಿ ಹಿಡಿದಿವೆ. ಇಂತಹ ತಕ್ಕಡಿ ಹಿಡಿದ ಕೈಗಳ ಒಡೆಯರೇ ಅಂದು ತಳವರ್ಗದ ಮತ್ತು ಮಹಿಳಾ ವಚನಕಾರರ ಮಾತನ್ನು ಸಹಿಸದವರು. ಇಂದಿಗೂ ಹೊಂಚು ಹಾಕುತ್ತಲೇ ಇರುವ ಅದೇ ಮಾಯಾ ಪ್ರಪಂಚಿಗಳು ಪುನಃ ತಲೆ ಎತ್ತುವ ಮೊದಲು ನವ ಅನುಭವ ಮಂಟಪಗಳು ಹುಟ್ಟಿಬರಬೇಕಾಗಿದೆ.

ಚುರುಮುರಿ



ಬಂಗಾರದ ಬೇಟೆ

• ಮಣ್ಣೆ ರಾಜು

ಶಂಕ್ರಿ, ಸುಮಿ ಒಡವೆ ಅಂಗಡಿಗೆ ಖರೀದಿಗೆ ಬಂದರು.

‘ನಿರ್ಮಲಕ್ಕನ ಬಜೆಟ್‌ನಲ್ಲಿ ಚಿನ್ನದ ಬೆಲೆ ಕುಸಿದಿದೆಯಂತೆ, ನಾಲ್ಕೈದು ಕೆ.ಜಿ. ಒಡವೆ ಕೊಳ್ಳಲು ಚೀಲ ತಂದಿದ್ದೀವಿ’ ಅಂದ ಶಂಕ್ರಿ.

‘ಕೇಜಿಗಟ್ಟಲೆ ಕೊಳ್ಳಲು ಚಿನ್ನವೇನು ಈರುಳ್ಳಿ, ಟೊಮೆಟೊನಾ ಸಾರ್? ಮೂಗಿಗಿಂತ ಮೂಗುತಿ ಭಾರ ಎನ್ನುವಂತಿದೆ ಚಿನ್ನದ ಬೆಲೆ’ ಎಂದರು ಅಂಗಡಿ ಓನರ್.

‘ಬಡವರಿಗೂ ಕೈಗೆಟಕುವಂತೆ ಚಿನ್ನಕ್ಕೂ ರಿಯಾಯಿತಿ ಕೊಡಬೇಕು’ ಸುಮಿ ಆಸೆಪಟ್ಟಳು.

‘ಒಲಿಂಪಿಕ್ಸ್‌ನಲ್ಲಿ ಆಟವಾಡಿದರೆ ಚಿನ್ನದ ಪದಕ ಗೆಲ್ಲಬಹುದು ಮೇಡಂ’ ಅಂದ್ರು ಅಂಗಡಿ ಓನರ್ ಹೆಂಡ್ತಿ.

‘ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ಸಾಧನೆ ಮಾಡಿಯೂ ಬಂಗಾರದ ಪದಕ ಗಳಿಸಬೇಕು’ ಅಂದ ಶಂಕ್ರಿ.

‘ಒಲಿಂಪಿಕ್ ಕೂಟದ ರಿಂಗ್ ಡಿಸೈನಿನ ಸರ, ಓಲೆ, ಹ್ಯಾಂಗಿಂಗ್ಸ್ ತೋರಿಸಲೇ ಮೇಡಂ?’ ಓನರ್ ಕೇಳಿದರು.

‘ಸ್ಪೋರ್ಟ್ಸ್ ಅಂದ್ರೆ ನಿಮಗೆ ಇಷ್ಟನಾ?’ ಸುಮಿ ಕೇಳಿದಳು.

‘ಹೌದು ಮೇಡಂ, ಸ್ಪೋರ್ಟ್ಸ್ ಕೋಟಾದಲ್ಲಿ ನಾನು ಇವಳನ್ನು ಮದ್ವೆಯಾದೆ’ ಓನರ್ ನಾಚಿದರು. ‘ನಮ್ಮದೊಂದು ಲವ್ ಸ್ಟೋರಿ ಇದೆ. ನಾನು ಇವಳನ್ನು ಪ್ರೀತಿಸುತ್ತಿದ್ದೆ. ಇವಳ ತಂದೆಗೆ ನಮ್ಮ ಲವ್ ಇಷ್ಟವಿರಲಿಲ್ಲ. ಒಂದಿನ ಇವಳಿಗೆ ಗುಲಾಬಿ ಹೂ ಕೊಡಲೆಂದು ಇವರ ಮನೆಗೆ ಹೋಗಿದ್ದೆ. ಇವಳ ತಂದೆ ನಾಯಿಯನ್ನು ಛೂ ಬಿಟ್ಟರು. ನಾನು ಓಡಿ ತಪ್ಪಿಸಿಕೊಂಡೆ’.

‘ಆಮೇಲೇನಾಯ್ತು?’

‘ಇವರು ಆಗ ಓಡಿದ್ದ ಸ್ಪೀಡಿನಲ್ಲಿ ಒಲಿಂಪಿಕ್ಸ್‌ನಲ್ಲಿ ಓಡಿದ್ದರೆ ಖಂಡಿತಾ ಚಿನ್ನದ ಪದಕ ಸಿಗ್ತಿತ್ತು’.

‘ಛೇ! ಅನ್ಯಾಯ...’

‘ಇವರ ಓಟ ಮೆಚ್ಚಿದ ನನ್ನ ತಂದೆ ಇವರೊಂದಿಗೆ ಮದುವೆ ಮಾಡಿಕೊಟ್ಟು, ಈ ಅಂಗಡಿಯನ್ನು ಉಡುಗೊರೆಯಾಗಿ ಕೊಟ್ಟು ನಮ್ಮ ಬಾಳನ್ನು ಬಂಗಾರ ಮಾಡಿದರು’.

‘ಹೌದು ಸಾರ್, ಅಂಗಡಿಗೆ ಇವಳೇ ಓನರ್, ನಾನು ಸ್ಪ್ಯಾನರ್’ ಓನರ್ ನಕ್ಕರು.

ದಿನದ ಟ್ವೀಟ್

ಪರಿಹಾರ ಹುಡುಕಬೇಕಿದೆ



ನವದೆಹಲಿಯಲ್ಲಿ ಅಂಜಲಿ ಎಂಬ ಹುಡುಗಿ ಕೆಲ ದಿನಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡಳು. ದೆಹಲಿಯಲ್ಲಿರುವ ಅತಿಯಾದ ಬಾಡಿಗೆ ದರ ಮತ್ತು ಪರೀಕ್ಷಾ ಹಗರಣಗಳನ್ನು ಆಕೆ ತನ್ನ ಮರಣಪತ್ರದಲ್ಲಿ ಪ್ರಸ್ತಾಪಿಸಿದ್ದಾಳೆ. ಯುವಸಮೂಹವು ಇಂತಹ ವಿಪರೀತದ ಕ್ರಮಕ್ಕೆ ಮುಂದಾಗುವುದಕ್ಕಿಂತ ಹೆಚ್ಚಿನ ಬೇಸರದ ಸಂಗತಿ ಯಾವುದೇ ದೇಶಕ್ಕೆ ಮತ್ತೊಂದಿರಲಾರದು. ಆಕೆಯ ಆತ್ಮಕ್ಕೆ ಶಾಂತಿ ಸಿಗಲಿ!

ಸಾಕ್ಷಿ

ಕಿಡಿನುಡಿ

ಪ್ರವಾಸೋದ್ಯಮದ ಹೆಸರಿನಲ್ಲಿ ಪಶ್ಚಿಮಘಟ್ಟಗಳನ್ನು ನಾಶಪಡಿಸಲಾಗಿದೆ... ಈ ಪ್ರದೇಶದಲ್ಲಿ ಏನೆಲ್ಲಾ ಘಟಿಸಿವೆ, ಅಷ್ಟಾಗಿಯೂ ಸರ್ಕಾರಗಳು ಸೂಕ್ಷ್ಮ ಪ್ರದೇಶಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವುದರಲ್ಲಿ ಮುಳುಗಿಹೋಗಿವೆ... ಮಾನವನ ಜೀವಕ್ಕೆ ಬೆಲೆಯೇ ಇಲ್ಲದಂತಾಗಿದೆ. ಹಿಂದಿನ ಬಾರಿ ಕೊಡಗು, ಇಡುಕ್ಕಿಯಲ್ಲಿ ಅವಘಡ ಸಂಭವಿಸಿತ್ತು...ದುರಂತ... ನಾವು ಪಾಠ ಕಲಿಯುವುದಿಲ್ಲ.

ಅಭಿಜೀತ್, ಎಂಜಿನಿಯರ್

25 ವರ್ಷಗಳ ಹಿಂದೆ

ಶನಿವಾರ, 31-7-1999

• **ಎನ್‌ಡಿಎ ಕೂಟಕ್ಕೆ ದಳ ವಾಜಪೇಯಿ ನಿರ್ಧಾರಕ್ಕೆ**

ನವದೆಹಲಿ, ಜುಲೈ 30– ಶರದ್ ಯಾದವ್ ನೇತೃತ್ವದ ಜನತಾದಳವನ್ನು ಸೇರಿಸಿಕೊಳ್ಳುವ ಬಗೆಗೆ ಉದ್ಭವಿಸಿರುವ ಬಿಕ್ಕಟ್ಟನ್ನು ಇತ್ಯರ್ಥಪಡಿಸಲು ನಾಳಿನ ಮಹತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ ಸಭೆಯು ಪ್ರಧಾನಿ ಮತ್ತು ಈ ಮೈತ್ರಿಕೂಟದ ಅಧ್ಯಕ್ಷರಾದ ಎ.ಬಿ. ವಾಜಪೇಯಿ ತೀರ್ಮಾನಕ್ಕೆ ಬಿಡುವ ಸಂಭವ ಹೆಚ್ಚಾಗಿ ಕಾಣುತ್ತಿದೆ.

ಜನತಾದಳ ಸೇರ್ಪಡೆಗೆ ಬಹುತೇಕವಾಗಿ ಒಪ್ಪಿಗೆ ಸಿಗುವ ಸಂಭವ ಇದೆಯಾದರೂ, ಸ್ಪಷ್ಟ ನಿರ್ಧಾರ ಆಗಸ್ಟ್ 3ರ ನಂತರ ಪ್ರಕಟವಾಗುವ ಸಾಧ್ಯತೆ ಹೆಚ್ಚಿದೆ.

ನಿಜವಾದ ದಳ ಯಾವುದು ಎಂಬ ಬಗೆಗೆ ಚುನಾವಣಾ ಆಯೋಗವು ಆಗಸ್ಟ್ 3ರ ನಂತರ ತನ್ನ ತೀರ್ಮಾನ ನೀಡುವುದನ್ನು ಕಾಯಲು ಬಿಜೆಪಿ ಮತ್ತು ಎನ್‌ಡಿಎಯ ಇತರೆ ನಾಯಕರು ಪರಿಶೀಲಿಸುತ್ತಿರುವುದಾಗಿ ಹೇಳಲಾಗುತ್ತಿದೆ.

• **ಮನೆಗೆ ನುಗ್ಗಿ ಡಕಾಯಿತಿ– ಒಂದೇ ಕುಟುಂಬದ ನಾಲ್ವರ ಕಗ್ಗೊಲೆ**

ಚಿಕ್ಕಮಗಳೂರು, ಜುಲೈ 30– ಪತಿ–ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಕೊಂದು ಸುಟ್ಟು ಹಾಕಿದ ಅಮಾನುಷ ಕೃತ್ಯ ಗುರುವಾರ ರಾತ್ರಿ ತರೀಕೆರೆ ಸಮೀಪ ನಡೆದಿದೆ.

ಐದಾರು ಮಂದಿ ಅಪರಿಚಿತರು ರಾತ್ರಿ ಸುಮಾರು 1.30ರ ವೇಳೆಗೆ ಮನೆ ಹೆಂಚು ತೆಗೆದು ಒಳನುಗ್ಗಿ ಬೀರುವನ್ನೆಲ್ಲ ಒಡೆದು ಚೆಲ್ಲಾಡಿ ನಗ–ನಾಣ್ಯಗಳನ್ನು ದೋಚಿದ್ದಾರೆ.

ಪ್ರಕಾಶ್ (40), ಪತ್ನಿ ಮಂಗಳಾ (32), ಮಕ್ಕಳಾದ ಮಧು (8) ಮತ್ತು ಸೌಮ್ಯ (6) ಎಂಬುವರನ್ನು ಕೊಂದು ಹಾಕಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 31-7-1974

• **ಕೆಲ ರಾಜ್ಯಗಳಲ್ಲಿ ತುಂಬು ಪ್ರವಾಹ: ಒಟ್ಟು 73 ಸಾವು**

ನವದೆಹಲಿ, ಜುಲೈ 30– ರಾಷ್ಟ್ರದ ವಿವಿಧ ಕಡೆ ನದಿ ಪ್ರವಾಹದ ವಿಕೋಪಕ್ಕೆ ಮಂಗಳವಾರ ಒಟ್ಟು 73 ಜನ ಬಲಿಯಾದರು.

ಕೇರಳ, ಅಸ್ಸಾಂ, ಬಿಹಾರ, ಪಶ್ಚಿಮ ಬಂಗಾಳ ಹಾಗೂ ಉತ್ತರಪ್ರದೇಶದ ನದಿಗಳ ನೀರಿನ ಮಟ್ಟ ಏರುತ್ತಲೇ ಇದೆ.

ಅತ್ಯಂತ ಹೆಚ್ಚು ಜನರು ಪ್ರವಾಹಕ್ಕೆ ಬಲಿಯಾಗಿದ್ದು ಕೇರಳದಲ್ಲಿ. ಅಲ್ಲಿ ಒಟ್ಟು 37 ಜನ ಸತ್ತಿದ್ದಾರೆ. ಅಸ್ಸಾಂನಲ್ಲಿ 29 ಜನ ಹಾಗೂ ಬಿಹಾರದಲ್ಲಿ 7 ಮಂದಿ ನೀರಿಗೆ ಬಲಿಯಾದರು.

• **ಕೋಟೆಕಾರ್ ಬಳಿ ರೈಲು ದರೋಡೆ**

ಕೋಟೆಕಾರ್, ಜುಲೈ 30– ಸುಮಾರು 90 ಮಂದಿ ಇದ್ದ ಶಸ್ತ್ರಸಜ್ಜಿತ ದರೋಡೆಕೋರರ ತಂಡವೊಂದು ಜುಲೈ 28ರ ರಾತ್ರಿ, ಇಲ್ಲಿಗೆ ಎರಡು ಮೈಲಿ ದೂರದ ಕೊಕ್ಕೊಟ್ಟು ಬಳಿ ಕಾಸರಗೋಡಿಗೆ ಹೋಗುತ್ತಿದ್ದ ರೈಲನ್ನು ತಡೆಹಿಡಿದು, ಅನೇಕ ಮಂದಿ ಪ್ರಯಾಣಿಕರ ವಸ್ತುಗಳೆಲ್ಲವನ್ನೂ ಕಸಿದುಕೊಂಡ ಘಟನೆ ವರದಿಯಾಗಿದೆ.

ಸಂಗತ

ಕಲಿಕಾ ಪ್ರಕ್ರಿಯೆಗೆ ಸಂವಹನದ ಆಸರೆ

ವಿದ್ಯಾರ್ಥಿಗಳು ಚರ್ಚೆ ಮತ್ತು ಸಂವಾದಗಳಿಗೆ ತೆರೆದುಕೊಂಡಷ್ಟೂ ತರಗತಿಯನ್ನು ನಿರ್ವಹಿಸುವುದು ಶಿಕ್ಷಕರಿಗೆ ಸಲೀಸಾಗುತ್ತದೆ

• ಎಚ್‌.ಬಿ. ಚಂದ್ರಶೇಖರ್

ಹತ್ತನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ನಡೆಸಿದ ಸಂವಾದದ ನಂತರ, ತಾವು ಕಲಿತ ವಿಚಾರಗಳನ್ನು ಹಂಚಿಕೊಳ್ಳುವಂತೆ ಅವರನ್ನು ಕೇಳಿಕೊಂಡೆ. ಪ್ರೋತ್ಸಾಹದ ನುಡಿಗಳ ನಂತರ ಇಬ್ಬರು ವಿದ್ಯಾರ್ಥಿನಿಯರು ತಮ್ಮ ವಿಚಾರಗಳನ್ನು ವಿನಿಮಯ ಮಾಡಿಕೊಂಡರು. ಒಂದಷ್ಟು ಹೆಚ್ಚಿನ ಪ್ರೇರಣೆಯ ನಂತರ ಒಬ್ಬ ವಿದ್ಯಾರ್ಥಿ ಮಾಹಿತಿ ಹಂಚಿಕೊಂಡ. ತಮ್ಮ ಆಲೋಚನೆ, ಚಿಂತನೆ, ವಿಚಾರಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ದೊರೆಯುವ ಅವಕಾಶಗಳನ್ನು ನಿರಾಕರಿಸದೆ ಆ ಸಂದರ್ಭಗಳನ್ನು ಸದುಪಯೋಗಪಡಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಬೇಕಾಯಿತು.

ವಿದ್ಯಾರ್ಥಿಗಳಾಗಿದ್ದ ಅವಧಿಯಲ್ಲಿನ ಇಂತಹ ಅನುಭವಗಳು ನಮ್ಮ ಬದುಕಿನಲ್ಲಿ ಉತ್ತಮ ನೆನಪುಗಳಾಗಿ ಉಳಿಯುತ್ತವೆ ಹಾಗೂ ನಮ್ಮ ವ್ಯಕ್ತಿತ್ವ ನಿರ್ಮಾಣಕ್ಕೂ ಸಹಕಾರಿಯಾಗುತ್ತವೆ. ತರಗತಿಯ ನಂತರ ಒಬ್ಬ ವಿದ್ಯಾರ್ಥಿ ಖಾಸಗಿಯಾಗಿ ನನ್ನ ಬಳಿ ಬಂದು ‘ನನಗೂ ಮಾತನಾಡಬೇಕೆಂಬ ಆಸೆ ಇತ್ತು. ಆದರೆ ಎಲ್ಲಿ ತಪ್ಪಾಗುವುದೋ ಎಂಬ ಭಯದಿಂದ ಸುಮ್ಮನಾದೆ’ ಎಂದು ಹೇಳಿದ.


ವಿದ್ಯಾರ್ಥಿಗಳಲ್ಲಿ ಸಂವಹನ ಮತ್ತು ಸಾರ್ವಜನಿಕವಾಗಿ ಭಾಷಣ ಮಾಡುವ ಕೌಶಲವನ್ನು ಚಿಕ್ಕಂದಿನಿಂದಲೇ ಕಲಿಸುವ ಅವಶ್ಯಕತೆ ಇದೆ. ಆತ್ಮವಿಶ್ವಾಸದ ಕೊರತೆ, ತಮ್ಮ ಅಭಿಪ್ರಾಯ, ಆಲೋಚನೆಗಳನ್ನು ವ್ಯಕ್ತಪಡಿಸಲು ಪೂರಕವಾದ ಭಯರಹಿತ ವಾತಾವರಣ ಇಲ್ಲದಿರುವಂತಹ ಸಂದರ್ಭಗಳು ವಿದ್ಯಾರ್ಥಿಗಳು ತಮ್ಮ ಚಿಂತನೆಗಳನ್ನು ಅಭಿವ್ಯಕ್ತಗೊಳಿಸಲು ಅಡ್ಡಿಯಾಗುತ್ತವೆ. ಶಿಕ್ಷಕರು ಬೋಧಿಸುವಾಗ ತಮ್ಮ ತಮ್ಮಲ್ಲೇ ಗುಸುಗುಸು ಮಾತನಾಡಿಕೊಳ್ಳುವ ವಿದ್ಯಾರ್ಥಿಗಳು, ಶಿಕ್ಷಕರು ಪ್ರಶ್ನೆ ಕೇಳಿದಾಗ ಅಥವಾ ಏನನ್ನಾದರೂ ವಿವರಿಸಲು ತಿಳಿಸಿದಾಗ ಮಾತು ಬಾರದವರಂತೆ ಆಗುತ್ತಾರೆ.

ವಿದ್ಯಾರ್ಥಿಗಳು ತರಗತಿಗಳಲ್ಲಿ ಮಾತನಾಡದೇ ಇರಲು ಶಿಕ್ಷಕರು ಒಂದಷ್ಟು ಮಟ್ಟಿಗೆ ಕಾರಣರಾಗುತ್ತಾರೆ. ತಾವು ಪ್ರಶ್ನೆಗಳನ್ನು ಕೇಳಿದಾಗ, ವಿದ್ಯಾರ್ಥಿಗಳು ಉತ್ತರಿಸಲು ಅಗತ್ಯವಾದ ಒಂದಷ್ಟು ಸಮಯವನ್ನು ನೀಡದೆ, ಖುದ್ದು ವಿವರಿಸಲು ಪ್ರಾರಂಭಿಸುತ್ತಾರೆ. ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ವಿದ್ಯಾರ್ಥಿಗೆ ಸಹಜವಾಗಿ ಒಂದಷ್ಟು ಸಮಯದ ಅವಶ್ಯಕತೆ ಇರುತ್ತದೆ. ಕೆಲವರಿಗೆ ಇದಕ್ಕಾಗಿ ಒಂದಷ್ಟು ಹೆಚ್ಚು ಸಮಯ ಬೇಕಾಗಬಹುದು. ಇನ್ನು ಕೆಲವರಿಗೆ ಕಡಿಮೆ ಸಮಯ ಬೇಕಾಗಬಹುದು.

ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ತಮ್ಮೊಳಗೇ ಒಂದಷ್ಟು ಚಿಂತನ ಮಂಥನ ನಡೆಸಲು ಅಗತ್ಯವಾದ ಸಮಯ ನೀಡುವುದು ಪ್ರಮುಖವಾಗುತ್ತದೆ. ಇದರ ಜೊತೆಗೆ ವಿದ್ಯಾರ್ಥಿಗಳು ಹೇಳುವ ಉತ್ತರ ಸರಿ ಇರಲಿ ಅಥವಾ ತಪ್ಪಿರಲಿ ಅದನ್ನು ಮುಕ್ತವಾಗಿ ಸ್ವೀಕರಿಸುವ ಮನೋಭಾವವೂ ಶಿಕ್ಷಕರಿಗೆ ಇರಬೇಕಾಗುತ್ತದೆ. ಅನೇಕ ಶಿಕ್ಷಕರು ‘ತಪ್ಪಾದರೂ ಪರವಾಗಿಲ್ಲ, ನೀವು ವಿವರಿಸಿ’ ಎಂದು ಹೇಳುತ್ತಾರೆ. ಆದರೆ ತಮ್ಮ ಹಿಂದಿನ ತರಗತಿಗಳಲ್ಲಿ ಇತರ ಶಿಕ್ಷಕರಿಂದ ಆದ ಕಹಿ ಅನುಭವಗಳಿಂದ ವಿದ್ಯಾರ್ಥಿಗಳು ಬಾಯಿ ತೆರೆಯಲು ಹಿಂಜರಿಯುತ್ತಾರೆ. ಅಂಥ ಅನುಭವಗಳು ಅವರಲ್ಲಿ ಆತ್ಮವಿಶ್ವಾಸ ಉಡುಗುವಂತೆ ಮಾಡುತ್ತವೆ.

ವಿದ್ಯಾರ್ಥಿಗಳನ್ನು ಮಾತಿಗೆ ತೊಡಗಿಸಿದರೆ ತರಗತಿಯಲ್ಲಿ ಗದ್ದಲದ ವಾತಾವರಣ ಸೃಷ್ಟಿಯಾಗಿ, ತಾವು ಮಾಡಬೇಕಾದ ಪಾಠ ಪೂರ್ಣಗೊಳಿಸಲು ಆಗುವುದಿಲ್ಲ ಎಂಬ ಭಯ ಅನೇಕ ಶಿಕ್ಷಕರಲ್ಲಿ ಇರುತ್ತದೆ. ಆದರೆ ವಿದ್ಯಾರ್ಥಿಗಳು ಸಂವಹನ, ಸಂವಾದಗಳಿಗೆ ತೆರೆದುಕೊಂಡಷ್ಟೂ ತರಗತಿಯನ್ನು ನಿರ್ವಹಿಸುವುದು ಶಿಕ್ಷಕರಿಗೆ ಸಲೀಸಾಗುತ್ತದೆ. ಉತ್ತರ ತಿಳಿದಿರುವ ವಿದ್ಯಾರ್ಥಿಗಳು ಕೈ ಎತ್ತಲು ಸೂಚನೆ ನೀಡುವುದು, ಕೈ ಎತ್ತಿದವರಿಗೆ ಸರದಿ ಪ್ರಕಾರ ಉತ್ತರಿಸಲು ಅವಕಾಶ ಮಾಡಿಕೊಡುವುದು ಹಾಗೂ ಕೈ ಎತ್ತದೇ ಇರುವ ವಿದ್ಯಾರ್ಥಿಗಳನ್ನು ಗುರುತಿಸಿ, ಉತ್ತರಿಸಲು ಪ್ರೋತ್ಸಾಹಿಸುವುದನ್ನು ಶಿಕ್ಷಕರು ಮಾಡಬೇಕು. ತರಗತಿಯಲ್ಲಿ ಮಾತನಾಡಲು ಉತ್ಸಾಹ ತೋರದ ವಿದ್ಯಾರ್ಥಿಗಳ ಮನವೊಲಿಸಿ ಅವರನ್ನು ಮಾತಿನಲ್ಲಿ ತೊಡಗಿಸುವುದನ್ನು ಶಿಕ್ಷಕರು ಸವಾಲಾಗಿ ಸ್ವೀಕರಿಸಿ, ಅವರು ಮಾತನಾಡುವಂತೆ ಪ್ರೇರೇಪಿಸಬೇಕು.

ತರಗತಿಯ ಎಲ್ಲ ವಿದ್ಯಾರ್ಥಿಗಳು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳಲು ವಿದ್ಯಾರ್ಥಿಗಳ ಸಂವಹನ ಅತ್ಯವಶ್ಯವಾಗುತ್ತದೆ. ಕಲಿಕೆಯಲ್ಲಿ ನಿಧಾನವಾಗಿರುವ ಮಕ್ಕಳು ಸಹ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳಲು ಇದು ಸಹಾಯ ಮಾಡುತ್ತದೆ.



ವಿದ್ಯಾರ್ಥಿಗಳು ಮಾತನಾಡಲು ಭಾಷಾ ಕೌಶಲ ಅವಶ್ಯವಾಗುತ್ತದೆ. ಮಾತನಾಡುತ್ತಾ ಹೋದಂತೆ ಭಾಷಾ ಕೌಶಲದಲ್ಲಿಯೂ ಬೆಳವಣಿಗೆ ಆಗುತ್ತದೆ. ಅಭಿವ್ಯಕ್ತಿಗೆ ಪದಸಂಪತ್ತು ಹಾಗೂ ಆತ್ಮವಿಶ್ವಾಸ ಅವಶ್ಯ. ಹೆಚ್ಚಾಗಿ ಓದಿನಲ್ಲಿ ತೊಡಗಿಸಿಕೊಳ್ಳುವುದು ಪದಸಂಪತ್ತು ವೃದ್ಧಿಯಾಗಲು ಸಹಾಯಕವಾದರೆ, ಮಾತನಾಡಲು ಆಲೋಚನಾ ಸಾಮರ್ಥ್ಯದ ಜೊತೆಗೆ ವಿಷಯಗಳನ್ನು ಮನಸ್ಸಿನಲ್ಲಿ ವೇಗವಾಗಿ ಜೋಡಿಸಿಕೊಂಡು ಅವುಗಳನ್ನು ಮಾತಿನ ರೂಪದಲ್ಲಿ ವ್ಯಕ್ತಪಡಿಸುವ ಕೌಶಲವು ಅಭ್ಯಾಸದಿಂದ ರೂಢಿಯಾಗುತ್ತದೆ. ಈ ಕಾರಣದಿಂದ ಶಿಕ್ಷಕರು ವಿದ್ಯಾರ್ಥಿಗಳನ್ನು ವ್ಯವಸ್ಥಿತವಾಗಿ ಹಾಗೂ ಶಿಸ್ತುಬದ್ಧವಾಗಿ ಮಾತಿಗೆ ತೊಡಗಿಸಬೇಕು.

ಸಾರ್ವಜನಿಕವಾಗಿ ಮಾತನಾಡುವ ಕೌಶಲಕ್ಕೆ ತರಗತಿಯಲ್ಲಿ ಮಾತನಾಡುವ ಕೌಶಲವು ಮೊದಲ ಮೆಟ್ಟಿಲಾಗಿ ಕೆಲಸ ಮಾಡುತ್ತದೆ. ತರಗತಿಯಲ್ಲಿ ಭಯ, ಹಿಂಜರಿಕೆ ಇಲ್ಲದೆ ಮಾತನಾಡಲು ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಿಸಿದ ನಂತರ ಶಾಲೆಯ ಪ್ರಾರ್ಥನೆಯ ವೇಳೆಯಲ್ಲಿ ಅಥವಾ ಶಾಲೆಯಲ್ಲಿ ಆಯೋಜಿಸುವ ಸಮಾರಂಭ ಹಾಗೂ ವಿವಿಧ ಕಾರ್ಯಕ್ರಮಗಳಲ್ಲಿ ಎಲ್ಲಾ ಮಕ್ಕಳಿಗೆ ಮಾತನಾಡಲು ಸರದಿಯಲ್ಲಿ ಅವಕಾಶ ಕಲ್ಪಿಸಬೇಕು.

ವಾಚಕರ ವಾಣಿ

ಮುತ್ತಿನಂಥ ಪ್ರಶ್ನೆ!

‘ಜನರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ಹಗರಣಗಳ ಬಗ್ಗೆಯೇ ಏಕೆ ಚರ್ಚೆ ಮಾಡುತ್ತೀರಿ?’ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ಕೇಳಿರುವುದಾಗಿ ವರದಿಯಾಗಿದೆ. ಇದೊಂದು ಮುತ್ತಿನಂತಹ ಪ್ರಶ್ನೆಯಾಗಿದೆ.

ಎಸ್‌.ಎನ್‌.ಕೃಷ್ಣಮೂರ್ತಿ, ಕಡೂರು

ಆಸ್ಪತ್ರೆ ಆವರಣದಲ್ಲಿ ಇರಲಿ ಸೂಕ್ತ ಸೌಲಭ್ಯ

ರಾಜ್ಯದ ಬಹುತೇಕ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಹಣ್ಣುಹಂಪಲುಗಳ ಮಾರಾಟ ಮಳಿಗೆ ಹಾಗೂ ಸೂಕ್ತ ಕ್ಯಾಂಟೀನ್ ವ್ಯವಸ್ಥೆ ಇಲ್ಲದಿರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿದೆ. ರೋಗಿಗಳ ಸಂಬಂಧಿಕರು ದೂರದ ಸ್ಥಳಗಳಿಗೆ ಹೋಗಿ ದುಬಾರಿ ಬೆಲೆ ತೆತ್ತು ಅವುಗಳನ್ನು ಕೊಂಡು ತರಬೇಕಾದ ಪರಿಸ್ಥಿತಿ ಇದೆ. ಇದು ತಪ್ಪಬೇಕು. ಸರ್ಕಾರವು ಹಾಪ್‌ಕಾಮ್ಸ್ ಮೂಲಕ ಇಲ್ಲಿ ರಿಯಾಯಿತಿ ದರದಲ್ಲಿ ಹಣ್ಣುಹಂಪಲು ಮಾರಾಟ ವ್ಯವಸ್ಥೆ ಮಾಡಬೇಕು. ಜೊತೆಗೆ ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಆಹಾರ ಪೂರೈಕೆ ವ್ಯವಸ್ಥೆಯನ್ನು ಕೂಡ ಮಾಡಬೇಕು. ಇದರಿಂದ ಸಾವಿರಾರು ಮಂದಿಗೆ ಪ್ರಯೋಜನವಾಗುತ್ತದೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ವಿಚಾರಣಾಧೀನ ಕೈದಿಗಳಿಗೆ ವಿನಾಯಿತಿ ಅನಗತ್ಯ

ಕರ್ನಾಟಕ ಕಾರಾಗೃಹ ನಿಯಮಗಳ ಪ್ರಕಾರ, ಕೊಲೆ ಆರೋಪಿಗಳನ್ನು ಹೊರತುಪಡಿಸಿ ವಿಚಾರಣಾಧೀನ ಕೈದಿಗಳು ಸ್ವಂತ ಖರ್ಚಿನಲ್ಲಿ ಬಟ್ಟೆ, ಆಹಾರದಂತಹ ಅಗತ್ಯ ವಸ್ತುಗಳನ್ನು ಪಡೆದುಕೊಳ್ಳಲು ಅವಕಾಶ ನೀಡಲಾಗಿದೆ. ರಾಜಕಾರಣಿಗಳು ಅಥವಾ ಪ್ರಮುಖ ರಾಜಕೀಯ ನಾಯಕರು ವಿವಿಧ ಆರೋಪಗಳಿಗೆ ಒಳಗಾಗಿ ಜೈಲು ಪಾಲಾದಾಗ, ಅವರಿಗೆ ವಿಐಪಿ ಆತಿಥ್ಯ ನೀಡಿದ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ವಿಚಾರಣಾಧೀನ ಕೈದಿಗಳಿಗೆ ಇಂತಹ ಸೌಲಭ್ಯಗಳನ್ನು ನೀಡಿದರೆ, ಮನೆ ಮತ್ತು ಜೈಲು ಒಂದೇ ಎಂದು ಅವರಿಗೆ ಅನ್ನಿಸಿಬಿಡಬಹುದು. ಜೈಲುವಾಸದ ಅವಧಿಯು ಕೈದಿಗಳ ಮನಸ್ಸಿನಲ್ಲಿ ಪರಿವರ್ತನೆ ಉಂಟು ಮಾಡಿ, ಮುಂದೆ ಯಾವುದೇ ರೀತಿಯ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗದಂತೆ ನೋಡಿಕೊಳ್ಳಬೇಕು, ಜೊತೆಗೆ ಅವರ ಶಿಸ್ತುಬದ್ಧ ಜೀವನಕ್ಕೆ ದಾರಿಯಾಗಬೇಕು.

ತೀವ್ರ ರೀತಿಯ ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವವರು ಅಥವಾ ವೃದ್ಧ ಕೈದಿಗಳಿಗೆ ಕೆಲಮಟ್ಟಿನ ರಿಯಾಯಿತಿ ತೋರಬಹುದು. ಈ ಕಾರಣದಿಂದ, ಹಾಲಿ ಜಾರಿಯಲ್ಲಿರುವ ನಿಯಮಗಳಿಗೆ ಸರ್ಕಾರ ಸೂಕ್ತ ತಿದ್ದುಪಡಿ ತರುವ ಅಗತ್ಯವಿದೆ.

ಕೆ.ವಿ.ವಾಸು, ಮೈಸೂರು

ಅನಾದರ ತೋರುವ ಪಿ.ಜಿ: ಕ್ರಮ ಬೇಕು

ಅನಿವಾರ್ಯವಾಗಿ ಪಿ.ಜಿ.ಗಳನ್ನು ಆಶ್ರಯಿಸಿರುವವರಲ್ಲಿ ಹಲವರು ಬೆಂಗಳೂರು ಮಾತ್ರವಲ್ಲದೆ ರಾಜ್ಯದ ವಿವಿಧ ನಗರಗಳಲ್ಲಿ ಅವುಗಳ ಮಾಲೀಕರ ನಿರ್ಲಕ್ಷ್ಯಕ್ಕೆ ತುತ್ತಾಗುತ್ತಿದ್ದಾರೆ. ಕಾನೂನಿನ ಹಿಡಿತ ಏನೆಂಬುದನ್ನು ಇಂತಹ ಮಾಲೀಕರಿಗೆ ತಿಳಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ಸ್ವಸ್ಥ ಸಮಾಜದ ಸ್ಥಾಪನೆಗಾಗಿ ಇಂತಹ ಕ್ರಮ ಅಪೇಕ್ಷಿತ.

ಅನಿಲಕುಮಾರ ಮುಗಳಿ, ಧಾರವಾಡ

ಶಿರೂರು ಪ್ರಕರಣ: ಗಂಭೀರವಾಗಿ ಪರಿಗಣಿಸಿ

ದೆಹಲಿಯ ಕೋಚಿಂಗ್ ಕೇಂದ್ರವೊಂದರ ನೆಲಮಾಳಿಗೆಗೆ ನೀರು ನುಗ್ಗಿ ಮೂವರು ಐಎಎಸ್ ಆಕಾಂಕ್ಷಿಗಳು ಬಲಿಯಾದ ಪ್ರಕರಣದ ಸಂಬಂಧ ಕೆಲವರನ್ನು ಬಂಧಿಸಿ ತನಿಖೆಗೆ ಒಳಪಡಿಸಿರುವುದು ಸ್ವಾಗತಾರ್ಹ. ದೆಹಲಿಗಿಂತಲೂ ಭಯಾನಕವಾದ ಹೃದಯವಿದ್ರಾವಕ ಪ್ರಕರಣ ಶಿರೂರಿನಲ್ಲಿ ಘಟಿಸಿದೆ. ಗುಡ್ಡ ಕಡಿಯುವಲ್ಲಿ ಆದ ತಾಂತ್ರಿಕ ದೋಷವೇ ಈ ದುರ್ಘಟನೆಗೆ ಮೂಲ ಕಾರಣ ಎಂಬುದು ತಜ್ಞರ ಅಭಿಮತ.

ಈ ಗುಡ್ಡ ಕುಸಿತದಿಂದ ಅಧಿಕೃತವಾಗಿ 11 ಮಂದಿ ನಾಪತ್ತೆ ಯಾಗಿದ್ದು ಅವರಲ್ಲಿ ಎಂಟು ಮಂದಿಯ ದೇಹಗಳು ಪತ್ತೆಯಾಗಿವೆ. ಶಿರೂರಿನ ಗಂಗಾವಳಿ ನದಿಯ ಆಚೆ ದಡದಲ್ಲಿನ ಜನರು ಮನೆಮಠ ಕಳೆದುಕೊಂಡು ದಿಗ್ಭ್ರಾಂತರಾಗಿದ್ದಾರೆ. ವಿಷಯ ಇಷ್ಟೆಲ್ಲ ಗಂಭೀರವಾಗಿರುವಾಗ, ಇದಕ್ಕೆ ಕಾರಣ ಶೋಧಿಸಬೇಕು. ತಪ್ಪಿತಸ್ಥರನ್ನು ತನಿಖೆಗೆ ಒಳಪಡಿಸಿ, ಶಿಕ್ಷೆ ವಿಧಿಸಿದಾಗಲೇ ಸಂತ್ರಸ್ತರಿಗೆ ನ್ಯಾಯ ಸಿಕ್ಕಂತೆ ಆಗುವುದು.

ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

ನಾರದನ ಕಿವಿಮಾತು?!

ಅಂದು ಪುರಾಣದ
ನಾರದನ ಕಿವಿಮಾತಿನಂತೆ
ಬೇಡನೊಬ್ಬ ದರೋಡೆ
ಮಾಡುವುದ ಬಿಟ್ಟು
ವಾಲ್ಮೀಕಿ ಆದನಂತೆ!
ಇಂದು ಯಾವ ನಾರದನ
ಕಿವಿಮಾತಿನ ಪ್ರಕಾರ
ವಾಲ್ಮೀಕಿ (ನಿಗಮದ) ಹಣವನ್ನು
ದರೋಡೆ ಮಾಡಿದರು
ಎಂದು ಇ.ಡಿ.ಯವರು
ಹುಡುಕುತ್ತಿದ್ದಾರಂತೆ?!

ಜೆ.ಬಿ.ಮಂಜುನಾಥ, ಪಾಂಡವಪುರ

ಕಸದ ಲಾರಿಗಳಿಗೆ ಇರಲಿ ವೇಗಮಿತಿ

ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ (ಬಿಬಿಎಂಪಿ) ಕಸದ ಲಾರಿಯು ಇತ್ತೀಚೆಗೆ ಅತಿ ವೇಗದಲ್ಲಿ ಬಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು, ಇಬ್ಬರು ಸವಾರರ ಅಮೂಲ್ಯ ಜೀವವನ್ನು ಬಲಿ ತೆಗೆದುಕೊಂಡಿರುವ ಸುದ್ದಿ (ಪ್ರ.ವಾ., ಜುಲೈ 29) ಕಳವಳ ಮೂಡಿಸಿತು. ಇದೇ ವೇಳೆ, ರಾಜ್ಯದಲ್ಲಿ ವಾಹನಗಳು 130 ಕಿ.ಮೀ.ಗಿಂತ ಹೆಚ್ಚಿನ ವೇಗದಲ್ಲಿ ಸಂಚರಿಸುವುದಕ್ಕೆ ಪೊಲೀಸ್ ಇಲಾಖೆ ಕಡಿವಾಣ ಹಾಕಲು ಮುಂದಾಗಿರುವುದು ಜನಸ್ನೇಹಿ ನಡೆ.

ಅದೇ ರೀತಿ, ಕಸದ ಲಾರಿಗಳಿಗೆ ಅನುಮತಿ ಕೊಡುವಾಗಲೇ ವೇಗಮಿತಿಯನ್ನು ಗಂಟೆಗೆ 30 ಕಿ.ಮೀ.ಗೆ ನಿಗದಿ ಮಾಡುವುದು ಒಳ್ಳೆಯದು. ಇದರಿಂದ, ನಗರ ಪ್ರದೇಶಗಳಲ್ಲಿ ಯಮಸದೃಶ ಕಸದ ಲಾರಿಗಳಿಂದ ಒದಗಬಹುದಾದ ಅನಾಹುತಗಳ ನಿಯಂತ್ರಣ ಸಾಧ್ಯವಾಗಬಹುದು.

ಶಾಂತಕುಮಾರ್, ಸರ್ಜಾಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ವಿರುದ್ಧ ಬಸನಗೌಡ ಪಾಟೀಲ ಯತ್ನಾಳ ಆರೋಪ

‘ಡಿಕೆಶಿ ಸಿ.ಎಂ ಮಾಡಲು ಪಾದಯಾತ್ರೆ’

ಪ್ರಜಾವಾಣಿ ವಾರ್ತೆ



ಅಥಣಿ (ಬೆಳಗಾವಿ ಜಿಲ್ಲೆ): ‘ಮುಡಾ ಹಗರಣ ಮುಂದಿರಿಸಿ ಕೊಂಡು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯ-ಮಂತ್ರಿಯಾಗಿಸಲು ಬೆಂಗಳೂರಿನಿಂದ ಮೈಸೂರುವರೆಗೆ ಪಾದಯಾತ್ರೆ ಕೈಗೊಳ್ಳಲು ನಿರ್ಧರಿಸಿದಂತಿದೆ’ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಟೀಕಿಸಿದರು.

ತಾಲ್ಲೂಕಿನ ಹಲ್ಯಾಳ ಗ್ರಾಮದಲ್ಲಿ ಸೋಮವಾರ ರಾತ್ರಿ ಸುದ್ದಿಗಾರರ ಜೊತೆ ಮಾತನಾಡಿದ ಅವರು,‘ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ವಾಲ್ಮೀಕಿ ನಿಗಮದ ಹಣವನ್ನು ಕೊಳ್ಳೆ ಹೊಡೆದಿದೆ. ಮತ್ತೊಂದೆಡೆ ಮೈಸೂರಿನ ‘ಮುಡಾ’ ಹಗರಣದಲ್ಲಿ ದಲಿತ ಸಮುದಾಯದ ರೈತನ ಜಮೀನು ನುಂಗಿದೆ’ ಎಂದರು.

‘ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳು ಬಂದ್ ಆಗಿವೆ. ಅದರಲ್ಲೂ ಗೃಹಲಕ್ಷ್ಮಿ ಹಣ ಮಹಿಳೆಯರಿಗೆ ತಲುಪುತ್ತಿಲ್ಲ. ‘ಭಾಗ್ಯ ಲಕ್ಷ್ಮಿ’ ಮಾತ್ರ ಬೆಳಗಾವಿಯಲ್ಲಿ ಕುಳಿತಿದ್ದಾರೆ’ ಎಂದು ವ್ಯಂಗ್ಯವಾಡಿದರು.

ಗೋಕಾಕ ಶಾಸಕ ರಮೇಶ ಜಾರಕಿಹೊಳಿ ಮಾತನಾಡಿ, ‘ರಾಜ್ಯದಲ್ಲಿ ಸಿದ್ದರಾಮಯ್ಯ ಅವರಿಗೆ ಹಿಡಿತ ತಪ್ಪಿದೆ. ಸ್ವತಃ ಸಿದ್ದರಾಮಯ್ಯ ಅವರೇ ಶಿವಕುಮಾರ್ ಹಿಡಿತದಲ್ಲಿದ್ದಾರೆ. ಇದನ್ನು ಸರಿ ಮಾಡಲು ಆಗದು. ಸಾಮೂಹಿಕವಾಗಿ ರಾಜೀನಾಮೆ ಕೊಟ್ಟು ಮತ್ತೆ ಚುನಾವಣೆ ಎದುರಿಸಬೇಕು’ ಎಂದರು.

‘ಶಕುನಿಗಳ ರಾಜಕಾರಣ ನಡೆಯಲ್ಲ’



ನವಿಲುತೀರ್ಥ: ‘ಶಾಸಕ ರಮೇಶ ಜಾರಕಿಹೊಳಿ ಅವರಿಗೂ ನಮ್ಮ ಪಕ್ಷಕ್ಕೂ ಸಂಬಂಧವಿಲ್ಲ. ನಮ್ಮ ಇಬ್ಬರು ನಾಯಕರ ಮಧ್ಯೆ ವಿಷಬೀಜ ಬಿತ್ತಬೇಕು ಎಂಬುದೇ ಅವರ ರಾಜಕೀಯ ದುರುದ್ದೇಶ. ಇಂಥ ಶಕುನಿ ರಾಜಕಾರಣ ನಮ್ಮಲ್ಲಿ ನಡೆಯುವುದಿಲ್ಲ’ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪ್ರತಿಕ್ರಿಯಿಸಿದರು.

‘ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ನಿಯಂತ್ರಣದಲ್ಲಿದ್ದಾರೆ’ ಎಂಬ ರಮೇಶ ಜಾರಕಿಹೊಳಿ ಹೇಳಿಕೆಗೆ, ಇಲ್ಲಿ ಮಂಗಳವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ನಮ್ಮ ನಾಯಕರು ಮುತ್ಸದ್ದಿ ರಾಜಕಾರಣಿಗಳು. ರಮೇಶ ಹೇಳಿಕೆಗೆ ಉತ್ತರ ಕೊಡುವಷ್ಟು ಚಿಕ್ಕವರಿಲ್ಲ’ ಎಂದರು.


ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಕ್ಕೆ ಪ್ರತಿಕ್ರಿಯಿಸಿದ ಲಕ್ಷ್ಮಿ, ‘ಯತ್ನಾಳ ಅವರು ತಮ್ಮ ಪಕ್ಷದ ಬಗ್ಗೆ ಮಾತನಾಡಲಿ. ಇನ್ನೊಂದು ಪಕ್ಷದವರ ಬಗ್ಗೆ ಏಕೆ ಮಾತನಾಡುತ್ತಾರೆ? ಗೊಂದಲ ಸೃಷ್ಟಿಸಲು ಹೀಗೆ ಮಾತನಾಡುತ್ತಾರೆ’ ಎಂದರು.

‘ಕೇಂದ್ರದ ಬಜೆಟ್‌ನಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ. ಯತ್ನಾಳ ಮೊದಲು ಅದರ ಮೇಲೆ ಬೆಳಕು ಚೆಲ್ಲಲಿ. ಗೃಹಲಕ್ಷ್ಮಿ ಯೋಜನೆ ಬಗ್ಗೆ ಅನಗತ್ಯ ಮಾತನಾಡಿದ್ದಾರೆ. ಶೀಘ್ರದಲ್ಲೇ ಫಲಾನುಭವಿಗಳಿಗೆ ಗೃಹಲಕ್ಷ್ಮಿ ಹಣ ಬಿಡುಗಡೆ-ಗೊಳಿಸುತ್ತೇವೆ’ ಎಂದರು.

> ಮುಡಾ ಹಗರಣ ಖಂಡಿಸಿ ಬಿಜೆಪಿ ನಾಯಕರು ಬೆಂಗಳೂರಿನಿಂದ ಮೈಸೂರುವರೆಗೆ ನಡೆಸುವ ಪಾದಯಾತ್ರೆಯಲ್ಲಿ ನಾನೂ ಪಾಲ್ಗೊಳ್ಳುವೆ
>
> **ಸಿ.ಸಿ.ಪಾಟೀಲ**, ಶಾಸಕ, ನರಗುಂದ

> ಆರ್.ಅಶೋಕ ಮತ್ತು ಬಸನಗೌಡ ಪಾಟೀಲ ಯತ್ನಾಳ ಮಧ್ಯೆ ಎಲ್ಲವೂ ಸರಿ ಇಲ್ಲ. ಬಿಜೆಪಿಯವರು ಮೊದಲು ತಮ್ಮ ಮನೆ ರಿಪೇರಿ ಮಾಡಿಕೊಳ್ಳಲಿ
>
> **ಎನ್.ಎಚ್.ಕೋನರೆಡ್ಡಿ**, ಶಾಸಕ, ನವಲಗುಂದ

ಮುಡಾ ಹಗರಣ: ಬೈರತಿ ಸುರೇಶ್ ವಿರುದ್ಧ ಕ್ರಮ ಏಕಿಲ್ಲ?– ವಿಶ್ವನಾಥ್



ಮೈಸೂರು: ‘ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಗರಣದ ಹಿನ್ನೆಲೆಯಲ್ಲಿ ಬಿ.ನಾಗೇಂದ್ರ ಅವರಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ಪಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಡಾದಲ್ಲಿ ₹5 ಸಾವಿರ ಕೋಟಿಗೂ ಅಧಿಕ ಅವ್ಯವಹಾರದ ಆರೋಪ ಇದ್ದರೂ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ವಿರುದ್ಧ ಯಾಕೆ ಕ್ರಮ ಕೈಗೊಂಡಿಲ್ಲ? ತಾನು ಬೆಳೆಸಿದ ನಾಯಕನೆಂದು ಮೃದುವಾಗಿದ್ದಾರೆಯೇ’ ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಮಂಗಳವಾರ ಇಲ್ಲಿ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ವಾಲ್ಮೀಕಿ ನಿಗಮದ ಅಧಿಕಾರಿಗಳ ತಲೆದಂಡವಾಗಿದೆ. ಆದರೆ ಮುಡಾ ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ಹಾಗೂ ಡಿ.ಬಿ. ನಟೇಶ್ ಅವರನ್ನು ವರ್ಗಾಯಿಸಿ ಸರ್ಕಾರ ಸುಮ್ಮನಾಗಿದೆ. ನಗರಾಭಿವೃದ್ಧಿ ಸಚಿವರ ಕಚೇರಿಯಲ್ಲೇ ಅವರು ಅವ್ಯವಹಾರ ಮುಂದುವರೆಸಿದ್ದಾರೆ’ ಎಂದು ಆರೋಪಿಸಿದರು.

‘ಬಿ.ನಾಗೇಂದ್ರ ಜೈಲಿನಲ್ಲಿದ್ದಾರೆ. ಹಾಗಿದ್ದರೆ, ಹಣಕಾಸು ಸಚಿವರಾಗಿರುವ ಸಿದ್ದರಾಮಯ್ಯ ಎಲ್ಲಿಗೆ ಹೋಗಬೇಕು? ನಾಯಕ ಜನಾಂಗಕ್ಕೊಂದು ತೀರ್ಪು, ಕುರುಬ ಜನಾಂಗದವರಿಗೊಂದು ನಿಯಮ ಸಲ್ಲ. ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಇತರೆ ಪಕ್ಷದವರ ಕಡೆ ಕೈ ತೋರಿಸುವುದು ಬಿಟ್ಟು, 50:50 ಅನುಪಾತದಲ್ಲಿ ನಿವೇಶನ ಪಡೆದವರ, ಮುಡಾದಲ್ಲಿನ ಹಗರಣದ ಬಗ್ಗೆ ಸ್ಪಷ್ಟನೆ ನೀಡಲಿ’ ಎಂದು ಆಗ್ರಹಿಸಿದರು.

‘ಇತರೆ ಪಕ್ಷದವರ ಬಗ್ಗೆ ಆರೋಪಿಸುವವರು ಕಾಂಗ್ರೆಸ್ ಪಕ್ಷದವರ ಹೆಸರು ಯಾಕೆ ಹೇಳುತ್ತಿಲ್ಲ? ಹಿನಕಲ್ ಪಾಪಣ್ಣ ಅವರ ಬಗ್ಗೆ ಮಾತನಾಡಿ. ಆಡಳಿತಕ್ಕೆ ಬಂದ ಒಂದೇ ವರ್ಷದಲ್ಲಿ ರಾಜ್ಯ ಸರ್ಕಾರ ಹಗರಣದಿಂದ ತತ್ತರಿಸಿ ಹೋಗಿದೆ. ಮುಖ್ಯಮಂತ್ರಿ ಏಕಾಂಗಿಯಾಗಿದ್ದಾರೆ. ಹೆದರಿದ್ದಾರೆ. ಅವರು ಪಡೆದ 14 ನಿವೇಶನಗಳನ್ನು ಸರ್ಕಾರಕ್ಕೆ ಒಪ್ಪಿಸಿ, ತನಿಖೆ ನಡೆಸಲು ಸಹಕಾರ ನೀಡಿ, ಪ್ರಕರಣಕ್ಕೆ ತಾರ್ಕಿಕ ಅಂತ್ಯ ದೊರಕಿಸಲಿ’ ಎಂದರು.

‘ವಿರೋಧ ಪಕ್ಷಗಳು ಮುಖ್ಯಮಂತ್ರಿ ಕುಟುಂಬದ ತೇಜೋವಧೆಯನ್ನೇನೂ ಮಾಡಿಲ್ಲ. ಅವರೇ ತಾವು ನಡೆಸಿದ ಪತ್ರಿಕಾಗೋಷ್ಠಿಯ ಅಂಶಗಳನ್ನು ಜಾಹೀರಾತು ರೀತಿ ಪ್ರಕಟಿಸಿ ಹರಾಜು ಹಾಕುತ್ತಿದ್ದಾರೆ. ಪ್ರಾಮಾಣಿಕ ರಾಜಕಾರಣ ಮಾಡುತ್ತಿದ್ದ ಸಿದ್ದರಾಮಯ್ಯ ಅವರ ಶ್ವೇತವಸ್ತ್ರದಲ್ಲಿ, ಜೊತೆಗಾರರಿಂದ ಕಪ್ಪು ಚುಕ್ಕೆ ಕಾಣಿಸುತ್ತಿದೆ. ಅದು ಪೂರ್ತಿ ಆವರಿಸುವ ಮೊದಲು ಎಚ್ಚೆತ್ತುಕೊಳ್ಳಲಿ. ಪತ್ನಿ ಪಾರ್ವತಿ ಅವರಿಂದ ಸಿದ್ದರಾಮಯ್ಯ ಅವರಿಗೆ ಗೌರವ ಹೆಚ್ಚಿತ್ತು, ಆದರೆ ಅವರ ಹೆಸರನ್ನೇ ಬೀದಿಗೆ ತಂದಿದ್ದಾರೆ’ ಎಂದರು.

‘ಕುತಂತ್ರ ನಿಲ್ಲಿಸದಿದ್ದರೆ ದಂಗೆ’

ಶೋಷಿತ ಸಮುದಾಯಗಳ ಸಮಾವೇಶ ನಡೆಸುವ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದುಳಿದ ವರ್ಗದ ನಾಯಕ ಸಿದ್ದರಾಮಯ್ಯ ಅವರನ್ನು ದುರ್ಬಲಗೊಳಿಸುವ ಕುತಂತ್ರವನ್ನು ಬಿಜೆಪಿ, ಜೆಡಿಎಸ್ ನಾಯಕರು ನಿಲ್ಲಿಸಬೇಕು. ಅವರ ಹೆಸರಿಗೆ ಕಳಂಕ ತರುವ ಯತ್ನವನ್ನು ಮುಂದುವರಿಸಿದರೆ ದಂಗೆ ಏಳಬೇಕಾಗುತ್ತದೆ’ ಎಂದು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಎಚ್ಚರಿಕೆ ನೀಡಿದೆ.

ಮಂಗಳವಾರ ಮಾತನಾಡಿದ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ, ‘ಬಿಜೆಪಿ ಮತ್ತು ಜೆಡಿಎಸ್ ನಾಯಕರು ಅಧಿಕಾರ ಕಳೆದು ಕೊಂಡು ಒದ್ದಾಡುತ್ತಿದ್ದಾರೆ. ಹೀಗಾಗಿ, ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರ ಹೆಸರನ್ನು ತಳಕು ಹಾಕಿದ್ದಾರೆ. ತಮ್ಮ ಮೇಲಿನ ಆರೋಪಕ್ಕೆ ಸ್ವತಃ ತನಿಖಾ ಆಯೋಗ ರಚಿಸಿರುವ ದೇಶದ ಏಕೈಕ ನಾಯಕ ಸಿದ್ದರಾಮಯ್ಯ’ ಎಂದು ಅವರು ಹೇಳಿದರು.

‘ಹಿಂದುಳಿದ ವರ್ಗದ ನಾಯಕರಾದ ದೇವರಾಜ ಅರಸು, ಎಸ್. ಬಂಗಾರಪ್ಪ, ವೀರಪ್ಪ ಮೊಯಿಲಿ, ಧರ್ಮ ಸಿಂಗ್ ಅಧಿಕಾರದಲ್ಲಿದ್ದಾಗಲೂ ಅವರ ವಿರುದ್ಧ ಇಂತಹದೇ ಷಡ್ಯಂತ್ರ ರೂಪಿಸಲಾಗಿತ್ತು. ಬಿಜೆಪಿ–ಜೆಡಿಎಸ್ ನಾಯಕರು ಕುತಂತ್ರ ನಿಲ್ಲಿಸದಿದ್ದರೆ, ರಾಜ್ಯದಾದ್ಯಂತ ಪ್ರತಿಭಟನೆ, ಶೋಷಿತ ಸಮುದಾಯಗಳ ಎಚ್ಚರಿಕೆ ಸಮಾವೇಶ ಹಮ್ಮಿಕೊಳ್ಳಬೇಕಾ-ಗುತ್ತದೆ’ ಎಂದು ಎಚ್ಚರಿಸಿದರು.

ಒಕ್ಕೂಟದ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, ‘ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಿ, ಹಿಂದುಳಿದ ವರ್ಗದ ನಾಯಕತ್ವ ಕೊನೆಗಾಣಿಸಲು ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ಅವರ ವಿರುದ್ಧ ಮುಗಿ ಬಿದ್ದಿದ್ದಾರೆ. ಇವರ ಮೇಲಿನ ಆರೋಪಗಳನ್ನೂ ನಾವು ಬಯಲಿಗೆ ಎಳೆಯುತ್ತೇವೆ’ ಎಂದರು.

ಒಕ್ಕೂಟದ ಸಂಚಾಲಕರಾದ ಅನಂತನಾಯ್ಕ್ ಎನ್., ಎಣ್ಣೆಗೆರೆ ಆರ್. ವೆಂಕಟರಾಮಯ್ಯ, ಅಬ್ದುಲ್ ಮನಾನ್‌ಸೇಠ್, ಬಿ.ಟಿ. ಲಲಿತಾ ನಾಯಕ್, ಸದಸ್ಯ ಆದರ್ಶ್ ಯಲ್ಲಪ್ಪ, ಕೆ.ವೆಂಕಟಸುಬ್ಬರಾಜು ಉಪಸ್ಥಿತರಿದ್ದರು.

ಬಿಜೆಪಿ, ಜೆಡಿಎಸ್ ಪಾದಯಾತ್ರೆಗೆ ದಲಿತ ಸಂಘಟನೆಗಳ ಖಂಡನೆ

ಬೆಂಗಳೂರು: ‘ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ ಮತ್ತು ಮುಡಾ ನಿವೇಶನ ಹಂಚಿಕೆ ಹಗರಣಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರವಿಲ್ಲ. ಆದರೂ, ವಿರೋಧ ಪಕ್ಷಗಳು ಸಿದ್ದರಾಮಯ್ಯ ಅವರು ರಾಜೀನಾಮೆಗೆ ಆಗ್ರಹಿಸಿ ಪಾದಯಾತ್ರೆ ಮಾಡುತ್ತಿರುವುದು ಖಂಡನೀಯ’ ಎಂದು ಡಾ.ಬಿ.ಆರ್. ಅಂಬೇಡ್ಕರ್ ದಲಿತ ಸಂಘಟನೆಗಳ ಒಕ್ಕೂಟ ಹೇಳಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷ ಶ್ರೀಧರ ಕಲಿವೀರ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಭಾಗಿಯಾಗಿರುವ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ ಮತ್ತು ಮಾಜಿ ಸಚಿವ ನಾಗೇಂದ್ರ ಅವರನ್ನು ಬಂಧಿಸಲಾಗಿದೆ. ಹಾಗಿದ್ದರೂ, ಸಿದ್ದರಾಮಯ್ಯ ಅವರನ್ನು ಸಿಲುಕಿಸುವ ಪ್ರಯತ್ನ ನಡೆಯುತ್ತಿದೆ’ ಎಂದು ದೂರಿದರು.

‘ಯೂನಿಯನ್ ಬ್ಯಾಂಕ್ ಕೇಂದ್ರ ಸರ್ಕಾರದ ಅಧೀನದಲ್ಲಿದ್ದು, ಈ ಹಗರಣದಲ್ಲಿ ಭಾಗಿಯಾಗಿರುವ ಬ್ಯಾಂಕ್‌ನ ಅಧಿಕಾರಿಗಳನ್ನು ಸಿಬಿಐ ಇದುವರೆಗೂ ಬಂಧಿಸಿಲ್ಲ’ ಎಂದು ಆರೋಪಿಸಿದರು.

‘ಮುಖ್ಯಮಂತ್ರಿಯವರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ, ಜೆಡಿಎಸ್ ಪಕ್ಷಗಳು ವಿಧಾನಮಂಡಲ ಮತ್ತು ಸಂಸತ್ತಿನಲ್ಲಿ ಪ್ರತಿಭಟನೆ ಮಾಡಿರುವುದು ಖಂಡನೀಯ. ಸಿದ್ದರಾಮಯ್ಯ ಎರಡನೇ ಅವಧಿಗೆ ಮುಖ್ಯಮಂತ್ರಿ ಆಗಿರುವುದನ್ನು ಮನುವಾದಿ ಮೈತ್ರಿ ಪಕ್ಷಗಳ ನಾಯಕರು ಸಹಿಸದೇ ಈ ರೀತಿ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ’ ಎಂದು ದೂರಿದರು.

ಒಕ್ಕೂಟದ ಅಣ್ಣಯ್ಯ, ಮಂಜುನಾಥ ಅಣ್ಣಯ್ಯ, ಎಂ. ಗೋವಿಂದರಾಜ, ರಾಜಗೋಪಾಲ ಡಿ.ಎಸ್., ಎ. ಗೋಪಾಲ, ನಾಗೇಶ ಎಂ., ಬಸವರಾಜ್ ಪತ್ರಿಕಾಗೋಷ್ಠಿಯಲ್ಲಿದ್ದರು.



ಜಾತ್ರೆಯ ವೈಭವ

ಬೆಳಗಾವಿಯ ವಡಗಾವಿಯಲ್ಲಿರುವ ಮಂಗಾಯಿದೇವಿ ಜಾತ್ರೆ ಮಂಗಳವಾರ ವೈಭವದಿಂದ ನೆರವೇರಿತು. ಅಪಾರ ಸಂಖ್ಯೆಯ ಜನ ಪಾಲ್ಗೊಂಡರು

ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

‘ಪಾದಯಾತ್ರೆ ವಿರುದ್ಧ ತಂತ್ರ’

ಬೆಂಗಳೂರು: ‘ಬಿಜೆಪಿ– ಜೆಡಿಎಸ್ ಪಾದಯಾತ್ರೆಗೆ ಪ್ರತಿಯಾಗಿ ನಾವು ಪಾದಯಾತ್ರೆ ಮಾಡುವುದಿಲ್ಲ. ಆದರೆ, ಪ್ರತಿತಂತ್ರವಾಗಿ ಜನರಿಗೆ ಏನು ತಿಳಿಸಬೇಕು, ಅದನ್ನು ಸಮಾವೇಶಗಳ ಮೂಲಕ ತಿಳಿಸುತ್ತೇವೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಪಾದಯಾತ್ರೆಗೆ ಅನುಮತಿ ನೀಡುವುದಿಲ್ಲವೆಂದು ಹೇಳಿದ್ದೇನೆ. ಪಾದಯಾತ್ರೆಯಿಂದ ಜನರಿಗೆ ತೊಂದರೆಯಾದರೆ ಸುಮ್ಮನಿರುವುದಿಲ್ಲ. ಕಾನೂನು ಬಾಹಿರ ಕೆಲಸ ಮಾಡಿದರೆ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದರು.

ಸಚಿವರ ಸಭೆ: ರೌಡಿಶೀಟರ್ ದರ್ಬಾರ್

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಡಿ.ಸುಧಾಕರ್ ಅವರು ನಡೆಸಿದ ಸಭೆಯೊಂದರಲ್ಲಿ ರೌಡಿಪಟ್ಟಿಯಲ್ಲಿರುವ ವ್ಯಕ್ತಿಯೊಬ್ಬ ದರ್ಬಾರ್ ನಡೆಸಿದ್ದಾನೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಸಚಿವ ಡಿ.ಸುಧಾಕರ್ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಭೂಸ್ವಾಧೀನ ಪ್ರಕರಣಗಳ ಸಭೆ ನಡೆಯಿತು. ಸಚಿವರ ಬೆಂಬಲಿಗ ಕಂದಿಕೆರೆ ಜಗದೀಶ್ ಸಭೆಯಲ್ಲಿ ಹಾಜರಾಗಿ ಅಧಿಕಾರಿಗಳ ಪಕ್ಕದಲ್ಲೇ ಕುಳಿತಿದ್ದರು. ಸಭೆಗೆ ಸಂಬಂಧವೇ ಇಲ್ಲದ ಆತ ಸಚಿವರಿಗೆ ಹಲವು ವಿಷಯಗಳನ್ನು ತಿಳಿಸುತ್ತಿದ್ದರು.

ಬೀದರ್– ಶ್ರೀರಂಗಪಟ್ಟಣ ರಾಷ್ಟ್ರೀಯ ಹೆದ್ದಾರಿ– 150ರ ಅಭಿವೃದ್ಧಿ ಕಾಮಗಾರಿ ನಡೆಸುತ್ತಿರುವ ಪಿಎನ್‌ಸಿ ಕಂಪನಿ ಅಧಿಕಾರಿಗಳು ಹಾಗೂ ಸಚಿವರ ಚರ್ಚೆಯ ನಡುವೆ ಜಗದೀಶ್ ಅಧಿಕಾರಿಗಳನ್ನು ಪ್ರಶ್ನಿಸುತ್ತಿದ್ದರು. ಸಚಿವರ ಬೆಂಬಲಿಗ ಎನ್ನುವ ಕಾರಣಕ್ಕೆ ಅಧಿಕಾರಿಗಳು ಆತನ ಎಲ್ಲ ಪ್ರಶ್ನೆಗಳಿಗೂ ಉತ್ತರ ನೀಡುತ್ತಿದ್ದರು.


ರಾಷ್ಟ್ರೀಯ ಹೆದ್ದಾರಿ ಭೂಸ್ವಾಧೀನ ಹಾಗೂ ಪರಿಹಾರ ವಿತರಣೆ ವಿಷಯ ಬಂದಾಗ ಕಂದಿಗೆರೆ ಜಗದೀಶ್ ಹೆದ್ದಾರಿ ಪ್ರಾಧಿಕಾರ, ಪಿಎನ್‌ಸಿ ಅಧಿಕಾರಿಗಳ ವಿರುದ್ಧ ಏರುಧ್ವನಿಯಲ್ಲಿ ಮಾತನಾಡಿದರು. ಅಧಿಕಾರಿಗಳಿಗೆ ಉತ್ತರ ನೀಡಲು ಅವಕಾಶ ನೀಡದೇ ಅವರ ವಿರುದ್ಧ ಕೆಂಡಾಮಂಡಲರಾದರು. ಈ ವೇಳೆ ಸಚಿವ ಡಿ.ಸುಧಾಕರ್, ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಮೂಕ ಪ್ರೇಕ್ಷಕರಾಗಿದ್ದರು.

2015ರಿಂದ ರೌಡಿಶೀಟರ್: ಆರಂಭದಲ್ಲಿ ಜೆಡಿಎಸ್‌ನಲ್ಲಿ ಗುರುತಿಸಿಕೊಂಡಿದ್ದ ಕಂದಿಗೆರೆ ಜಗದೀಶ್ ಕಾಂಗ್ರೆಸ್ ಸೇರಿದ ನಂತರ ಡಿ.ಸುಧಾಕರ್ ಅವರಿಗೆ ಆಪ್ತನಾಗಿದ್ದರು. ಹಲವು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವ ಜಗದೀಶ್ ವಿರುದ್ಧ ಹಿರಿಯೂರು ತಾಲ್ಲೂಕಿನ ಐಮಂಗಲ ಠಾಣೆಯಲ್ಲಿ 2015ರಲ್ಲಿ ರೌಡಿಶೀಟ್ ತೆರೆಯಲಾಗಿದೆ. ರೌಡಿಪಟ್ಟಿಯಲ್ಲಿದ್ದರೂ ಆತ ಹಿರಿಯೂರು ತಾಲ್ಲೂಕಿನಲ್ಲಿ ಸಚಿವರ ಆಪ್ತನಾಗಿ ಓಡಾಡುತ್ತಿದ್ದಾರೆ, ಅವರ ಜೊತೆಯಲ್ಲಿ ಕಾಣಿಸಿಕೊಳ್ಳುತ್ತಾರೆ.

ರೌಡಿಪಟ್ಟಿ ಜೊತೆಗೆ ಜಗದೀಶ್ ಹೆಸರು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವ ಸಾಧ್ಯತೆ ಇರುವ (ಎಂಒಬಿ) ವ್ಯಕ್ತಿಗಳ ಪಟ್ಟಿಯಲ್ಲಿಯೂ ಇದೆ. ಆಗಾಗ ಅವರನ್ನು ಠಾಣೆಗೆ ಕರೆದು ವಿಚಾರಣೆ ನಡೆಸುವ ಪ್ರಕ್ರಿಯೆ ನಡೆದುಕೊಂಡು ಬಂದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಶ್ರೀರಂಗಪಟ್ಟಣ– ಬೀದರ್ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಲ್ಲಿ ಕಂದಿಗೆರೆ ಜಗದೀಶ್ ಜಮೀನು ವಶಪಡಿಸಿಕೊಳ್ಳಲಾಗಿದೆ. ಪರಿಹಾರ ವಿತರಣೆ ಸಂಬಂಧ ಅವರು ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದಾರೆ. ನಮ್ಮ ಕಚೇರಿಗೆ, ಉಸ್ತುವಾರಿ ಸಚಿವರಿಗೆ ಹಲವು ದೂರು ನೀಡಿದ್ದಾರೆ. ಅವರ ಅಹವಾಲು ಆಲಿಸಲು ಸಚಿವರು ಸಭೆಗೆ ಕರೆಯಿಸಿದ್ದರು. ಅವರು ಅಧಿಕಾರಿಗಳ ಜೊತೆ ಕುಳಿತುಕೊಂಡಿದ್ದು ದುರದೃಷ್ಟಕರ’ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಹೇಳಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಸಚಿವ ಡಿ.ಸುಧಾಕರ್ ಅವರಿಗೆ ಹಲವು ಬಾರಿ ಕರೆ ಮಾಡಿದರೂ ಅವರು ಸ್ವೀಕರಿಸಲಿಲ್ಲ.



ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಡಿ.ಸುಧಾಕರ್ ನಡೆಸಿದ ಸಭೆಯಲ್ಲಿ ಕಡತಗಳೊಂದಿಗೆ ಕುಳಿತಿರುವ ರೌಡಿಶೀಟರ್ ಕಂದಿಗೆರೆ ಜಗದೀಶ್ (ಬಲದಿಂದ ಮೊದಲನೆಯವರು)

ಸಂಕ್ಷಿಪ್ತ ಸುದ್ದಿ

ಬಿ.ಎಸ್‌ಸಿ ನರ್ಸಿಂಗ್: ಶೇ 80 ಸೀಟು ಕೆಇಎ ಮೂಲಕ ಭರ್ತಿ

ಬೆಂಗಳೂರು: ಖಾಸಗಿ ನರ್ಸಿಂಗ್ ಕಾಲೇಜುಗಳ ಬಿ.ಎಸ್‌ಸಿ (ನರ್ಸಿಂಗ್) ಕೋರ್ಸ್‌ನ ಶೇ 80 ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ಭರ್ತಿ ಮಾಡಲಿದೆ.

ಹೊಸ ನಿಯಮ ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ ಜಾರಿಗೆ ಬರಲಿದ್ದು, ಕಾಲೇಜಿಗೆ ನಿಗದಿಪಡಿಸಿರುವ ಒಟ್ಟು ಸೀಟುಗಳಲ್ಲಿ ಶೇ 20ರಷ್ಟು ಮಾತ್ರ ಆಡಳಿತ ಮಂಡಳಿಗಳು ನೇರವಾಗಿ ಭರ್ತಿ ಮಾಡಿಕೊಳ್ಳಬಹುದು. ಶೇ 20ರಷ್ಟು ಸರ್ಕಾರಿ ಕೋಟಾ ಹಾಗೂ ಶೇ 60ರಷ್ಟು ಆಡಳಿತ ಮಂಡಳಿ ಸೀಟುಗಳನ್ನು ಕೆಇಎ ಭರ್ತಿ ಮಾಡುತ್ತದೆ.

ಖಾಸಗಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ₹10 ಸಾವಿರ ಶುಲ್ಕ ಹಾಗೂ ಕೆಇಎ ಮೂಲಕ ಭರ್ತಿ ಮಾಡುವ ಆಡಳಿತ ಮಂಡಳಿ ಕೋಟಾದಡಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ₹1 ಲಕ್ಷ ಹಾಗೂ ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ₹1.40 ಲಕ್ಷ ಗರಿಷ್ಠ ಶುಲ್ಕ ನಿಗದಿ ಮಾಡಲಾಗಿದೆ.

ಗೆಜೆಟೆಡ್ ಪ್ರೊಬೇಷನರಿ ಆ. 25ರಂದೇ ಪರೀಕ್ಷೆ

ಬೆಂಗಳೂರು: ‘2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳಿಗೆ ಪೂರ್ವಭಾವಿ ಪರೀಕ್ಷೆಯನ್ನು ಆಗಸ್ಟ್ 25ರಂದೇ ನಡೆಸಲಾಗುವುದು’ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಕೆ. ರಾಕೇಶ್ ಕುಮಾರ್ ತಿಳಿಸಿದ್ದಾರೆ.

‘ಮಂಗಳವಾರ (ಜುಲೈ 30) ನಡೆದ ಆಯೋಗದ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಲಾಗಿದೆ. ಪರೀಕ್ಷೆ ನಡೆಸಲು ಅಗತ್ಯವಾದ ಎಲ್ಲ ರೀತಿಯ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಅದೇ ದಿನ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

ಆಗಸ್ಟ್ 25ರಂದು ವಿವಿಧ ಬ್ಯಾಂಕುಗಳಲ್ಲಿ ಖಾಲಿ ಇರುವ 6,128 ಕ್ಲರ್ಕ್ ಹುದ್ದೆಗಳಿಗೆ ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ ಸಂಸ್ಥೆಯು (ಐಬಿಪಿಎಸ್) ಪರೀಕ್ಷೆ ನಡೆಸಲಿದೆ. ಈ ಪೈಕಿ, 457 ಹುದ್ದೆಗಳು ಕರ್ನಾಟಕದಲ್ಲಿ ಖಾಲಿ ಇವೆ. ಕನ್ನಡದಲ್ಲಿಯೂ ಈ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದೆ. ಹೀಗಾಗಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪೂರ್ವಭಾವಿ ಪರೀಕ್ಷೆಯನ್ನು ಮುಂದೂಡಬೇಕೆಂದು ಕೆಲವು ಅಭ್ಯರ್ಥಿಗಳು ಆಗ್ರಹಿಸುತ್ತಿದ್ದಾರೆ.

ಕೆಸೆಟ್: ಅರ್ಜಿ ಸಲ್ಲಿಕೆಗೆ ಆ.22 ಕೊನೆಯ ದಿನ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆಸೆಟ್-24) ಅರ್ಜಿ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವೆಬ್‌ಸೈಟ್ ಲಿಂಕ್ ಬಿಡುಗಡೆ ಮಾಡಿದ್ದು, ಅರ್ಜಿ ಸಲ್ಲಿಸಲು ಆ. 22 ಕೊನೆಯ ದಿನ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ನೇಮಕಾತಿ ತೊಡಕು ನಾಳೆ ಸಭೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ 1,242 ಸಹಾಯಕ ಪ್ರಾಧ್ಯಾಪಕರಿಗೆ ನೇಮಕಾತಿ ಆದೇಶ ನೀಡುವ ಕುರಿತು ಇರುವ ಸಮಸ್ಯೆಗಳನ್ನು ಚರ್ಚಿಸಲು ಆ. 1ರಂದು ಮಧ್ಯಾಹ್ನ 3ಕ್ಕೆ ಸಭೆ ಕರೆಯಲಾಗಿದೆ.

ವಿಕಾಸಸೌಧದಲ್ಲಿ ನಡೆಯುವ ಸಭೆಯಲ್ಲಿ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ,ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಶ್ರೀಕರ್ ಭಾಗವಹಿಸುವರು.

ಗುಂಡಣ್ಣ



ಪ್ರೀತಿ ಇಲ್ಲದ ಮೇಲೆ...

ನುಡಿ ಬೆಳಗು



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ತುಂಬಾ ಬುದ್ಧಿವಂತ ಹುಡುಗ. ತಂದೆ ವಿದೇಶದಲ್ಲಿ ವೈದ್ಯರಾಗಿದ್ದು ಹೆಸರು, ಹಣ ಮಾಡಿದವರು. ಇವನು ಓದಿ ಬೆಳೆದದ್ದು ಹಾಸ್ಟೆಲ್ ನಲ್ಲಿ. ಅಪ್ಪ ಅಮ್ಮನ ದಿನನಿತ್ಯದ ಪ್ರೀತಿಯಿಂದ ವಂಚಿತ. ಪತ್ರಗಳ ಮೂಲಕ ತನ್ನೆಲ್ಲಾ ದುಗುಡ ದುಮ್ಮಾನಗಳನ್ನು ದೂರದಲ್ಲಿದ್ದ ಹೆತ್ತವರಿಗೆ ಹೇಳಿಕೊಳ್ಳಲು ಆಗದವನು. ಫೋನಿನಲ್ಲಿ ಆಗೀಗ ಸಿಕ್ಕಿದ್ದು ಚುಟುಕು ಮಾತುಕತೆ ಅಷ್ಟೇ. ಅದೂ ಅಪೂರ್ಣ. ವಿದೇಶದಿಂದ ಹೆತ್ತವರು ಬಂದಾಗ ಹೊಸ ಗೊಂಬೆಗಳು, ಮಿಠಾಯಿ, ಬಟ್ಟೆ ಜೊತೆ ಆಧುನಿಕ ಆಟ ಸಾಮಾಗ್ರಿ ಹೊತ್ತು ತರುತ್ತಿದ್ದರು. ಇಷ್ಟವಾಗದೆ ಇವನು ಎತ್ತಿ ಬಿಸಾಡುತ್ತಿದ್ದ. ಕೆಲವೇ ದಿನಗಳಷ್ಟೇ ಅಪ್ಪ ಅಮ್ಮ ಉಳಿಯುತ್ತಿದ್ದರು. ತನ್ನೊಳಗಿನ ಪೂರ್ಣ ಭಾವನೆಗಳ ಸ್ಪಷ್ಟವಾಗಿ ಹೇಳಿಕೊಳ್ಳಲಾಗದೆ ಅವನು ಚಡಪಡಿಸಿ ಅತ್ತು ಬಿಡುತ್ತಿದ್ದ. ಅವರು ತಬ್ಬಿ ಮುತ್ತಿಕ್ಕಿ ಹೊರಟು ಹೋಗುತ್ತಿದ್ದರು.

ಮತ್ತಿವನು ಏಕಾಂಗಿ. ನೆಂಟರು ಬಂಧು ಬಳಗದವರು ಇದ್ದರೂ ಯಾರೂ ಇವನ ಬಾಲ್ಯದ ಸೊಬಗನ್ನು ಹೆಚ್ಚಿಸಲಿಲ್ಲ. ಒಳ್ಳೆ ಬಟ್ಟೆ, ಖರ್ಚಿಗೆ ಹಣ, ಇರಲು ಸುಸಜ್ಜಿತ ಹಾಸ್ಟೆಲ್ ಕಲ್ಪಿಸಿದರೆ ತಮ್ಮ ಕರ್ತವ್ಯ ಮುಗಿದಂತೆ ಎಂದು ಹೆತ್ತವರು ಭಾವಿಸಿದ್ದರು. ಇವನು ಅವರ ನಿರಂತರ ಪ್ರೀತಿಗೆ ಕೈಚಾಚಿ ದಣಿಯುತ್ತಿದ್ದ. ಜೊತೆಗಾರ ಗೆಳೆಯರ ಅಪ್ಪ ಅವ್ವಂದಿರು ಆಗಾಗ ಬಂದು ತಮ್ಮ ಐಕಳಿಗೆ ತೋರುವ ಬೆಚ್ಚಗಿನ ಪ್ರೀತಿ ಕಂಡು ಕೀಳರಿಮೆ ಹೆಚ್ಚುತ್ತಿತ್ತು. ಗೆಣೆಕಾರರು ಊರಿಗೆ ಹೊರಟಾಗ ಇವನು ಮತ್ತೆ ಒಬ್ಬಂಟಿ. ಕೆಲ ಗೆಳೆಯರು ಮರುಕಗೊಂಡು ರಜೆಗಳಲ್ಲಿ ತಮ್ಮ ಹಳ್ಳಿಗೆ ಕರೆದುಕೊಂಡು ಹೋಗಿ ವಾತ್ಸಲ್ಯ, ಪ್ರೀತಿ, ತೋರಿದರು. ಈಗಲೂ ಇವನಲ್ಲಿ ಉಳಿದಿರುವ ತಾಜಾ ನೆನಪುಗಳು ಇವು ಮಾತ್ರ.

ಸಂಪತ್ತು ಸಂಗ್ರಹಿಕೊಂಡು ಪೋಷಕರು ವಿದೇಶದಿಂದ ಬರುವ ಹೊತ್ತಿಗೆ ಇವನು ಬೆಳೆದಿದ್ದ. ತಾನು ಓದಬೇಕು ಎಂದು ಬಯಸಿದ ಪದವಿ ಬಿಟ್ಟು ಎಂಜಿನಿಯರಿಂಗ್ ಕಲಿಯುವಂತೆ ಅಪ್ಪ-ಅಮ್ಮ ಒತ್ತಡ ಹೇರಿದ್ದರು. ತನಗೆ ಇಷ್ಟವಿಲ್ಲದಿದ್ದರೂ ಒಪ್ಪಿಕೊಂಡಿದ್ದ. ಓದು ಪೂರೈಸಿದ ಮೇಲೆ ಜೇಬು ತುಂಬುವ ಕೆಲಸವೂ ಸಿಕ್ಕಿತು. ಒಂದು ಚಡ್ಡಿ ಬನೀನಿನಲ್ಲಿ ತಾಸುಗಟ್ಟಲೆ ಮನೆಯಲ್ಲಿ ಕೂತು ಕಂಪ್ಯೂಟರ್ ಕೀಲಿಸುವುದು. ದಿನಕ್ಕೆ ಐದಾರು ವಿದೇಶಿ ಕಂಪನಿಗಳ ಜೊತೆ ಎಡೆಬಿಡದೆ ಮೀಟಿಂಗ್. ರಾತ್ರಿ ಹಗಲುಗಳು ಕಲೆಸಿ ರಾಡಿಯಾದವು. ಯಾವಾಗಲೋ ತಿನ್ನುವ, ಸಮಯ ಮೀರಿ ಎದ್ದೇಳುವ, ಚೆಲ್ಲಾಪಿಲ್ಲಿಯಾದ ಕನಸು ಮನಸ್ಸಿನ ಜೀವನ ರೂಪಿಸಿಕೊಂಡ. ಈಗ ಮದುವೆಯ ವಯಸ್ಸು ಮೀರುತ್ತಿದೆ. ಹೀಗೆ ಇದ್ದು ಬಿಡುವೆ ಎನ್ನುತ್ತಿದ್ದಾನೆ. ಹೆಚ್ಚು ಗೆಳೆಯರಿಲ್ಲದೆ ಮೌನವಾಗಿ ಇರುವುದು ಇವನ ಅಭ್ಯಾಸ.

ಯಾರ ಜೊತೆ ಹೇಗೆ ಹೊಂದಿಕೊಂಡು ಬದುಕಬೇಕು ಎಂಬ ಸಾಮಾಜಿಕ ನಡವಳಿಕೆ ಅವನಲ್ಲಿ ಸ್ವಲ್ಪವೂ ಇಲ್ಲ. ಭಯಗ್ರಸ್ತ ಮನಃಸ್ಥಿತಿ ಬೆಳೆಸಿಕೊಂಡಿದ್ದಾನೆ. ಒಂದೇ ಮನೆಯಲ್ಲಿದ್ದರೂ ಅಪ್ಪ ಅಮ್ಮನಿಂದ ಪ್ರತ್ಯೇಕ. ಮಗುವಾಗಿದ್ದಾಗ ಎತ್ತಿ ಆಡಿಸಲು ಸಮಯ ಹುಡುಕದ ಪೋಷಕರು ಈಗ ತೋರಗೊಡುವ ಪ್ರೀತಿ ಆತನಿಗೆ ನಾಟುತ್ತಿಲ್ಲ. ಗಿಡ ಬತ್ತಿದ ಮೇಲೆ ಗೊಬ್ಬರ, ನೀರು ಸುರಿದರೇನು ಪ್ರಯೋಜನ. ತಾವು ತಪ್ಪಿದ್ದೆಲ್ಲಿ ಎಂದು ಹಿರಿಯರಿಗೆ ಈಗ ಅರಿವಾಗಿದೆ. ಆದರೆ ಸಮಯ ಮೀರಿ ಹೋಗಿದೆ. ಅವನು ಎಲ್ಲರಂತೆ ಸಹಜವಾಗುವ ಹಂಬಲ ಇಟ್ಟುಕೊಂಡಿದ್ದಾನೆ. ಆಗಲೂ ಬಹುದು, ಕಾಯಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜುಲೈ 31, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ ಏಕಾದಶಿ ಗಂ. 15-56 ನಕ್ಷತ್ರ: ರೋಹಿಣಿ ಗಂ. 10-13 ಯೋಗ: ಧ್ರುವ ಗಂ. 14-14 ಕರಣ: ಬಾಲವ ಗಂ. 15-56, ಕರ್ಕಾಟಕ ಮಾಸದ 15 ನೇ ದಿನ, ಮಳೆನಕ್ಷತ್ರ: ಪುಷ್ಯ 4.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-19 ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 21 ಮೊಹರಮ್
ಅದೃಷ್ಟ ಸಂಖ್ಯೆ : 8, 12

ಮೇಷ: ಕೋರ್ಟು ಕಚೇರಿ ಕಾರ್ಯಗಳು ಯಾವುದೇ ರೀತಿಯ ಪರದಾಟವಿಲ್ಲದೆ ಅನುಕೂಲಕ್ಕೆ ತಕ್ಕಂತೆ ನಡೆಯುತ್ತದೆ. ಸೇವಿಸುವಂಥ ಆಹಾರದಿಂದ ಆರೋಗ್ಯ ಹದಗೆಡುವಂತಾಗಬಹುದು.

ವೃಷಭ: ತಂದೆ ಅಥವಾ ಕುಟುಂಬದ ಹಿರಿಯರ ಆರೋಗ್ಯದ ಕಡೆ ಗಮನವನ್ನು ನೀಡಬೇಕಾಗಬಹುದು. ಹಠ ಸ್ವಭಾವ ಕಡಿಮೆ ಮಾಡುವುದರಿಂದ ಏಳಿಗೆ ಇರುವುದು. ವೃತ್ತಿಯಲ್ಲಿ ಅಭಿವೃದ್ಧಿಯು ಸಮಾಧಾನವನ್ನು ನೀಡಲಿದೆ.

ಮಿಥುನ: ನಿರುದ್ಯೋಗಿ ಯುವಕರಿಗೆ ಖಾಸಗಿ ಸಂಸ್ಥೆಗಳಲ್ಲಿ ಉತ್ತಮ ಉದ್ಯೋಗ ದೊರೆಯಲಿದೆ. ಕಂಪನಿಯ ವಿದೇಶದಲ್ಲಿನ ಹುದ್ದೆಗಾಗಿ ಅರ್ಜಿ ಸಲ್ಲಿಸಬಹುದು. ಉದ್ಯೋಗದಲ್ಲಿ ಬದಲಾವಣೆಗೆ ಪೂರಕ ಸನ್ನಿವೇಶ ಕಂಡುಬರುತ್ತದೆ.

ಕರ್ಕಾಟಕ: ವೃತ್ತಿ ಕ್ಷೇತ್ರದಲ್ಲಿ ನಿಷ್ಠೆ, ಪ್ರಾಮಾಣಿಕತೆಗೆ ಅತಿಯಾದ ಗೌರವ ಆದರಗಳು ಸಿಗುವುದು. ರಾಜಕೀಯ ವಿಭಾಗದಲ್ಲಿ ಶ್ರಮಸಹಿತ ಜಯಸಾಧನೆ ಮನಸ್ಸಿಗೆ ತೃಪ್ತಿತರುವುದು. ನ್ಯಾಯಾಂಗ ಇಲಾಖೆಯವರಿಗೆ ಸೌಲಭ್ಯ ಸಿಗುತ್ತದೆ.

ಸಿಂಹ: ಉದ್ಯೋಗರಂಗದಲ್ಲಿ ಮೇಲಧಿಕಾರಿ ವರ್ಗದವರ ಕಿರಿಕಿರಿ ಇದ್ದರೂ ಪ್ರಯತ್ನಬಲಕ್ಕೆ ಯಶಸ್ಸು ಖಚಿತವಾಗಿ ದೊರಕಲಿದೆ. ಸಹೋದರನ ಬಹಳ ದಿನದ ನಂತರದ ಆಗಮನ ಸಂತೋಷಕ್ಕೆ ಕಾರಣವಾಗುತ್ತದೆ.

ಕನ್ಯಾ: ವೈದ್ಯಕೀಯ ವಿದ್ಯಾರ್ಥಿಗಳಿಗೆ ಯಶಸ್ಸು ಹಾಗು ಅನುಭವಸ್ಥರ ಸಲಹೆ ಲಭ್ಯ. ಸುಗಂಧ ದ್ರವ್ಯದ ಬಗ್ಗೆ ಕೆಲಸ ಮಾಡುತ್ತಿರುವವರಿಗೆ ನೀವು ಬಯಸಿದ ಫಲಿತಾಂಶ ದೊರೆಯಲಿದೆ. ಸಾಲದ ಬಾಕಿ ಬಾಬ್ತು ಹಿಂದಿರುಗಿಸುವರು.

ತುಲಾ: ಪಾಲುದಾರರೊಂದಿಗೆ ಮಾತುಕತೆ ನಡೆಸುವ ಅನಿವಾರ್ಯ ಎದುರಾಗಲಿದೆ. ಹಿಂದಿನಿಂದ ಬಂದಂಥ ಆಸ್ತಿಯ ಸಮಸ್ಯೆಗಳು ಮಾತುಕತೆಯ ಮೂಲಕ ಇತ್ಯರ್ಥವಾಗುವುದು. ಮನಸ್ಸಿಗೆ ಹಿತವಾದ ಅನುಭವ ಸಿಗಲಿದೆ.

ವೃಶ್ಚಿಕ: ಸರ್ಕಾರಿ ಉದ್ಯೋಗಸ್ಥರು ಮುಂಬಡ್ತಿ ಹೊಂದಲು ಬೇಕಾದ ತಯಾರಿಯನ್ನು ಮಾಡಿ. ಸಂಘ ಸಂಸ್ಥೆಗಳ ಹಣಕಾಸಿನ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ. ಸರ್ಕಾರದಿಂದ ಅನುಕೂಲ.

ಧನು: ಮದುವೆಯ ವಿಚಾರದ ತೀರ್ಮಾನದ ನಂತರ ಮನಸ್ಸಿನಲ್ಲಿ ಯಾವುದೇ ಗೊಂದಲಗಳಿಗೆ ಆಸ್ಪದ ನೀಡಬೇಡಿ. ರಾಜಕೀಯ ವ್ಯಕ್ತಿಗಳಿಗೆ ಗೊಂದಲದ ವಾತಾವರಣ ಇರುವುದು. ಶತ್ರುಗಳ ವಿರುದ್ಧ ಜಯ ಸಾಧಿಸ ಬಹುದು.

ಮಕರ: ಶಿಕ್ಷಣ ವೃತ್ತಿಯಲ್ಲಿರುವವರಿಗೆ ಒತ್ತಡ ವೃದ್ಧಿಯಾಗುತ್ತದೆ ಹಾಗೂ ಶೈಕ್ಷಣಿಕ ರಂಗದಲ್ಲಿನ ಚಟುವಟಿಕೆಗಳಿಂದ ಉತ್ತಮ ಹೆಸರನ್ನು ಸಂಪಾದಿಸುವಿರಿ. ಬದುಕನ್ನು ಅರ್ಥಪೂರ್ಣವಾಗಿ ನಡೆಸುವ ಯೋಚನೆಗಳಿರಲಿ.

ಕುಂಭ: ಶೀಘ್ರವಾಗಿ ನಿರ್ದಿಷ್ಟವಾದ ಕಾರ್ಯವೊಂದನ್ನು ಪೂರೈಸಲೇಬೇಕೆಂಬ ಯೋಚನೆಯು ಕನಸಾಗಿಯೇ ಉಳಿಯುವುದು. ಮನೆ ಕಟ್ಟುವ ಆಸೆಗೆ ಸಹೋದರರಿಂದ ಹೆಚ್ಚಿನ ಪ್ರೋತ್ಸಾಹ ಸಿಗುವುದು.

ಮೀನ: ಸಿವಿಲ್ ಎಂಜಿನಿಯರ್‌ಗಳಿಗೆ ಅವಕಾಶಗಳು ಸಿಗುವುದು. ಬಿಡುವಿನೊಂದಿಗೆ ಮಡದಿ, ಮಕ್ಕಳೊಂದಿಗಿನ ಸಂತಸದ ದಿನ ನಿಮ್ಮದಾಗಲಿದೆ. ಮನೆಯವರೊಂದಿಗೆ ತೀರ್ಥಯಾತ್ರೆಗೆ ತೆರಳುವ ಬಗ್ಗೆ ಚರ್ಚೆ ನಡೆಸುವಿರಿ.

ಪದಬಂಧ 5758


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

4.ಬಹುಮಾನವಾಗಿ ಕೊಡುವ ಬಿಲ್ಲೆ (3)
6.ಸೌದೆ ಮೊದಲಿದ್ದಾಗ ನಿರರ್ಥಕ ಚಿಂತೆಯೇ? (5)
8.ದೇಹಶ್ರಮದ ಕೆಲಸವಿಲ್ಲಿ ಉಲ್ಟಾ ಆಗಿದೆ (3)
9.ಫಲಕದ ಬಳಿಯಿರಿಸಿದ ಹಣ್ಣು (2)
11.ಹಗಲುಗನಸು ಕಾಣುತ್ತಿರುವಾಗ ಆಕಳು ಬಂದಿದೆ (2)
13.ಹಿಮದ ಹತ್ತಿರ ಇಂಪಾದುದು ಕೇಳುತ್ತಿದೆ! (3)
15.ಚಿನವಾರ ಹಿಡಿದುಕೊಂಡಿರುವ ಪಟಾಕಿ (5)
17.ಕೆಲವರು ಮಾಡುವ ಕಾರ್ಯ (3)

ಮೇಲಿಂದ ಕೆಳಕ್ಕೆ

1.ಶ್ರುತಿಗೆ ಹೊಂದದ ಸ್ವರ (4)
2.ಇದು ಉತ್ತಮವಾದುದು (2)
3.ಮಾತಿಲ್ಲದ ನೀರವತೆ (2)
5.ಕಳ್ಳ ಕಳ್ಳಿಯ ಬಗ್ಗೆ ತೋರಿದ ಅಸ್ಥೆ! (4)
6.ಕಾರ್ಯವನ್ನು ನಿರ್ವಹಿಸುವ ಸಮಿತಿ (7)
7.ಚಿನ್ನದ ವ್ಯಾಪಾರಿ (3)
10.ಬಳಗದವರು ಬಂದಾಗ ಆದ ಆಯಾಸ! (4)
12.ದುಮ್ಮಾನವಲ್ಲ!ಹಿಗ್ಗು! (3)
14.ಸರಿಯೊಳಗಿನ ಅಂದಾಜು! (4)
15.ಶವವನ್ನು ಸುಡಲು ಒಟ್ಟಿದ ಕಟ್ಟಿಗೆ ರಾಶಿ (2)
16.ಕಾಲಿನ ಆಭರಣ (2)



5757ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹರವಿ 4.ಕ್ಷಅ
6.ರಾಜಾಧಿರಾಜ 8.ಗುಲಾಮ 10.ಹಿರಣ್ಯ
11.ಬೀಜಗಣಿತ 12.ಹವೀಜ 13.ಗರಡಿ
15.ಶಯನಗೃಹ
17.ಸ್ತುತಿ 18.ನಡುಕ

ಮೇಲಿಂದ ಕೆಳಕ್ಕೆ:
1.ಹಡಗು 2.ವಿರಾಮ 3.ಸಂಧಿ
5.ಅಗ್ರಗಣ್ಯ 7.ಜನಹಿತ 9.ಪ್ರಗತಿ
11.ಬೀಜಕೋಶ
12.ಹದ್ದುಬಸ್ತು 13.ಗಹನ
14.ಡಿನ್ನಕ 16.ನಗ್ನ

ಸುಡೊಕು 6143

2		4		9		7		
	1		4		7		5	
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1	3		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6142ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

ಪಶ್ಚಿಮ ಘಟ್ಟದ ವ್ಯಾಪ್ತಿಗೆ ಬರುವ 123 ಹಳ್ಳಿಗಳಲ್ಲಿ 60 ಹಳ್ಳಿಗಳು ಇಡುಕ್ಕಿ, ವಯನಾಡ್ ಜಿಲ್ಲೆಗಳಿಗೆ ಸೇರಿವೆ • ಮರುಕಳಿಸುತ್ತಲೇ ಇವೆ ಅವಘಡಗಳು

ಕಸ್ತೂರಿ ರಂಗನ್ ವರದಿ ವಿರೋಧಿಸಿದ್ದ ಕೇರಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಹರಡಿರುವ ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಕಾಪಾಡುವ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಲು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು ನೇಮಿಸಿದ್ದ ಪ್ರೊ.ಮಾಧವ ಗಾಡ್ಗೀಳ್ ನೇತೃತ್ವದ ಸಮಿತಿ 2011ರಲ್ಲಿ ಮತ್ತು ಪ್ರೊ.ಕಸ್ತೂರಿ ರಂಗನ್ ನೇತೃತ್ವದ ಮತ್ತೊಂದು ಸಮಿತಿ 2013ರಲ್ಲಿ ಸಲ್ಲಿಸಿದ್ದ ವರದಿಗಳನ್ನು ಕೇರಳ ಸರ್ಕಾರ ವಿರೋಧಿಸಿತ್ತು.

ಕೇರಳದ 14 ಜಿಲ್ಲೆಗಳ ಪೈಕಿ 12 ಜಿಲ್ಲೆಗಳಲ್ಲಿರುವ 123 ಹಳ್ಳಿಗಳ ವ್ಯಾಪ್ತಿಯ 13,108 ಚದರ ಕಿ.ಮೀ ಭೂಪ್ರದೇಶವನ್ನು ಪರಿಸರ ಸೂಕ್ಷ್ಮ ಭೂಪ್ರದೇಶ ಎಂದು ಪರಿಗಣಿಸಬೇಕು ಎಂಬುದಾಗಿ ಕಸ್ತೂರಿ ರಂಗನ್ ವರದಿ ಶಿಫಾರಸು ಮಾಡಿತ್ತು. 123 ಹಳ್ಳಿಗಳ ಪೈಕಿ 60 ಹಳ್ಳಿಗಳು ಇಡುಕ್ಕಿ ಮತ್ತು ವಯನಾಡ್ ಜಿಲ್ಲೆಗಳಿಗೆ ಸೇರಿವೆ. ಈ ಹಳ್ಳಿಗಳ ವ್ಯಾಪ್ತಿಯಲ್ಲಿ ಗಣಿಗಾರಿಕೆ, ಕ್ವಾರಿ, ಮರ ಕಡಿಯುವುದು, ಕೈಗಾರಿಕೆ ಸ್ಥಾಪನೆ ಮತ್ತು ಕಟ್ಟಡ ನಿರ್ಮಾಣದಂಥ ಚಟುವಟಿಕೆಗಳ ಮೇಲೆ ಹಲವು ನಿರ್ಬಂಧಗಳನ್ನು ವಿಧಿಸಿ ಕೇಂದ್ರ ಸರ್ಕಾರವು ನವೆಂಬರ್ 2013ರಲ್ಲಿ ಎರಡು ಆದೇಶಗಳನ್ನು ಜಾರಿ ಮಾಡಿತ್ತು. ಅದನ್ನು ವಿರೋಧಿಸಿ 'ಪಶ್ಚಿಮ ಘಟ್ಟ ಜನ ಸಂರಕ್ಷಣಾ ಸಮಿತಿ'ಯ ಅಡಿ ಕೇರಳದಲ್ಲಿ ಪ್ರತಿಭಟನೆಗಳು ಆರಂಭವಾದವು.

ವ್ಯಾಪಕ ಪ್ರತಿಭಟನೆಗಳ ಕಾರಣ, ರಾಜ್ಯದ ಪರಿಸರ ಸೂಕ್ಷ್ಮ ಪ್ರದೇಶವನ್ನು ಕಡಿಮೆ ಮಾಡಬೇಕು ಎಂದು ಕೇರಳ, ಕೇಂದ್ರ ಸರ್ಕಾರವನ್ನು ಕೋರಿತು. ಅದರ ಮನವಿಗೆ ಸ್ಪಂದಿಸಿದ ಕೇಂದ್ರವು, ಮೊದಲಿನ 13,108 ಚದರ ಕಿ.ಮೀ ವ್ಯಾಪ್ತಿಯಲ್ಲಿ 3100 ಚ.ಕಿ.ಮೀ ಪ್ರದೇಶವನ್ನು ಕೈಬಿಟ್ಟು, 9,994 ಚ.ಕಿ.ಮೀ ಭೂಭಾಗವನ್ನು ಮಾತ್ರ ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಿತು. ಅದರಲ್ಲಿ, 9,107 ಚ.ಕಿ.ಮೀ ಅರಣ್ಯ ಪ್ರದೇಶವಾಗಿದ್ದರೆ, 887 ಚ.ಕಿ.ಮೀ ಅರಣ್ಯೇತರ ಪ್ರದೇಶವಾಗಿದೆ. ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು ಇದುವರೆಗೆ ಐದು ಬಾರಿ (2014, 2015, 2017, 2018 ಮತ್ತು 2022) ಕಸ್ತೂರಿ ರಂಗನ್ ವರದಿ ಜಾರಿ ಸಂಬಂಧ ಕರಡು ಅಧಿಸೂಚನೆ ಪ್ರಕಟಿಸಿ, ಆಕ್ಷೇಪಗಳನ್ನು ಆಹ್ವಾನಿಸಿದೆ. ಪ್ರತಿ ಬಾರಿಯೂ ಪ್ರತಿಭಟನೆ, ವಿರೋಧ ರಾಜಕೀಯ ಮೇಲಾಟಗಳು ನಡೆದು ವರದಿ ಜಾರಿ ವಿಚಾರ ಹಾಗೆಯೇ ಉಳಿಯುತ್ತಿದೆ.

ವರದಿ ಕುರಿತು ಕೇರಳದ ವಾದವೇನು?

- ಪರಿಸರ ಸೂಕ್ಷ್ಮ ಪ್ರದೇಶಗಳು ಎಂದು ಗುರುತಿಸಿರುವ ಭೂಭಾಗಗಳಲ್ಲಿ ದಟ್ಟ ಜನವಸತಿ ಇದೆ
- ವರದಿ ಜಾರಿಯಾದರೆ, 123 ಹಳ್ಳಿಗಳ ಸಾವಿರಾರು ಕುಟುಂಬಗಳನ್ನು ಸ್ಥಳಾಂತರ ಮಾಡಿ, ಪುನರ್ವಸತಿ ಕಲ್ಪಿಸಬೇಕಾಗುತ್ತದೆ
- ವರದಿಯು ರೈತ ವಿರೋಧಿಯಾಗಿದ್ದು, ಕೃಷಿ ಚಟುವಟಿಕೆಗಳ ಮೇಲೆ ಪರಿಣಾಮ ಬೀರುತ್ತದೆ
- ಹೈನುಗಾರಿಕೆ, ಮೀನು ಸಾಕಾಣಿಕೆ ಮೇಲೆ ನಿರ್ಬಂಧ ವಿಧಿಸಲಾಗುತ್ತದೆ
- ವರದಿ ಜಾರಿಯಿಂದ ಅಭಿವೃದ್ಧಿ ಚಟುವಟಿಕೆಗಳಿಗೆ ತೊಡಕು ಉಂಟಾಗಲಿದೆ
- ಪಶ್ಚಿಮ ಘಟ್ಟಗಳಲ್ಲಿ ವಾಸವಾಗಿರುವ ಬುಡಕಟ್ಟು ಸಮುದಾಯಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ



2019ರ ಆಗಸ್ಟ್ 14ರಂದು ಕೇರಳದ ಪೂತ್ತುಮಲದಲ್ಲಿ ಭೂಕುಸಿತ ಸಂಭವಿಸಿತ್ತು. ಮಣ್ಣಿನಡಿ ಸಿಲುಕಿದ್ದವರಿಗಾಗಿ ಸ್ವಯಂ ಸೇವಕರು, ಎನ್‌ಡಿಆರ್‌ಎಫ್ ಸಿಬ್ಬಂದಿ ಹುಡುಕಾಟ ನಡೆಸಿದ್ದರು. ಎಎಫ್‌ಪಿ ಸಂಗ್ರಹ ಚಿತ್ರ

ಪೂತ್ತುಮಲ ಭೂಕುಸಿತ ಮರೆಯುವ ಮುನ್ನವೇ..

ಪೂತ್ತುಮಲ ಎನ್ನುವುದು ವಯನಾಡ್ ಜಿಲ್ಲೆಯ ಮೇಪ್ಪಾಡಿ ಸಮೀಪದ ಒಂದು ಹಳ್ಳಿ. 2019ರ ಆಗಸ್ಟ್ 8ರಂದು ಮುಂಗಾರು ಸಂದರ್ಭದಲ್ಲಿ ಪೂತ್ತುಮಲ ಗ್ರಾಮದ ಸುತ್ತಮತ್ತ 24 ಗಂಟೆಗಳಲ್ಲಿ 50 ಸೆಂ.ಮೀ. ಮಳೆ ಸುರಿದಿತ್ತು. ಅದರ ಪರಿಣಾಮವಾಗಿ ಗ್ರಾಮದಲ್ಲಿ ಭೂಕುಸಿತ ಸಂಭವಿಸಿತ್ತು. ಅದು ಎಷ್ಟು ತೀವ್ರವಾಗಿತ್ತು ಎಂದರೆ, 20 ಹೆಕ್ಟೇರ್‌ನಷ್ಟು ಭೂಮಿಯು 2 ಕಿಮೀನಷ್ಟು ದೂರಕ್ಕೆ ಸರಿದಿತ್ತು. 100 ಎಕರೆಯಷ್ಟು ಟೀ ತೋಟ ಕೊಚ್ಚಿಹೋಗಿತ್ತು. ವಯನಾಡ್ ಜಿಲ್ಲೆಯ ಸುಮಾರು 25,000 ಹೆಕ್ಟೇರ್ ಪ್ರದೇಶದಲ್ಲಿ ಫಲವತ್ತಾದ ಭೂಮಿಯ ಎರಡು ಸೆಂಟಿಮೀಟರ್‌ನಷ್ಟು ಮೇಲ್ಮೈ ಕೊಚ್ಚಿಕೊಂಡು ಹೋಗಿತ್ತು. 17 ಜನರು ಮೃತಪಟ್ಟಿದ್ದರು.

ಪಶ್ಚಿಮ ಘಟ್ಟಗಳ ಸೂಕ್ಷ್ಮ ಪರಿಸರವನ್ನು ಒಳಗೊಂಡಿರುವ ವಯನಾಡ್‌ನ 102.6 ಚದರ ಕಿ.ಮೀ. ಪ್ರದೇಶವು ತೀವ್ರ ಭೂಕುಸಿತದ ಅಪಾಯದ ಭೂಭಾಗವಾಗಿದ್ದರೆ, 196.6 ಚದರ ಕಿ.ಮೀ. ಪ್ರದೇಶವು ಮಧ್ಯಮ ಶ್ರೇಣಿಯ ಭೂಕುಸಿತದ ಅಪಾಯದ ಭೂಭಾಗವಾಗಿದೆ. ಹವಾಮಾನ ಬದಲಾವಣೆಯಿಂದ ಭೂಕುಸಿತದ ಅಪಾಯ ಹೆಚ್ಚಾಗಿರುವ ಇರುವ ಭೂಪ್ರದೇಶ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ತಜ್ಞರು ಎಚ್ಚರಿಸಿದ್ದರು.


ಪ್ರವಾಹದ ದುಃಸ್ವಪ್ನ

2018ರ ಆಗಸ್ಟ್ 14ರಿಂದ 19ರ ನಡುವೆ ಕೇರಳದಲ್ಲಿ ಸುರಿದ ಭಾರಿ ಮಳೆಗೆ 14 ಜಿಲ್ಲೆಗಳ ಪೈಕಿ 13 ಜಿಲ್ಲೆಗಳಲ್ಲಿ ಪ್ರವಾಹ ಉಂಟಾಗಿ ಅಪಾರ ಸಾವು ನೋವು ಉಂಟಾಗಿತ್ತು. 480ಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡಿದ್ದರು. ಆಸ್ತಿಗೆ ಭಾರಿ ಹಾನಿಯಾಗಿತ್ತು. 1924ರಲ್ಲಿ ಉಂಟಾಗಿದ್ದ ನೆರೆಯ ನಂತರ ಆ ಮಟ್ಟಿಗಿನ ಭೀಕರ ಪ್ರವಾಹ ಸ್ಥಿತಿಯನ್ನು ಕೇರಳ ಕಂಡಿರಲಿಲ್ಲ.

ಆಗಸ್ಟ್ ಮೊದಲ ಆರಂಭದಲ್ಲಿ ಶುರುವಾದ ಮಳೆ ಎರಡನೇ ವಾರದಲ್ಲಿ ತೀವ್ರಗೊಂಡಿತ್ತು. ಆಗಸ್ಟ್ 1ರಿಂದ 19ರ ನಡುವೆ ರಾಜ್ಯದಲ್ಲಿ 75.86 ಸೆಂ.ಮೀ ಮಳೆಯಾಗಿತ್ತು.

ಇಡುಕ್ಕಿ ಜಲಾಶಯ ಸೇರಿದಂತೆ ರಾಜ್ಯದ ಎಲ್ಲ ಜಲಾಶಯಗಳಿಂದ ಅನಿವಾರ್ಯವಾಗಿ ಹೆಚ್ಚು ನೀರು ಹೊರಗೆ ಬಿಡಬೇಕಾಯಿತು. ಇದರೊಂದಿಗೆ ಮಳೆಯೂ ತೀವ್ರವಾಗಿದ್ದರಿಂದ ನೆರೆ ಸೃಷ್ಟಿಯಾಗಿ, ಭೂಕುಸಿತ ಸಂಭವಿಸಿ ಸಾವಿರಾರು ಜನ ಮನೆಗಳನ್ನು ಕಳೆದುಕೊಳ್ಳಬೇಕಾಯಿತು. ಕೇರಳದ ಜನರನ್ನು ಈ ಪ್ರವಾಹ ದುಃಸ್ವಪ್ನವಾಗಿ ಇನ್ನೂ ಕಾಡುತ್ತಿದೆ.

ಎಲ್ಲ ಜಿಲ್ಲೆಗಳಲ್ಲಿ ಭೂಕುಸಿತದ ಅಪಾಯ



ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಅಂಗಸಂಸ್ಥೆ ರಾಷ್ಟ್ರೀಯ ದೂರ ಸಂವೇದಿ ಕೇಂದ್ರವು (ಎನ್‌ಆರ್‌ಎಸ್‌ಸಿ) ದೂರ ಸಂವೇದಿ ದತ್ತಾಂಶ ಆಧರಿಸಿ, ಕಳೆದ ವರ್ಷದ ಫೆಬ್ರುವರಿಯಲ್ಲಿ ದೇಶದ ಭೂಕುಸಿತದ ನಕ್ಷೆಯನ್ನು (Landslide Atlas of India) ಸಿದ್ಧಪಡಿಸಿದೆ.

ಹಿಮಾಲಯ, ಪಶ್ಚಿಮ ಘಟ್ಟಗಳು ಸೇರಿದಂತೆ ದೇಶದ 17 ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ಭೂಕುಸಿತ ಸಂಭವಿಸಿರುವ ಮತ್ತು ಭೂಕುಸಿತದ ಸಾಧ್ಯತೆ ಇರುವ ನಿರ್ದಿಷ್ಟ ಜಿಲ್ಲೆ, ಸ್ಥಳಗಳನ್ನು ಈ ನಕ್ಷೆಯಲ್ಲಿ ಗುರುತಿಸಲಾಗಿದೆ.

ಭೂಕುಸಿತದ ಅಪಾಯ ಎದುರಿಸುತ್ತಿರುವ 147 ಜಿಲ್ಲೆಗಳನ್ನು ಪಟ್ಟಿ ಮಾಡಲಾಗಿದ್ದು, ಸಾಮಾಜಿಕ–ಆರ್ಥಿಕ ಮಾನದಂಡದ ಆಧಾರದಲ್ಲಿ ರ್‍ಯಾಂಕಿಂಗ್ ಕೂಡ ನೀಡಲಾಗಿದೆ.

ಈ ಪಟ್ಟಿಯಲ್ಲಿ ಕೇರಳದ ಎಲ್ಲ ಜಿಲ್ಲೆಗಳೂ ಸ್ಥಾನ ಪಡೆದಿವೆ. ರಾಜ್ಯದ 14 ಜಿಲ್ಲೆಗಳ ಪೈಕಿ 13 ಜಿಲ್ಲೆಗಳು ಮೊದಲ 50 ರ್‍ಯಾಂಕಿಂಗ್‌ನಲ್ಲಿ ಸ್ಥಾನ ಪಡೆದಿವೆ. 20ರ ಒಳಗಡೆ ಏಳು ಜಿಲ್ಲೆಗಳಿವೆ. ಈಗ ಮಹಾ ದುರಂತಕ್ಕೆ ಸಾಕ್ಷಿಯಾಗಿರುವ ವಯನಾಡ್ 13ನೇ ಸ್ಥಾನದಲ್ಲಿದೆ. ಉತ್ತರಾಖಂಡದ ರುದ್ರಪ್ರಯಾಗ್ ಮೊದಲ ಸ್ಥಾನದಲ್ಲಿದೆ. ಅದೇ ರಾಜ್ಯದ ಟಿಹರಿ ಗಢವಾಲ್ ಎರಡನೇ ಸ್ಥಾನದಲ್ಲಿದೆ.

ಕರ್ನಾಟಕದ ಕೊಡಗು ಜಿಲ್ಲೆ 12ನೇ ಸ್ಥಾನದಲ್ಲಿದೆ. ಹಾಸನ ಮತ್ತು ದಕ್ಷಿಣ ಕನ್ನಡ ಕ್ರಮವಾಗಿ 53 ಮತ್ತು 54ನೇ ಸ್ಥಾನದಲ್ಲಿವೆ.

ಆಧಾರ: ಇಸ್ರೊದ ಎನ್‌ಆರ್‌ಎಸ್‌ಸಿ ಭೂಕುಸಿತ ನಕ್ಷೆ ವರದಿ, 2018ರ ಕೇರಳ ಪ್ರವಾಹ ಕುರಿತ ಕೇಂದ್ರ ಜಲ ಆಯೋಗದ ವರದಿ ಮತ್ತು ರಾಜೀವ್ ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಡೆವೆಲಪ್‌ಮೆಂಟ್ ಸ್ಟಡೀಸ್, ಕೇರಳ ಸರ್ಕಾರದ ಜೀವ ವೈವಿಧ್ಯ ಮಂಡಳಿಯ ವರದಿ

ವಯನಾಡ್‌ಗೆ ಮೈಸೂರು ತಂಡ

ಮೈಸೂರು: ವಯನಾಡ್‌ನಲ್ಲಿ ಭೂಕುಸಿತ ಸಂಭವಿಸಿರುವುದರಿಂದ ಜಿಲ್ಲೆಯವರೂ ಸೇರಿದಂತೆ ರಾಜ್ಯದ ಯಾರಾದರೂ ಇದ್ದರೆ, ಅವರನ್ನು ರಕ್ಷಿಸಲು ಜಿಲ್ಲಾಡಳಿತವು ಇಬ್ಬರು ಅಧಿಕಾರಿಗಳ ತಂಡವನ್ನು ಕೇರಳಕ್ಕೆ ಮಂಗಳವಾರ ಕಳುಹಿಸಿಕೊಟ್ಟಿದೆ.

'ಭೂಕುಸಿತದಲ್ಲಿ ಸಿಲುಕಿದವರ ಮಾಹಿತಿ ನೀಡಲು ಜಿಲ್ಲಾಡಳಿತ ಕಂಟ್ರೋಲ್ ರೂಂ ತೆರೆದಿದೆ. ಇದುವರೆಗೂ ಯಾವುದೇ ದೂರು ದಾಖಲಿಸಿಲ್ಲ. ಮುಂಜಾಗ್ರತಾ ಕ್ರಮವಾಗಿ ತಂಡವನ್ನು ಕಳುಹಿಸಲಾಗಿದೆ' ಎಂದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ತಿಳಿಸಿದ್ದಾರೆ.

ರಕ್ಷಣಾ ಕಾರ್ಯ; ಸೇನೆ ಭಾಗಿ

ವಯನಾಡ್ (ಪಿಟಿಐ): ಭೂಕುಸಿತ ನಡೆದ ಸ್ಥಳದಲ್ಲಿ ರಕ್ಷಣಾ ಕಾರ್ಯ ಸಮರೋಪಾದಿಯಲ್ಲಿ ನಡೆಯುತ್ತಿದೆ.

ಎನ್‌ಡಿಆರ್‌ಎಫ್ ಮತ್ತು ಎಲ್ಲ ತುರ್ತು ಸೇವೆಗಳ ಸಿಬ್ಬಂದಿಯ ಜೊತೆ ಭಾರತೀಯ ಸೇನಾ ಸಿಬ್ಬಂದಿ ಕೂಡ ರಕ್ಷಣಾ ಕಾರ್ಯಾಚರಣೆಯಲ್ಲಿ ಕೈಜೋಡಿಸಿದ್ದು, ಮಣ್ಣಿನ ಅಡಿಯಲ್ಲಿ ಸಿಲುಕಿರುವವರು, ನಾಪತ್ತೆಯಾಗಿರುವವರ ಪತ್ತೆಗೆ ಮತ್ತು ಗಾಯಾಳುಗಳ ರಕ್ಷಣೆಗೆ ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ.

ಭಾರಿ ಇಂಜಿನಿಯರಿಂಗ್ ಸಲಕರಣೆಗಳನ್ನು ಹಾಗೂ ಶ್ವಾನ ದಳವನ್ನು ಏರ್‌ಲಿಫ್ಟ್ ಮಾಡಲಾಗಿದೆ ಎಂದು ರಕ್ಷಣಾ ಸಚಿವಾಲಯವು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ಸ್ಥಳಾಂತರಗೊಂಡಿದ್ದ ಕೆಲ ಕುಟುಂಬಗಳು

ವಯನಾಡ್‌ನ ಮೇಪ್ಪಾಡಿ ವಲಯದಲ್ಲಿ ಕಳೆದ ಎರಡು ದಿನಗಳಿಂದ 20 ಸೆಂ.ಮೀಗೂ ಹೆಚ್ಚು ಮಳೆಯಾಗಿದೆ. ಜಿಲ್ಲಾಡಳಿತವು ಎಚ್ಚರದಿಂದ ಇರುವಂತೆ ಜನರಿಗೆ ಸೂಚಿಸಿತ್ತು. ಇದರಿಂದ ಕೆಲವು ಕುಟುಂಬಗಳು ಸೋಮವಾರವೇ ಸುರಕ್ಷಿತ ಸ್ಥಳಗಳಿಗೆ ತೆರಳಿದ್ದವು. ಆದರೆ ಚೂರಲ್‌ಮಲ ಗ್ರಾಮದ ಕೆಲವು ಕುಟುಂಬಗಳು ಅಲ್ಲೇ ಉಳಿದುಕೊಂಡಿದ್ದವು. ಏಕೆಂದರೆ ಇದುವರೆಗೆ ಯಾವುದೇ ಅನಾಹುತ ಸಂಭವಿಸದೇ ಇದ್ದ ಈ ಗ್ರಾಮ 'ಸುರಕ್ಷಿತ ಪ್ರದೇಶ' ಎಂದೇ ಸ್ಥಳೀಯರು ಭಾವಿಸಿದ್ದರು.

- ಮುಂಡಕ್ಕೈ ಗ್ರಾಮದಲ್ಲಿ ಸುಮಾರು 250 ಮನೆಗಳಿದ್ದು, ಅದರಲ್ಲಿ 150 ಮನೆಗಳು ನಾಶವಾಗಿವೆ
- ಚೂರಲ್‌ಮಲ ಗ್ರಾಮದಲ್ಲಿ ಅಂದಾಜು 300 ಮನೆಗಳಿದ್ದು, 100ಕ್ಕೂ ಅಧಿಕ ಮನೆಗಳು ಕುಸಿದಿವೆ

ರಕ್ಷಣಾ ಕಾರ್ಯಾಚರಣೆಗೆ ಅಧಿಕಾರಿಗಳ ನಿಯೋಜನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭೂ ಕುಸಿತದಿಂದ ತತ್ತರಿಸಿರುವ ವಯನಾಡ್‌ನಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗೆ ಎಲ್ಲ ರೀತಿಯ ಸಹಕಾರ ನೀಡಲಾಗುತ್ತಿದ್ದು, ಇದಕ್ಕಾಗಿ ಇಬ್ಬರು ಐಎಎಸ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಹಿರಿಯ ಐಎಎಸ್ ಅಧಿಕಾರಿ ಪಿ.ಸಿ. ಜಾಫರ್ (ಮೊಬೈಲ್– 9448355577) ಹಾಗೂ ದಿಲೀಶ್ ಶಶಿ (9446000514) ಅವರು ಪರಿಹಾರ ಕಾರ್ಯಾಚರಣೆಗಳ ಸಮನ್ವಯದ ಉಸ್ತುವಾರಿ ನೋಡಿಕೊಳ್ಳಲಿದ್ದಾರೆ.

ವೈದ್ಯಕೀಯ ನೆರವು, ಆಸ್ಪತ್ರೆ ಸೌಲಭ್ಯ ಹಾಗೂ ಗಾಯಾಳುಗಳನ್ನು ಕರೆತರಲು ಎಚ್.ಡಿ. ಕೋಟೆಯಲ್ಲಿ ಬಸ್‌ಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ. ಚಾಮರಾಜನಗರ ಜಿಲ್ಲಾಡಳಿತವೂ ಜಿಲ್ಲೆಯ ಗಡಿಭಾಗದಿಂದ ವಯನಾಡ್‌ಗೆ ಆಗಾಗ ತೆರಳುವ ನಾಗರಿಕರ ನೆರವಿಗಾಗಿ ಸಹಾಯವಾಣಿ ಪ್ರಾರಂಭಿಸಿದೆ. ಸಹಾಯವಾಣಿ ಸಂಖ್ಯೆಗಳು: 08226-223163, 08226-223161, 08226-223160. ವಾಟ್ಸಾಪ್ ಸಂಖ್ಯೆ: 9740942901

ದುರಂತದ ಪ್ರಮುಖ ಅಂಶಗಳು

- 2018ರ ಪ್ರವಾಹದ ಬಳಿಕ ಕೇರಳದಲ್ಲಿ ಸಂಭವಿಸಿದ ಅತಿದೊಡ್ಡ ಪ್ರಕೃತಿ ದುರಂತ
- ಮೃತರ ಕುಟುಂಬಗಳಿಗೆ ಕೇಂದ್ರ ಸರ್ಕಾರದಿಂದ ₹2 ಲಕ್ಷ ಪರಿಹಾರ ಘೋಷಣೆ. ಗಾಯಾಳುಗಳಿಗೆ ₹50 ಸಾವಿರ ಪರಿಹಾರ
- ವಯನಾಡ್ ಜಿಲ್ಲೆಯ 45 ಕಡೆ ಕಾಳಜಿ ಕೇಂದ್ರ ಆರಂಭ; ಇದುವರೆಗೆ 3,069 ಮಂದಿಗೆ ಆಶ್ರಯ
- ಹಲವು ಪ್ರವಾಸಿಗರು ಅವಶೇಷಗಳಡಿ ಸಿಲುಕಿರುವ ಆತಂಕ
- ತಾತ್ಕಾಲಿಕ ಸೇತುವೆ ನಿರ್ಮಿಸಿ ಸಾವಿರಕ್ಕೂ ಅಧಿಕ ಮಂದಿಯ ರಕ್ಷಣೆ
- ಎರಡು ದಿನಗಳ ಶೋಕಾಚರಣೆ ಘೋಷಿಸಿದ ಕೇರಳ ಸರ್ಕಾರ. ಎಲ್ಲ ಮನರಂಜನಾ ಕಾರ್ಯಕ್ರಮಗಳು ರದ್ದು
- ನೆರವಿನ ಹಸ್ತ ಚಾಚಿದ ಕರ್ನಾಟಕ, ತಮಿಳುನಾಡು. ರಕ್ಷಣಾ ಕಾರ್ಯಾಚರಣೆಗೆ ತಂಡವನ್ನು ಕಳುಹಿಸಿದ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್; ಪರಿಹಾರ ಕಾರ್ಯಗಳಿಗೆ ₹5 ಕೋಟಿ ಘೋಷಣೆ

ನೆರೆ ಜಿಲ್ಲೆಗೆ ಕೊಚ್ಚಿಹೋದ ಮೃತದೇಹಗಳು...

ಭೂಕುಸಿತದಲ್ಲಿ ದಾರುಣ ಅಂತ್ಯ ಕಂಡವರ ಮೃತದೇಹಗಳು ನದಿಯಲ್ಲಿ ಸುಮಾರು 40 ಕಿ.ಮೀ ದೂರ ಸಾಗಿ, ನೆರೆಯ ಮಲಪ್ಪುರ ಜಿಲ್ಲೆಯಲ್ಲಿ ಪತ್ತೆಯಾಗಿವೆ. 'ಮಲಪ್ಪುರಂನ ಪೋತ್ತುಕಲ್ ಗ್ರಾಮದಲ್ಲಿ ಚಾಲಿಯಾರ್ ನದಿಯಲ್ಲಿ 16 ಮೃತದೇಹಗಳು ಪತ್ತೆಯಾಗಿವೆ' ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ. ಶೋಧ ಕಾರ್ಯದಲ್ಲಿ ತೊಡಗಿರುವವರಿಗೆ ಮಾನವನ ದೇಹದ ಅಂಗಗಳೂ ದೊರೆತಿವೆ ಎಂದರು.

ವಯನಾಡ್‌ನಲ್ಲಿ ಮರಣ ಮೃದಂಗ

ಒಂದನೇ ಪುಟದಿಂದ...

ಕುಸಿದ ಮನೆಗಳ ಅವಶೇಷಗಳಡಿ ಸಿಕ್ಕಿಬಿದ್ದ ಹಲವರು ಫೋನ್ ಕರೆ ಮಾಡಿ ಸಹಾಯಕ್ಕಾಗಿ ಅಂಗಲಾಚಿದ್ದು, ದುರಂತದ ತೀವ್ರತೆಯನ್ನು ಎತ್ತಿತೋರಿಸಿದೆ. ಘಟನೆ ಸ್ಥಳದ ಹೃದಯ ವಿದ್ರಾವಕ ದೃಶ್ಯಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿವೆ.

ಬುಡಸಮೇತ ಉರುಳಿಬಿದ್ದ ಮರಗಳು ನೀರಲ್ಲಿ ಕೊಚ್ಚಿಕೊಂಡು ಹೋಗಿ ಒಂದೆಡೆ ರಾಶಿ ಬಿದ್ದಿರುವುದು, ಅವುಗಳ ನಡುವೆ ಸಿಲುಕಿರುವ ವಾಹನಗಳು, ಮನೆಗಳ ಅವಶೇಷ, ಅಲ್ಲಲ್ಲಿ ಬಿದ್ದಿದ್ದ ಮೃತದೇಹಗಳು ಭೂಕುಸಿತದ ಭೀಕರತೆಯನ್ನು ತೆರೆದಿಟ್ಟಿವೆ.

ಇರುವಳ್ಳಿಪುಳ ನದಿ ತನ್ನ ದಿಕ್ಕು ಬದಲಿಸಿ ಜನವಸತಿ ಪ್ರದೇಶದಲ್ಲಿ ಹರಿದದ್ದು ಹಾನಿಯ ಪ್ರಮಾಣ ಹೆಚ್ಚಲು ಕಾರಣವಾಗಿದೆ. ಈ ನದಿ ಈಗ ಎರಡು ಭಾಗಗಳಾಗಿ ಹರಿಯುತ್ತಿದೆ.

ಭೂಸೇನೆ, ವಾಯುಪಡೆ, ಎನ್‌ಡಿಆರ್‌ಎಫ್ ಸೇರಿದಂತೆ ಹಲವು ತಂಡಗಳು ರಕ್ಷಣಾ ಕಾರ್ಯಕ್ಕೆ ಧುಮುಕಿವೆ. ವಿವಿಧ ಸಂಘಟನೆಗಳ ಸ್ವಯಂಸೇವಕರು ಮತ್ತು ಸ್ಥಳೀಯರು ಕೂಡಾ ಪರಿಹಾರ ಕಾರ್ಯದಲ್ಲಿ ಕೈಜೋಡಿಸಿದ್ದಾರೆ. ಬೆಟ್ಟದಿಂದ ಉರುಳಿರುವ ಬೃಹತ್ ಬಂಡೆಗಳು ರಕ್ಷಣಾ ಕಾರ್ಯಕ್ಕೆ ಸವಾಲಾಗಿ ಪರಿಣಮಿಸಿವೆ.

ಅತಿಹೆಚ್ಚು ಹಾನಿ ಸಂಭವಿಸಿರುವ ಮುಂಡಕ್ಕೈ ಮತ್ತು ಚೂರಲ್‌ಮಲ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಎಲ್ಲ ಮಾರ್ಗಗಳೂ ಕೊಚ್ಚಿಹೋಗಿದ್ದು, ರಕ್ಷಣಾ ತಂಡದ ಸದಸ್ಯರು ದುರಂತ ನಡೆದ ಸ್ಥಳಕ್ಕೆ ತಲುಪಲು ತುಂಬಾ ಸಮಯ ತೆಗೆದುಕೊಂಡರು. ಮುಂಡಕ್ಕೈ ಗ್ರಾಮದಲ್ಲಿ ಕೆಲವು ಮನೆಗಳ ಅಡಿಪಾಯಗಳು ಮಾತ್ರ ಉಳಿದುಕೊಂಡಿವೆ.

ಈ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸೇತುವೆ ಕೊಚ್ಚಿಕೊಂಡು ಹೋಗಿದೆ. ಇದರಿಂದ ಇಲ್ಲಿ ದೊರೆತ ಎಲ್ಲ ಮೃತದೇಹಗಳನ್ನು ಮೇಪ್ಪಾಡಿಗೆ ಸಾಗಿಸಲು ರಾತ್ರಿಯವರೆಗೂ ಸಾಧ್ಯವಾಗಿಲ್ಲ. ಮೃತದೇಹಗಳನ್ನು ಸ್ಟ್ರೆಚರ್‌ನಲ್ಲಿ ಮಲಗಿಸಿ ಹಗ್ಗದ ನೆರವಿನಿಂದ ನದಿಯ ಇನ್ನೊಂದು ಕಡೆಗೆ ಸಾಗಿಸಲಾಗಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಹೆಲಿಕಾಪ್ಟರ್ ಬಳಕೆ: ರಕ್ಷಣಾ ಕಾರ್ಯಾಚರಣೆಗೆ ವಾಯುಪಡೆಯ ಹೆಲಿಕಾಪ್ಟರ್‌ಅನ್ನು ಬಳಸಲಾಗಿದೆ. ಚೂರಲ್‌ಮಲ ಗ್ರಾಮದಲ್ಲಿ ಹಾನಿಗೊಂಡಿದ್ದ ರಸ್ತೆಯಲ್ಲಿ ಅತ್ಯಂತ ಸಾಹಸದಿಂದ ಹೆಲಿಕಾಪ್ಟರ್ ಇಳಿಸಿದ ವಾಯುಪಡೆ ಸಿಬ್ಬಂದಿ, ಗಾಯಾಳುಗಳನ್ನು ಅಲ್ಲಿಂದ ರಕ್ಷಿಸಿದ್ದಾರೆ.

ಬೆಳಿಗ್ಗೆಯಿಂದ ಪ್ರತಿಕೂಲ ಹವಾಮಾನ ಇದ್ದ ಕಾರಣ ಹೆಲಿಕಾಪ್ಟರ್ ಬಳಕೆ ಸಾಧ್ಯವಾಗಲಿಲ್ಲ. ಸಂಜೆಯ ವೇಳೆಗೆ ಹೆಲಿಕಾಪ್ಟರ್ ಲ್ಯಾಂಡಿಂಗ್ ಸಾಧ್ಯವಾಗಿದೆ.

ರಾಜ್ಯದ ದೊಡ್ಡತಪ್ಪಲೆಯಲ್ಲಿ ಮತ್ತೆ ಭೂಕುಸಿತ

ಒಂದನೇ ಪುಟದಿಂದ...

ರಸ್ತೆಗೆ ಬಿದ್ದಿರುವ ಮಣ್ಣು ಹಾಗೂ ವಾಹನ ತೆರವು-ಗೊಳಿಸುವವರೆಗೆ ಹೆದ್ದಾರಿಯಲ್ಲಿ ವಾಹನಗಳ ಸಂಚಾರ ಸ್ಥಗಿತಗೊಳಿಸಲಾಗಿತ್ತು. ಶಿರಾಡಿ ಘಾಟ್ ರಸ್ತೆಯಲ್ಲಿ ನೂರಾರು ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಸಕಲೇಶಪುರ ತಾಲ್ಲೂಕಿನ ಕುಂಬರಡಿ ಹಾಗೂ ಹಾರ್ಲೆ ಎಸ್ಟೇಟ್ ನಡುವೆ ಭೂಕುಸಿತವಾಗಿದ್ದು, ಅಲ್ಲಿನ ರಸ್ತೆ 200 ಮೀಟರ್‌ಗೂ ಹೆಚ್ಚು ದೂರಕ್ಕೆ ಕೊಚ್ಚಿ ಹೋಗಿದೆ. 20 ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ.

'ರಸ್ತೆಯ ಪಕ್ಕ ಎತ್ತಿನಹೊಳೆ ಯೋಜನೆ ಪೈಪ್‌ಲೈನ್ ಅಳವಡಿಸಲಾಗಿದ್ದು, ಅವೈಜ್ಞಾನಿಕ ಕಾಮಗಾರಿಯಿಂದಲೇ ಭೂಕುಸಿತವಾಗಿದೆ' ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಸಂಪಾಜೆ ಮಾರ್ಗದಲ್ಲಿ ಸಾಗಲು ಸೂಚನೆ: ಮಂಗಳೂರು– ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ದೊಡ್ಡತಪ್ಪಲೆ ಸಮೀಪ ಗುಡ್ಡ ಕುಸಿದು ರಸ್ತೆ ಸಂಚಾರ ಸ್ಥಗಿತಗೊಂಡಿರುವುದರಿಂದ, ಮುಂದಿನ ಸೂಚನೆಯವರೆಗೆ ಮಂಗಳೂರು ಕಡೆಯಿಂದ ಬೆಂಗಳೂರಿಗೆ ಹೋಗುವವರು ಸಂಪಾಜೆ, ಮಡಿಕೇರಿ ಮಾರ್ಗದ ರಸ್ತೆಯಲ್ಲಿ ಸಂಚಾರ ಮಾಡಬೇಕು ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ತೆಲಂಗಾಣ: ಚಲಿಸುವ ಬಸ್‌ನಲ್ಲಿ ಮಹಿಳೆ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣದ ನಿರ್ಮಲ್ ಪಟ್ಟಣದಿಂದ ಆಂಧ್ರ ಪ್ರದೇಶದ ಪ್ರಕಾಶಂ ಜಿಲ್ಲೆಗೆ ತೆರಳುತ್ತಿದ್ದ ಖಾಸಗಿ ಟ್ರಾವೆಲ್ ಕಂಪನಿಯ 'ಸ್ಲೀಪರ್ ಬಸ್'ನಲ್ಲಿ ಮಹಿಳೆಯೊಬ್ಬರ ಮೇಲೆ ಬಸ್ ಚಾಲಕ ಅತ್ಯಾಚಾರವೆಸಗಿದ್ದಾನೆ. ಈ ವೇಳೆ ಬಸ್‌ನಲ್ಲಿ 36 ಪ್ರಯಾಣಿಕರು ಇದ್ದರು ಎಂದು ತಿಳಿದುಬಂದಿದೆ.

ಸೋಮವಾರ ತಡರಾತ್ರಿ ಬಸ್ ಮೆಡ್ಚಲ್ ಎಂಬಲ್ಲಿಗೆ ತಲುಪಿದಾಗ ಚಾಲಕ ಮಹಿಳೆಯ ಮೇಲೆ ಈ ಕೃತ್ಯವೆಸಗಿದ್ದು, ಆರೋಪಿ ಕೈಯಿಂದ ತಪ್ಪಿಸಿಕೊಂಡ ಮಹಿಳೆ ಅಳಲು ತೋಡಿಕೊಳ್ಳುತ್ತಿದ್ದಂತೆ ಚಾಲಕ ಪರಾರಿಯಾಗಿದ್ದಾನೆ. ಸಂತ್ರಸ್ತ ಮಹಿಳೆಯು ಸಹ ಪ್ರಯಾಣಿಕರ ಸಹಾಯದೊಂದಿಗೆ ಪೊಲೀಸರಿಗೆ ದೂರು ನೀಡಿದ್ದಾಳೆ.

ಈ ಕುರಿತು ಪ್ರತಿಕ್ರಿಯಿಸಿದ ಪೊಲೀಸ್ ಅಧಿಕಾರಿ, 'ಆರೋಪಿ ಕೃಷ್ಣ ಎಂಬಾತ ಖಾಸಗಿ ಟ್ರಾವೆಲ್ ಕಂಪನಿಯಲ್ಲಿ ಎರಡು ವರ್ಷದಿಂದ ಕೆಲಸ ಮಾಡುತ್ತಿದ್ದ. ಸಂತ್ರಸ್ತೆ ತನ್ನ 6 ವರ್ಷದ ಮಗಳ ಜೊತೆಗೆ ಪ್ರಕಾಶಂ ಜಿಲ್ಲೆಯಿಂದ ಪಮುರು ಎಂಬಲ್ಲಿಗೆ ತೆರಳುತ್ತಿದ್ದರು. ಇದಕ್ಕಾಗಿ ಮಹಿಳೆಯು ಒಂದು ಬರ್ತ್‌ನ ಆಸನವನ್ನು ಕಾಯ್ದಿರಿಸಿದ್ದರು. ಆದರೆ, ಮಹಿಳೆ ಮತ್ತು ಆಕೆಯ ಮಗುವನ್ನು ಆರೋಪಿಯು ಎರಡು ಬರ್ತ್ ಇರುವ ಆಸನಕ್ಕೆ ಕಳುಹಿಸಿದ್ದ. ರಾತ್ರಿ ಊಟ ಮುಗಿಸಿದ ಬಳಿಕ ಬಸ್ ಚಾಲನೆ ಮಾಡುವ ಜವಾಬ್ದಾರಿಯನ್ನು ಆರೋಪಿ ಕೃಷ್ಣ ಎರಡನೇ ಚಾಲಕನಿಗೆ ವಹಿಸಿದ್ದ. ಬಸ್‌ನಲ್ಲಿ ಪ್ರಯಾಣಿಸುತ್ತಿದ್ದವರೆಲ್ಲರೂ ಮಲಗಿದ್ದಾಗ, ಸಂತ್ರಸ್ತೆ ಬಳಿ ಹೋದ ಆರೋಪಿಯು, ಬೆಡ್‌ಶೀಟ್‌ನಿಂದ ಮಹಿಳೆಯ ಬಾಯಿ ಮುಚ್ಚಿ ಲೈಂಗಿಕ ದೌರ್ಜನ್ಯವೆಸಗಿದ್ದಾನೆ' ಎಂದು ತಿಳಿಸಿದ್ದಾರೆ.

ಕೇಜ್ರಿವಾಲ್ ಬಿಡುಗಡೆಗೆ ಆಗ್ರಹ 'ಇಂಡಿಯಾ' ಪ್ರತಿಭಟನೆ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆರೋಗ್ಯ ಹದಗೆಡುತ್ತಿದ್ದು, ಕೂಡಲೇ ಅವರನ್ನು ಜೈಲಿನಿಂದ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ'ದ ನಾಯಕರು ಜಂತರ್ ಮಂತರ್‌ನಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ವಿಪಕ್ಷಗಳ ಧ್ವನಿಯನ್ನು ಹತ್ತಿಕ್ಕುತ್ತಿದೆ ಎಂದು ವಾಗ್ದಾಳಿ ನಡೆಸಿದರು. 'ಭಾರತ್ ಮಾತಾ ಕಿ ಜೈ' ಮತ್ತು 'ಸರ್ವಾಧಿಕಾರ ಕೊನೆಯಾಗಲಿ' ಎಂದು ಘೋಷಣೆ ಕೂಗಿದರು.

ಸಿಪಿಐ(ಎಂಎಲ್) ನಾಯಕ ದೀಪಂಕರ್ ಭಟ್ಟಾಚಾರ್ಯ ಅವರು, 'ಎಎಪಿಯ ಹಿರಿಯ ನಾಯಕರಾದ ಕೇಜ್ರಿವಾಲ್, ಮನೀಶ್ ಸಿಸೋಡಿಯಾ ಮತ್ತು ಸತ್ಯೇಂದರ್ ಜೈನ್ ಅವರನ್ನು ರಾಜಕೀಯ ಪಿತೂರಿಯ ಭಾಗವಾಗಿ ಜೈಲಿಗೆ ಕಳುಹಿಸಲಾಗಿದೆ' ಎಂದು ಆರೋಪಿಸಿದರು.

'ದೆಹಲಿಯ ಅರಾಜಕತೆಗೆ ಮೋದಿ ನೇತೃತ್ವದ ಸರ್ಕಾರವೇ ಹೊಣೆ. ಈ ಅವ್ಯವಸ್ಥೆಯೇ ಮೂವರು ಯುಪಿಎಸ್‌ಸಿ ಆಕಾಂಕ್ಷಿಗಳ ಪ್ರಾಣ ತೆಗೆದುಕೊಂಡಿದೆ' ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರದ ನಡೆಗೆ ಸುಪ್ರೀಂ ಕೋರ್ಟ್‌ನಿಂದ ತೀವ್ರ ಅಸಮಾಧಾನ

ಒಆರ್‌ಒಪಿ: ತಾರತಮ್ಯ ನಿವಾರಣೆಗೆ ಗಡುವು

ನವದೆಹಲಿ (ಪಿಟಿಐ): ಸೇನೆಯಲ್ಲಿ ಪೂರ್ಣಾವಧಿಗೆ ಕ್ಯಾಪ್ಟನ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ 'ಒಂದು ಶ್ರೇಣಿ ಒಂದು ಪಿಂಚಣಿ' (ಒಆರ್‌ಒಪಿ) ಯೋಜನೆಗೆ ಅನುಗುಣವಾಗಿ ಪಾವತಿಸಬೇಕಿರುವ ಪಿಂಚಣಿ ಬಗ್ಗೆ ವರ್ಷಗಳಿಂದ ಯಾವುದೇ ತೀರ್ಮಾನ ಕೈಗೊಳ್ಳದ ಕೇಂದ್ರ ಸರ್ಕಾರದ ವಿರುದ್ಧ ಸುಪ್ರೀಂ ಕೋರ್ಟ್ ಮಂಗಳವಾರ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಅಲ್ಲದೆ, ಕೇಂದ್ರ ಸರ್ಕಾರಕ್ಕೆ ₹2 ಲಕ್ಷ ದಂಡವನ್ನೂ ವಿಧಿಸಿದೆ.

ಈ ನಿವೃತ್ತ ಅಧಿಕಾರಿಗಳಿಗೆ ಒಆರ್‌ಒಪಿ ಅಡಿ ಸಿಗುವ ಪಿಂಚಣಿಯಲ್ಲಿನ ತಾರತಮ್ಯವನ್ನು ಪರಿಹರಿಸಲು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಆರ್. ಮಹಾದೇವನ್ ಅವರು ಇದ್ದ ವಿಭಾಗೀಯ ಪೀಠವು ಕೇಂದ್ರ ಸರ್ಕಾರಕ್ಕೆ ನವೆಂಬರ್ 14ರವರೆಗೆ ಕಡೆಯ ಅವಕಾಶ ನೀಡಿದೆ.

ದಂಡ ರೂಪದಲ್ಲಿ ಪಾವತಿಸಬೇಕಿರುವ ₹2 ಲಕ್ಷವನ್ನು ಕೇಂದ್ರವು ಸೇನಾ ಸಿಬ್ಬಂದಿಯ ಅಭಿವೃದ್ಧಿ ನಿಧಿಗೆ ಜಮಾ ಮಾಡಬೇಕು. ಕೇಂದ್ರವು ನವೆಂಬರ್ 14ಕ್ಕೆ ಮೊದಲು ಯಾವುದೇ ತೀರ್ಮಾನ ಕೈಗೊಳ್ಳದೆ ಇದ್ದರೆ ಈ ಅಧಿಕಾರಿಗಳ ಪಿಂಚಣಿಯನ್ನು ಶೇಕಡ 10ರಷ್ಟು ಹೆಚ್ಚಿಸಲು ಆದೇಶ ಹೊರಡಿಸಬೇಕಾಗುತ್ತದೆ ಎಂದು ಪೀಠವು ಹೇಳಿದೆ.

ವಿಚಾರಣೆಯನ್ನು ನವೆಂಬರ್ 25ಕ್ಕೆ ಮುಂದೂಡಲಾಗಿದೆ. ಕೇಂದ್ರ ಸರ್ಕಾರದ ಪರವಾಗಿ ನ್ಯಾಯಾಲಯದಲ್ಲಿ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಟ್ಟಿ ಅವರು, 'ಕೊಚ್ಚಿಯಲ್ಲಿ ಇರುವ ಸಶಸ್ತ್ರ ಪಡೆಗಳ ನ್ಯಾಯಮಂಡಳಿಯು (ಎಎಫ್‌ಟಿ) ಸರಿಪಡಿಸಬೇಕಿರುವ ಆರು ಲೋಪಗಳನ್ನು ಗುರುತಿಸಿದೆ. ಆದರೆ ಕೇಂದ್ರವು ಈ ವಿಚಾರವಾಗಿ ಇನ್ನಷ್ಟೇ ನಿಲುವು ತೆಗೆದುಕೊಳ್ಳಬೇಕಿದೆ' ಎಂದು ವಿವರಿಸಿದರು.

> 'ಇದೇನಿದು...? ಇದರಿಂದ ಈ ಅಧಿಕಾರಿಗಳಿಗೆ ಸಮಾಧಾನ ಆಗುವುದಿಲ್ಲ. ಅವರು ನಿವೃತ್ತ ಕ್ಯಾಪ್ಟನ್‌ಗಳು. ಅವರಿಗೆ ಮಾತಿಗೆ ಅವಕಾಶವೇ ಇಲ್ಲವಾಗಿದೆ. ನಿಮ್ಮನ್ನು ಸಂಪರ್ಕಿಸಲು ಅವರಿಗೆ ಸಾಧ್ಯವಿಲ್ಲ. ಶೇಕಡ 10ರಷ್ಟು ಹೆಚ್ಚು ಪಿಂಚಣಿ ನೀಡಿ ಅಥವಾ ದಂಡ ಪಾವತಿಸಿ. ಆಯ್ಕೆ ನಿಮ್ಮದು'
>
> **– ಕೇಂದ್ರ ಸರ್ಕಾರಕ್ಕೆ ನ್ಯಾಯಮೂರ್ತಿ ಸಂಜೀವ್ ಖನ್ನಾ ಮಾತು**

'ಇದು ಇನ್ನೂ ಎಷ್ಟು ವರ್ಷ ನಡೆಯುತ್ತದೆ? ಶೇಕಡ 10ರಷ್ಟು ಹೆಚ್ಚು ಪಿಂಚಣಿಯನ್ನು ನೀವು ಪಾವತಿಸಬೇಕು, ಇಲ್ಲವಾದರೆ ನಾವು ನಿಮ್ಮ ಮೇಲೆ ದಂಡ ವಿಧಿಸುತ್ತೇವೆ. ಒಂದು ನಿರ್ಧಾರ ತೆಗೆದುಕೊಳ್ಳಬೇಕು ಎಂದು ನಾವು ಬಯಸಿದ್ದೆವು, ಆದರೆ ನೀವು ತೀರ್ಮಾನ ಕೈಗೊಂಡಿಲ್ಲ. ಇದು 2021ರ ವಿಚಾರ. ಇಂದಿಗೂ ಯಾವುದೇ ತೀರ್ಮಾನ ಆಗಿಲ್ಲ' ಎಂದು ಪೀಠವು ಅಸಮಾಧಾನ ವ್ಯಕ್ತಪಡಿಸಿತು.

ಸರ್ಕಾರವು ನಿರ್ಧಾರವನ್ನು ಬಿಡಿಬಿಡಿ ಆಗಿ ತೆಗೆದುಕೊಳ್ಳಲು ಆಗುವುದಿಲ್ಲ. ನಿರ್ಧಾರವು ಇತರರ ಮೇಲೆಯೂ ಪರಿಣಾಮ ಉಂಟುಮಾಡಬಹುದಾದ ಕಾರಣ, ವಿಷಯವನ್ನು ಸಮಗ್ರವಾಗಿ ಪರಿಶೀಲಿಸಿ, ಆರೂ ಲೋಪಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ಭಟ್ಟಿ ವಿವರಿಸಿದರು.

'ಹೆಚ್ಚುವರಿ ಶುಲ್ಕ ಪಡೆಯುವಂತಿಲ್ಲ'

ನವದೆಹಲಿ (ಪಿಟಿಐ): ಕಾನೂನು ಪದವೀಧರರನ್ನು ವಕೀಲರನ್ನಾಗಿ ನೋಂದಾಯಿಸಿಕೊಳ್ಳಲು ರಾಜ್ಯ ವಕೀಲರ ಪರಿಷತ್ತುಗಳು ದುಬಾರಿ ಶುಲ್ಕ ವಿಧಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ದುಬಾರಿ ಶುಲ್ಕ ವಿಧಿಸುವುದರಿಂದ, ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಸೇರಿದವರನ್ನು ಹಾಗೂ ತುಳಿತಕ್ಕೆ ಒಳಗಾದ ಸಮುದಾಯದವರನ್ನು ವ್ಯವಸ್ಥಿತ ತಾರತಮ್ಯಕ್ಕೆ ಗುರಿಪಡಿಸಿದಂತೆ ಆಗುತ್ತದೆ ಎಂದು ಕೋರ್ಟ್ ಹೇಳಿದೆ.

ಸಂಸತ್ತು ರೂಪಿಸಿರುವ ಹಣಕಾಸಿನ ನೀತಿಯಲ್ಲಿ ಬದಲಾವಣೆ ತರುವುದಕ್ಕೆ ಭಾರತೀಯ ವಕೀಲರ ಪರಿಷತ್ತಿಗಾಗಲಿ (ಬಿಸಿಐ) ರಾಜ್ಯ ವಕೀಲರ ಪರಿಷತ್ತುಗಳಿಗಾಗಲಿ (ಎಸ್‌ಬಿಸಿ) ಅವಕಾಶ ಇಲ್ಲ ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ವಕೀಲರ ಪರಿಷತ್ತುಗಳು ಸಾಮಾನ್ಯ ವರ್ಗದವರನ್ನು ವಕೀಲರನ್ನಾಗಿ ನೋಂದಾಯಿಸಿಕೊಳ್ಳಲು ₹650 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರನ್ನು ವಕೀಲರನ್ನಾಗಿ ನೋಂದಾಯಿಸಿಕೊಳ್ಳಲು ₹125ಕ್ಕಿಂತ ಹೆಚ್ಚು ಶುಲ್ಕ ಪಡೆಯುವಂತಿಲ್ಲ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಹೇಳಿದೆ.

ದೂರು ನಿರ್ವಹಣೆಗೆ ಡ್ಯಾಷ್‌ಬೋರ್ಡ್

ತಪ್ಪುದಾರಿಗೆ ಎಳೆಯುವ ಜಾಹೀರಾತುಗಳ ಕುರಿತ ದೂರುಗಳ ವಿವರ ಹಾಗೂ ದೂರುಗಳಿಗೆ ಸಂಬಂಧಿಸಿದಂತೆ ಆಗಿರುವ ಕ್ರಮಗಳ ಬಗ್ಗೆ ಗ್ರಾಹಕರು ಮಾಹಿತಿ ಪಡೆಯಲು ಸಾಧ್ಯವಾಗುವಂತೆ ಡ್ಯಾಶ್‌ಬೋರ್ಡ್ ರೂಪಿಸಬೇಕು ಎಂದು ಕೇಂದ್ರ ಆಯುಷ್ ಸಚಿವಾಲಯಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ಸೂಚಿಸಿದೆ.

ತಪ್ಪುದಾರಿಗೆ ಎಳೆಯುವ ಜಾಹೀರಾತುಗಳು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿರುವ ಹಾಗೂ ಪ್ರಸಾರವಾಗುತ್ತಿರುವ ಬಗ್ಗೆ ಸುಪ್ರೀಂ ಕೋರ್ಟ್ ಈ ಹಿಂದೆ ಗಮನಹರಿಸಿತ್ತು. ಕೋವಿಡ್ ಲಸಿಕೆ ನೀಡುವ ಅಭಿಯಾನ ಹಾಗೂ ಆಧುನಿಕ ವೈದ್ಯಪದ್ಧತಿಯ ವಿರುದ್ಧ ಪತಂಜಲಿ ಆಯುರ್ವೇದ್ ಲಿಮಿಟೆಡ್ ಕಂಪನಿಯು ತಪ್ಪು ದಾರಿಗೆ ಎಳೆಯುವ ಅಭಿಯಾನ ನಡೆಸಿದೆ ಎಂದು ದೂರಿ ಭಾರತೀಯ ವೈದ್ಯಕೀಯ ಸಂಘವು (ಐಎಂಎ) ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಸಂದೀಪ್ ಮೆಹ್ತಾ ಅವರು ಇರುವ ವಿಭಾಗೀಯ ಪೀಠವು ನಡೆಸುತ್ತಿದೆ.

ಸ್ವೀಕರಿಸಿದ ದೂರುಗಳ ವಿಚಾರದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ ಎಂಬುದರ ಬಗ್ಗೆ ಸರಿಯಾದ ಮಾಹಿತಿ ಸಿಗದೆ ಇರುವುದು ಗ್ರಾಹಕರನ್ನು ಅಸಹಾಯಕರನ್ನಾಗಿಸುತ್ತಿದೆ ಎಂದು ಪೀಠವು ಹೇಳಿತು. ಆಯುಷ್ ಸಚಿವಾಲಯವು ಡ್ಯಾಷ್‌ಬೋರ್ಡ್ ರೂಪಿಸಬೇಕು. ಆಗ ಮಾಹಿತಿ ಸಾರ್ವಜನಿಕರಿಗೆ ಸಿಗುವಂತೆ ಆಗುತ್ತದೆ ಎಂದು ಪೀಠವು ಹೇಳಿತು.



ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್. ವೈದ್ಯನಾಥನ್ ಅವರ ಜೊತೆಗೆ ಮೇಘಾಲಯದ ನೂತನ ರಾಜ್ಯಪಾಲ ಸಿ.ಎಚ್. ವಿಜಯಶಂಕರ್

ಮತಾಂತರಿಸಿದರೆ ಜೀವಾವಧಿ ಶಿಕ್ಷೆ

ಲಖನೌ(ಪಿಟಿಐ): 'ಉತ್ತರ ಪ್ರದೇಶ ಕಾನೂನುಬಾಹಿರ ಧಾರ್ಮಿಕ ಮತಾಂತರ (ತಿದ್ದುಪಡಿ) ಮಸೂದೆ-2024' ಅನ್ನು ಉತ್ತರ ಪ್ರದೇಶ ವಿಧಾನ ಸಭೆ ಮಂಗಳವಾರ ಅಂಗೀಕರಿಸಿದೆ.

ವಂಚನೆ ಅಥವಾ ಬಲವಂತದಿಂದ ಮತಾಂತರ ಮಾಡುವ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಗರಿಷ್ಠ ಜೀವಾವಧಿ ಶಿಕ್ಷೆ ವಿಧಿಸುವುದಕ್ಕೆ ಈ ತಿದ್ದುಪಡಿ ಮಸೂದೆಯು ಅವಕಾಶ ನೀಡುತ್ತದೆ.

ಈ ಮೊದಲು, ಮಹಿಳೆಯನ್ನು ಮೋಸದಿಂದ ಮದುವೆಯಾಗಿ, ನಂತರ ಆಕೆಯನ್ನು ಮತಾಂತರಗೊಳಿಸಿದ್ದು ಸಾಬೀತಾದ ಸಂದರ್ಭದಲ್ಲಿ, ಅಪರಾಧಿಗೆ ಗರಿಷ್ಠ 10 ವರ್ಷ ಜೈಲು ಹಾಗೂ ₹50 ಸಾವಿರ ದಂಡ ವಿಧಿಸಲು ಅವಕಾಶ ಇತ್ತು.

ಸಂಸದೀಯ ವ್ಯವಹಾರಗಳ ಸಚಿವ ಸುರೇಶ ಖನ್ನಾ ಅವರು ಈ ತಿದ್ದುಪಡಿ ಮಸೂದೆಯನ್ನು ಸದನದಲ್ಲಿ ಸೋಮವಾರ ಮಂಡಿಸಿದ್ದರು.

'ಬೆದರಿಕೆ ಒಡ್ಡುವ/ಹಲ್ಲೆ ಮಾಡಿ ಇಲ್ಲವೇ ಪಿತೂರಿಯ ಮೂಲಕ ಒಬ್ಬ ವ್ಯಕ್ತಿ ಮಹಿಳೆಯನ್ನು ಮದುವೆಯಾದರೆ ಅಥವಾ ಮದುವೆಯಾಗುವುದಾಗಿ ಭರವಸೆ ನೀಡಿದಲ್ಲಿ; ಮತಾಂತರ ಮಾಡುವ ಉದ್ದೇಶದಿಂದ ಮಹಿಳೆ, ಬಾಲಕಿ ಅಥವಾ ಯಾವುದೇ ವ್ಯಕ್ತಿಯನ್ನು ಕಳ್ಳಸಾಗಾಣಿಕೆ ಮಾಡಿದಲ್ಲಿ ಆ ವ್ಯಕ್ತಿ ಎಸಗಿದ ಕೃತ್ಯವನ್ನು ಅತ್ಯಂತ ಗಂಭೀರ ಅಪರಾಧವೆಂದು ಪರಿಗಣಿಸಲಾಗುವುದು' ಎಂಬ ಅವಕಾಶವನ್ನು ಮಸೂದೆಯಲ್ಲಿ ಪ್ರಸ್ತಾವಿಸಲಾಗಿತ್ತು.

ಇಂಥ ಅಪರಾಧ ಎಸಗಿದ ವ್ಯಕ್ತಿಗೆ 20 ವರ್ಷ ಅಥವಾ ಜೀವಾವಧಿ ಶಿಕ್ಷೆ ವಿಧಿಸಲು ಅವಕಾಶವನ್ನು ಸಹ ಮಸೂದೆ ಒಳಗೊಂಡಿದೆ.

ಪ್ರಮುಖ ಅಂಶಗಳು

- ಮತಾಂತರಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಯಾವುದೇ ವ್ಯಕ್ತಿಯು ಎಫ್‌ಐಆರ್ ದಾಖಲಿಸಬಹುದು.
- ಸೆಷನ್ಸ್ ಕೋರ್ಟ್‌ಗಿಂತ ಕೆಳ ಹಂತದ ನ್ಯಾಯಾಲಯಗಳು ಇಂತಹ ಪ್ರಕರಣಗಳ ವಿಚಾರಣೆ ನಡೆಸುವಂತಿಲ್ಲ
- ಈ ತಿದ್ದುಪಡಿ ಕಾಯ್ದೆಯಡಿ ದಾಖಲಾಗುವ ಎಲ್ಲ ಅಪರಾಧಗಳು ಜಾಮೀನು ರಹಿತ ಅಪರಾಧಗಳಾಗಿರುತ್ತವೆ





ಭೂಕುಸಿತ, ಪ್ರವಾಹಕ್ಕೆ ಸಿಲುಕಿರುವ ಕೇರಳದ ಮೇಪ್ಪಾಡಿಯಲ್ಲಿ ಎನ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಣಾ ಕಾರ್ಯ ನಡೆಸಿದರು (ಎಡಚಿತ್ರ). ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ರಕ್ಷಣಾ ತಂಡದ ಕಾರ್ಯವೈಖರಿ (ಮಧ್ಯದಚಿತ್ರ) ವಯನಾಡಿನ ಭೂಕುಸಿತ, ಪ್ರವಾಹಕ್ಕೆ ಸಿಲುಕಿ ಕಾರೊಂದು ನಜ್ಜುಗುಜ್ಜಾಗಿಯಿತು. –ಪಿಟಿಐ ಚಿತ್ರಗಳು

ಪ್ರಕೃತಿಯ ಮುನಿಸು • ತೊಳೆದುಹೋದ ಚೂರಲ್‌ಮಲ ಗ್ರಾಮ

ಸುಖದ ನಿದ್ದೆಯಿಂದ ದುಃಖದ ಮಡುವಿಗೆ...



ಪ್ರಜಾವಾಣಿ ವಾರ್ತೆ

ತಿರುವನಂತಪುರ: ಸುಖ ನಿದ್ದೆಯಲ್ಲಿದ್ದ ಕುಟುಂಬ ರಾತ್ರೋರಾತ್ರಿ ದುಃಖದ ಮಡುವಿಗೆ ಜಾರಿತ್ತು. ಭಾರಿ ಶಬ್ದ ಕೇಳಿ ಎಚ್ಚೆತ್ತವರಿಗೆ ಕಂಡದ್ದು ಪ್ರಕೃತಿಯ ಮುನಿಸು. ನೋಡುತ್ತಿದ್ದಂತೆ ನುಗ್ಗಿ ಬಂದ ನೀರು ನಿದ್ದೆಗಷ್ಟೇ ತಣ್ಣೀರೆರಚಲಿಲ್ಲ, ಬದುಕಿನ ಭರವಸೆಗಳನ್ನೇ ಮುಳುಗಿಸಿತ್ತು.

ವಯನಾಡ್ ಜಿಲ್ಲೆಯಲ್ಲಿ ಭೂಕುಸಿತ, ಪ್ರವಾಹದ ಗಂಭೀರ ಪರಿಣಾಮಗಳಿಗೆ ಕನ್ನಡಿಯಾಗಿರುವ ಚೂರಲ್‌ಮಲ ಪಟ್ಟಣದ ತಂಕಚನ್ ಕುಟುಂಬದ ಸ್ಥಿತಿ ಇದು. ಕೇವಲ ಒಂದು ಕುಟುಂಬದ ಸ್ಥಿತಿ ಇದಲ್ಲ; ಹಲವು ಕುಟುಂಬಗಳ ವಸ್ತುಸ್ಥಿತಿ.

‘ನಮ್ಮದು ಆರು ಜನರ ಕುಟುಂಬ. ರಾತ್ರಿ ಶಬ್ದವಾಯಿತು. ಗಾಬರಿಯಿಂದ ಎಚ್ಚೆತ್ತೆವು. 98 ವರ್ಷ ವಯಸ್ಸಿನ ಅತ್ತೆ ಮನೆಯಿಂದ ಹೊರಹೋಗಿದ್ದರು. ಏನಾಗುತ್ತಿದೆ ಎಂದು ಅರಿವಾಗುವಷ್ಟರಲ್ಲಿ ಮನೆ ಕುಸಿದಿತ್ತು’ ಎನ್ನುತ್ತಾ ನೋವಿನಲ್ಲಿಯೇ ಅವಗಢ ನೆನಪಿಸಿಕೊಂಡವರು ತಂಕಚಾನ್. ಇವರು ಸೇಂಟ್ ಸೆಬಾಸ್ಟಿಯನ್ ಚರ್ಚ್‌ನ ಪಾದ್ರಿ.

ಭೂಕುಸಿತ, ಪ್ರವಾಹದ ಅರಿವಾಗುತ್ತಲೇ ಅನೇಕ ಕುಟುಂಬಗಳವರು ಎಲ್ಲವನ್ನೂ ಬಿಟ್ಟು ಕೂಡಲೇ ಸುರಕ್ಷಿತ ಸ್ಥಳಕ್ಕೆ ಧಾವಿಸಿದ್ದು, ಅಪಾಯದಿಂದ ಪಾರಾಗಿದ್ದಾರೆ. ಹಾಗೆ ಪಾರಾದ ಆ ಎಲ್ಲರ ಪಾಲಿಗೆ ಮಂಗಳವಾರದ ಮಧ್ಯರಾತ್ರಿ ಒಂದು ದುಃಸ್ವಪ್ನ.

ಇದೇ ಗ್ರಾಮದ ವಿಜಯನ್ ಅವರಿಗೆ ಮಾತುಗಳು ಬತ್ತಿದ್ದವು. ಎಲ್ಲ ಬೆಳವಣಿಗೆಗಳಿಗೆ ಅವರು ಮೂಕಪ್ರೇಕ್ಷಕರಾಗಿದ್ದರು. ಪ್ರವಾಹದ ನೀರಿನಲ್ಲಿ ಅವರ ಕುಟುಂಬದ ಸದಸ್ಯರು ಕೊಚ್ಚಿಹೋಗಿದ್ದರು.

‘ನೀರು ಮನೆಯನ್ನು ಆವರಿಸಿದಂತೆ ತಾಯಿ, ತಂಗಿ ಕೈಹಿಡಿಯಲು ನಾನು ಯತ್ನಿಸಿದೆ. ಈ ಯತ್ನ ಫಲ ನೀಡಲಿಲ್ಲ. ನೀರಿನ ಹರಿವಿನ ವೇಗ ಹೆಚ್ಚಿತ್ತು. ನಮ್ಮವರು ಕೊಚ್ಚಿಹೋಗುವುದನ್ನು ಮೌನವಾಗಿ ಗಮನಿಸಬೇಕಾದ ನತದೃಷ್ಟ ನಾನಾಗಿದ್ದೆ’ ಎಂದು ವಿಜಯನ್ ನೋವು ತೋಡಿಕೊಂಡರು.

ಮುಖ್ಯಮಂತ್ರಿ ಸಲಹೆ: ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, ‘ಜನರು ಆದಷ್ಟೂ ಸುರಕ್ಷಿತ ಸ್ಥಳಕ್ಕೆ ತೆರಳಬೇಕು. ಸ್ಥಳೀಯ ಆಡಳಿತದ ಸಲಹೆ ಆಲಿಸಬೇಕು. ಮುಂಡಕ್ಕೈ ಗ್ರಾಮವು ಪ್ರಕೃತಿ ವಿಕೋಪದ ಕೇಂದ್ರ ಸ್ಥಳವಾಗಿದೆ’ ಎಂದು ತಿಳಿಸಿದ್ದಾರೆ.

‘ನೆರವಿಗಾಗಿ ಜನರ ಮೊರೆ...



ವಯನಾಡ್ (ಪಿಟಿಐ): ‘ಮಲಗಿದ್ದೆವು. ಏಕಾಏಕಿ ದೊಡ್ಡ ಶಬ್ದ ಅಪ್ಪಳಿಸಿತು. ಬಂಡೆಗಳು, ಮರಗಳು ಮನೆಯ ಮೇಲೆ ಬಿದ್ದವು. ಒಮ್ಮೆಗೆ ನೀರು ನುಗ್ಗಿತು. ಬಾಗಿಲು ಒಡೆದು ಹೋಯಿತು. ಯಾರೊ ಬಂದು ಕಾಪಾಡಿ, ಆಸ್ಪತ್ರೆಗೆ. ಸೇರಿಸಿದ್ದಾರೆ. ನನ್ನ ಹೆಂಡತಿ ಎಲ್ಲಿದ್ದಾಳೆ ಗೊತ್ತಿಲ್ಲ. ಅವಳನ್ನು ರಕ್ಷಿಸಿ’.

ಇದು, ಆಸ್ಪತ್ರೆಗೆ ದಾಖಲಾಗಿರುವ ವೃದ್ಧರೊಬ್ಬರ ಕೋರಿಕೆ.

‘ನಮ್ಮನ್ನು ರಕ್ಷಿಸಿ. ಮನೆ ಕಳೆದುಕೊಂಡಿದ್ದೇವೆ. ನೌಶೀನ್ ಬದುಕಿದ್ದಾಳೋ, ಇಲ್ಲವೊ ಗೊತ್ತಿಲ್ಲ. ಆಕೆ ಕೆಸರಿನಲ್ಲಿ ಸಿಲುಕಿದ್ದಾಳೆ. ನಮ್ಮ ಮನೆ ಸಿಟಿಯಲ್ಲಿಯೇ ಇದೆ’ ಎಂದು ಮಹಿಳೆಯೊಬ್ಬರ ನೋವು.

ಪ್ರಕೃತಿ ವಿಕೋಪಕ್ಕೆ ಗುರಿಯಾಗಿರುವ ಗ್ರಾಮಗಳ ನಿವಾಸಿಗಳ, ಬಂಧುಗಳ ಭೀತಿ, ಉದ್ವೇಗದ ಮಾತುಗಳು ಈಗ ಕೇರಳದಾದ್ಯಂತ ಮಾರ್ದನಿಸುತ್ತಿದೆ.

ಭೂಕುಸಿತದ ಹಿಂದೆಯೇ ಸಹಾಯವಾಣಿಯನ್ನು ಆರಂಭಿಸಿರುವ ಕೇರಳದ ಸುದ್ದಿ ವಾಹಿನಿಗಳು ಇಂತಹ ವೇದನೆಯ ಮಾತುಗಳಿಗೆ ಕಿವಿಯಾಗುತ್ತಿವೆ.

ಸುದ್ದಿ ವಾಹಿನಿಗಳಿಗೆ ನಿರಂತರವಾಗಿ ಬರುತ್ತಿರುವ ಕರೆಗಳು ವಾಸ್ತವದ ಚಿತ್ರಣವನ್ನು ತೆರೆದಿಡುತ್ತಿವೆ. ಮೇಪ್ಪಾಡಿ, ಚೂರಲ್‌ಮಲ ಹಾಗೂ ಮುಂಡಕ್ಕೈ ಜನರು ಸಹಾಯಕ್ಕಾಗಿ ಅಂಗಲಾಚುತ್ತಿದ್ದಾರೆ.

ಬಂಡೆ ಹಿಡಿದು ಹೋರಾಟ

ಭೂಕುಸಿತದ ಪರಿಣಾಮ ಉಂಟಾದ ಪ್ರವಾಹದಲ್ಲಿ ಕೊಚ್ಚಿಹೋಗದಂತೆ ವ್ಯಕ್ತಿಯೊಬ್ಬರು ಬಂಡೆಯೊಂದನ್ನು ಗಟ್ಟಿಯಾಗಿ ಹಿಡಿದು ಹೋರಾಟ ನಡೆಸಿದರು.

ಆಪತ್ತಿನಿಂದ ಪಾರಾಗಲು ವ್ಯಕ್ತಿಯೊಬ್ಬರು ಇನ್ನಿಲ್ಲದ ಹೋರಾಟ ನಡೆಸುವುದನ್ನು ಕಂಡರೂ, ಪ್ರವಾಹ ಹಾಗೂ ಭೂಕುಸಿತದ ಕಾರಣದಿಂದ ನಿವಾಸಿಗಳು ಅಸಹಾಯಕರಾಗಿ ವೀಕ್ಷಿಸಬೇಕಾಗಿಯಿತು. ಮುಂಡಕ್ಕೈ ಗ್ರಾಮದಲ್ಲಿ ಈ ಘಟನೆ ನಡೆದಿದೆ. ವ್ಯಕ್ತಿಯ ಜೀವನ್ಮರಣ ಹೋರಾಟವನ್ನು ಗ್ರಾಮಸ್ಥರೊಬ್ಬರು ಚಿತ್ರಿಸಿದ್ದು, ಸ್ಥಳೀಯ ಟಿ.ವಿ ಚಾನಲ್‌ನಲ್ಲಿ ಅದು ಬಿತ್ತರವಾಗಿದೆ. ವ್ಯಕ್ತಿಯು ಗ್ರಾಮದ ಶಾಲೆಯ ಬಳಿ ಬಂಡೆಯನ್ನು ರಕ್ಷಣೆಗಾಗಿ ಹಿಡಿದು ಅಂಗಲಾಚುವುದು ಬೆಳಿಗ್ಗೆ 7.30ರ ವೇಳೆಗೆ ಗೊತ್ತಾಗಿದೆ. ಕೊಚ್ಚಿಹೋಗದಂತೆ ಅವರು ಪ್ರಯಾಸ ಪಡುತ್ತಿದ್ದರು ಎಂದು ಈ ದೃಶ್ಯವನ್ನು ಮೊಬೈಲ್ ಫೋನ್‌ನಲ್ಲಿ ಚಿತ್ರಿಸಿದ್ದ ಬ್ಲಾಕ್ ಪಂಚಾಯತ್ ಸದಸ್ಯ ರಾಘವನ್ ಹೇಳಿದರು.

ರಾಜ್ಯದಿಂದ ರಕ್ಷಣಾ ತಂಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿರುವ ಎನ್‌ಡಿಆರ್‌ಎಫ್ ತಂಡ ಹಾಗೂ ಮದ್ರಾಸ್ ಎಂಜಿನಿಯರ್ ಗ್ರೂಪ್ (ಎಂಇಜಿ) ಸೇನಾ ಪಡೆಯ ತಂಡ ವಯನಾಡ್‌ಗೆ ಪರಿಹಾರ ಕಾರ್ಯಾಚರಣೆಗಾಗಿ ತ್ವರಿತವಾಗಿ ತೆರಳಲು, ಅಗತ್ಯ ಉಪಕರಣಗಳು ಮತ್ತು ಇತರ ಅಗತ್ಯ ಪರಿಹಾರ ಸಾಮಗ್ರಿಗಳನ್ನು ರವಾನೆ ಮಾಡಲು ರಾಜ್ಯ ಸರ್ಕಾರ ವ್ಯವಸ್ಥೆ ಮಾಡಿದೆ.

ಎಂಇಜಿಯ ಒಬ್ಬರು ಅಧಿಕಾರಿ, ಇಬ್ಬರು ಜೆಸಿಓಗಳು ಹಾಗೂ ವಿವಿಧ ದರ್ಜೆಯ 70 ಸಿಬ್ಬಂದಿ ರಕ್ಷಣೆ ಹಾಗೂ ಪರಿಹಾರ ಸಾಮಗ್ರಿಗಳೊಂದಿಗೆ 15 ವಾಹನಗಳಲ್ಲಿ ವಯನಾಡ್‌ಗೆ ತೆರಳಿದ್ದಾರೆ. ಇನ್ನೂ ಇಬ್ಬರು ಅಧಿಕಾರಿಗಳು, ನಾಲ್ವರು ಜೆಸಿಓಗಳು, ಹಾಗೂ 100 ಸೇನಾ ಸಿಬ್ಬಂದಿ ರಕ್ಷಣಾ ಉಪಕರಣಗಳೊಂದಿಗೆ 40 ವಾಹನಗಳಲ್ಲಿ ತೆರಳಲಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ತಂಡಗಳು ವಯನಾಡ್‌ಗೆ ಶೀಘ್ರವೇ ತಲುಪಲು ಅನುವಾಗುವಂತೆ, ಬಂಡಿಪುರ ಚೆಕ್‌ಪೋಸ್ಟ್‌ನಲ್ಲಿ ಗ್ರೀನ್ ಕಾರಿಡಾರ್ ಮೂಲಕ ಅನಿರ್ಬಂಧಿತ ಸಂಚಾರಕ್ಕೆ ಅವಕಾಶ ಕಲ್ಪಿಸುವಂತೆ ಸೂಚನೆ ನೀಡಲಾಗಿದೆ. ಕರ್ನಾಟಕ ಸರ್ಕಾರವು ಕೇರಳ ಸರ್ಕಾರದ ವಿಪತ್ತು ನಿರ್ವಹಣಾ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಅಗತ್ಯ ನೆರವು ಒದಗಿಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕನ್ನಡಿಗರ ರಕ್ಷಣೆಗೆ ಪ್ರಯತ್ನ: ವಯನಾಡಿನಲ್ಲಿ ಕನ್ನಡಿಗರು ಸಿಲುಕಿಕೊಂಡಿರುವ ಬಗ್ಗೆ ಪ್ರಾಥಮಿಕ ಮಾಹಿತಿ ದೊರೆತಿದ್ದು, ಅವರ ರಕ್ಷಣೆಗೆ ಎಲ್ಲ ಪ್ರಯತ್ನ ಮಾಡಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಗುಂಡ್ಲುಪೇಟೆ–ಕೇರಳ ಹೆದ್ದಾರಿ ಬಂದ್: ಗುಂಡ್ಲುಪೇಟೆ–ಕೇರಳ ನಡುವಿನ ರಾಷ್ಟ್ರೀಯ ಹೆದ್ದಾರಿ 766ರ ಮುತ್ತುಂಗ ಬಳಿ ನೀರು ತುಂಬಿಕೊಂಡ ಕಾರಣ ಕೇರಳಕ್ಕೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಕಟ್ಟೆಚ್ಚರಕ್ಕೆ ಸಿ.ಎಂ ಸಿದ್ದರಾಮಯ್ಯ ತಾಕೀತು



ಸಿದ್ದರಾಮಯ್ಯ

ರಾಜ್ಯದಲ್ಲಿಡೆ ಭಾರಿ ಮಳೆಯಾಗುತ್ತಿದ್ದು ಪ್ರವಾಹ, ಭೂಕುಸಿತದಂತಹ ಪರಿಸ್ಥಿತಿ ಎದುರಿಸಲು ಎಲ್ಲ ಜಿಲ್ಲಾಧಿಕಾರಿಗಳು ಕಟ್ಟೆಚ್ಚರ ವಹಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಜಲಾಶಯಗಳ ನೀರಿನ ಮಟ್ಟದ ಕುರಿತು ನಿರಂತರ ಪರಿಶೀಲನೆ ನಡೆಸಿ ಪ್ರವಾಹ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಅಲ್ಲಲ್ಲಿ ಭೂಕುಸಿತದ ಪ್ರಕರಣಗಳು ವರದಿಯಾಗುತ್ತಿದ್ದು ಈ ಕುರಿತು ಜಿಲ್ಲಾಧಿಕಾರಿಗಳು ಎಚ್ಚರ ವಹಿಸುವಂತೆ ತಿಳಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಪ್ರವಾಹ ಪರಿಸ್ಥಿತಿಯ ನಿರ್ವಹಣೆಯ ಮೇಲ್ವಿಚಾರಣೆ ನಡೆಸುವಂತೆ ನಿರ್ದೇಶನ ನೀಡಿದ್ದಾರೆ.

ಅಧಿಕಾರಿಗಳು ಪ್ರವಾಹ ಪರಿಸ್ಥಿತಿಯನ್ನು ಸಮರೋಪಾದಿಯಲ್ಲಿ ನಿರ್ವಹಿಸಬೇಕು. ರಕ್ಷಣೆ ಹಾಗೂ ಪರಿಹಾರ ಕಾರ್ಯಚರಣೆಗಳನ್ನು ಕೈಗೊಳ್ಳಬೇಕು ಹಾಗೂ ಪ್ರವಾಹ ಪೀಡಿತರಿಗೆ ಅಗತ್ಯಕ್ಕನುಸಾರವಾಗಿ ಕಾಳಜಿ ಕೇಂದ್ರಗಳನ್ನು ತೆರೆದು ಎಲ್ಲ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಅವರು ತಿಳಿಸಿದ್ದಾರೆ. ಎಲ್ಲ ಜಿಲ್ಲೆಗಳಲ್ಲಿ ನಿಯಂತ್ರಣ ಕೊಠಡಿ ತೆರೆದು ದಿನದ 24 ಗಂಟೆಯೂ ಕಾರ್ಯ ನಿರ್ವಹಿಸಲು ವ್ಯವಸ್ಥೆ ಮಾಡುವಂತೆ ಸೂಚಿಸಿದ್ದಾರೆ.

ಇಬ್ಬರು ನಾಪತ್ತೆ: ಮೂವರ ಸ್ಥಿತಿ ಗಂಭೀರ

ಪ್ರಜಾವಾಣಿ ವಾರ್ತೆ

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕಸಬಾ ಹೋಬಳಿಯ ಕತ್ತರಘಟ್ಟ ಗ್ರಾಮದ ಜಗದೀಶ್–ಕುಳ್ಳಮ್ಮ ದಂಪತಿ ಪುತ್ರಿ ಝಾನ್ಸಿರಾಣಿ ಕುಟುಂಬವು, ಕೇರಳದ ವಯನಾಡ್ ನಲ್ಲಿ ಮಂಗಳವಾರ ಸಂಭವಿಸಿದ ಭೂಕುಸಿತದಲ್ಲಿ ಸಿಲುಕಿದೆ. ಕೇರಳದ ವಯನಾಡ್‌ನ ಮುಂಡಕ್ಕೈ ಗ್ರಾಮದಲ್ಲಿ ಕುಟುಂಬ ವಾಸವಿತ್ತು. ಝಾನ್ಸಿರಾಣಿ– ಅನಿಲ್ ಕುಮಾರ್ ದಂಪತಿ, ಹಾಗೂ ಝಾನ್ಸಿರಾಣಿ ಮಾವ ದೇವರಾಜು ಸಾವು–ಬದುಕಿನ ನಡುವೆ ಹೋರಾಟ ನಡೆಸುತಿದ್ದಾರೆ. ಅತ್ತೆ ಲೀಲಾವತಿ (55), ಪುತ್ರ ನಿಹಾಲ್ (26) ನಾಪತ್ತೆಯಾಗಿದ್ದಾರೆ ಎಂದು ತಿಳಿದು ಬಂದಿದೆ.

‘ಘಟನೆ ಕೇಳಿ ಗಾಬರಿಗೊಂಡಿದ್ದೇವೆ. ಒಳ್ಳೆಯ ಸುದ್ದಿಗಾಗಿ ಆತಂಕದಿಂದಲೇ ಕಾಯುತ್ತಿದ್ದೇವೆ’ ಎಂದು ಕುಟುಂಬದ ಸದಸ್ಯ ಮಂಜು ಹೇಳಿದರು.

‘ಕರ್ನಾಟಕಕ್ಕೂ ಎಚ್ಚರಿಕೆ ಗಂಟೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದ ವಯನಾಡ್ ಜಿಲ್ಲೆಯಲ್ಲಿ ಸಂಭವಿಸಿದ ಗುಡ್ಡ ಕುಸಿತದ ದುರಂತ ಆಘಾತಕಾರಿಯಾಗಿದ್ದು, ಇದು ಕರ್ನಾಟಕಕ್ಕೂ ಎಚ್ಚರಿಕೆ ಗಂಟೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ಉತ್ತರ ಕನ್ನಡದ ಶಿರೂರು ಮತ್ತು ಕೇರಳದ ವಯನಾಡ್‌ನಲ್ಲಿ ನಡೆದಿರುವ ಈ ಭೀಕರ ದುರ್ಘಟನೆಯ ಹಿನ್ನೆಲೆಯಲ್ಲಿ ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ ಸೇರಿದಂತೆ ರಾಜ್ಯದ ಹಲವು ಗಿರಿ ಪ್ರದೇಶಗಳಲ್ಲಿ ಅನಧಿಕೃತವಾಗಿ ತಲೆ ಎತ್ತುತ್ತಿರುವ ವಸತಿ ಪ್ರದೇಶ, ಹೋಂ ಸ್ಟೇ ಮತ್ತು ರೆಸಾರ್ಟ್‌ಗಳಿಗೆ ಕಡಿವಾಣ ಹಾಕುವ ಅಗತ್ಯವಿದೆ. ಈ ಬಗ್ಗೆ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ಕಟ್ಟುನಿಟ್ಟಿನ ಹಾಗೂ ಮುಂಜಾಗರೂಕತಾ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿರುವುದಾಗಿ ಖಂಡ್ರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದುರಂತದ ಜಾಡಿನಲ್ಲಿ...

- ವಯನಾಡ್‌ನ ಮುಂಡಕ್ಕೈ, ಚೂರಲ್ ಮಲ, ಅಟ್ಟಮಲ, ನೂಲ್ಪುಳ ಪ್ರದೇಶದಲ್ಲಿ ಜನರು ಮುಂಜಾವಿನ ನಿದ್ದೆಯಲ್ಲಿದ್ದಾಗ, ಆರಂಭಿಕ ಭೂಕುಸಿತ ನಸುಕಿನ 2ರ ಸುಮಾರಿಗೆ ಘಟಿಸಿತು
- ನಂತರದ ಭೂಕುಸಿತಗಳು 4.10ರ ಮುಂಜಾವಿನಲ್ಲಿ ಸಂಭವಿಸಿದವು. ಭೂಕುಸಿತದ ಜತೆಗೆ ರಕ್ಕಸ ಅಲೆಯಾಗಿ ಮಳೆ ನುಗ್ಗಿತು
- ಸಂಭವಿಸಿರುವ ಈ ಸ್ಥಳಗಳು ಬೆಟ್ಟಗುಡ್ಡಗಳ ಪ್ರಾಕೃತಿಕ ಸೌಂದರ್ಯ, ಚಹಾ ತೋಟಗಳಿಂದಾಗಿ ಪ್ರವಾಸಿಗರ ನೆಚ್ಚಿನ ತಾಣಗಳಾಗಿದ್ದವು. ಇವುಗಳ ಸುತ್ತಮುತ್ತ ಹಲವು ಹೋಂಸ್ಟೇ ಮತ್ತು ರೆಸಾರ್ಟ್‌ಗಳೂ ಇವೆ
- ಭೀಕರ ಭೂಕುಸಿತದ ಹಿನ್ನೆಲೆಯಲ್ಲಿ ರಕ್ಷಣಾ ಕಾರ್ಯಾಚರಣೆಗೆ ಭಾರತೀಯ ಸೇನೆಯ ನೆರವನ್ನು ಕೇರಳ ಸರ್ಕಾರ ಕೋರಿತು.
- ದುರಂತದ ಮಾಹಿತಿ ಲಭಿಸಿದ ಒಂದು ತಾಸಿನಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಗಳ 300 ಮಂದಿಯ ರಕ್ಷಣಾ ತಂಡ ಮೊದಲು ರಕ್ಷಣಾ ಕಾರ್ಯಾಚರಣೆ ಆರಂಭಿಸಿತು
- ನೆಲಸಮವಾದ ಮನೆಗಳ ಅವಶೇಷಗಳಡಿ ಸಿಲುಕಿ ಮೃತಪಟ್ಟವರ ದೇಹಗಳನ್ನು ಹೊರತೆಗೆಯುತ್ತಾ ಹೋದರು. ಮೊದಲಿಗೆ ಗಾಯಾಳುಗಳನ್ನು ರಕ್ಷಿಸಿ, ವಯನಾಡ್ ಆಸ್ಪತ್ರೆಗೆ ದಾಖಲಿಸಲಾಯಿತು
- ಬದುಕಲು ಹೋರಾಡುತ್ತಿದ್ದವರನ್ನು ಪತ್ತೆಹಚ್ಚಿ, ರಕ್ಷಿಸಲು ಸೇನೆಯಲ್ಲಿ ವಿಶೇಷ ತರಬೇತಿ ಪಡೆದಿರುವ ಬೆಲ್ಜಿಯನ್ ಮ್ಯಾಲಿನ್‌ವಾ, ಲ್ಯಾಬ್ರ ಡಾರ್, ಜರ್ಮನ್ ಶೆಫರ್ಡ್ ತಳಿಯ ಶ್ವಾನದಳ ಬಳಸಿಕೊಳ್ಳಲಾಯಿತು
- ಗಾಯಾಳುಗಳನ್ನು ರಕ್ಷಿಸಲು ವಾಯು ಪಡೆಯ ಎರಡು ಹೆಲಿಕಾಪ್ಟರ್‌ಗಳು ಮತ್ತು ಕೆಲವು ಉಪಕರಣಗಳನ್ನು ಬಳಸಿಕೊಳ್ಳಲಾಯಿತು

ಸಹಾಯವಾಣಿ

ವಯನಾಡ್‌ನಲ್ಲಿ ನಿಯಂತ್ರಣ ಕೊಠಡಿ ತೆರೆಯಲಾಗಿದ್ದು, ಸಾರ್ವಜನಿಕರು 24 ಗಂಟೆಯೂ 9497900402, 0471 –2721566 ಸಂಖ್ಯೆಗಳಿಗೆ ಮಾಹಿತಿ ನೀಡಬಹುದು. ನಿಯಂತ್ರಣ ಕೊಠಡಿಯು ರಾಜ್ಯ ಪೊಲೀಸ್ ಮುಖ್ಯಸ್ಥರ ನೇರ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸಲಿದೆ.

4 ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್

ತಿರುವನಂತಪುರ (ಪಿಟಿಐ): ಭಾರಿ ಮಳೆ ಮುನ್ಸೂಚನೆ ಕಾರಣ ಮಲಪ್ಪುರ, ಕೋಯಿಕ್ಕೋಡ್, ವಯನಾಡು ಮತ್ತು ಕಣ್ಣೂರು ಜಿಲ್ಲೆಗಳಲ್ಲಿ ಬುಧವಾರ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ತಿರುವನಂತಪುರ, ಕೊಲ್ಲಂ, ಪತ್ತನಂತಿಟ್ಟ, ಆಲಪ್ಪುಳ, ಕೋಟಯಂ, ಎರ್ನಾಕುಳಂ, ಇಡುಕ್ಕಿ, ತ್ರಿಶೂರ್, ಕಾಸರಗೋಡು ಜಿಲ್ಲೆಗಳಿಗೆ ಮಂಗಳವಾರ ರೆಡ್ ಅಲರ್ಟ್ ಘೋಷಿಸಲಾಗಿತ್ತು.

‘ಮುಂಡಕ್ಕೈ ಭೂಕುಸಿತ: ಎಲ್ಲ ನೆರವು ಕೊಡಿ’

ನವದೆಹಲಿ (ಪಿಟಿಐ): ಕೇರಳದ ವಯನಾಡ್‌ನಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಸಂತ್ರಸ್ತರಾದವರ ರಕ್ಷಣೆ ಮತ್ತು ಪುನರ್ವಸತಿಗೆ ಕೇಂದ್ರ ಸರ್ಕಾರ ಅಗತ್ಯವಿರುವ ಎಲ್ಲ ರೀತಿಯ ನೆರವು ನೀಡಬೇಕು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಂಗಳವಾರ ಒತ್ತಾಯಿಸಿದರು.

ಲೋಕಸಭೆಯಲ್ಲಿ ಶೂನ್ಯ ವೇಳೆ ಈ ವಿಷಯ ಪ್ರಸ್ತಾಪಿಸಿದ ರಾಹುಲ್, ದುರಂತದಲ್ಲಿ ಮಡಿದವರ ಅವಲಂಬಿತರಿಗೆ ಹೆಚ್ಚಿನ ಪರಿಹಾರ ನೀಡಬೇಕು. ಅಲ್ಲಿ ಅಸ್ತವ್ಯಸ್ತಗೊಂಡಿರುವ ಪ್ರಮುಖ ಸಾರಿಗೆ ಮತ್ತು ಸಂವಹನ ವ್ಯವಸ್ಥೆಯನ್ನು ಪುನರ್‌ಸ್ಥಾಪಿಸಬೇಕು.ಪುನರ್‌ವಸತಿ ಕಲ್ಪಿಸಲು ಮಾರ್ಗಸೂಚಿಯನ್ನು ಸಿದ್ಧಪಡಿಸಬೇಕು ಎಂದೂ ಅವರು ಒತ್ತಾಯಿಸಿದರು.

ಕಾಂಗ್ರೆಸ್ ಸದಸ್ಯರು ಸರ್ಕಾರ ಪ್ರತಿಕ್ರಿಯೆ ನೀಡಬೇಕೆಂದು ಒತ್ತಾಯಿಸಿದಾಗ, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜುಜು, ಪ್ರಧಾನಿ ನರೇಂದ್ರ ಮೋದಿ ಅವರು ಈಗಾಗಲೇ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಜತೆಗೆ ಮಾತನಾಡಿದ್ದಾರೆ. ಅಲ್ಲದೆ, ಪರಿಹಾರ ಕಾರ್ಯಗಳ ಸಮನ್ವಯಕ್ಕೆ ರಾಜ್ಯ ಖಾತೆಯ ಕೇರಳದ ಸಚಿವರನ್ನೂ ಕಳುಹಿಸಿಕೊಡಲಾಗಿದೆ ಎಂದು ಹೇಳಿದರು.

ಭೇಟಿ ರದ್ದು: ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಬುಧವಾರ ಬೆಳಿಗ್ಗೆ ವಯನಾಡ್‌ಗೆ ಭೇಟಿ ನೀಡಲು ಉದ್ದೇಶಿಸಿದ್ದರು. ಆದರೆ ಪ್ರತಿಕೂಲ ಹವಾಮಾನದಿಂದಾಗಿ ಅಲ್ಲಿಗೆ ತೆರಳಲು ಸಾಧ್ಯವಾಗುತ್ತಿಲ್ಲ ಎಂದು ಪಕ್ಷದ ಮೂಲಗಳು ತಿಳಿಸಿವೆ.

ವಿಜ್ಞಾನಿಗಳು ಹೀಗಂತಾರೆ...

ಭೂಕುಸಿತ ಮುನ್ಸೂಚನೆ ವಿಧಾನ ಅಭಿವೃದ್ಧಿ ಪಡಿಸಬೇಕು. ನಿರ್ದಿಷ್ಟ ಪ್ರದೇಶಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಬಹುದು. ಆದರೆ, ಆ ಮಳೆಯಿಂದಾಗಿ ಭೂಕುಸಿತ ಉಂಟಾಗಲಿದೆಯೇ ಎಂಬ ಬಗ್ಗೆ ಖಚಿತವಾಗಿ ಹೇಳಲಾಗದು. ಭಾರಿ ಮಳೆ ಬಿದ್ದಾಗ, ಪ್ರತಿ ಬಾರಿಯೂ ಭೂಕುಸಿತಗಳು ಉಂಟಾಗುವುದಿಲ್ಲ. ಹೀಗಾಗಿ, ಭೂಕುಸಿತ ಕುರಿತು ಮುನ್ಸೂಚನೆ ನೀಡುವ ವಿಧಾನದ ಅಗತ್ಯವಿದೆ. ಇಂತಹ ವಿಧಾನದ ಅಭಿವೃದ್ಧಿ ಕಷ್ಟವಾದರೂ ಅಸಾಧ್ಯವೇನಲ್ಲ

ರಾಜೀವನ್, ಭೂವಿಜ್ಞಾನ ಸಚಿವಾಲಯದ ಮಾಜಿ ಕಾರ್ಯದರ್ಶಿ

ಭಾರಿ ಮಳೆಯಾದಾಗ ಕೇರಳದಲ್ಲಿ ಭೂಕುಸಿತದ ಸಾಧ್ಯತೆ ಇರುವ ಪ್ರದೇಶಗಳ ಕುರಿತ ನಕ್ಷೆಗಳು ಲಭ್ಯವಿವೆ. ಭೂಕುಸಿತದ ಅಪಾಯ ಎದುರಿಸುವ ಸಾಧ್ಯತೆಯ ಪ್ರದೇಶಗಳನ್ನು ಗುರುತಿಸಿ, ಅವುಗಳಿಗೆ ಈ ಕುರಿತು ತಿಳಿವಳಿಕೆ ನೀಡಬೇಕು. ಇಂತಹ ಪ್ರದೇಶಗಳಲ್ಲಿ ಬೀಳುವ ಮಳೆ ಪ್ರಮಾಣದ ದತ್ತಾಂಶದ ಮೇಲೆ ನಿಗಾ ಇರಿಸಿ, ಅಪಾಯಕ್ಕೆ ಈಡಾಗಬಹುದಾದ ಪ್ರದೇಶಗಳಿಗೆ ಮುಂಚಿತವಾಗಿ ಎಚ್ಚರಿಕೆ ನೀಡುವ ವ್ಯವಸ್ಥೆ ರೂಪಿಸಬೇಕು. ಸದ್ಯ ಲಭ್ಯವಿರುವ ತಂತ್ರಜ್ಞಾನದಿಂದ ಇದು ಸಾಧ್ಯವಾಗಲಿದೆ. ಇದರಿಂದ ಜೀವಗಳನ್ನು ರಕ್ಷಿಸಬಹುದು

ರಾಕ್ಸಿ ಮ್ಯಾಥ್ಯೂ ಕೆ., ಹವಾಮಾನ ವಿಜ್ಞಾನಿ, ಭಾರತೀಯ ಉಷ್ಣವಲಯ ಹವಾಮಾನ ಸಂಸ್ಥೆ

ಅರಬ್ಬಿ ಸಮುದ್ರದ ತಾಪಮಾನ ಹೆಚ್ಚುತ್ತಿರುವ ವಿದ್ಯಮಾನವನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ಇದು ಅರಬ್ಬಿ ಸಮುದ್ರದ ಆಗ್ನೇಯ ಭಾಗದಲ್ಲಿ ದಟ್ಟ ಮೋಡಗಳ ಸೃಷ್ಟಿಗೆ ಕಾರಣವಾಗುತ್ತಿದೆ. ಕೇರಳದ ಕರಾವಳಿ ಬಳಿ ಅತ್ಯಂತ ಕಡಿಮೆ ಒತ್ತಡ ಪ್ರದೇಶ ಸೃಷ್ಟಿಯಾಗಿರುವುದರಿಂದ ಕಾಸರಗೋಡು, ಕಣ್ಣೂರು, ವಯನಾಡ್, ಕಲ್ಲಿಕೋಟೆ ಮತ್ತು ಮಲಪ್ಪುರ ಜಿಲ್ಲೆಗಳಲ್ಲಿ ಕಳೆದ ಎರಡು ವಾರಗಳಿಂದ ಭಾರಿ ಮಳೆಯಾಗುತ್ತಿದೆ. ಇದರಿಂದ ಮಣ್ಣು ಸಂಪೂರ್ಣ ಆರ್ದ್ರವಾಗಿತ್ತು. ಇದರ ಜೊತೆಗೆ, ಸೋಮವಾರವೂ ಭಾರಿ ಮಳೆ ಬಿದ್ದ ಕಾರಣ ವಯನಾಡ್, ಇತರ ಜಿಲ್ಲೆಗಳಲ್ಲಿ ಭೂಕುಸಿತ ಉಂಟಾಗಿದೆ

ಎಸ್.ಅಭಿಲಾಷ್, ನಿರ್ದೇಶಕ, ಅಡ್ವಾನ್ಸ್‌ಡ್ ಸೆಂಟರ್ ಫಾರ್ ಅಟ್ಮಾಸ್ಫಿರಿಕ್ ರೇಡಾರ್ ರಿಸರ್ಚ್, ಕೊಚ್ಚಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ

ದುರಂತ ಭೂಮಿಯಾದ ವಯನಾಡ್

ವಯನಾಡ್ (ಪಿಟಿಐ): ಅಷ್ಟೊಂದು ವಿಶಾಲವಲ್ಲದ ಆಸ್ಪತ್ರೆಯ ನೆಲದಲ್ಲಿ ಸಾಲು ಸಾಲು ಶವಗಳು. ಅವುಗಳಲ್ಲಿ ತಮ್ಮ ಪ್ರೀತಿಪಾತ್ರರ ಮೃತದೇಹ ಇವೆಯೇ ಎಂದು ಕೆಲವರು ಹುಡುಕಾಟ ನಡೆಸುತ್ತಿದ್ದರು. ಶವಗಳ ಬಳಿ ಕುಳಿತಿದ್ದ ಕುಟುಂಬ ಸದಸ್ಯರ ಆಕ್ರಂದನ ಮುಗಿಲುಮುಟ್ಟಿತ್ತು...

ಇಲ್ಲಿನ ಮೇಪ್ಪಾಡಿ ಗ್ರಾಮದಲ್ಲಿ ಭಾರಿ ಭೂಕುಸಿತ ಸಂಭವಿಸಿದ ಬಳಿಕ ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಂಗಳವಾರ ಕಂಡುಬಂದ ದೃಶ್ಯಗಳು ಕರುಳು ಹಿಂಡುವಂತಿದ್ದವು.

ಕೆಲವರು ತಮ್ಮ ಪ್ರೀತಿಪಾತ್ರರ ಶವಗಳನ್ನು ಕಂಡು ಆಘಾತದಿಂದ ಕುಸಿದು ಕುಳಿತರೆ, ಇನ್ನು ಕೆಲವರು ಸತ್ತವರಲ್ಲಿ ತಮ್ಮ ಸಂಬಂಧಿಕರು ಇಲ್ಲ ಎಂಬುದು ಖಚಿತವಾದ ಬಳಿಕ ಸಮಾಧಾನದ ನಿಟ್ಟುಸಿರುಬಿಟ್ಟರು.

ದುರಂತದಲ್ಲಿ ಇಬ್ಬರು ಮಕ್ಕಳು ಸೇರಿದಂತೆ ಕುಟುಂಬದ ಐವರು ಸದಸ್ಯರು ನಾಪತ್ತೆಯಾಗಿರುವುದಾಗಿ ಮಹಿಳೆಯೊಬ್ಬರು ಕಣ್ಣೀರು ಹಾಕುತ್ತಾ ಹೇಳಿದರು. ಕುಟುಂಬ ಸದಸ್ಯರನ್ನು ಯಾರಾದರೂ ರಕ್ಷಿಸಿರಬಹುದೇ ಎಂದು ಭಾವಿಸಿ ಆಸ್ಪತ್ರೆಗೆ ಬಂದಿರುವುದಾಗಿ ಅವರು ತಿಳಿಸಿದರು.

‘ಎಲ್ಲಿಗೆ ಹೋಗಬೇಕು ಅಥವಾ ಎಲ್ಲಿ ಹುಡುಕಬೇಕು ಎಂಬುದು ತಿಳಿಯುತ್ತಿಲ್ಲ. ನಮ್ಮ ಇಬ್ಬರು ಮಕ್ಕಳು ನಾಪತ್ತೆ ಆಗಿದ್ದಾರೆ. ಇನ್ನೇನು ಮಾಡಲಿ’ ಎಂದು ಪ್ರಶ್ನಿಸಿದರು.



ಭೂಕುಸಿತದಲ್ಲಿ ನಾಶವಾದ ಮನೆಯ ಅವಶೇಷಗಳಡಿಯಿಂದ ರಕ್ಷಿಸಲಾದ ಮಹಿಳೆಯನ್ನು ರಕ್ಷಣಾ ತಂಡದ ಸಿಬ್ಬಂದಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ದರು –ಪಿಟಿಐ ಚಿತ್ರ


ಸತ್ತವರ ನಡುವೆ ತನ್ನ ಸಹೋದರನ ಶವವನ್ನು ಕಂಡ ವ್ಯಕ್ತಿಯೊಬ್ಬರು ಕಣ್ಣೀರು ತಡೆದು ಕೊಳ್ಳಲು ಹೆಣಗಾಡುತ್ತಿರುವುದು ಕಂಡುಬಂತು. ಪರಿಚಯಸ್ಥ ಕುಟುಂಬವೊಂದರ ನಾಲ್ವರು ಸದಸ್ಯರಿಗಾಗಿ ಹುಡುಕಾಡುತ್ತಿರುವುದಾಗಿ ಸ್ಥಳೀಯ ಅಂಗನವಾಡಿ ಕಾರ್ಯಕರ್ತೆಯೊಬ್ಬರು ಹೇಳಿದರು. ‘ಅವರ ಕೆಲವು ಸಂಬಂಧಿಕರು ಬೆಳಿಗ್ಗೆ ನನಗೆ ಕರೆ ಮಾಡಿ ಇಡೀ ಕುಟುಂಬ ನಾಪತ್ತೆಯಾಗಿದ್ದು, ಅವರ ಮನೆ ಸಂಪೂರ್ಣವಾಗಿ ಕುಸಿದಿದೆ ಎಂದು ಮಾಹಿತಿ ನೀಡಿದರು. ದುರದೃಷ್ಟವಶಾತ್, ಅವರಲ್ಲಿ ಯಾರನ್ನೂ ಹುಡುಕಲು ನನಗೆ ಸಾಧ್ಯವಾಗಲಿಲ್ಲ’ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಕಾಣೆಯಾದ ತನ್ನ ಸಹೋದರ ಮತ್ತು ಅವನ ಕುಟುಂಬದ ಸದಸ್ಯರನ್ನು ಹುಡುಕಲು ಅಬೂಬಕ್ಕರ್ ಎಂಬ ಅಂಗವಿಕಲ ವ್ಯಕ್ತಿ, ಕಿಕ್ಕಿರಿದ ಆಸ್ಪತ್ರೆಯ ಆವರಣದಲ್ಲಿ ಬಹಳ ಪ್ರಯಾಸದಿಂದ ಅತ್ತಿತ್ತ ನಡೆದಾಡುವುದು ಕಂಡುಬಂತು.

‘ನಾವು ವಾಸವಿದ್ದ ಸ್ಥಳದಲ್ಲಿ ಭಾರಿ ಮಳೆ ಸುರಿಯುತ್ತಿರುವುದರಿಂದ ನಾನು, ಪತ್ನಿ ಮತ್ತು ಮಗ ಸೋಮವಾರ ನನ್ನ ಸಹೋದರಿಯ ಮನೆಗೆ ತೆರಳಿದೆವು. ಆದರೆ ನಮ್ಮ ಮನೆಯ ಸಮೀಪದಲ್ಲೇ ವಾಸಿಸುತ್ತಿದ್ದ ನನ್ನ ಸಹೋದರ ಮತ್ತು ಅವನ ಕುಟುಂಬವು ಅಲ್ಲೇ ಉಳಿದುಕೊಂಡಿತ್ತು. ಭೂಕುಸಿತದ ಬಳಿಕ ಅವರು ಕಾಣೆಯಾಗಿದ್ದಾರೆ’ ಎಂದು ಹೇಳಿದರು.

ಸ್ಥಳೀಯ ನಿವಾಸಿಗಳು ಮಾತ್ರವಲ್ಲದೆ ಸುತ್ತಮುತ್ತಲಿನ ಗ್ರಾಮಗಳ ಜನರು, ಪೊಲೀಸರು, ಆರೋಗ್ಯ ಇಲಾಖೆ ಸಿಬ್ಬಂದಿ, ಸ್ವಯಂಸೇವಕರು, ವೈದ್ಯರು ಮತ್ತು ದಾದಿಯರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,836
ಇಂದಿನ ಅಂತ್ಯ	24,857
▲	21
ದಿನದ ಗರಿಷ್ಠ	24,971

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹250-446
ದ್ವಿತಳಿ (ಬಿ.ವಿ) ₹285-640

ಭಾರತದ ಪರವಾಗಿ ಸ್ಪರ್ಧಿಸಿ ಬೆಳ್ಳಿ ಗೆದ್ದ ಬ್ರಿಟನ್ ಬಾಲಕಿ



ಆನ್ಯಾ ಗೋಯಲ್

ಲಂಡನ್ (ಪಿಟಿಐ): ನೆದರ್ಲೆಂಡ್‌ನಲ್ಲಿ ನಡೆದ ಯುರೋಪಿಯನ್ ಗರ್ಲ್ಸ್ ಒಲಿಂಪಿಯಾಡ್‌ನ ಇನ್‌ಫಾರ್ಮ್ಯಾಟಿಕ್ಸ್ ಸ್ಪರ್ಧೆಯಲ್ಲಿ ಲಂಡನ್‌ನ 17 ವರ್ಷದ ಬಾಲಕಿ ಆನ್ಯಾ ಗೋಯಲ್ ಭಾರತದ ಪರವಾಗಿ ಸ್ಪರ್ಧಿಸಿ ಬೆಳ್ಳಿ ಪದಕ ಗೆದ್ದಿದ್ದಾರೆ.

ಅಲೆನ್ಸ್ ಶಾಲೆಯ ವಿದ್ಯಾರ್ಥಿನಿ ಆನ್ಯಾ ಗೋಯಲ್ ಅವರು ಸುಮಾರು 50 ರಾಷ್ಟ್ರಗಳು ಭಾಗವಹಿಸಿದ್ದ ಅಂತರ ರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಸ್ಪರ್ಧೆಯಲ್ಲಿ ಗೆಲುವು ಸಾಧಿಸಿದ್ದಾರೆ.

ಎಲ್‌ಟಿಸಿಜಿ: ₹98,681 ಕೋಟಿ ತೆರಿಗೆ ಸಂಗ್ರಹ

ನವದೆಹಲಿ (ಪಿಟಿಐ): ಒಂದು ವರ್ಷದ ಬಳಿಕ ಮಾರಾಟ ಮಾಡುವ ಷೇರುಗಳಿಂದ ಬರುವ ಲಾಭದ ಮೇಲೆ ವಿಧಿಸುವ ದೀರ್ಘಾವಧಿ ಬಂಡವಾಳ ಗಳಿಕೆ ಮೇಲಿನ ತೆರಿಗೆ (ಎಲ್‌ಟಿಸಿಜಿ) ಮೂಲಕ, 2022–23ನೇ ಆರ್ಥಿಕ ವರ್ಷದಲ್ಲಿ ₹98,861 ಕೋಟಿ ಸಂಗ್ರಹಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

2018ರ ಏಪ್ರಿಲ್‌ನಿಂದ ಷೇರುಗಳು ಮತ್ತು ಈಕ್ವಿಟಿ ಮ್ಯೂಚುವಲ್ ಫಂಡ್‌ಗಳ ಮಾರಾಟಕ್ಕೆ ಈ ತೆರಿಗೆ ಅನ್ವಯವಾಗುತ್ತದೆ. ಷೇರುಗಳಿಂದ ಬರುವ ಲಾಭದ ವಾರ್ಷಿಕ ಮೊತ್ತವು ₹1 ಲಕ್ಷ ಇದ್ದರೆ ತೆರಿಗೆ ವಿನಾಯಿತಿ ದೊರೆಯಲಿದೆ. ಇದಕ್ಕಿಂತ ಹೆಚ್ಚಿಗೆ ಇದ್ದರೆ ಅದಕ್ಕೆ ಶೇ 10ರಷ್ಟು ತೆರಿಗೆ ಪಾವತಿಸಬೇಕಿದೆ.

2021–22ನೇ ಆರ್ಥಿಕ ವರ್ಷದಲ್ಲಿ ₹86,075 ಕೋಟಿ ತೆರಿಗೆ ಸಂಗ್ರಹಿಸಲಾಗಿತ್ತು. ಇದಕ್ಕೆ ಹೋಲಿಸಿದರೆ ತೆರಿಗೆ ಸಂಗ್ರಹದಲ್ಲಿ ಶೇ 15ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು, ಮಂಗಳವಾರ ರಾಜ್ಯಸಭೆಗೆ ತಿಳಿಸಿದ್ದಾರೆ.

ಸರ್ಕಾರವು ಈ ತೆರಿಗೆಯಡಿ 2018–19ರಲ್ಲಿ ₹29,220 ಕೋಟಿ, 2019–20ರಲ್ಲಿ ₹26,008 ಕೋಟಿ ಹಾಗೂ 2020–21ರಲ್ಲಿ ₹38,589 ಕೋಟಿ ತೆರಿಗೆ ಸಂಗ್ರಹಿಸಿದೆ ಎಂದು ಸಚಿವರು ವಿವರಿಸಿದ್ದಾರೆ.

'2024–25ನೇ ಆರ್ಥಿಕ ವರ್ಷದಲ್ಲಿ ಎಲ್‌ಟಿಸಿಜಿ ರದ್ದುಪಡಿಸುವ ಯಾವುದೇ ಪ್ರಸ್ತಾವವು ಸರ್ಕಾರದ ಮುಂದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಪ್ರಸಕ್ತ ಆರ್ಥಿಕ ಸಾಲಿನ ಬಜೆಟ್‌ನಲ್ಲಿ ಷೇರುಗಳು ಮತ್ತು ಈಕ್ವಿಟಿ ಮ್ಯೂಚುವಲ್ ಫಂಡ್‌ಗಳ ಮಾರಾಟದ ಮೇಲೆ ವಿಧಿಸುವ ಎಲ್‌ಟಿಸಿಜಿಯನ್ನು ಶೇ 10ರಿಂದ ಶೇ 12.5ಕ್ಕೆ ಹೆಚ್ಚಿಸಲಾಗಿದೆ. ತೆರಿಗೆ ವಿನಾಯಿತಿ ಮೊತ್ತವನ್ನು ₹1 ಲಕ್ಷದಿಂದ ₹1.25 ಲಕ್ಷಕ್ಕೆ ಏರಿಕೆ ಮಾಡಲಾಗಿದೆ.

ಕಳ್ಳಸಾಗಣೆ ಚಟುವಟಿಕೆ ಮೇಲೆ ಹದ್ದಿನ ಕಣ್ಣು: ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿಕೆ

ಮೂರು ತಿಂಗಳಲ್ಲಿ 847 ಕೆ.ಜಿ ಚಿನ್ನ ಜಪ್ತಿ

ನವದೆಹಲಿ (ಪಿಟಿಐ): ಕಸ್ಟಮ್ಸ್ ಮತ್ತು ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜೂನ್‌ವರೆಗೆ ಕಳ್ಳಸಾಗಣೆ ಮಾಡುತ್ತಿದ್ದ ₹544 ಕೋಟಿ ಮೌಲ್ಯದ 847 ಕೆ.ಜಿ. ಚಿನ್ನವನ್ನು ಜಪ್ತಿ ಮಾಡಿದ್ದಾರೆ.

'ಈ ಮೂರು ತಿಂಗಳ ಅವಧಿಯಲ್ಲಿ ದೇಶದ ವಿವಿಧ ವಿಮಾನ ನಿಲ್ದಾಣಗಳಲ್ಲಿ ಚಿನ್ನ ಕಳ್ಳಸಾಗಣೆ ಸಂಬಂಧ 1,282 ಪ್ರಕರಣ ದಾಖಲಿಸಲಾಗಿದೆ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಮಂಗಳವಾರ ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

2023–24ರಲ್ಲಿ ಬಂದರುಗಳಲ್ಲಿ ಹಳದಿ ಲೋಹದ ಕಳ್ಳಸಾಗಣೆ ಮಾಡುತ್ತಿದ್ದ ಎರಡು ಪ್ರಕರಣ ಪತ್ತೆ ಹಚ್ಚಿದ್ದು, 1.28 ಕೆ.ಜಿ ಚಿನ್ನ ವಶಪಡಿಸಿಕೊಳ್ಳಲಾಗಿದೆ. ಏಪ್ರಿಲ್‌ನಿಂದ ಜೂನ್‌ವರೆಗೆ ಬಂದರಿನಲ್ಲಿ ಯಾವುದೇ ಕಳ್ಳಸಾಗಣೆ ಪ್ರಕರಣ ವರದಿಯಾಗಿಲ್ಲ ಎಂದು ತಿಳಿಸಿದ್ದಾರೆ.

ಕಸ್ಟಮ್ಸ್ ಮತ್ತು ಡಿಆರ್‌ಐ ಅಧಿಕಾರಿಗಳು ಚಿನ್ನ ಕಳ್ಳಸಾಗಣೆ ಚಟುವಟಿಕೆಗಳ ಮೇಲೆ ಹದ್ದಿನ ಕಣ್ಣು ನೆಟ್ಟಿದ್ದಾರೆ. ಗುಪ್ತಚರ ವಿಭಾಗದ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುತ್ತಿದ್ದಾರೆ. ಪ್ರಯಾಣಿಕರ ಆಗಮನ ಮತ್ತು ನಿರ್ಗಮನದ ಮಾಹಿತಿ ಆಧರಿಸಿ ಅವರ ಚಲನವಲನದ ಮೇಲೆ ಕಣ್ಗಾವಲು ಇಡುವ ವ್ಯವಸ್ಥೆ ರೂಪಿಸಲಾಗಿದೆ ಎಂದು ತಿಳಿಸಿದ್ದಾರೆ.

ವಿಮಾನಗಳಲ್ಲಿ ಪ್ರಯಾಣಿಕರ ಸಾಮಾನು ಸರಂಜಾಮು ತಪಾಸಣೆ ನಡೆಸಲಾಗುತ್ತಿದೆ. ಹಡಗುಗಳ ಕಂಟೈನರ್‌ಗಳನ್ನು ಸ್ಕ್ಯಾನಿಂಗ್ ಮಾಡಲಾಗುತ್ತದೆ ಎಂದು ಹೇಳಿದ್ದಾರೆ.

ಏಪ್ರಿಲ್‌ನಿಂದ ಜೂನ್‌ವರೆಗೆ ಚಿನ್ನ ಕಳ್ಳಸಾಗಣೆಯಲ್ಲಿ ಭಾಗಿಯಾದ 152 ಮಂದಿ ವಿರುದ್ಧ ದೂರು ದಾಖಲಿಸಲಾಗಿದೆ.



3,714 ಕೆ.ಜಿ 2023–24ರಲ್ಲಿ ವಶಪಡಿಸಿಕೊಂಡಿರುವ ₹2,081 ಕೋಟಿ ಮೌಲ್ಯದ ಚಿನ್ನ

2,776 ಕೆ.ಜಿ– 2022–23ರಲ್ಲಿ ಜಪ್ತಿ ಮಾಡಿರುವ ₹1,382 ಕೋಟಿ ಮೌಲ್ಯದ ಚಿನ್ನ

1,240 ಕೆ.ಜಿ– 2021–22ರಲ್ಲಿ ವಶಕ್ಕೆ ಪಡೆದಿರುವ ₹572 ಕೋಟಿ ಮೌಲ್ಯದ ಚಿನ್ನ

10 ಗ್ರಾಂಗೆ ಧಾರಣೆ ₹550 ಏರಿಕೆ

ನವದೆಹಲಿ (ಪಿಟಿಐ): ದೇಶೀಯ ಆಭರಣ ತಯಾರಿಕರಿಂದ ಹೆಚ್ಚಿದ ಬೇಡಿಕೆಯಿಂದಾಗಿ ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನದ ಧಾರಣೆಯು ಏರಿಕೆಯಾಗಿದೆ.

10 ಗ್ರಾಂ ಚಿನ್ನದ ಬೆಲೆ ₹550 ಏರಿಕೆಯಾಗಿದ್ದು, ₹71,600ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಯಥಾಸ್ಥಿತಿಯಲ್ಲಿದ್ದು, ಕೆ.ಜಿ ಬೆಳ್ಳಿ ಧಾರಣೆ ₹84,500 ಆಗಿದೆ.

ಬ್ಯಾಂಕ್ ಆಫ್ ಜಪಾನ್ ಮತ್ತು ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್‌ನ ಹಣಕಾಸು ನೀತಿ ಸಮಿತಿ ಸಭೆಯ ನಿರ್ಧಾರವು ಬುಧವಾರ ಪ್ರಕಟವಾಗಲಿದೆ. ಇದು ಹಳದಿ ಲೋಹದ ಬೆಲೆಯ ಏರಿಳಿತಕ್ಕೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಜೂನ್ ತ್ರೈಮಾಸಿಕದಲ್ಲಿ ಕುಗ್ಗಿದ ಬೇಡಿಕೆ

ಮುಂಬೈ (ಪಿಟಿಐ): ದೇಶದ ಚಿನ್ನದ ಬೇಡಿಕೆಯು ಪ್ರಸಕ್ತ ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇ 5ರಷ್ಟು ಇಳಿಕೆಯಾಗಿದೆ ಎಂದು ವಿಶ್ವ ಚಿನ್ನ ಮಂಡಳಿಯ (ಡಬ್ಲ್ಯುಜಿಸಿ) ವರದಿ ಮಂಗಳವಾರ ತಿಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ 158 ಟನ್‌ನಷ್ಟು ಚಿನ್ನದ ಬೇಡಿಕೆಯಿತ್ತು. ಈ ತ್ರೈಮಾಸಿಕದಲ್ಲಿ 149 ಟನ್‌ಗೆ ಇಳಿದಿದೆ.

'ಹಳದಿ ಲೋಹದ ಧಾರಣೆ ಏರಿಕೆಯಿಂದಾಗಿ ಗ್ರಾಹಕರಿಂದ ಖರೀದಿಯು ಕಡಿಮೆಯಾಗಿದೆ. ಇದರಿಂದ ಈ ಅವಧಿಯಲ್ಲಿ ಬೇಡಿಕೆಯು ತಗ್ಗಿದೆ. ಆದರೆ, ಮೌಲ್ಯದ ಲೆಕ್ಕಾಚಾರದಲ್ಲಿ ಏರಿಕೆಯಾಗಿದೆ' ಎಂದು ಡಬ್ಲ್ಯುಜಿಸಿಯ ಭಾರತದ ಪ್ರಾದೇಶಿಕ ಸಿಇಒ ಸಚಿನ್ ಜೈನ್ ಹೇಳಿದ್ದಾರೆ.

ಆಮದು ಹೆಚ್ಚಳ: ಕಳೆದ ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ 182 ಟನ್‌ನಷ್ಟು ಚಿನ್ನ ಆಮದು ಮಾಡಿಕೊಳ್ಳಲಾಗಿತ್ತು. ಈ ವರ್ಷದ ಇದೇ ಅವಧಿಯಲ್ಲಿ 196 ಟನ್ ಆಮದು ಮಾಡಿಕೊಳ್ಳಲಾಗಿದೆ. ಒಟ್ಟಾರೆ ಶೇ 8ರಷ್ಟು ಹೆಚ್ಚಳವಾಗಿದೆ. ಈ ವರ್ಷದ ಚಿನ್ನದ ಬೇಡಿಕೆಯು 750 ಟನ್ ಆಗುವ ನಿರೀಕ್ಷೆ ಇದೆ.

'ಯುಪಿಎ ಬಜೆಟ್ ಭಾಷಣದಲ್ಲಿ ಕೆಲ ರಾಜ್ಯಗಳ ಹೆಸರು ಪ್ರಸ್ತಾಪಿಸಿರಲಿಲ್ಲ'

ವಿಪಕ್ಷಗಳಿಗೆ ನಿರ್ಮಲಾ ತಿರುಗೇಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಎನ್‌ಡಿಎ ಮಿತ್ರಪಕ್ಷಗಳ ಆಡಳಿತವಿರುವ ಬಿಹಾರ ಮತ್ತು ಆಂಧ್ರಪ್ರದೇಶಕ್ಕೆ ಬಜೆಟ್‌ನಲ್ಲಿ ಹೆಚ್ಚು ಆದ್ಯತೆ ನೀಡಿ ಇತರ ರಾಜ್ಯಗಳನ್ನು ನಿರ್ಲಕ್ಷಿಸಲಾಗಿದೆ ಎಂಬ ವಿರೋಧ ಪಕ್ಷಗಳ ಟೀಕೆಗಳಿಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಮಂಗಳವಾರ ತಿರುಗೇಟು ನೀಡಿದ್ದಾರೆ.

ಯುಪಿಎ ಆಡಳಿತದ ಅವಧಿಯಲ್ಲಿ ಮಂಡಿಸಲಾದ ಬಜೆಟ್‌ಗಳನ್ನು ಉಲ್ಲೇಖಿಸಿದ ಅವರು, ಹಲವು ರಾಜ್ಯಗಳ ಹೆಸರುಗಳ ಪ್ರಸ್ತಾಪವೇ ಇರಲಿಲ್ಲ ಎಂದು ಹೇಳಿದರು.

ಬಜೆಟ್ ಮೇಲಿನ ಚರ್ಚೆ ವೇಳೆ, '2004–05ನೇ ಸಾಲಿನ ಬಜೆಟ್ ಭಾಷಣದಲ್ಲಿ 17 ರಾಜ್ಯಗಳ ಹೆಸರು ಇರಲಿಲ್ಲ. ಈ ರಾಜ್ಯಗಳಿಗೆ ಹಣ ಬಿಡುಗಡೆಯಾಗಿರಲಿಲ್ಲವೇ?' ಎಂದರು.

'2006–07ನೇ ಸಾಲಿನ ಬಜೆಟ್ ಭಾಷಣದಲ್ಲಿ 18, 2007–08ನೇ ಸಾಲಿನಲ್ಲಿ 16 ಹಾಗೂ 2009–10ನೇ ಸಾಲಿನಲ್ಲಿ 26 ರಾಜ್ಯಗಳ ಹೆಸರು ಉಲ್ಲೇಖಿಸಿರಲಿಲ್ಲ. 2009–10ನೇ ಸಾಲಿನ ಬಜೆಟ್‌ನ ಭಾಷಣದಲ್ಲಿ 20 ರಾಜ್ಯಗಳ ಹೆಸರು ಇರಲಿಲ್ಲ' ಎಂದರು.

ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ, ಆಂಧ್ರಪ್ರದೇಶ ನೂತನ ರಾಜಧಾನಿ ಅಮರಾವತಿ ಅಭಿವೃದ್ಧಿಗೆ ₹15 ಸಾವಿರ ಕೋಟಿ ಹಂಚಿಕೆ ಮಾಡಲಾಗಿದೆ. ರಸ್ತೆಗಳ ನಿರ್ಮಾಣಕ್ಕೆ ಬಿಹಾರಕ್ಕೆ ₹26 ಸಾವಿರ ಕೋಟಿ ತೆಗೆದಿರಿಸಿರುವುದನ್ನು ಪ್ರಸ್ತಾಪಿಸಿದ್ದ ವಿರೋಧ ಪಕ್ಷಗಳು, ಬಜೆಟ್ ಭಾಷಣದಲ್ಲಿ ಮಹಾರಾಷ್ಟ್ರ, ಅಸ್ಸಾಂ ರಾಜ್ಯಗಳ ಉಲ್ಲೇಖವೇ ಇಲ್ಲ ಎಂದು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದವು.

'ರೈತರ ವಿಚಾರವಾಗಿ ವಿರೋಧ ಪಕ್ಷಗಳು ರಾಜಕೀಯ ಮಾಡುತ್ತಿವೆ' ಎಂದು ನಿರ್ಮಲಾ ದೂರಿದರು.



'ಹಲ್ವಾ ಕಾರ್ಯಕ್ರಮ' ಭಾವನಾತ್ಮಕ ವಿಷಯ. ಹಣಕಾಸು ಸಚಿವಾಲಯದ ಅಧಿಕಾರಿಗಳು, ಸಿಬ್ಬಂದಿಯಲ್ಲಿ ಒಗ್ಗಟ್ಟು ಮೂಡಿಸುವ ಕಾರ್ಯಕ್ರಮವನ್ನು ಯುಪಿಎ ಏಕೆ ರದ್ದು ಮಾಡಲಿಲ್ಲ?
ನಿರ್ಮಲಾ ಸೀತಾರಾಮನ್, ಹಣಕಾಸು ಸಚಿವೆ

ತೆರಿಗೆ ರಿಟರ್ನ್ಸ್ ಸಲ್ಲಿಕೆ ಇಂದು ಕೊನೆ ದಿನ

ನವದೆಹಲಿ (ಪಿಟಿಐ): 2024–25ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ಎಲ್ಲಾ ವರ್ಗದ ತೆರಿಗೆದಾರರು ರಿಟರ್ನ್ಸ್ ಸಲ್ಲಿಸಲು ಜುಲೈ 31 ಕೊನೆಯ ದಿನವಾಗಿದೆ.

ಪಿಎಚ್‌ಡಿ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯಿಂದ ಬಜೆಟ್ ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಕಂದಾಯ ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ, '2023–24ನೇ ಆರ್ಥಿಕ ವರ್ಷದಲ್ಲಿ ಗಳಿಸಿದ ಆದಾಯಕ್ಕೆ ಸಂಬಂಧಿಸಿ ಇಲ್ಲಿಯವರೆಗೆ 6 ಕೋಟಿಗೂ ಹೆಚ್ಚು ತೆರಿಗೆದಾರರು ರಿಟರ್ನ್ಸ್ ಸಲ್ಲಿಸಿದ್ದಾರೆ' ಎಂದು ತಿಳಿಸಿದರು.

ಹೊಸ ತೆರಿಗೆ ಪದ್ಧತಿಯನ್ನು ಸರಳೀಕರಿಸಲಾಗಿದೆ. ಶೇ 70ಕ್ಕೂ ಹೆಚ್ಚು ತೆರಿಗೆದಾರರು ಈ ಪದ್ಧತಿ ಆಯ್ಕೆ ಮಾಡಿಕೊಂಡಿದ್ದಾರೆ ಎಂದರು. 2022–23ನೇ ಆರ್ಥಿಕ ವರ್ಷದಲ್ಲಿ 8.16 ಕೋಟಿ ರಿಟರ್ನ್ಸ್ ಸಲ್ಲಿಕೆಯಾಗಿವೆ.



ಘರ್ಷಣೆ
ಬಾಂಗ್ಲಾದೇಶದಲ್ಲಿ ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ ವಿಚಾರವಾಗಿ ಇತ್ತೀಚೆಗೆ ರಾಷ್ಟ್ರದಾದ್ಯಂತ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಮೃತಪಟ್ಟ ಸಂತ್ರಸ್ತರಿಗಾಗಿ ನಡೆದ ಗೀತ ಮೆರವಣಿಗೆಯಲ್ಲಿ ಸಾಂಸ್ಕೃತಿಕ ಕಾರ್ಯಕರ್ತರು, ಸಿವಿಲ್ ಸೊಸೈಟಿ ಸದಸ್ಯರು ಮತ್ತು ಪೊಲೀಸರ ಮಧ್ಯೆ ಘರ್ಷಣೆ ನಡೆಯಿತು –ಎಎಫ್‌ಪಿ ಚಿತ್ರ

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾಗಭೂಷಣ್, ಊರು ಹೆಸರಿಸಿಲ್ಲ.

- **ಪ್ರಶ್ನೆ: ನನ್ನ ಪತ್ನಿಯ ಹೆಸರಲ್ಲಿ ಕೆಲವು ಉಳಿತಾಯ ಖಾತೆಗಳಿದ್ದವು. ಇದರಲ್ಲಿ ಅಂಚೆ ಕಚೇರಿಯಲ್ಲಿ ತೆರೆದಿರುವ ಎನ್‌ಎಸ್‌ಸಿ ಹಾಗೂ ಉಳಿತಾಯ ಖಾತೆ ಸೇರಿವೆ. ಅವರು ನಿಧನರಾಗಿರುವುದರಿಂದ ಒಟ್ಟಾರೆ ₹6.08 ಲಕ್ಷ ಮೊತ್ತವು ನನ್ನ ಖಾತೆಗೆ ಪ್ರಸಕ್ತ ವರ್ಷದ ಜನವರಿಯಲ್ಲಿ ಜಮೆ ಆಗಿದೆ. ಇದರ ಮೇಲೆ ಆದಾಯ ತೆರಿಗೆ ಬಂದಿರುವುದು ನನ್ನ ಖಾತೆಯಲ್ಲಿ ಗೋಚರಿಸುತ್ತಿದೆ. ಈ ವರ್ಗಾವಣೆಗೆ ತೆರಿಗೆ ಅನ್ವಯವಾಗುತ್ತದೆಯೇ? ಎಂಬ ಬಗ್ಗೆ ತಿಳಿಸಿ.**

ಉತ್ತರ: ನೀವು ನೀಡಿರುವ ಮಾಹಿತಿಯಂತೆ ಪತ್ನಿಯ ಖಾತೆಗೆ ನೀವು ನಾಮಿನಿ ಆಗಿರುವುದರಿಂದ ಉಲ್ಲೇಖಿಸಿರುವ ಮೊತ್ತ ಬಂದಿದೆ. ಮೊದಲ ಹಂತದಲ್ಲಿ ಈ ಮೊತ್ತವು ನಿಮಗೆ ಯಾವುದೇ ಆದಾಯವಲ್ಲ. ಮೃತರ ಸಂಬಂಧಿಯಾಗಿರುವ ಕಾರಣಕ್ಕೆ ಈ ಹಣ ನಿಮ್ಮ ಖಾತೆಗೆ ಜಮೆ ಆಗಿರುತ್ತದೆ. ಒಂದು ವೇಳೆ ಈ ಮೊತ್ತದ ಮೇಲೆ ಬಡ್ಡಿ ಜಮೆ ಆಗಿ ತೆರಿಗೆ ಕಡಿತಗೊಳಿಸುವ ಹಂತ ಮೀರಿದ್ದರೆ ಮಾತ್ರ ತೆರಿಗೆ ಕಡಿತಗೊಳಿಸಬಹುದು. ಬರಬಹುದಾದ ಬಡ್ಡಿ ಮೊತ್ತ ₹40 ಸಾವಿರಕ್ಕೂ (ಹಿರಿಯ ನಾಗರಿಕರಿಗೆ ₹50,000) ಕಡಿಮೆ ಇದ್ದರೆ, ತೆರಿಗೆ ಕಡಿತಗೊಳಿಸುವ ಅಗತ್ಯವಿರುವುದಿಲ್ಲ.

ಆದಾಯ ತೆರಿಗೆಯ ನಿಯಮ 114ಇ ಅಡಿ ಯಾವುದೇ ಅಂಚೆ ಖಾತೆಗೆ ಒಂದು ಆರ್ಥಿಕ ವರ್ಷದಲ್ಲಿ ₹10 ಲಕ್ಷ ನಗದು ಮೊತ್ತಕ್ಕಿಂತ ಅಧಿಕ ಜಮೆ ಮಾಡಿದಾಗ ಅಥವಾ ಆ ಮೊತ್ತಕ್ಕಿಂತ ಅಧಿಕ ಮೊತ್ತದ ಠೇವಣಿ ಪಡೆದಾಗ ಮಾತ್ರ ಅಂತಹ ಮೊತ್ತವನ್ನು ಅಂಚೆ ಇಲಾಖೆ ಪ್ರತ್ಯೇಕವಾಗಿ ಆದಾಯ ತೆರಿಗೆ ಇಲಾಖೆಗೆ ವರದಿ ಸಲ್ಲಿಸುವ ಮೂಲಕ ಮಾಹಿತಿ ನೀಡಬೇಕಾಗುತ್ತದೆ. ನೀವು ಕೊಟ್ಟಿರುವ ಮಾಹಿತಿಯಂತೆ ಈ ಮೇಲಿನ ಯಾವುದೇ ವರ್ಗದಲ್ಲಿ ನಿಮ್ಮ ವರ್ಗಾವಣೆ ಬರದ ಕಾರಣ ನಿಮ್ಮ ಖಾತೆಯಲ್ಲಿ ಯಾವುದೇ ವರ್ಗಾವಣೆ ಮೊತ್ತ ಕಂಡುಬರುವ ಅಗತ್ಯವಿಲ್ಲ. ಜೊತೆಗೆ, ತೆರಿಗೆಯು ಅನ್ವಯವಾಗುವುದಿಲ್ಲ.

ನಾರಾಯಣ, ಮೈಸೂರು.

- **ಪ್ರಶ್ನೆ: ನಾನು 2023ರ ಡಿಸೆಂಬರ್‌ನಲ್ಲಿ ಮೈಸೂರಿನಲ್ಲಿದ್ದ ನನ್ನ ನಿವೇಶನವನ್ನು ₹80 ಲಕ್ಷಕ್ಕೆ ಮಾರಾಟ ಮಾಡಿದ್ದೇನೆ. ಆ ಹಣ ನನ್ನ ಬ್ಯಾಂಕ್ ಖಾತೆಯಲ್ಲಿದೆ. ಖರೀದಿದಾರರು ಶೇ 1ರ ದರದಲ್ಲಿ ಟಿಡಿಎಸ್ ಮಾಡಿರುತ್ತಾರೆ. ಈಗ ಬೆಂಗಳೂರಿನಲ್ಲಿ ಒಂದು ಫ್ಲ್ಯಾಟ್ ಖರೀದಿಸುವ ಬಗ್ಗೆ ನಾನು ಮಾತುಕತೆ ನಡೆಸಿದ್ದೇನೆ. ಇದರ ಮೌಲ್ಯ ₹58 ಲಕ್ಷ. ಈ ಆಸ್ತಿಯನ್ನು ನಾನು ಅನಿವಾಸಿ ಭಾರತೀಯರೊಬ್ಬರಿಂದ ಖರೀದಿ ಮಾಡಬೇಕಾಗಿದೆ. ಇದರಿಂದ ನಾನು ಶೇ 20ರಷ್ಟು ಟಿಡಿಎಸ್ ಪಾವತಿ ಮಾಡಬೇಕೆಂದು ತಿಳಿಯಿತು. ಈ ವ್ಯವಹಾರವನ್ನು ನಾನು ತ್ವರಿತವಾಗಿ ಮಾಡಬೇಕಾಗಿರುವುದರಿಂದ ದಯವಿಟ್ಟು ಉತ್ತರಿಸಿ.**

ಉತ್ತರ: ನೀವು ನೀಡಿರುವ ಮಾಹಿತಿಯಂತೆ ಈಗಾಗಲೇ ನಿಮ್ಮ ಮೈಸೂರಿನ ನಿವೇಶನ ಮಾರಾಟ ಮಾಡಿದ್ದೀರಿ. ಇದಕ್ಕೆ ಖರೀದಿದಾರರು ಕಡಿತ ಮಾಡಬೇಕಾದ ಟಿಡಿಎಸ್ ಅನ್ನು ಈಗಾಗಲೇ ಕಡಿತ ಮಾಡಿದ್ದಾರೆ. ಆದರೆ, ಇದಕ್ಕೆ ಸಂಬಂಧಿಸಿ ನಿಮಗೆ ಯಾವ ವರ್ಗದಲ್ಲಿ ತೆರಿಗೆ ಅನ್ವಯಿಸುತ್ತದೆ ಎಂಬುದನ್ನು ಪರಿಶೀಲಿಸಿ. ಒಂದು ವೇಳೆ ಈ ನಿವೇಶನವು ನೀವು ಹೊಂದಿರುವ ಅವಧಿ 24 ತಿಂಗಳಿಗಿಂತ ಹೆಚ್ಚಿದ್ದರೆ ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆ ಅನ್ವಯಿಸುತ್ತದೆ.

ಇದಕ್ಕಿಂತ ಕಡಿಮೆ ಅವಧಿಯ ಹೂಡಿಕೆಯಾಗಿದ್ದರೆ, ಅಲ್ಪಾವಧಿ ಬಂಡವಾಳ ಗಳಿಕೆ ಮೇಲಿನ ತೆರಿಗೆ ಅನ್ವಯಿಸುತ್ತದೆ. ಇದಕ್ಕೆ ಕ್ರಮವಾಗಿ ಶೇ 20ರಷ್ಟು ತೆರಿಗೆ ಅಥವಾ ನಿಮಗೆ ಅನ್ವಯಿಸುವ ವಿವಿಧ ಸ್ತರದ ದರ ಅನ್ವಯವಾಗುತ್ತದೆ. ನೀವು ಮನೆಯಲ್ಲಿ ಮರು ಹೂಡಿಕೆ ಮಾಡುವ ಕಾರಣ ನಿಮಗೆ ಸೆಕ್ಷನ್ 54ಎಫ್ ಅಡಿ ತೆರಿಗೆ ವಿನಾಯಿತಿ ಪಡೆಯಬಹುದು.

ಅನಿವಾಸಿ ಭಾರತೀಯರಿಂದ (ಎನ್‌ಆರ್‌ಐ) ನೀವು ಫ್ಲ್ಯಾಟ್ ಖರೀದಿಸುವಾಗ ಅನ್ವಯವಾಗುವ ಕೆಲವು ತೆರಿಗೆ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಇದಕ್ಕೆ ಯಾವುದೇ ಮೌಲ್ಯದ ಮಿತಿ ಇಲ್ಲ. ಹೀಗಾಗಿ, ಮೊದಲ ಹಂತದಲ್ಲಿ ತೆರಿಗೆ ಕಡಿತಕ್ಕಾಗಿ ನೀವು ಟ್ಯಾನ್ ಸಂಖ್ಯೆ ಹೊಂದಿರಬೇಕು. ಇದಕ್ಕಾಗಿ ಖರೀದಿದಾರರಾದ ನೀವು ಟ್ಯಾನ್ ಸಂಖ್ಯೆಯನ್ನು ಆದಾಯ ತೆರಿಗೆ ಇಲಾಖೆಯಿಂದ ಪಡೆಯಲು ಅರ್ಜಿ ಸಲ್ಲಿಸಬೇಕು. ತದನಂತರ ಅನ್ವಯವಾಗುವ ತೆರಿಗೆ ದರದಂತೆ (ಶೇ 22.88ರಷ್ಟು) ತೆರಿಗೆ ಕಡಿತಗೊಳಿಸಬೇಕು.

ಮೇಲೆ ಉಲ್ಲೇಖಿಸಿದ ಟಿಡಿಎಸ್ ಮೊತ್ತ ಕಡಿತಗೊಳಿಸಿ ನಂತರದ ತಿಂಗಳ 7ನೇ ದಿನಾಂಕದೊಳಗೆ ಆದಾಯ ತೆರಿಗೆ ಇಲಾಖೆಗೆ ಪಾವತಿಸಬೇಕು. ಜಮೆ ಮಾಡಿದ ನಂತರ ನೀವು ಟಿಡಿಎಸ್ ರಿಟರ್ನ್ಸ್ ಸಲ್ಲಿಸಬೇಕಾಗುತ್ತದೆ. ಈ ರಿಟರ್ನ್ಸ್ ಅನ್ನು ಟಿಡಿಎಸ್ ಕಡಿತಗೊಳಿಸಿದ ಆಯಾ ತ್ರೈಮಾಸಿಕದ ಒಂದು ತಿಂಗಳೊಳಗೆ ಸಲ್ಲಿಸಬೇಕಾಗುತ್ತದೆ. ಕೊನೆಯ ಹಂತವಾಗಿ ಖರೀದಿದಾರರಾದ ನೀವು ಆಸ್ತಿ ಮಾರಾಟ ಮಾಡಿದವರಿಗೆ 'ಫಾರ್ಮ್ 16ಎ' ಅನ್ನು ಒದಗಿಸಬೇಕಾಗುತ್ತದೆ.

ಒಂದು ವೇಳೆ ಮಾರಾಟ ಮಾಡುವವರಿಗೆ ಇಲ್ಲಿನ ಆದಾಯದ ಮೇಲೆ ಯಾವುದೇ ತೆರಿಗೆ ಅನ್ವಯವಾಗುವುದಿಲ್ಲ ಅಥವಾ ನೀವು ಕಡಿತಗೊಳಿಸುವ ತೆರಿಗೆ ಅವರ ಒಟ್ಟಾರೆ ಆದಾಯಕ್ಕೆ ಸಂಬಂಧಿಸಿದಂತೆ ಹೆಚ್ಚಾಗುವುದಿದ್ದರೆ, ಅವರು ಸ್ಥಳೀಯ ಆದಾಯ ತೆರಿಗೆ ಇಲಾಖೆಯಿಂದ 'ಫಾರ್ಮ್ 13' ಪಡೆದುಕೊಳ್ಳಬಹುದು. ಇದರ ಆಧಾರದ ಮೇಲೆ ನೀವು ಶೂನ್ಯ ಅಥವಾ ಅದರಲ್ಲಿ ಉಲ್ಲೇಖಿಸಿಸುವ ತೆರಿಗೆ ದರದಂತೆ ಕಡಿಮೆ ಮೊತ್ತ ಕಡಿತಗೊಳಿಸಲು ಅವಕಾಶವಿದೆ.

ನಿಮ್ಮ ಖರೀದಿ ಹಾಗೂ ಹಣ ಸಂದಾಯವಾದ ನಂತರ ಟ್ಯಾನ್ ಸಂಖ್ಯೆಯನ್ನು ರದ್ದುಗೊಳಿಸಲು ತೆರಿಗೆ ಇಲಾಖೆಗೆ ಮನವಿ ಸಲ್ಲಿಸಿ. ಇದಕ್ಕಾಗಿ ಸ್ಥಳೀಯ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ ಅಗತ್ಯವಿರುವ ನೆರವು ಪಡೆದುಕೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್:businessdesk@prajavani.co.in

ಬ್ಯಾಂಕ್‌ಗಳಿಂದ ₹8,494 ಕೋಟಿ ಶುಲ್ಕ ಸಂಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಖಾತೆಯಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಳ್ಳದ ಗ್ರಾಹಕರಿಗೆ ದಂಡದ ರೂಪದಲ್ಲಿ ಶುಲ್ಕ ವಿಧಿಸುವ ಮೂಲಕ ಸಾರ್ವಜನಿಕ ವಲಯದ 12 ಬ್ಯಾಂಕ್‌ಗಳು, 2019–20ರಿಂದ 2023–24ರ ನಡುವೆ ಒಟ್ಟು ₹8,494 ಕೋಟಿ ಸಂಗ್ರಹಿಸಿವೆ.

'ಈ ಮೊತ್ತದ ಪೈಕಿ 2023–24ರಲ್ಲಿ ₹2,331 ಕೋಟಿ ಸಂಗ್ರಹಿಸಲಾಗಿದೆ. ಐದು ವರ್ಷಗಳಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್ ₹1,537 ಕೋಟಿ ಶುಲ್ಕ ಸಂಗ್ರಹಿಸಿದೆ' ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ, ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಇಂಡಿಯನ್ ಬ್ಯಾಂಕ್ ₹1,466 ಕೋಟಿ, ಬ್ಯಾಂಕ್ ಆಫ್ ಬರೋಡಾ ₹1,250 ಕೋಟಿ, ಕೆನರಾ ಬ್ಯಾಂಕ್ ₹1,157 ಕೋಟಿ, ಬ್ಯಾಂಕ್ ಆಫ್ ಇಂಡಿಯಾ ₹827 ಕೋಟಿ, ಸೆಂಟ್ರಲ್ ಬ್ಯಾಂಕ್ ₹587 ಕೋಟಿ, ಬ್ಯಾಂಕ್ ಆಫ್ ಮಹಾರಾಷ್ಟ್ರ ₹470 ಕೋಟಿ, ಯೂನಿಯನ್ ಬ್ಯಾಂಕ್ ₹414 ಕೋಟಿ, ಯುಕೊ ಬ್ಯಾಂಕ್ ₹66 ಕೋಟಿ, ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್ ₹55 ಕೋಟಿ, ಓವರ್‌ಸೀಸ್ ಬ್ಯಾಂಕ್ ₹19 ಕೋಟಿ ಸಂಗ್ರಹಿಸಿವೆ. 2020ರಿಂದ ಎಸ್‌ಬಿಐ ದಂಡದ ರೂಪದಲ್ಲಿ ಶುಲ್ಕ ಸಂಗ್ರಹಿಸುವುದನ್ನು ಕೈಬಿಟ್ಟಿದೆ. ಆದರೆ, 2019–20ರ ವರೆಗೆ ಈ ಬ್ಯಾಂಕ್ ಒಟ್ಟು ₹640 ಕೋಟಿ ಶುಲ್ಕ ಸಂಗ್ರಹಿಸಿದೆ ಎಂದು ವಿವರಿಸಿದ್ದಾರೆ

'ಮೈತ್ರಿ' ಪಾದಯಾತ್ರೆಗೆ 'ದಳ' ವಿಘ್ನ

ಒಂದನೇ ಪುಟದಿಂದ...

ತೀರ್ಮಾನ ಕೈಗೊಂಡ ಎರಡೇ ದಿನದಲ್ಲಿ ತನ್ನ ನಿರ್ಧಾರದಿಂದ ಹಿಂದೆ ಸರಿದಿರುವ ಜೆಡಿಎಸ್, ಪಾದಯಾತ್ರೆಯನ್ನು ಮುಂದೂಡುವಂತೆ ಮಿತ್ರ ಪಕ್ಷ ಬಿಜೆಪಿಗೆ ಮನವಿ ಮಾಡಿದೆ.

'ಮುಡಾ' ನಿವೇಶನ ಹಂಚಿಕೆಯ ಫಲಾನುಭವಿಗಳಲ್ಲಿ ಜೆಡಿಎಸ್‌ನ ಹಲವು ನಾಯಕರೂ ಇದ್ದಾರೆ. ಈಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದ ಪಟ್ಟಿಯಲ್ಲಿ ಬಿಜೆಪಿಗಿಂತ ಜೆಡಿಎಸ್ ನಾಯಕರ ಪಟ್ಟಿಯೇ ದೊಡ್ಡದಿತ್ತು. ಈ ಎಲ್ಲ ಕಾರಣಗಳಿಂದ ಪಾದಯಾತ್ರೆಯಲ್ಲಿ ಭಾಗವಹಿಸದಂತೆ ಪಕ್ಷದ ಒಳಗೆ ಒತ್ತಡವೂ ಇದೆ. ಹಾಗಾಗಿಯೇ ದಿಢೀರ್ ಸಭೆ ಕರೆದು ಮುಂದೂಡವಂತೆ ಕೋರಲಾಗುತ್ತಿದೆ' ಎಂಬ ಚರ್ಚೆ ಜೆಡಿಎಸ್ ವಲಯದಲ್ಲೇ ನಡೆದಿದೆ.

ಬೆಂಗಳೂರಿನಲ್ಲಿ ಮಂಗಳವಾರ ನಡೆದ ಜೆಡಿಎಸ್ ಪ್ರಮುಖರ ಸಮಿತಿಯ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಜಿ.ಟಿ. ದೇವೇಗೌಡ, ರಾಜ್ಯದಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಜನರು ಸಂಕಷ್ಟದಲ್ಲಿ ಇದ್ದಾರೆ. ಗುಡ್ಡ ಕುಸಿತ, ನೆರೆಯಿಂದಾಗಿ ಹಲವು ಜನರು ಮೃತಪಟ್ಟಿದ್ದಾರೆ. ಮೈಸೂರು–ಬೆಂಗಳೂರು ನಡುವಿನ ಜಿಲ್ಲೆಗಳಾದ ಮಂಡ್ಯ, ರಾಮನಗರ ಮತ್ತಿತರ ಭಾಗಗಳಲ್ಲಿ ರೈತರು ಭತ್ತದ ನಾಟಿ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇಂತಹ ಸಮಯದಲ್ಲಿ ಪಾದಯಾತ್ರೆಯಲ್ಲಿ ಭಾಗವಹಿಸಲು ಸಾಧ್ಯವಾಗದು ಎಂದು ಹಲವು ಮುಖಂಡರು ಅಭಿಪ್ರಾಯ ತಿಳಿಸಿದ್ದಾರೆ. ಹಾಗಾಗಿ, ಪಾದಯಾತ್ರೆ ಮುಂದೂಡುವುದು ಸೂಕ್ತ ಎಂಬ ನಿರ್ಧಾರಕ್ಕೆ ಬರಲಾಗಿದೆ ಎಂದರು.

ಸಂಸತ್ ಅಧಿವೇಶನದ ಕಾರಣ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಅವರಿಲ್ಲದೆ ಪಾದಯಾತ್ರೆ ಯಶಸ್ವಿಯಾಗದು ಎನ್ನುವುದು ಬಹುತೇಕ ಕಾರ್ಯಕರ್ತರ ಅಭಿಪ್ರಾಯ. ಕುಮಾರಸ್ವಾಮಿ ಅವರು ಪಾದಯಾತ್ರೆ ಮಾಡದಿದ್ದರೂ, ಕಾರಿನಲ್ಲೇ ಬಂದು ಪ್ರತಿ ಸ್ಥಳದಲ್ಲೂ ಮಾತನಾಡಲು ಎಲ್ಲ ಮುಖಂಡರು ಕೋರಿದ್ದಾರೆ. ಈ ಎಲ್ಲ ಕಾರಣಗಳಿಂದ ಒಂದು ವಾರವಾದರೂ ಪಾದಯಾತ್ರೆ ಮುಂದೂಡಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹಾಗೂ ಕುಮಾರಸ್ವಾಮಿ ಅವರಲ್ಲಿ ಮನವಿ ಮಾಡಲು ಪಕ್ಷದ ಪ್ರಮುಖರ ಸಮಿತಿಯಲ್ಲಿ ಒಮ್ಮತದ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು. ಈ ನಿರ್ಧಾರ ಪಾದಯಾತ್ರೆಯ ಬಗ್ಗೆ ಅಪಸ್ವರವಲ್ಲ. ವಾಲ್ಮೀಕಿ ನಿಗಮ, ಮುಡಾ ಹಗರಣ ಸೇರಿದಂತೆ ರಾಜ್ಯ ಸರ್ಕಾರದ ಎಲ್ಲ ಭ್ರಷ್ಟಾಚಾರದ ವಿರುದ್ಧ ಜೆಡಿಎಸ್–ಬಿಜೆಪಿ ಜಂಟಿ ಹೋರಾಟ ಮುಂದುವರಿಯಲಿದೆ. ಸದನದ ಒಳಗೂ ಸಾಥ್ ನೀಡಿದ ರೀತಿ ಹೊರಗೂ ಇರುತ್ತದೆ. ಸಂಕಷ್ಟದ ಸಮಯದಲ್ಲಿ ಮುಂದೂಡಲಷ್ಟೇ ಪಕ್ಷದ ಮನವಿ ಎಂದರು.

ಬಿಜೆಪಿಯಲ್ಲೂ ಅಪಸ್ವರ

ಒಂದನೇ ಪುಟದಿಂದ...

ಇವರಿಬ್ಬರೂ ಕೂಡಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣವನ್ನು ವಿರೋಧಿಸಿ ಬಾಗಲಕೋಟೆಯಿಂದ ಬಳ್ಳಾರಿಗೆ ಪಾದಯಾತ್ರೆ ನಡೆಸಲು ಚಿಂತನೆ ನಡೆಸಿದ್ದಾರೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಇಬ್ಬರೂ ಅಸಮಾಧಾನ ಹೊರಹಾಕಿದ್ದಾರೆ.

ಬೆಳಗಾವಿ ಜಿಲ್ಲೆ ಗೋಕಾಕ್‌ನಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ರಮೇಶ ಜಾರಕಿಹೊಳಿ, 'ಬಳ್ಳಾರಿಗೆ ಪಾದಯಾತ್ರೆ ನಡೆಸಲು ಪಕ್ಷದ ವರಿಷ್ಠರ ಬಳಿ ಅನುಮತಿ ಕೇಳುತ್ತೇನೆ. ನಮ್ಮ ಪಾದಯಾತ್ರೆ ಬಗ್ಗೆ ರಾಜ್ಯಾಧ್ಯಕ್ಷರ ಬಳಿ ಅನುಮತಿ ಕೇಳುವ ಪ್ರಶ್ನೆಯೇ ಇಲ್ಲ. ನಮ್ಮದು ರಾಷ್ಟ್ರೀಯ ಪಕ್ಷ, ನಾನು ಪಕ್ಷದ ಶಿಸ್ತಿನ ಸಿಪಾಯಿ. ರಾಜ್ಯಾಧ್ಯಕ್ಷರ ಒಪ್ಪಿಗೆ ಕೇಳುವುದಿಲ್ಲ. ನಾನು ಅವರ ಜತೆ ಮಾತನಾಡುವುದಿಲ್ಲ. ಅವರನ್ನು ಅಧ್ಯಕ್ಷ ಎಂದೂ ಒಪ್ಪಿಲ್ಲ' ಎಂದು ಹೇಳಿದ್ದಾರೆ.

ವಿಜಯಪುರದಲ್ಲಿ ಮಾತನಾಡಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ, 'ವಿಜಯೇಂದ್ರ ಅವರು ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ಹೊರಟಿದ್ದಾರೆ. ಸಿದ್ದರಾಮಯ್ಯ ವಿರುದ್ಧ ಹೊರಟಿದ್ದಾರೋ ಅಥವಾ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡುವ ಉದ್ದೇಶದಿಂದ ಹೊರಟಿದ್ದಾರೋ ಕಾದು ನೋಡಬೇಕು' ಎಂದು ವ್ಯಂಗ್ಯವಾಡಿದ್ದಾರೆ.

ಸಿಎಂ ಹೆಸರು ಹೇಳದ ಜಿಟಿಡಿ

ಮುಡಾ ಹಗರಣದ ವಿರುದ್ಧ ಹಮ್ಮಿಕೊಂಡಿರುವ ಪಾದಯಾತ್ರೆ ಮುಂದೂಡುವ ಕುರಿತು ನಡೆದ ಸಭೆಯ ನಂತರ ಮಾತನಾಡಿದ ಜೆಡಿಎಸ್ ಉನ್ನತ ನಾಯಕರ ಸಮಿತಿ ಅಧ್ಯಕ್ಷ ಜಿ.ಟಿ. ದೇವೇಗೌಡ, ಅಪ್ಪಿತಪ್ಪಿಯೂ ಸಿದ್ದರಾಮಯ್ಯ ಹೆಸರು ಹೇಳಲಿಲ್ಲ. ಮಾತಿನ ಉದ್ದಕ್ಕೂ ಮುಖ್ಯಮಂತ್ರಿ ಎಂದಷ್ಟೇ ಸಂಬೋಧಿಸಿದರು.

ಕಮಲಾಗೆ ಹೆಚ್ಚುತ್ತಿದೆ ಜನಬೆಂಬಲ



ಕಮಲಾ ಹ್ಯಾರಿಸ್

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ಡೆಮಾಕ್ರಟಿಕ್ ಪಕ್ಷದ ಸಂಭವನೀಯ ಅಭ್ಯರ್ಥಿ ಕಮಲಾ ಹ್ಯಾರಿಸ್ ಪರ ಪ್ರಚಾರಕ್ಕೆ 3.6 ಲಕ್ಷ ಜನರು ಸ್ವಪ್ರೇರಿತರಾಗಿ ಮುಂದೆ ಬಂದಿದ್ದಾರೆ.

ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧದ ಸ್ಪರ್ಧೆಯಲ್ಲಿ ಕಮಲಾ ಪರವಾಗಿ ತಳಮಟ್ಟದಲ್ಲಿ ಬೆಂಬಲ ಬಲಗೊಳ್ಳುತ್ತಿದೆ ಎಂಬುದನ್ನು ಇದು ಬಿಂಬಿಸುತ್ತಿದೆ.

ಅಧ್ಯಕ್ಷ ಜೋ ಬೈಡನ್ ಅವರು ಸ್ಪರ್ಧೆಯಿಂದ ಹಿಂದೆ ಸರಿದ ಬಳಿಕ ಕಮಲಾ ಅಧಿಕೃತವಾಗಿ ತಾನು ಆಕಾಂಕ್ಷಿ ಎಂದು ಪ್ರಕಟಿಸಿದ್ದರು. ಇವರ ಅಭ್ಯರ್ಥಿ ತನವನ್ನು ಪಕ್ಷ ಅಧಿಕೃತವಾಗಿ ಘೋಷಿಸಬೇಕಿದೆ.

'ಕಮಲಾ ಹ್ಯಾರಿಸ್ ಪರ ಮೊದಲ ವಾರದಲ್ಲಿ 200 ಮಿಲಿಯನ್ ಡಾಲರ್ ನಿಧಿ ಸಂಗ್ರಹವಾಗಿದ್ದು, 17 ಸಾವಿರ ಕಾರ್ಯಕರ್ತರು ಸ್ವಪ್ರೇರಣೆಯಿಂದ ಪ್ರಚಾರಕ್ಕೆ ಮುಂದಾಗಿದ್ದರು. ಈಗ ಕಾರ್ಯಕರ್ತರ ಸಂಖ್ಯೆ 3.6 ಲಕ್ಷಕ್ಕೆ ಏರಿದೆ' ಎಂದು ಪ್ರಚಾರ ಕಾರ್ಯದ ಮುಂಚೂಣಿಯಲ್ಲಿರುವ ಡ್ಯಾನ್ ಕನ್ನಿನೆನ್ ಹೇಳಿದರು.

'ಹ್ಯಾರಿಸ್ ಫಾರ್ ಪ್ರೆಸಿಡೆಂಟ್' ಅಭಿಯಾನ ಬರುವ ದಿನಗಳಲ್ಲಿ ಇನ್ನಷ್ಟು ಚುರುಕು ಪಡೆಯಲಿದೆ. ಗೆಲುವಿಗೆ ಅಗತ್ಯವಿರುವ 270 ಚುನಾವಣಾ ಮತ ಪಡೆಯಲು ಅಮೆರಿಕದ ಬ್ಲೂವಾಲ್ ಮತ್ತು ಸನ್ ಬೆಲ್ಟ್ ಎರಡೂ ವಲಯದಲ್ಲಿ ಪ್ರಚಾರವನ್ನು ತೀವ್ರಗೊಳಿಸಲಾಗುವುದು' ಎಂದು ಹೇಳಿದರು.

'ಚುನಾವಣಾ ಓಟದಲ್ಲಿ ನಾವು ಆರಂಭಿಕ ಹಂತದಲ್ಲಿದ್ದೇವೆ. ಆದರೆ, ಇದು ಜನರೇ ಮುನ್ನಡೆಸುತ್ತಿರುವ ಅಭಿಯಾನವಾಗಿದೆ. ಈ ಅಭಿಯಾನವು ಮುಂದಿನ ದಿನಗಳಲ್ಲಿ ವೇಗ ಪಡೆದುಕೊಳ್ಳಲಿದೆ' ಎಂದು ವಾರದ ಹಿಂದೆ ಕಮಲಾ ಹೇಳಿದ್ದರು.

ಬೈಡನ್‌ಗಿಂತ ಕೆಟ್ಟ ಅಭ್ಯರ್ಥಿ: ಟ್ರಂಪ್

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಉಪಾಧ್ಯಕ್ಷೆ, ಡೆಮಾಕ್ರಟಿಕ್ ಪಕ್ಷದ ಸಂಭಾವ್ಯ ಅಧ್ಯಕ್ಷೀಯ ಅಭ್ಯರ್ಥಿ ಕಮಲಾ ಹ್ಯಾರಿಸ್ ಅವರು ಅಧ್ಯಕ್ಷ ಜೋ ಬೈಡನ್ ಅವರಿಗಿಂತ 'ಕೆಟ್ಟ ಅಭ್ಯರ್ಥಿ' ಎಂದು ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. 'ಫಾಕ್ಸ್ ನ್ಯೂಸ್' ಸುದ್ದಿಸಂಸ್ಥೆಯೊಂದಿಗೆ ಸಂದರ್ಶನದಲ್ಲಿ ಮಾತನಾಡಿದ ಅವರು, 'ಬೈಡನ್ ಅವರಿಗಿಂತಲೂ ಹ್ಯಾರಿಸ್ ಹೆಚ್ಚು ಮೂಲಭೂತವಾದಿ ಎಡಪಂಥೀಯರು' ಎಂದು ಹೇಳಿದ್ದಾರೆ. ಅಧ್ಯಕ್ಷ ಜೋ ಬೈಡನ್ ಅವರು ಸ್ಪರ್ಧೆಯಿಂದ ಹಿಂದೆ ಸರಿದ ನಂತರ ಭಾರತ ಮೂಲದ ಕಮಲಾ ಹ್ಯಾರಿಸ್ ಅವರಿಗೆ ಬೆಂಬಲ ಸೂಚಿಸಿದ್ದಾರೆ. ಪಕ್ಷವು ಈ ಬಗ್ಗೆ ಮುಂದಿನ ತಿಂಗಳು ಅಧಿಕೃತ ಘೋಷಣೆ ಮಾಡಲಿದೆ.

ಒಂದೇ ಕೂಟದಲ್ಲಿ ಎರಡು ಪದಕ ಗೆದ್ದ ಹರಿಯಾಣ ಹುಡುಗಿ • ಮಿಶ್ರ ತಂಡ ಸ್ಪರ್ಧೆಯಲ್ಲಿ ಮಿಂಚಿದ ಸರಬ್ಜೋತ್ ಸಿಂಗ್

ಹೊಸ ಇತಿಹಾಸ ಬರೆದ ಮನು ಭಾಕರ್

• ಸಿಡ್ನಿ ಕಿರಣ್

ಪ್ಯಾರಿಸ್: ಆಧುನಿಕ ಒಲಿಂಪಿಕ್ಸ್ ಆರಂಭವಾಗಿ 56 ವರ್ಷಗಳ ನಂತರ ಭಾರತವು ವೈಯಕ್ತಿಕ ವಿಭಾಗದಲ್ಲಿ ಮೊದಲ ಬಾರಿಗೆ ಪದಕ ಜಯಿಸಿತ್ತು. ಆಗ 1952ರ ಹೆಲ್ಸಿಂಕಿ ಒಲಿಂಪಿಕ್ಸ್‌ನಲ್ಲಿ ಕುಸ್ತಿಪಟು ಕೆ.ಡಿ. ಜಾಧವ್ ಅವರು ಕಂಚು ಜಯಿಸಿದ್ದರು.

ಅದಾದ ನಂತರ ವೈಯಕ್ತಿಕ ವಿಭಾಗದಲ್ಲಿ ಮತ್ತೊಂದು ಪದಕ ಜಯಿಸಲು ಭಾರತವು 44 ವರ್ಷಗಳವರೆಗೆ ಕಾಯಬೇಕಾಯಿತು. 1996ರ ಅಟ್ಲಾಂಟಾ ಒಲಿಂಪಿಕ್ಸ್‌ನಲ್ಲಿ ಟೆನಿಸ್ ತಾರೆ ಲಿಯಾಂಡರ್ ಪೇಸ್ ಕಂಚು ಗೆದ್ದುಕೊಟ್ಟರು.

ಭಾರತದ ಮಹಿಳಾ ಕ್ರೀಡಾಪಟು ಒಲಿಂಪಿಕ್ಸ್‌ನಲ್ಲಿ ವೈಯಕ್ತಿಕ ಪದಕ ಜಯಿಸಿದ್ದು 2000ರ ಸಿಡ್ನಿ ಕೂಟದಲ್ಲಿ. ಆಗ ಕರ್ಣಂ ಮಲ್ಲೇಶ್ವರಿ ವೇಟ್ ಲಿಫ್ಟಿಂಗ್‌ನಲ್ಲಿ ಕಂಚು ಜಯಿಸಿದ್ದರು. ಇದೆಲ್ಲದರಾಚೆ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ನಡೆದ ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಸಾಧನೆ ಮಾಡಿದ ಭಾರತೀಯರು ಯಾರೂ ಇರಲಿಲ್ಲ. ಇದೀಗ ಪ್ಯಾರಿಸ್‌ನಲ್ಲಿ ಶೂಟರ್ ಮನು ಭಾಕರ್ ಈ ಸಾಧನೆ ಮಾಡಿದ್ದಾರೆ. ಪ್ಯಾರಿಸ್‌ನಿಂದ 280 ಕಿ.ಮೀ ದೂರದಲ್ಲಿರುವ ಶತೋಹು ಶೂಟಿಂಗ್ ರೇಂಜ್‌ನಲ್ಲಿ ನಡೆದ 10 ಮೀ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದ ಸ್ಪರ್ಧೆಯಲ್ಲಿ ಮನು ಅವರು ಸರಬ್ಜೋತ್ ಸಿಂಗ್ ಜೊತೆಗೂಡಿ ದಕ್ಷಿಣ ಕೊರಿಯಾವನ್ನು ಮಣಿಸಿದರು. ಇದರೊಂದಿಗೆ ಕಂಚಿನ ಪದಕಕ್ಕೆ ಕೊರಳೊಡ್ಡಿದ್ದರು.

ಭಾನುವಾರ ಇದೇ ರೇಂಜ್‌ನಲ್ಲಿ ಅವರು ಮಹಿಳೆಯರ ವಿಭಾಗದ 10 ಮೀ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚು ಗಳಿಸಿದ್ದರು. ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಪದಕ ಗೆದ್ದ ಭಾರತದ ಮೊಟ್ಟಮೊದಲ ಮಹಿಳೆಯಾಗಿದ್ದರು. ಕಂಚಿನ ಪದಕಕ್ಕಾಗಿ ನಡೆದ ಪ್ಲೇಆಫ್‌ನಲ್ಲಿ 22 ವರ್ಷ ವಯಸ್ಸಿನ ಶೂಟರ್ ಮನು ಅವರು ಅಷ್ಟೇನೂ ಅನುಭವಿಯಲ್ಲದ ಸರಬ್ಜೋತ್ ಅವರೊಂದಿಗೆ ಉತ್ತಮ ಹೊಂದಾಣಿಕೆ ಸಾಧಿಸಿದರು. ಒತ್ತಡವನ್ನು ತಮ್ಮ ಮೇಲೆ ಎಳೆದುಕೊಂಡು ಸಮರ್ಥವಾಗಿ ನಿಭಾಯಿಸಿದರು. ಇದರಿಂದಾಗಿ ಭಾರತವು ದಕ್ಷಿಣ ಕೊರಿಯಾದ ವಾನ್‌ಹೊ ಲೀ ಮತ್ತು ಯೆ ಜಿನ್ ಒಹ್ (16–10) ಅವರ ವಿರುದ್ಧ ಜಯಿಸಿತು.

ಮನು ಆರಂಭದಿಂದಲೇ ಶಿಸ್ತುಬದ್ಧವಾಗಿ ಸಾಮರ್ಥ್ಯ ಪ್ರದರ್ಶಿಸಿದರು. ಸತತ ಏಳು ಬಾರಿ 10ರ ಸ್ಕೋರ್ ಗಳಿಸಿದರು. ಆದರೆ ಎದುರಾಳಿ ಲೀ ಅವರು ಮೂರರಿಂದ ಎಂಟರ ಸೀರಿಸ್‌ವರೆಗೆ 9ರ ಸ್ಕೋರ್ ದಾಖಲಿಸಿದರು. ಇದರಿಂದಾಗಿ ಭಾರತ 10–6ರ ಮುನ್ನಡೆ ಪಡೆಯಿತು. ಮನು ಅವರ ಆತ್ಮವಿಶ್ವಾಸದ ಶೂಟಿಂಗ್‌ನಿಂದ ಪ್ರೇರಣೆಗೊಂಡಂತೆ ಕಂಡ ಸರಬ್ಜೋತ್ ಕೂಡ ನಿಖರ ಗುರಿ ಹಿಡಿಯತೊಡಗಿದರು. ಈ ನಡುವೆ ಕೋಚ್ ಮುಂಖಾಬಯರ್ ದೊರ್ಜಾಸುರೇನ್ ಅವರ ಸಲಹೆ ಪಡೆದುಕೊಂಡರು. ಇದರಿಂದಾಗಿ ಭಾರತವು ಜಯದ ಹಾದಿಯಲ್ಲಿ ಸಾಗಿತು.

ಸರ್ಬಿಯಾದ ಝೊರಾನಾ ಅರುನೋವಿಚ್ ಮತ್ತು ದಾಮಿರ್ ಮಿಕೆಚ್ ಚಿನ್ನ ಗೆದ್ದರು. ಟರ್ಕಿಯ ಸೆವಾಲ್ ಇಲಾಯದಾ ತರಾನ್ ಮತ್ತು ಯೂಸುಫ್ ಡಿಕೆಕ್ ಜೋಡಿಯು ಬೆಳ್ಳಿ ಪಡೆಯಿತು.



ನನಗೆ ಒತ್ತಡ ಇರಲಿಲ್ಲ. ಸೋಮವಾರ ರಾತ್ರಿ 9.30ಕ್ಕೆ ಮಲಗಿದೆ, ಇಂದು ಬೆಳಿಗ್ಗೆ 5.30ಕ್ಕೇ ಶೂಟಿಂಗ್ ರೇಂಜ್‌ಗೆ ಬಂದೆ. ಪ್ರಚಾರದ ಭರಾಟೆಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ಸ್ಪರ್ಧೆ ಮುಗಿದು ಪದಕ ಜಯಿಸಿದಾಗ ನನ್ನ ಬೆಳವಣಿಗೆಗಾಗಿ ಅಪ್ಪ ಪಟ್ಟ ಪರಿಶ್ರಮ ಮತ್ತು ಅಜ್ಜ ನೀಡಿದ ಪ್ರೋತ್ಸಾಹ ನೆನಪಿಗೆ ಬಂದವು.
ಸರಬ್ಜೋತ್ ಸಿಂಗ್

ಸೆಲ್ಫಿ ಸಂಭ್ರಮದಲ್ಲಿ ಭಾರತದ ಮನು ಭಾಕರ್ ಮತ್ತು ಸರಬ್ಜೋತ್ ಸಿಂಗ್ –ಎಎಫ್‌ಪಿ ಚಿತ್ರ

ಒಲಿಂಪಿಕ್ಸ್ ಶೂಟಿಂಗ್ ಭಾರತಕ್ಕೆ ಪದಕಗಳು

ಹೆಸರು	ಸ್ಪರ್ಧಾ ವಿಭಾಗ	ಪದಕ	ವರ್ಷ
ರಾಜವರ್ಧನ್ ಸಿಂಗ್ ರಾಥೋಡ್	ಪುರುಷರ ಡಬಲ್ ಟ್ರ್ಯಾಪ್	ಬೆಳ್ಳಿ	ಅಥೆನ್ಸ್ 2004
ಅಭಿನವ್ ಬಿಂದ್ರಾ	ಪುರುಷರ 10 ಮೀ ಏರ್ ರೈಫಲ್	ಚಿನ್ನ	ಬೀಜಿಂಗ್ 2008
ಗಗನ್ ನಾರಂಗ್	ಪುರುಷರ 10 ಮೀ.ಏರ್‌ರೈಫಲ್	ಕಂಚು	ಲಂಡನ್ 2012
ವಿಜಯ್‌ಕುಮಾರ್	ಪುರುಷರ 25 ಮೀ. ರ‍್ಯಾಪಿಡ್ ಫೈರ್ ಪಿಸ್ತೂಲ್	ಬೆಳ್ಳಿ	ಲಂಡನ್ 2012
ಮನು ಭಾಕರ್	ಮಹಿಳೆಯರ 10 ಮೀ. ಪಿಸ್ತೂಲ್	ಕಂಚು	ಪ್ಯಾರಿಸ್ 2024
ಮನು ಭಾಕರ್/ಸರಬ್ಜೋತ್ ಸಿಂಗ್	10 ಮೀ.ಏರ್ ಪಿಸ್ತೂಲ್ ಮಿಶ್ರ ತಂಡ	ಕಂಚು	ಪ್ಯಾರಿಸ್ 2024

ಭಾರತ–ಬ್ರಿಟಿಷ್ ನಾರ್ಮನ್ ಪದಕ ಡಬಲ್ ಸಾಧನೆ

ನವದೆಹಲಿ (ಪಿಟಿಐ): ಯಾವುದೇ ಒಲಿಂಪಿಕ್ಸ್‌ನಲ್ಲಿಯೂ ಭಾರತದ ಅಥ್ಲೀಟ್‌ಗಳು ಪದಕ ಸಾಧನೆ ಮಾಡಿದಾಗಲೆಲ್ಲ ಬ್ರಿಟಿಷ್–ಭಾರತೀಯ ನಾರ್ಮನ್ ಪ್ರಿಚರ್ಡ್ ಅವರ ನೆನಪಾಗುತ್ತದೆ.



ನಾರ್ಮನ್ ಪ್ರಿಚರ್ಡ್

ಮಂಗಳವಾರ ಭಾರತದ ಮನು ಭಾಕರ್ ಅವರು ಶೂಟಿಂಗ್‌ನಲ್ಲಿ ಎರಡನೇ ಪದಕ ಜಯದ ಸಾಧನೆ ಮಾಡಿದಾಗಲೂ ನಾರ್ಮನ್ ಹೆಸರು ಕೇಳಿಬಂದಿತ್ತು. ಅದಕ್ಕೆ ಕಾರಣ ನಾರ್ಮನ್ ಅವರು 1900ರಲ್ಲಿ ಪ್ಯಾರಿಸ್‌ನಲ್ಲಿ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಎರಡು ಪದಕ (200 ಮೀ ಓಟ ಮತ್ತು 200 ಮೀ ಹರ್ಡಲ್ಸ್‌ನಲ್ಲಿ ಬೆಳ್ಳಿ) ಜಯಿಸಿದ್ದ ದಾಖಲೆ. ಆದರೆ ಅವರನ್ನು ಅಂತರರಾಷ್ಟ್ರೀಯ ಒಲಿಂಪಿಕ್ ಕಮಿಟಿ (ಐಒಸಿ)ಯು ಭಾರತದವರು ಎಂದು ಉಲ್ಲೇಖಿಸಿದೆ. ಆದರೆ ವಿಶ್ವ ಅಥ್ಲೆಟಿಕ್ಸ್ (ಆಗ ಐಎಎಎಫ್) ಅವರ ಸಾಧನೆಯನ್ನು ಬ್ರಿಟನ್‌ಗೆ ಸಮರ್ಪಿಸಿದೆ.

1875ರಲ್ಲಿ ಪ್ರಿಚರ್ಡ್ ಅವರು ಕೋಲ್ಕತ್ತದಲ್ಲಿ ಜನಿಸಿದ್ದರು. 1929ರಲ್ಲಿ ಅವರು ಲಾಸ್ ಏಂಜಲೀಸ್‌ನಲ್ಲಿ ನಿಧನರಾದರು.

'ನಾರ್ಮನ್ ಪ್ರಿಚರ್ಡ್ ಅವರು ವಿವಾದಾತ್ಮಕ ಒಲಿಂಪಿಯನ್ ಆಗಿದ್ದಾರೆ. ಅವರ ಸಾಧನೆಯನ್ನು ಭಾರತ ಮತ್ತು ಬ್ರಿಟನ್ ಎರಡೂ ತಮ್ಮ ದೇಶಗಳಿಗೆ ಸಲ್ಲಬೇಕೆಂದು ಪ್ರತಿಪಾದಿಸುತ್ತವೆ. ಆದರೆ ಅವರು ಶ್ರೇಷ್ಠ ಅಥ್ಲೀಟ್ ಆಗಿದ್ದರು. ವೇಗದ ಓಟಗಾರ ಮತ್ತು ಹರ್ಡಲ್ಸ್ ನಲ್ಲಿ ಅವರಿಗೆ ಅವರೇ ಸಾಟಿ. ಆ ಕಾಲದಲ್ಲಿ ನಡೆಯುತ್ತಿದ್ದ ಬೆಂಗಾಲ್ 100 ಯಾರ್ಡ್ಸ್ ಸ್ಪರ್ಧೆಯಲ್ಲಿ ಸತತ ಏಳು ಸಲ (1894–1900) ಜಯಿಸಿದ್ದರು. 440 ಯಾರ್ಡ್ಸ್ ಮತ್ತು 120 ಯಾರ್ಡ್ಸ್ ಹರ್ಡಲ್ಸ್‌ಗಳಲ್ಲಿಯೂ ಅವರು ಬಂಗಾಳದ ಚಾಂಪಿಯನ್ ಆಗಿದ್ದರು.

'ನಾರ್ಮನ್ ಅವರು ಬ್ರಿಟಿಷ್ ಎಂಬುದು ನಿರ್ವಿವಾದ' ಎಂದು ಬ್ರಿಟಿಷ್ ಒಲಿಂಪಿಕ್ ಇತಿಹಾಸಕಾರ ಇಯಾನ್ ಬುಕಾನನ್ ಅವರು ಹೇಳುತ್ತಾರೆ. ನಾರ್ಮನ್ ಅವರು ಒಲಿಂಪಿಕ್ಸ್ ನಂತರ ಹೆಚ್ಚು ಕಾಲ ಭಾರತದಲ್ಲಿ ಇರಲಿಲ್ಲ. ಅಮೆರಿಕಕ್ಕೆ ತೆರಳಿದರು. ಹಾಲಿವುಡ್‌ನಲ್ಲಿ 27 ಮೂಕಿ ಸಿನಿಮಾಗಳಲ್ಲಿ ನಟಿಸಿದರು. ಅಲ್ಲಿ ಅವರು ನಾರ್ಮನ್ ಟ್ರೆವರ್ ಹೆಸರಿನಿಂದ ಗುರುತಿಸಿಕೊಂಡಿದ್ದರು.

ಎರಡು ಪದಕ ಗೆದ್ದ ಭಾರತೀಯರು

ಮನು ಭಾಕರ್ ಅವರು ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಜಯಿಸಿದ, ಸ್ವಾತಂತ್ರ್ಯನಂತರದ ಭಾರತದ ಮೊದಲ ಕ್ರೀಡಾಪಟುವೆಂಬ ಹೆಗ್ಗಳಿಕೆಗೆ ಪಾತ್ರರಾದರು. ಜೊತೆಗೆ ಒಲಿಂಪಿಕ್ಸ್‌ನಲ್ಲಿ ಒಟ್ಟು ಎರಡು ವೈಯಕ್ತಿಕ ಪದಕ ಜಯಿಸಿದವರ ಪಟ್ಟಿಯನ್ನೂ ಸೇರಿದರು. ಇದಕ್ಕೂ ಮುನ್ನ ಕೆಲವರು ಈ ಸಾಧನೆ ಮಾಡಿದ್ದಾರೆ.

ಸುಶೀಲ್ ಕುಮಾರ್: ಕುಸ್ತಿಪಟು ಸುಶೀಲ್ ಕುಮಾರ್ ಅವರು 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಕಂಚು ಮತ್ತು 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

ಆದರೆ ಈ ಪ್ರತಿಭಾವಂತ ಕುಸ್ತಿಪಟುವಿನ ವೃತ್ತಿಜೀವನವು ದುರಂತ ಅಂತ್ಯಕಂಡಿತು. 2021ರಲ್ಲಿ ಜೂನಿಯರ್ ಕುಸ್ತಿಪಟುವಿನ ಕೊಲೆಯ ಆರೋಪದಲ್ಲಿ ಸುಶೀಲ್ ಜೈಲು ಸೇರಿದರು.

ಪಿ.ವಿ. ಸಿಂಧು: ಭಾರತದ ಅತ್ಯಂತ ಶ್ರೇಷ್ಠ ಕ್ರೀಡಾಪಟುಗಳಲ್ಲಿ ಒಬ್ಬರಾಗಿರುವ ಪಿ.ವಿ. ಸಿಂಧು ಕೂಡ ಸತತ ಎರಡು ಒಲಿಂಪಿಕ್ ಕೂಟಗಳಲ್ಲಿ ಪದಕ ಜಯಿಸಿದವರು.

ಹೈದರಾಬಾದಿನ ಸಿಂಧು 2016ರಲ್ಲಿ ಮಹಿಳೆಯರ ಸಿಂಗಲ್ಸ್ ಬ್ಯಾಡ್ಮಿಂಟನ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದಿದ್ದರು. ಇದೀಗ ಸತತ ಮೂರನೇ ಪದಕ ಜಯದ ನಿರೀಕ್ಷೆಯಲ್ಲಿರುವ ಸಿಂಧು ಪ್ಯಾರಿಸ್‌ನಲ್ಲಿ ಸ್ಪರ್ಧಿಸಿದ್ದಾರೆ.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಜಪಾನ್	7	2	4	13
ಚೀನಾ	6	6	2	14
ಆಸ್ಟ್ರೇಲಿಯಾ	6	4	0	10
ಫ್ರಾನ್ಸ್	5	8	4	17
ದ.ಕೊರಿಯಾ	5	3	3	11
ಅಮೆರಿಕ	4	10	11	25
ಬ್ರಿಟನ್	3	5	3	11
ಇಟಲಿ	2	4	4	10
ಕೆನಡಾ	2	2	2	6
ಭಾರತ	0	0	2	2

ಪಟ್ಟಿಯಲ್ಲಿ ಭಾರತ 33ನೇ ಸ್ಥಾನದಲ್ಲಿದೆ

ಒಲಿಂಪಿಕ್ಸ್‌ನಲ್ಲಿ ಇಂದು (ಭಾರತದ ಸ್ಪರ್ಧೆ)

ಶೂಟಿಂಗ್
ಪುರುಷರ 50 ಮೀ. ತ್ರೀ ಪೊಸಿಶನ್, ಅರ್ಹತಾ ಸುತ್ತು: ಐಶ್ವರಿ ಪ್ರತಾಪ್ ಸಿಂಗ್ ತೋಮರ್ ಮತ್ತು ಸ್ವಪ್ನಿಲ್ ಕುಸಳೆ, ಮಧ್ಯಾಹ್ನ 12.30
ಮಹಿಳೆಯರ ಟ್ರ್ಯಾಪ್, ಅರ್ಹತಾ ಸುತ್ತು: ಶ್ರೇಯಸಿ ಸಿಂಗ್ ಮತ್ತು ರಾಜೇಶ್ವರಿ ಕುಮಾರಿ, ಮಧ್ಯಾಹ್ನ 12.30

ಬ್ಯಾಡ್ಮಿಂಟನ್ (ಗುಂಪು ಹಂತ)
ಮಹಿಳೆಯರ ಸಿಂಗಲ್ಸ್: ಪಿ.ವಿ.ಸಿಂಧು ವಿರುದ್ಧ ಕ್ರಿಸ್ಟಿನ್ ಕೂಬಾ (ಎಸ್ಟೋನಿಯಾ), ಮಧ್ಯಾಹ್ನ 12.50
ಪುರುಷರ ಸಿಂಗಲ್ಸ್: ಲಕ್ಷ್ಯ ಸೇನ್ ವಿರುದ್ಧ ಜೋನಾಥನ್ ಕ್ರಿಸ್ಟಿ (ಇಂಡೊನೇಷ್ಯಾ), ಮಧ್ಯಾಹ್ನ 1.40

ಟೇಬಲ್ ಟೆನಿಸ್
ಮಹಿಳೆಯರ ಸಿಂಗಲ್ಸ್ 32ರ ಸುತ್ತು: ಶ್ರೀಜಾ ಅಕುಲಾ ವಿರುದ್ಧ ಜಿಯಾನ್ ಝೆಂಗ್ (ಸಿಂಗಪುರ), ಮಧ್ಯಾಹ್ನ 2.20

ಬಾಕ್ಸಿಂಗ್
ಮಹಿಳೆಯರ 75 ಕೆ.ಜಿ. 16ರ ಸುತ್ತು: ಲವ್ಲಿನಾ ಬೊರ್ಗೊಹೈನ್ ವಿರುದ್ಧ ಸನ್ನಿವಾ ಹೊಫ್‌ಸ್ಟಾಡ್ (ನಾರ್ವೆ), ಮಧ್ಯಾಹ್ನ 3.50
ಪುರುಷರ 71 ಕೆ.ಜಿ. 16ರ ಸುತ್ತು: ನಿಶಾಂತ್ ದೇವ್ ವಿರುದ್ಧ ಜೋಸ್ ಗೇಬ್ರಿಯಲ್ ರಾಡ್ರಿಗಸ್ ಟೆನೊರಿಯೊ (ಈಕ್ವೆಡಾರ್), ರಾತ್ರಿ 12.18 (ಆಗಸ್ಟ್ 1)

ಆರ್ಚರಿ
ಮಹಿಳೆಯರ ವೈಯಕ್ತಿಕ ಎಲಿಮಿನೇಷನ್ ಸುತ್ತು: ದೀಪಿಕಾ ಕುಮಾರಿ ವಿರುದ್ಧ ರೀನಾ ಪರ್ನಾಟ್ (ಎಸ್ಟೋನಿಯಾ), ಮಧ್ಯಾಹ್ನ 3.56
ಪುರುಷರ ವೈಯಕ್ತಿಕ, ಎಲಿಮಿನೇಷನ್ ಸುತ್ತು: ತರುಣ್‌ದೀಪ್ ರಾಯ್ ವಿರುದ್ಧ ಟಾಮ್ ಹಾಲ್ (ಬ್ರಿಟನ್), ರಾತ್ರಿ 9.15

ಈಕ್ವೆಸ್ಟ್ರಿಯನ್
ಡ್ರೆಸ್ಸೇಜ್ ವೈಯಕ್ತಿಕ ಗ್ರ್ಯಾನ್‌ಪ್ರಿ ಡೇ 2: ಅನುಷ್ ಅಗರ್ವಾಲ್, ಮಧ್ಯಾಹ್ನ 1.30

ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಅಮಿತ್, ಜೈಸ್ಮಿನ್ ಅಭಿಯಾನಕ್ಕೆ ತೆರೆ

ಪಂಘಲ್ ವಿರುದ್ಧ ಜಾಂಬಿಯಾದ ಚಿನ್ಯೆಂಬಾಗೆ ಗೆಲುವು

ಪ್ಯಾರಿಸ್ (ಪಿಟಿಐ): ಭಾರತದ ಬಾಕ್ಸರ್‌ಗಳಾದ ಅಮಿತ್ ಪಂಘಲ್ ಮತ್ತು ಜೈಸ್ಮಿನ್ ಲಂಬೋರಿಯಾ ಅವರು ಪ್ಯಾರಿಸ್ ಒಲಿಂಪಿಕ್ಸ್‌ನ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಮಂಗಳವಾರ ನಡೆದ ಪುರುಷರ 51 ಕೆ.ಜಿ ವಿಭಾಗದ ಪ್ರಿ-ಕ್ವಾರ್ಟರ್‌ಫೈನಲ್‌ನಲ್ಲಿ ಪಂಘಲ್ ಅವರು 1–4 ರಿಂದ ಪ್ಯಾಟ್ರಿಕ್ ಚಿನ್ಯೆಂಬ (ಜಾಂಬಿಯಾ) ವಿರುದ್ಧ ಸೋಲನುಭವಿಸಿದರು. ಮೊದಲ ಸುತ್ತಿನಲ್ಲಿ ಭಾರತದ ಬಾಕ್ಸರ್‌ಗೆ ಬೈ ದೊರಕಿತ್ತು. 2019ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತ ಪಂಘಲ್ ಮೇಲೆ ಚಿನ್ಯೆಂಬ ಆರಂಭದ ಸುತ್ತಿನಲ್ಲೇ ಒತ್ತಡ ಹೇರಿದರು.

ಪಂಘಲ್ ರಕ್ಷಣಾತ್ಮಕ ಆಟದ ಮೊರೆ ಹೋಗಿದ್ದರ ಪರಿಣಾಮ, ಮೊದಲ ಮೂರು ನಿಮಿಷ ಮೂರನೇ ಶ್ರೇಯಾಂಕದ ಚಿನ್ಯೆಂಬಾ ಆಕ್ರಮಣಕ್ಕೆ ಒತ್ತು ನೀಡಿದರು. ಪಂಘಲ್ ಎರಡನೇ ಸುತ್ತಿನ ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕೆ ಮುಂದಾದರೂ, ಸಮರ್ಪಕ ವಾಗಿ ಪ್ರಹಾರಗಳನ್ನು ನಡೆಸುವಲ್ಲಿ ಎಡವಿದರು. ಹೀಗಾಗಿ ಚಿನ್ಯೆಂಬಾ ಈ ಸುತ್ತಿನಲ್ಲಿ 3–2ರಿಂದ ಗೆಲುವು ಸಾಧಿಸಿದರು.

ಕೊನೆಯ ಮೂರು ನಿಮಿಷ ಇಬ್ಬರೂ ಪರಸ್ಪರ ಪಂಚ್‌ಗಳನ್ನು ಮಾಡಿದ್ದು, ಪಂಘಲ್ ಒತ್ತಡ ಹೇರಲು ಯತ್ನಿಸಿದರು. ಆದರೆ ತೀರ್ಪುಗಾರರ ಗಮನ ಸೆಳೆಯುವಲ್ಲಿ ಸಫಲರಾಗಲಿಲ್ಲ.

ಭಾರತದ ಜೈಸ್ಮಿನ್ ಲಂಬೋರಿಯಾ ಅವರು ಮಹಿಳೆಯರ 57 ಕೆಜಿ ವಿಭಾಗದ 32ರ ಘಟ್ಟದ ಪಂದ್ಯದಲ್ಲಿ ಫಿಲಿಪ್ಪಿನ್ಸ್‌ನ ನೆಸ್ತಿ ಪೆಟೆಸಿಯೊ ಅವರಿಗೆ 0–5ರಿಂದ ಮಣಿದು, ಮೊದಲ ಸುತ್ತಿನಲ್ಲೇ ಅಭಿಯಾನ ಮುಗಿಸಿದರು.



ಪ್ಯಾರಿಸ್ ಒಲಿಂಪಿಕ್ಸ್‌ನ ಮಹಿಳೆಯರ 57 ಕೆಜಿ ವಿಭಾಗದ ಬಾಕ್ಸಿಂಗ್‌ನ ಆರಂಭಿಕ ಸುತ್ತಿನಲ್ಲಿ ಭಾರತದ ಜೈಸ್ಮಿನ್ ಲಂಬೋರಿಯಾ (ಕೆಂಪು) ಅವರು ಎದುರಾಳಿ ಬಾಕ್ಸರ್‌ಗೆ ಪಂಚ್ ಮಾಡಿದರು –ಪ್ರಜಾವಾಣಿ ಚಿತ್ರ/ ಕೆ.ಎನ್. ಶಾಂತಕುಮಾರ್

ಪುರುಷರ ಡಬಲ್ಸ್‌ನಲ್ಲಿ ಇಂಡೊನೇಷ್ಯಾದ ಜೋಡಿಗೆ ಸೋಲು

ಕ್ವಾರ್ಟರ್‌ಗೆ ಸಾತ್ವಿಕ್–ಚಿರಾಗ್

ಪ್ಯಾರಿಸ್ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಮಂಗಳವಾರ ಒಲಿಂಪಿಕ್ಸ್‌ನ ಪುರುಷರ ಡಬಲ್ಸ್‌ನಲ್ಲಿ ನೇರ ಗೇಮ್‌ಗಳ ಮೂಲಕ ಇಂಡೊನೇಷ್ಯಾದ ಮುಹಮ್ಮದ್ ರಿಯಾನ್ ಆರ್ಡಿಯಾಂಟೊ ಮತ್ತು ಫಜರ್ ಅಲ್ಫಿಯಾನ್ ಅವರನ್ನು ಮಣಿಸಿ 'ಸಿ' ಗುಂಪಿನಲ್ಲಿ ಅಗ್ರಸ್ಥಾನಕ್ಕೆ ಏರಿತು.

ಮೂರನೇ ಶ್ರೇಯಾಂಕದ ಭಾರತದ ಜೋಡಿಯು ಕೇವಲ 38 ನಿಮಿಷದಲ್ಲಿ 21-13, 21-13ರಿಂದ ವಿಶ್ವದ ಏಳನೇ ಕ್ರಮಾಂಕದ ಆಟಗಾರರನ್ನು ಹಿಮ್ಮೆಟ್ಟಿಸಿ, ಅಜೇಯವಾಗಿ ಎಂಟರ ಘಟ್ಟ ಪ್ರವೇಶಿಸಿತು.

ಗುಂಪಿನ ಕೊನೆಯ ಪಂದ್ಯದಲ್ಲಿ ಭಾರತದ ತರುಣರು ಸಂಪೂರ್ಣ ಪ್ರಾಬಲ್ಯ ಮೆರೆದರು. ಗುಂಪಿನಲ್ಲಿ ಎರಡನೇ ಸ್ಥಾನ ಪಡೆದ ಇಂಡೊನೇಷ್ಯಾ ಜೋಡಿಯೂ ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆಯಿತು. ಮುಂದಿನ ಸುತ್ತಿನ ಪಂದ್ಯಗಳ ಡ್ರಾ ಬುಧವಾರ ನಡೆಯಲಿದೆ.

ಏಷ್ಯನ್ ಕ್ರೀಡಾಕೂಟದ ಚಾಂಪಿಯನ್ ಸಾತ್ವಿಕ್–ಚಿರಾಗ್ ಜೋಡಿಯು ಈ ಹಿಂದೆಯೇ ಕ್ವಾರ್ಟರ್ ಫೈನಲ್ ಸ್ಥಾನವನ್ನು ಖಚಿತಪಡಿಸಿಕೊಂಡಿತ್ತು. ಫ್ರಾನ್ಸ್‌ನ ಲೂಕಾಸ್ ಕಾರ್ವಿ ಮತ್ತು ರೊನಾನ್ ಲ್ಯಾಬರ್ ಅವರನ್ನು ಮಣಿಸಿ ಶುಭಾರಂಭ ಮಾಡಿತ್ತು. ಸೋಮವಾರ ಎರಡನೇ ಪಂದ್ಯದಲ್ಲಿ ಜರ್ಮನಿಯ ಮಾರ್ಕ್ ಲ್ಯಾಮ್ಸ್‌ಫಸ್ ಮತ್ತು ಮರ್ವಿನ್ ಸಿಡೆಲ್ ಅವರನ್ನು ಎದುರಿಸಬೇಕಿತ್ತು. ಆದರೆ, ಮಾರ್ಕ್ ಲ್ಯಾಮ್ಸ್‌ಫಸ್‌ಗೆ ಗಾಯವಾದ ಕಾರಣ ಪಂದ್ಯ ರದ್ದುಗೊಳಿಸಲಾಗಿತ್ತು. ಜರ್ಮನಿ ಸ್ಪರ್ಧೆಯಿಂದ ಹಿಂದೆ ಸರಿದ ಕಾರಣ ಗುಂಪನ್ನು ಮೂರು ತಂಡಗಳಿಗೆ ಸೀಮಿತಗೊಳಿಸಲಾಯಿತು. ಆಡಿರುವ ಎರಡೂ ಪಂದ್ಯಗಳಲ್ಲಿ ಸೋತಿರುವ ಆತಿಥೇಯ ಫ್ರಾನ್ಸ್ ತಂಡ ಮೂರನೇ ಸ್ಥಾನದೊಂದಿಗೆ ಸ್ಪರ್ಧೆಯಿಂದ ಹೊರಬಿತ್ತು.



ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ –ಎಪಿ/ ಪಿಟಿಐ ಚಿತ್ರ

ನಾಲ್ಕು ಗುಂಪಿನಲ್ಲಿ ಮೊದಲೆರಡು ಸ್ಥಾನ ಪಡೆಯುವ ತಂಡಗಳು ಮಾತ್ರ ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆಯುತ್ತವೆ.

ಅಶ್ವಿನಿ– ತನಿಶಾ ಜೋಡಿಗೆ ಹ್ಯಾಟ್ರಿಕ್ ಸೋಲು: ಭಾರತದ ಮಹಿಳೆಯರ ಡಬಲ್ಸ್ ಅಶ್ವಿನಿ ಪೊನ್ನಪ್ಪ ಮತ್ತು ತನಿಶಾ ಕ್ರಾಸ್ಟೊ ಅವರು 'ಸಿ' ಗುಂಪಿನಲ್ಲಿ ಸತತ ಮೂರನೇ ಸೋಲು ಅನುಭವಿಸಿದರು. ಗುಂಪಿನಲ್ಲಿ ಕೊನೆಯ ಸ್ಥಾನ ಪಡೆದು ಹೊರಬಿದ್ದರು.

ತನಿಶಾ ಮತ್ತು ಅಶ್ವಿನಿ ಮಂಗಳವಾರ ಕೊನೆಯ ಪಂದ್ಯದಲ್ಲಿ 15-21, 10-21 ನೇರ ಗೇಮ್‌ಗಳಿಂದ ಆಸ್ಟ್ರೇಲಿಯಾದ ಸೆಟ್ಯಾನಾ ಮಪಾಸಾ ಮತ್ತು ಏಂಜೆಲಾ ಯು ವಿರುದ್ಧ ಸೋಲು ಅನುಭವಿಸಿದರು.

ಕರ್ನಾಟಕದ 34 ವರ್ಷ ವಯಸ್ಸಿನ ಅಶ್ವಿನಿ ಅವರಿಗೆ ಇದು ಮೂರನೇ ಒಲಿಂಪಿಕ್ಸ್ ಆಗಿತ್ತು. ಈ ಹಿಂದೆ ಜ್ವಾಲಾ ಗುಟ್ಟಾ ಜೊತೆ ಎರಡು ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದರು.

ಪಂದ್ಯ ಸೋತ ಬಳಿಕ ಪ್ರತಿಕ್ರಿಯಿಸಿದ ಅಶ್ವಿನಿ, 'ಇದು ತನ್ನ ಕೊನೆಯ ಒಲಿಂಪಿಕ್ಸ್' ಎಂದು ಹೇಳಿದರು.

ಪುರುಷರ ಟ್ರಯಥ್ಲಾನ್ ಮತ್ತೆ ಮುಂದೂಡಿಕೆ

ಪ್ಯಾರಿಸ್ (ಎಪಿ): ಸೆನ್ ನದಿಯ ನೀರಿನ ಗುಣಮಟ್ಟದ ಬಗ್ಗೆ ಆತಂಕ ಮುಂದುವರಿದಿದ್ದು, ಮಂಗಳವಾರ ನಡೆಯಬೇಕಾಗಿದ್ದ ಪುರುಷರ ವಿಭಾಗದ ಟ್ರಯಥ್ಲಾನ್ ಸ್ಪರ್ಧೆಯನ್ನು ಮಂದೂಡಬೇಕಾಯಿತು. ಬುಧವಾರ ಈ ಸ್ಪರ್ಧೆಗಳನ್ನು ನಡೆಸಲು ಪ್ರಯತ್ನಿಸುವುದಾಗಿ ಆಯೋಜಕರು ಹೇಳಿದ್ದಾರೆ.

ಮಹಿಳೆಯರ ವಿಭಾಗದ ಸ್ಪರ್ಧೆಯೂ ಬುಧವಾರ ನಿಗದಿಯಾಗಿದ್ದು, ನದಿಯ ನೀರು ಈಜಿಗೆ ಯೋಗ್ಯವಾದರಷ್ಟೇ ಸ್ಪರ್ಧೆ ಸಾಧ್ಯವಾಗಲಿದೆ. ಭಾನುವಾರ ಮತ್ತು ಸೋಮವಾರ ನಿಗದಿಯಾಗಿದ್ದ ಟ್ರಯಥ್ಲಾನ್ ಈಜು ವಿಭಾಗದ ಅಭ್ಯಾಸಕ್ಕೂ ಮಳೆಯಿಂದ ನದಿಯ ನೀರು ಕಲುಷಿತಗೊಂಡ ಕಾರಣ ಸಾಧ್ಯವಾಗಿರಲಿಲ್ಲ.

ಸೆನ್ ನದಿಯನ್ನು ಒಲಿಂಪಿಕ್ಸ್‌ಗೆ ಬಳಸುವ ಉದ್ದೇಶದಿಂದ ಶುದ್ಧೀಕರಣಗೊಳಿಸಲು ಸ್ಥಳೀಯಾಡಳಿತ ಕೋಟಿಗಟ್ಟಲೆ ಯುರೊ ವೆಚ್ಚ ಮಾಡಿದೆ. ಆದರೆ ನದಿಯ ನೀರು ಮುಂದಿನ ದಿನಗಳಲ್ಲಿ ತಿಳಿಗೊಂಡು ಸ್ಪರ್ಧೆಯ ಈಜು ಹಂತಕ್ಕೆ ಸಿದ್ಧಗೊಳ್ಳಬಹುದೆಂದು ವಿಶ್ವಾಸದಲ್ಲಿ ಅಧಿಕಾರಿಗಳು ಇದ್ದಾರೆ.

ಸ್ಪರ್ಧೆಯನ್ನು ಶುಕ್ರವಾರ ನಡೆಸುವ ಇನ್ನೊಂದು ಯೋಜನೆಯನ್ನೂ ಆಯೋಜಕರು ಹೊಂದಿದ್ದಾರೆ. ಆದರೆ ಮಂಗಳವಾರ ಜೋರಾದ ಗಾಳಿ ಬೀಸುವುದೆಂದು ಮತ್ತು ರಾತ್ರಿ ಮಳೆಯಾಗಬಹುದೆಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಅದೇ ರೀತಿ ಆದಲ್ಲಿ ಪರಿಸ್ಥಿತಿ ಸಂಕೀರ್ಣಗೊಳ್ಳಬಹುದು. ಮಳೆಯಾದಲ್ಲಿ ಈ ನದಿಯಲ್ಲಿ ಬ್ಯಾಕ್ಟೀರಿಯಾ ಪ್ರಮಾಣ ಏರುವುದು ಸಾಮಾನ್ಯ.

ಒಲಿಂಪಿಕ್ ಉದ್ಘಾಟನೆಯ ದಿನ (ಶುಕ್ರವಾರ) ಭಾರಿ ಮಳೆಯಾಗಿತ್ತು. ಶನಿವಾರವೂ ಮಳೆಯಾಗಿತ್ತು.

ಈ ಮಧ್ಯೆ ಮಂಗಳವಾರ ಪ್ಯಾರಿಸ್‌ನಲ್ಲಿ ತಾಪಮಾನ 35 ಡಿಗ್ರಿ ಸೆಲ್ಸಿಯಸ್ ಇದ್ದು, ಇದು ನದಿಯ ಕಲುಷಿತ ಮಟ್ಟ ಕಡಿಮೆ ಮಾಡಬಹುದೆಂಬ ಆಶಾವಾದ ತಲೆದೋರಿದೆ. ಪ್ಯಾರಿಸ್‌ನ ಹೃದಯಭಾಗದಲ್ಲಿ ಹರಿದುಹೋಗುವ ಈ ನದಿಯ ನೀರಿನ ಸ್ವಚ್ಛತೆಗಾಗಿ 1.4 ಶತಕೋಟಿ ಯುರೊ ($1.5 ಶತಕೋಟಿ) ವೆಚ್ಚ ಮಾಡಲಾಗಿದೆ

ಶೂಟಿಂಗ್: ಪೃಥ್ವಿರಾಜ್‌ಗೆ 21ನೇ ಸ್ಥಾನ

ಶಾತೊಹು (ಫ್ರಾನ್ಸ್), (ಪಿಟಿಐ): ಭಾರತದ ಪೃಥ್ವಿರಾಜ್ ತೊಂಡೈಮಾನ್ ಅವರು ಪುರುಷರ ಟ್ರ್ಯಾಪ್ ಶೂಟಿಂಗ್ ನ ಕೊನೆಯ ಎರಡು ಸುತ್ತುಗಳಲ್ಲಿ 'ಪರಿಪೂರ್ಣ 25' ಸ್ಕೋರ್ ಮಾಡಿ ದರೂ, ಕ್ವಾಲಿಫಿಕೇಷನ್ ಸುತ್ತಿನಲ್ಲಿ ಮಂಗಳವಾರ 21ನೇ ಸ್ಥಾನದಲ್ಲಿ ಸ್ಪರ್ಧೆ ಮುಗಿಸಿದರು.

37 ವರ್ಷ ವಯಸ್ಸಿನ ತೊಂಡೈಮಾನ್ ಅವರು ಐದು ಸುತ್ತುಗಳ ಸ್ಪರ್ಧೆಯಲ್ಲಿ ಸಂಭನೀಯ 125 ಶಾಟ್‌ಗಳಲ್ಲಿ 118 ಸ್ಕೋರ್ ಮಾಡಿ 30 ಶೂಟರ್‌ಗಳ ಸ್ಪರ್ಧೆಯಲ್ಲಿ 21ನೇ ಸ್ಥಾನ ಪಡೆದರು. ಮೊದಲ ಆರು ಸ್ಥಾನ ಗಳಿಸಿದ ಸ್ಪರ್ಧಿಗಳು ಫೈನಲ್‌ಗೆ ಅರ್ಹತೆ ಪಡೆದರು.

ಶಾತೊಹು ಶೂಟಿಂಗ್ ರೇಂಜ್‌ನಲ್ಲಿ ನಡೆದ ಎರಡು ದಿನಗಳ ಅರ್ಹತಾ ಸ್ಪರ್ಧೆಯಲ್ಲಿ ತೊಂಡೈಮಾನ್ ಕ್ರಮವಾಗಿ 22, 25, 21, 25 ಮತ್ತು 25 ಸ್ಕೋರ್ ಮಾಡಿದರು. ಮೊದಲ ದಿನದ ಕೊನೆಗೆ ಅವರು 30ನೇ ಸ್ಥಾನ ಪಡೆದಿದ್ದರು. ಆದರೆ ಎರಡನೇ ದಿನ ಗಮನಾರ್ಹ ಪ್ರದರ್ಶನ ನೀಡಿ ಸ್ಥಾನ ಸುಧಾರಿಸಿದರು.

16ರ ಘಟ್ಟಕ್ಕೆ ಬಿಲ್ಗಾರ್ತಿ ಭಜನ್

ಪ್ಯಾರಿಸ್ (ಪಿಟಿಐ): ಭಾರತದ ಬಿಲ್ಗಾರ್ತಿ ಭಜನ್ ಕೌರ್ ಅವರು ಮಂಗಳವಾರ ಒಲಿಂಪಿಕ್ಸ್‌ನ ಮಹಿಳೆಯರ ಆರ್ಚರಿ ವೈಯಕ್ತಿಕ ಸ್ಪರ್ಧೆಯಲ್ಲಿ ಪ್ರಿ ಕ್ವಾರ್ಟರ್ ಫೈನಲ್ ತಲುಪಿದರು. ಆದರೆ, ಧೀರಜ್ ಬೊಮ್ಮದೇವರ ಪುರುಷರ ವಿಭಾಗದ ಸ್ಪರ್ಧೆಯಿಂದ ಹೊರಬಿದ್ದರು.

ತಂಡ ವಿಭಾಗದ ಸ್ಪರ್ಧೆಯಲ್ಲಿ ಮಿಂಚಿದ್ದ 18 ವರ್ಷ ವಯಸ್ಸಿನ ಕೌರ್ ಇಲ್ಲೂ ಉತ್ತಮ ಫಾರ್ಮ್ ಮುಂದುವರಿಸಿದರು. ವೈಯಕ್ತಿಕ ಸ್ಪರ್ಧೆಯ ಮೊದಲೆರಡು ಸುತ್ತಿನಲ್ಲಿ ಅವರು ಕ್ರಮವಾಗಿ ಇಂಡೊನೇಷ್ಯಾದ ಸೈಫಾ ನುರಾಫಿಫಾ ಕಮಾಲ್ ಮತ್ತು ಪೋಲೆಂಡ್‌ನ ವಿಯೊಲೆಟಾ ಮೈಸ್ಜೊರ್ ಅವರನ್ನು ಸೋಲಿಸಿದರು. ಶನಿವಾರ ನಡೆಯಲಿರುವ 16ರ ಸುತ್ತಿನ ಪಂದ್ಯದಲ್ಲಿ ಭಜನ್ ಅವರು ಇಂಡೊನೇಷ್ಯಾದ ದಿಯಾನಂದ ಚೊಯಿರುನಿಸಾ ಅವರನ್ನು ಎದುರಿಸಲಿದ್ದಾರೆ.

ನಾಲ್ಕನೇ ಶ್ರೇಯಾಂಕದ ಧೀರಜ್ ಅವರು ಮೊದಲ ಸುತ್ತಿನಲ್ಲಿ ಜೆಕ್ ಗಣರಾಜ್ಯದ ಆಡಮ್ ಲಿ ವಿರುದ್ಧ ಗೆಲುವು ಸಾಧಿಸಿದ್ದರು. ಆದರೆ, ಎರಡನೇ ಸುತ್ತಿನಲ್ಲಿ ಕೆನಡಾದ ಎರಿಕ್ ಪೀಟರ್ಸ್ ವಿರುದ್ಧ ಸೋಲು ಅನುಭವಿಸಿದರು.



ಭಾರತದ ಭಜನ್ ಕೌರ್ –ಎಎಫ್‌ಪಿ ಚಿತ್ರ

ರೋಯಿಂಗ್: ಭಾರತದ ಸವಾಲು ಅಂತ್ಯ

ಪ್ಯಾರಿಸ್ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ರೋಯಿಂಗ್ ಕ್ರೀಡೆಯಲ್ಲಿ ಭಾರತ ಏಕೈಕ ಸ್ಪರ್ಧಿಯಾಗಿರುವ ಬಲರಾಜ್ ಪನ್ವರ್ ಅವರು ಮಂಗಳವಾರ ನಡೆದ ಪುರುಷರ ಸಿಂಗಲ್ ಸ್ಕಲ್ ಕ್ವಾರ್ಟರ್ ಫೈನಲ್ ಹೀಟ್ ರೇಸ್‌ನಲ್ಲಿ ಐದನೇ ಸ್ಥಾನ ಪಡೆದರು.

ಕ್ವಾರ್ಟರ್‌ಫೈನಲ್‌ನ ಹೀಟ್–4ರಲ್ಲಿ ಪನ್ವರ್ ಅವರು 7 ನಿಮಿಷ 5.10 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಅವರು ಸೆಮಿಫೈನಲ್ 'ಸಿ/ಡಿ' ಸರಿದರು. ಈ ವಿಭಾಗದ ಸ್ಪರ್ಧಿಗಳು 13ರಿಂದ 24ನೇ ಸ್ಥಾನಗಳಿಗಾಗಿ ಸ್ಪರ್ಧಿಸಲಿದ್ದಾರೆ. ತಟಸ್ಥ ನೆಲೆಯಲ್ಲಿ ಸ್ಪರ್ಧಿಸಿರುವ ಯೂಹೆನಿ ಜಲಾಟಿ ಅವರು ಕ್ವಾರ್ಟರ್ ಫೈನಲ್‌ನ ಹೀಟ್–4ರಲ್ಲಿ 6 ನಿಮಿಷ 49.27 ಸೆಕೆಂಡುಗಳಲ್ಲಿ ಗುರಿ ತಲುಪಿ ಮೊದಲ ಸ್ಥಾನ ಪಡೆದರು. ಲಿಥುವೇನಿಯಾದ ಗಿಡ್ರಿಯಸ್ ಬಿಲಿಯಾಸ್ಕಸ್ (6ನಿ 51.80ಸೆ) ಮತ್ತು ಜಪಾನ್‌ನ ರ‍್ಯುಟಾ ಅರಕಾವಾ (6ನಿ 54.17ಸೆ) ಕ್ರಮವಾಗಿ ಎರಡು ಹಾಗೂ 3ನೇ ಸ್ಥಾನ ಪಡೆದರು.

25 ವರ್ಷ ವಯಸ್ಸಿನ ಪನ್ವರ್ ಅವರು ಭಾನುವಾರ ನಡೆದಿದ್ದ ರೆಪೆಷಾಜ್‌ನಲ್ಲಿ ಎರಡನೇ ಸ್ಥಾನ ಪಡೆಯುವ ಮೂಲಕ ಕ್ವಾರ್ಟರ್‌ಫೈನಲ್ ತಲುಪಿದ್ದರು.

ಸಿಂಗಲ್ಸ್‌ನಲ್ಲಿ ಭಾರತದ ಆಟಗಾರ್ತಿಯ ಐತಿಹಾಸಿಕ ಸಾಧನೆ

ಪ್ರಿ ಕ್ವಾರ್ಟರ್‌ಗೆ ಮಣಿಕಾ ಬಾತ್ರಾ

ಪ್ಯಾರಿಸ್ (ಪಿಟಿಐ): ಭಾರತದ ಟೇಬಲ್ ಟೆನಿಸ್ ತಾರೆ ಮಣಿಕಾ ಬಾತ್ರಾ ಅವರು ಒಲಿಂಪಿಕ್ಸ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ತಲುಪಿದ್ದಾರೆ. ಈ ಮೂಲಕ ಸಿಂಗಲ್ಸ್‌ನಲ್ಲಿ 16ರ ಘಟ್ಟ ತಲುಪಿದ ಭಾರತದ ಮೊದಲ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಸೋಮವಾರ ತಡರಾತ್ರಿ ನಡೆದ 32ರ ಘಟ್ಟದ ಪಂದ್ಯದಲ್ಲಿ 29 ವರ್ಷ ವಯಸ್ಸಿನ ಮಣಿಕಾ 11-9, 11-6, 11-9, 11-7ರಿಂದ ಫ್ರಾನ್ಸ್‌ನ ನೆಚ್ಚಿನ ಆಟಗಾರ್ತಿ ಪ್ರೀತಿಕಾ ಪಾವಡೆ ಅವರನ್ನು ಹಿಮ್ಮೆಟ್ಟಿಸಿದರು.

ವಿಶ್ವ ಕ್ರಮಾಂಕದಲ್ಲಿ 28ನೇ ಸ್ಥಾನದಲ್ಲಿರುವ ಮಣಿಕಾ ಪಂದ್ಯದುದ್ದಕ್ಕೂ ಪಾಬಲ್ಯವನ್ನು ಸಾಧಿಸಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 18ನೇ ಸ್ಥಾನದಲ್ಲಿರುವ ಎದುರಾಳಿ ಆಟಗಾರ್ತಿಗೆ ಒಂದೂ ಗೇಮನ್ನು ಬಿಟ್ಟುಕೊಡದೆ ಮುಂದಿನ ಸುತ್ತಿಗೆ ಮುನ್ನಡೆದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮಣಿಕಾ 32ರ ಘಟ್ಟಕ್ಕೆ ತಲುಪಿದ್ದು, ಆ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ್ತಿ ಎಂಬ ದಾಖಲೆ ಬರೆದಿದ್ದರು. ಇದೀಗ ತಮ್ಮದೇ ದಾಖಲೆಯನ್ನು ಅವರು ಉತ್ತಮಗೊಳಿಸಿದರು.

'ನನಗಿಂತ ಉನ್ನತ ಶ್ರೇಯಾಂಕದ ಫ್ರೆಂಚ್ ಆಟಗಾರ್ತಿಯನ್ನು ಸೋಲಿಸಿರುವುದಕ್ಕೆ ನಿಜಕ್ಕೂ ಖುಷಿಯಾಗಿದೆ. ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿ ಇತಿಹಾಸ ನಿರ್ಮಿಸುವ ಬಗ್ಗೆ ಯೋಚನೆ ಮಾಡಿರಲಿಲ್ಲ. ಇನ್ನೂ ಸಾಕಷ್ಟು ಸುತ್ತುಗಳು ಬಾಕಿ ಇವೆ. ಮುಂದಿನ ಪಂದ್ಯಗಳನ್ನು ಗೆಲ್ಲುವತ್ತ ಗಮನ ಕೇಂದ್ರೀಕರಿಸಿದ್ದೇನೆ' ಎಂದು ಪಂದ್ಯದ ಬಳಿಕ ಮಣಿಕಾ ಪ್ರತಿಕ್ರಿಯಿಸಿದರು.

'ನನ್ನ ಕೋಚ್ ಜೊತೆ ಚರ್ಚಿಸಿದಂತೆ ನಾನು ಎದುರಾಳಿ ಆಟಗಾರ್ತಿಯ ಫೋರ್‌ಹ್ಯಾಂಡ್‌ಗೆ ಆಡಲು ಯೋಜಿಸಿದ್ದೆ. ಆದರೆ, ಆಕೆಯ ಬ್ಯಾಕ್‌ಹ್ಯಾಂಡ್‌ನಲ್ಲಿ ನನಗೆ ಹೆಚ್ಚು ಅಂಕ ಲಭಿಸಿದ್ದರಿಂದ ಅದೇ ತಂತ್ರವನ್ನು ಪಂದ್ಯದುದ್ದಕ್ಕೂ ಮುಂದುವರಿಸಿದೆ' ಎಂದು ಹೇಳಿದರು.

19 ವರ್ಷ ವಯಸ್ಸಿನ ಪ್ರೀತಿಕಾ ಹೆತ್ತವರು ಪುದುಚೇರಿ ಮೂಲದವರಾಗಿದ್ದು, 2003ರಲ್ಲಿ ಕುಟುಂಬವು ಪ್ಯಾರಿಸ್‌ಗೆ ಸ್ಥಳಾಂತರಗೊಂಡಿದೆ. ಎಡಗೈ ಆಟಗಾರ್ತಿಯಾಗಿರುವ ಪ್ರೀತಿಕಾ ಟೋಕಿಯೊ ಒಲಿಂಪಿಕ್ಸ್‌ನಲ್ಲೂ ಸ್ಪರ್ಧಿಸಿದ್ದು, ಮೊದಲ ಸುತ್ತಿನಲ್ಲಿ ಹೊರಬಿದ್ದಿದ್ದರು. ಅವರು ಜೂನ್‌ನಲ್ಲಿ ತಮ್ಮ ವೃತ್ತಿಜೀವನದಲ್ಲಿ ಮೊದಲ ಬಾರಿಗೆ ಡಬ್ಲ್ಯುಟಿಟಿ ಫೈನಲ್ ತಲುಪಿದ್ದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಮತ್ತೊಬ್ಬ ಸ್ಪರ್ಧಿ ಶ್ರೀಜಾ ಅಕುಲಾ ಅವರು 32ರ ಘಟ್ಟದ ಪಂದ್ಯದಲ್ಲಿ ಸಿಂಗಪುರದ ಜಿಯಾನ್ ಝೆಂಗ್ ವಿರುದ್ಧ ಬುಧವಾರ ಸ್ಪರ್ಧಿಸುವರು.

ಪುರುಷರ ಸಿಂಗಲ್ಸ್‌ನಲ್ಲಿ ಶರತ್ ಕಮಲ್ ಮತ್ತು ಹರ್ಮೀತ್ ದೇಸಾಯಿ ಈಗಾಗಲೇ ಹೊರಬಿದ್ದಿದ್ದಾರೆ.



ಭಾರತದ ಮಣಿಕಾ ಬಾತ್ರಾ –ಪಿಟಿಐ ಚಿತ್ರ



ಚಿನ್ನದ ಮೀನು ಪ್ಯಾರಿಸ್ ಒಲಿಂಪಿಕ್ಸ್‌ನ ಮಹಿಳೆಯರ 1500 ಮೀಟರ್ ಫ್ರೀಸ್ಟೈಲ್ ಹೀಟ್ಸ್‌ನಲ್ಲಿ ಅಗ್ರಸ್ಥಾನದತ್ತ ಮುನ್ನುಗ್ಗಿದ ಹಾಲಿ ಚಾಂಪಿಯನ್ ಅಮೆರಿಕದ ಕೇಟಿ ಲೆಡೆಕಿ. ಇದೇ ವಿಭಾಗದ ವಿಶ್ವದಾಖಲೆ ಅವರ ಹೆಸರಿನಲ್ಲಿದೆ –ಪ್ರಜಾವಾಣಿ ಚಿತ್ರ/ ಕೆ.ಎನ್. ಶಾಂತಕುಮಾರ್

ಐರ್ಲೆಂಡ್ ವಿರುದ್ಧ 2–0 ಜಯ • ಎರಡೂ ಗೋಲು ಗಳಿಸಿದ ನಾಯಕ ಹರ್ಮನ್‌ಪ್ರೀತ್ ಸಿಂಗ್

ಕ್ವಾರ್ಟರ್ ಫೈನಲ್‌ಗೆ ಭಾರತ ಹಾಕಿ ತಂಡ

ಪ್ಯಾರಿಸ್ (ಪಿಟಿಐ): ರಕ್ಷಣೆಯಲ್ಲಿ ಕೆಲವು ಲೋಪಗಳ ಹೊರತಾಗಿಯೂ ಭಾರತ ತಂಡ ನಿರೀಕ್ಷೆಯಂತೆ ಐರ್ಲೆಂಡ್ ತಂಡವನ್ನು ಸೋಲಿಸಿ ಪ್ಯಾರಿಸ್ ಒಲಿಂಪಿಕ್ಸ್ ಹಾಕಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿತು. ‘ಬಿ’ ಗುಂಪಿನ ಈ ಪಂದ್ಯವನ್ನು ಮಂಗಳವಾರ ಭಾರತ ತಂಡ 2-0 ಗೋಲುಗಳಿಂದ ಜಯಿಸಿತು. ನಾಯಕ ಹರ್ಮನ್‌ಪ್ರೀತ್ ಸಿಂಗ್ ಈ ಎರಡೂ ಗೋಲುಗಳನ್ನು ಗಳಿಸಿದರು.

ಈ ಹಿಂದಿನ ಎರಡು ಪಂದ್ಯಗಳಿಗೆ ಭಿನ್ನವಾಗಿ ಭಾರತ ತಂಡ ಈ ಬಾರಿ ಎದುರಾಳಿ ತಂಡದ ಗೋಲಿನತ್ತ ಪದೇ ಪದೇ ದಾಳಿಗಳನ್ನು ನಡೆಸಿತು. ವಿರಾಮಕ್ಕೆ ಮೊದಲಂತೂ ತಂಡದ ಮೇಲುಗೈ ಸ್ಪಷ್ಟವಾಗಿ ಕಾಣಿಸಿತು. ಇದು ಅನಿರೀಕ್ಷಿತವೇನೂ ಆಗಿರಲಿಲ್ಲ. ಗುಂಪಿನಲ್ಲಿ ಇರುವ ತಂಡಗಳ ಪೈಕಿ ಐರ್ಲೆಂಡ್ ದುರ್ಬಲ ಎಂದು ಗುರುತಿಸಿಕೊಂಡಿದೆ. ಆದರೆ ಉತ್ತರಾರ್ಧದಲ್ಲಿ ಭಾರತದ ಆಟದ ಮಟ್ಟ ಮೆಚ್ಚುವಂತಿರಲಿಲ್ಲ.

ಈ ಗೆಲುವಿನ ನಂತರ ಭಾರತ ಮೂರು ಪಂದ್ಯಗಳಿಂದ ಏಳು ಪಾಯಿಂಟ್ಸ್ ಸಂಗ್ರಹಿಸಿದೆ. ಐರ್ಲೆಂಡ್ ಕ್ವಾರ್ಟರ್‌ಫೈನಲ್ ರೇಸ್‌ನಿಂದ ಹೊರಬಿದ್ದಿತು. ಅದು ಆಡಿದ ಮೂರೂ ಪಂದ್ಯಗಳಲ್ಲಿ ಸೋತಿದೆ. ಎರಡು ಗುಂಪುಗಳಲ್ಲಿ ತಲಾ ಆರು ತಂಡಗಳಿದ್ದು, ಮೊದಲ ನಾಲ್ಕು ಸ್ಥಾನ ಗಳಿಸುವ ತಂಡಗಳು ಕ್ವಾರ್ಟರ್‌ಫೈನಲ್ ತಲುಪಲಿವೆ.

ಮೊದಲ ಪಂದ್ಯದಲ್ಲಿ ಭಾರತ 3-2 ಗೋಲುಗಳಿಂದ ನ್ಯೂಜಿಲೆಂಡ್ ವಿರುದ್ಧ ಜಯಗಳಿಸಿದ್ದು, ಸೋಮವಾರ ಅರ್ಜೆಂಟೀನಾ ವಿರುದ್ಧ 1-1 ಸಮಬಲ ಸಾಧಿಸಿತ್ತು.



ಪ್ಯಾರಿಸ್‌ನ ಇವ್ಸ್ ಡಿ ಮ್ಯಾನುವಾ ಕ್ರೀಡಾಂಗಣದಲ್ಲಿ ಮಂಗಳವಾರ ಐರ್ಲೆಂಡ್ ವಿರುದ್ಧ ನಡೆದ ಹಾಕಿ ಪಂದ್ಯದಲ್ಲಿ ಗೋಲು ಗಳಿಸಿದ ನಂತರ ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ (ಮಧ್ಯ) ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಪಿಟಿಐ ಚಿತ್ರ

ಭಾರತಕ್ಕೆ ಮಂಗಳವಾರ ನಡೆದ ಪಂದ್ಯದ ಎರಡನೇ ನಿಮಿಷವೇ ಪೆನಾಲ್ಟಿ ಕಾರ್ನರ್ ದೊರಕಿತು. ಈ ಅವಕಾಶದಲ್ಲಿ ಹರ್ಮನ್‌ಪ್ರೀತ್ ಯತ್ನವನ್ನು ಎದುರಾಳಿ ರಕ್ಷಣೆ ಆಟಗಾರ-ರೊಬ್ಬರು ತಡೆದರು. ಅವರಿಂದ ರಿಬೌಂಡ್ ಆದ ಚೆಂಡನ್ನು ಮನ್‌ದೀಪ್ ನಿಯಂತ್ರಿಸುವಲ್ಲಿ ವಿಫಲರಾದರು. ಮತ್ತೊಮ್ಮೆ ಹರ್ಮನ್‌ಪ್ರಿತ್ ಅವರ ಯತ್ನ ಗೋಲ್‌ಪೋಸ್ಟ್‌ಗೆ ಹೊಡೆಯಿತು.

ಆದರೆ ಗೋಲಿಗೆ ಹೆಚ್ಚು ಸಮಯ ಕಾಯಬೇಕಾಗಿ ಬರಲಿಲ್ಲ. 13ನೇ ನಿಮಿಷ ತಂಡದ ನಾಯಕ ಹರ್ಮನ್‌ಪ್ರೀತ್ ‘ಪೆನಾಲ್ಟಿ’ ಅವಕಾಶವನ್ನು ಯಶಸ್ವಿ ಆಗಿ ಪರಿವರ್ತಿಸಿದರು. ಇಬ್ಬರು ಐರಿಷ್ ಆಟಗಾರರನ್ನು ತಪ್ಪಿಸಿಕೊಂಡು ಚೆಂಡಿನೊಡನೆ ಮುನ್ನಡೆದ ಗುರ್ಜಂತ್, ಮನ್‌ದೀಪ್‌ಗೆ ಪಾಸ್ ಮಾಡಿದರು. ಆದರೆ ಗೋಲ್‌ಪೋಸ್ಟ್ ಎದುರೇ ಶೇನ್ ಒ‘ಡೊನೊಘ್, ಮನದೀಪ್ ಅವರನ್ನು ಒರಟಾಗಿ ತಡೆದರು. ಪರಿಣಾಮವಾಗಿ ಅಂಪೈರ್ ಈ ‘ಪೆನಾಲ್ಟಿ’ ನೀಡಿದ್ದರು.

ಎರಡನೇ ಕ್ವಾರ್ಟರ್‌ನಲ್ಲಿ (19ನೇ ನಿಮಿಷ) ಹರ್ಮನ್‌ಪ್ರೀತ್ ಅವರು ತಂಡಕ್ಕೆ ದೊರೆತ ನಾಲ್ಕನೇ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಬದಲಾಯಿಸಿದರು. ಅದೂ ಎರಡು ಸತತ ಪ್ರಯತ್ನ-ಗಳನ್ನು ಐರಿಷ್ ರಕ್ಷಣೆ ಆಟಗಾರರು ಬ್ಲಾಕ್ ಮಾಡಿದ ನಂತರ. ಒಟ್ಟಾರೆ ಮೇಲುಗೈ ಹೊರತಾಗಿಯೂ ಭಾರತ ಕೆಲವು ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳಲಿಲ್ಲ.

ಐರ್ಲೆಂಡ್ ತಂಡಕ್ಕೂ ಕೆಲವು ಅವಕಾಶಗಳು ದೊರೆತಿದ್ದವು. ಆದರೆ ಗೋಲ್‌ಕೀಪರ್ ಶ್ರೀಜೇಶ್ ಅವರನ್ನು ವಂಚಿಸಲು ಆಗಲಿಲ್ಲ. ಪಂದ್ಯದ ಮೂರನೇ ಕ್ವಾರ್ಟರ್‌ನಲ್ಲಿ ಐರ್ಲೆಂಡ್ ಪ್ರಬಲ ಪೈಪೋಟಿ ನೀಡಿತು. ಎಂಟು ಪೆನಾಲ್ಟಿ ಕಾರ್ನರ್‌ಗಳು ದೊರೆತವು. ಆದರೆ ಒಂದರಲ್ಲೂ ಯಶಸ್ವಿಯಾ-ಗಲಿಲ್ಲ. ಭಾರತದ ರಕ್ಷಣೆ ಆಟಗಾರರು ಕೆಲವು ಬಾರಿ ತಪ್ಪುಗಳನ್ನು ಮಾಡಿದರೂ ಅದರಿಂದ ಹಾನಿಯಾಗಲಿಲ್ಲ. ಎದುರಾಳಿ ತಂಡ ಪ್ರಬಲವಾ-ಗಿದ್ದಲ್ಲಿ ಕಥೆ ಬೇರೆಯಿರುತಿತ್ತೇನೊ. ಕೊನೆಯ ಕ್ವಾರ್ಟರ್‌ನಲ್ಲೂ ಐರಿಷ್ ತಂಡಕ್ಕೆ ಅವಕಾಶಗಳು ದೊರೆತರೂ ‘ಫಿನಿಷಿಂಗ್’ ಇರಲಿಲ್ಲ.

ಭಾರತ ತನ್ನ ಮುಂದಿನ ಪಂದ್ಯವನ್ನು ಆಗಸ್ಟ್ 1ರಂದು ಹಾಲಿ ಚಾಂಪಿಯನ್ ಬೆಲ್ಜಿಯಂ ವಿರುದ್ಧ ಆಡಲಿದೆ.

ಕೆನಡಾದ 17 ವರ್ಷ ವಯಸ್ಸಿನ ಈಜುತಾರೆ

ಸೂಪರ್ ಸ್ಟಾರ್ ಪಟ್ಟಕ್ಕೆ ಸಮ್ಮರ್

ಪ್ಯಾರಿಸ್ (ಎಎಫ್‌ಪಿ): ಭವಿಷ್ಯದ ಈಜು ಸೂಪರ್‌ಸ್ಟಾರ್ ಎಂಬ ಪ್ರಭಾವಳಿಗೆ ಯೋಗ್ಯ-ವೆನಿಸುವಂತೆ ಕೆನಡಾದ ಹದಿಹರೆಯದ ಈಜು ಗಾರ್ತಿ ಸಮ್ಮರ್ ಮೆಕಿಂಟೋಷ್ ಪ್ಯಾರಿಸ್ ಒಲಿಂಪಿಕ್ ಕ್ರೀಡೆಗಳಲ್ಲಿ ಅಮೋಘ ಪ್ರದರ್ಶನ ನೀಡುತ್ತಿದ್ದಾರೆ. ಈಗ ಎಲ್ಲರ ಬಾಯಿಯಲ್ಲಿ ಈಕೆಯ ಬಗ್ಗೆ ಮೆಚ್ಚುಗೆಯ ನುಡಿಗಳೇ.

ಬರೇ 17 ವರ್ಷ ವಯಸ್ಸಿನ ಸಮ್ಮರ್ ಅವರು ಒಲಿಂಪಿಕ್ಸ್‌ನಂಥ ಅತೀವ ಒತ್ತಡದ ವೇದಿಕೆಯಲ್ಲಿ ತಮ್ಮ ಸಾಮರ್ಥ್ಯವನ್ನು ಪದಕವನ್ನಾಗಿ ಪರಿವರ್ತಿಸಬಲ್ಲರೇ ಎಂಬ ಚರ್ಚೆ ಕಳೆದ ಹಲವು ತಿಂಗಳಿಂದ ನಡೆಯುತ್ತ ಬಂದಿತ್ತು. ಈಗ ಅದಕ್ಕೆಲ್ಲಾ ಅವರು ಸೂಕ್ತ ರೀತಿಯಲ್ಲೇ ಉತ್ತರ ನೀಡಿದ್ದಾರೆ.



ಮಹಿಳೆಯರ 400 ಮೀ. ವೈಯಕ್ತಿಕ ಮೆಡ್ಲೆ ಗೆದ್ದ ಕೆನಡಾದ ಸಮ್ಮರ್ ಮೆಕಿಂಟೋಷ್ ಎಎಫ್‌ಪಿ ಚಿತ್ರ

‘ಟೋಕಿಯೊ ಒಲಿಂಪಿಕ್ಸ್‌ಗೆ ನಾನು ಮಾನಸಿಕವಾಗಿ ಸಜ್ಜಾಗಿರಲಿಲ್ಲ. ಇನ್ನೂ ಎಳೆಯ ವಯಸ್ಸು. ಸ್ಟ್ಯಾಂಡ್ ಕೂಡ ಖಾಲಿಯಾಗಿದ್ದವು. ಜೊತೆಗೆ ಅದು ಸೀನಿಯರ್ ಮಟ್ಟದಲ್ಲಿ ನನ್ನ ಮೊದಲ ಅಂತರರಾಷ್ಟ್ರೀಯ ಸ್ಪರ್ಧೆಯಾಗಿತ್ತು’ ಎಂದು ಮೆಕಿಂಟೋಷ್ ಸ್ಮರಿಸಿದರು.

‘ನಾನಾಗ ಸಾಕಷ್ಟು ಕಲಿತೆ. ಸ್ಟ್ಯಾಂ-ಡ್‌ನಲ್ಲಿರುವ ಪ್ರೇಕ್ಷಕರ ಬೆಂಬಲ ವೇಗವಾಗಿ ಸಾಗಲು ಉತ್ಸಾಹ ಮೂಡಿಸುವ ಇಂಧನ-ವಾಗುತ್ತದೆ’ ಎಂದರು.

ಸಮ್ಮರ್ ಮೆಕಿಂಟೋಷ್‌ಳ ಸಾಧನೆ ಕುಟುಂಬ ಸದಸ್ಯರಿಗೆ ಸ್ವಲ್ಪವೂ ಅಚ್ಚರಿ ಮೂಡಿಸಿಲ್ಲ. ‘ಏಳು- ಎಂಟನೇ ವಯಸ್ಸಿನಲ್ಲೇ ಈಕೆ ಅತ್ಯಮೋಘ ಈಜುಪಟುವಾಗಲಿದ್ದಾಳೆ ಎಂಬುದು ನಮಗೆ ಖಚಿತವಾಗಿತ್ತು. ಅಕೆ ತನಗಿಂತ 10-12 ವರ್ಷದ ಈಜುಪಟುಗಳನ್ನು ಸಾಕಷ್ಟು ಅಂತರದಿಂದ ಹಿಂದೆಹಾ-ಕುತ್ತಿದ್ದಳು’ ಎನ್ನುತ್ತಾರೆ ತಂದೆ ಗ್ರೆಗ್ ಮೆಕಿಂಟೋಷ್.

ಮೆಕಿಂಟೋಷ್, ಲಾ ಡಿಫೆನ್ಸ್ ಅರೇನಾ ದಲ್ಲಿ ಸೋಮವಾರ 15 ಸಹಸ್ರ ಪ್ರೇಕ್ಷಕರ ಸಮ್ಮುಖದಲ್ಲಿ ನಡೆದ 400 ಮೀ. ವೈಯಕ್ತಿಕ ಮೆಡ್ಲೆ ಸ್ಪರ್ಧೆಯನ್ನು 4ನಿ.27.71 ಸೆ.ಗಳಲ್ಲಿ ಪೂರೈಸಿ ಸ್ವರ್ಣ ಗೆದ್ದಿದ್ದಾರೆ. ಅದೂ ಎರಡನೇ ಸ್ಥಾನ ಪಡೆದ ಸ್ಪರ್ಧಿಗಿಂತ ಆರು ಸೆಕೆಂಡು ಮೊದಲಿಗರಾಗಿ ಗುರಿಮುಟ್ಟಿದ್ದಾರೆ.

ಈಜು ಸ್ಪರ್ಧೆಗಳ ಮೊದಲ ದಿನ ತೀವ್ರ ಪೈಪೋಟಿ ಕಂಡ 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಅವರು ಬೆಳ್ಳಿ ಗೆದ್ದರೂ, ಅಮೆರಿಕದ ತಾರೆ ಕೇಟಿ ಲೆಡೆಕಿ ಅವರನ್ನು ಹಿಂದೆ ತಳ್ಳಿದ್ದು ಕಡಿಮೆ ಸಾಧನೆಯಾಗಿರಲಿಲ್ಲ. ಆಸ್ಟ್ರೇಲಿಯಾದ ಈಜುತಾರೆ ಏರಿಯಾರ್ನ್ ಟಿಟ್ಮಸ್ ಮಾತ್ರ ಅವರಿಗಿಂತ ಮುಂದಿದ್ದರು. 2019ರಿಂದ ಟಿಟ್ಮಸ್ ಈ ಸ್ಪರ್ಧೆಯಲ್ಲಿ ಸೋತೇ ಇಲ್ಲ.

ಮೆಕಿಂಟೋಷ್‌ಗೆ ಇನ್ನಷ್ಟು ಚಿನ್ನ ಗೆಲ್ಲುವ ಅವಕಾಶಗಳಿವೆ. ಅವರ ನೆಚ್ಚಿನ ಸ್ಪರ್ಧೆ 200 ಮೀ. ವೈಯಕ್ತಿಕ ಮೆಡ್ಲೆ ನಡೆಯಬೇಕಿದೆ. 200 ಮೀ. ಬಟರ್‌ಫ್ಲೈ ಸ್ಪರ್ಧೆಯ ಚಿನ್ನಕ್ಕೂ ಅವರು ಅಕಾಂಕ್ಷಿ. ಸಮ್ಮರ್ ಅವರ ಒಲಿಂಪಿಕ್ ಪಯಣ ಆರಂಭವಾಗಿದ್ದು 2020ರ ಟೋಕಿಯೊ ಕ್ರೀಡೆಗಳಲ್ಲಿ. ಆಗ ಈ ಬಾಲೆ 200 ಮೀ. ಫ್ರೀಸ್ಟೈಲ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು.

ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಆಕೆ ನಾಲ್ಕು ಚಿನ್ನಗಳ ಒಡತಿ. 2022ರ ಬುಡಾಪೆಸ್ಟ್ ಮತ್ತು 2023ರ ಫುಕುವೊಕಾ ಚಾಂಪಿ-ಯನ್‌ಷಿಪ್‌ನಲ್ಲಿ ಆಕೆ 200 ಮೀ ಬಟರ್‌ಫ್ಲೈ ಮತ್ತು 400 ಮೀ. ಮೆಡ್ಲೆಯಲ್ಲಿ ಚಾಂಪಿಯನ್ ಆಗಿದ್ದರು. ಕಳೆದ ಮೇ ತಿಂಗಳಲ್ಲಿ ತವರಿನ ಒಲಿಂಪಿಕ್ ಟ್ರಯಲ್ಸ್‌ನಲ್ಲಿ ಈಕೆ 400 ಮೀ. ಮೆಡ್ಲೆಯಲ್ಲಿ ತಮ್ಮದೇ ವಿಶ್ವ ದಾಖಲೆಯನ್ನು ಮುರಿದಿದ್ದರು.

ಕ್ರೀಡೆ ಈಕೆಗೆ ರಕ್ತಗತ. ಸಮ್ಮರ್‌ಳ ತಾಯಿ ಜಿಲ್ ಅವರು 1984ರ ಲಾಸ್ ಏಂಜಲಿಸ್ ಒಲಿಂಪಿಕ್ಸ್‌ನಲ್ಲಿ ಈಜು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಅಕ್ಕ ಬ್ರೂಕ್ ಹೆಸರಾಂತ ಫಿಗರ್ ಸ್ಕೇಟರ್ ಆಗಿದ್ದು 2020ರ ಯುವ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದರು.

‘ಆಕೆ ತನ್ನೆಲ್ಲಾ ಸಮಯವನ್ನು ಈಜಿಗೇ ನೀಡುತ್ತಾಳೆ’ ಎಂದು ಅಕ್ಕ ಬ್ರೂಕ್ ಟೊರಾಂಟೊದ ಉಪನಗರದಲ್ಲಿರುವ ಮನೆಯಿಂದ ಹೇಳಿದಳು.

ಲಂಕಾ ವಿರುದ್ಧ ಭಾರತಕ್ಕೆ ‘ಸೂಪರ್’ ಜಯ

ಪಲೆಕೆಲೆ (ಪಿಟಿಐ): ಬೌಲರ್‌ಗಳ ಛಲದ ಆಟದಿಂದಾಗಿ ಭಾರತ ತಂಡವು ಶ್ರೀಲಂಕಾ ಎದುರಿನ ಸರಣಿಯ ಕೊನೆಯ ಟಿ20 ಪಂದ್ಯದಲ್ಲಿ ಸೂಪರ್ ಓವರ್‌ನಲ್ಲಿ ಜಯ ಸಾಧಿಸಿತು. ಇದರೊಂದಿಗೆ ಸರಣಿಯನ್ನು 3-0ಯಿಂದ ತನ್ನದಾಗಿಸಿಕೊಂಡಿತು.

ಮುಖ್ಯ ಕೋಚ್ ಆಗಿ ಗೌತಮ್ ಗಂಭೀರ್ ಮತ್ತು ಪೂರ್ಣಾವಧಿ ನಾಯಕ ರಾಗಿ ಸೂರ್ಯಕುಮಾರ್ ಯಾದವ್ ಅವರು ಆಡಿದ ಮೊದಲ ಸರಣಿ ಇದಾಗಿದೆ.



ವಾಷಿಂಗ್ಟನ್ ಸುಂದರ್

ಮಂಗಳವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಹೀಷ ತೀಕ್ಷಣ (28ಕ್ಕೆ3) ಅವರ ಬೌಲಿಂಗ್ ಬಲದಿಂದ ಶ್ರೀಲಂಕಾ ತಂಡವು ಭಾರತ ತಂಡವನ್ನು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 137 ರನ್‌ಗಳ ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿತು. ಗುರಿ ಬೆನ್ನಟ್ಟಿದ ಲಂಕಾ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳನ್ನು ಕಳೆದುಕೊಂಡು ಈ ಮೊತ್ತ ಮುಟ್ಟಿತು. ಭಾರತ ತಂಡದ ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯಿ, ರಿಂಕು ಸಿಂಗ್ ಮತ್ತು ಸೂರ್ಯಕುಮಾರ್ ಅವರು ತಲಾ ಎರಡು ವಿಕೆಟ್ ಗಳಿಸಿದರು. ಅಲ್ಲದೇ ಉತ್ತಮ ಫೀಲ್ಡಿಂಗ್ ಮೂಲಕ ರನ್‌ಗಳಿಗೆ ತಡೆಯೊಡ್ಡಿದ್ದರು. ಇದರಿಂದಾಗಿ ಸಮಬಲವಾಯಿತು. ಹಿಂದಿನ ಎರಡೂ ಪಂದ್ಯದಂತೆ ಈ ಪಂದ್ಯದಲ್ಲೂ ಲಂಕಾ ಉತ್ತಮ ಆರಂಭ ಪಡೆದು, ನಂತರ ಕುಸಿಯಿತು.

ಸೂಪರ್ ಓವರ್‌ನಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಂಕಾ ತಂಡವು 2 ರನ್ ಗಳಿಸಿತು. ಇದಕ್ಕುತ್ತರವಾಗಿ ಸೂರ್ಯ ಒಂದು ಬೌಂಡರಿ ಹೊಡೆದು ಜಯಭೇರಿ ಬಾರಿಸಿದರು.

ಗಿಲ್-ಪರಾಗ್ ಜೊತೆಯಾಟ: ಶುಭಮನ್ ಗಿಲ್ (39; 37ಎ, 4X3), ರಿಯಾನ್ ಪರಾಗ್ (26; 18ಎ) ಮತ್ತು ವಾಷಿಂಗ್ಟನ್ ಸುಂದರ್ (25; 18ಎ) ಅವರನ್ನು ಬಿಟ್ಟರೆ ಉಳಿದ ಬ್ಯಾಟರ್‌ಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಲಿಲ್ಲ. ಸ್ಪಿನ್ನರ್ ತೀಕ್ಷಣ ಹಾಗೂ ವನಿಂದು ಹಸರಂಗಾ ಅವರ ದಾಳಿಯಿಂದಾಗಿ ಭಾರತ 48 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತ್ತು. ಇದರಿಂದಾಗಿ ಅಲ್ಪ ಮೊತ್ತಕ್ಕೆ ಆಲೌಟ್ ಆಗುವ ಆತಂಕ ಎದುರಿಸಿತ್ತು. ಈ ಹಂತದಲ್ಲಿ ಗಿಲ್ ಮತ್ತು ರಿಯಾನ್ ಪರಾಗ್ ಆರನೇ ವಿಕೆಟ್‌ಗೆ 54 ರನ್ ಸೇರಿಸಿದರು. ತಂಡದ ಮೊತ್ತವನ್ನು ಶತಕದ ಗಡಿ ದಾಟಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 137 (ಶುಭಮನ್ ಗಿಲ್ 39, ರಿಯಾನ್ ಪರಾಗ್ 26, ವಾಷಿಂಗ್ಟನ್ ಸುಂದರ್ 25, ಮಹೀಷ ತೀಕ್ಷಣ 28ಕ್ಕೆ3, ವನಿಂದು ಹಸರಂಗಾ 29ಕ್ಕೆ2). **ಶ್ರೀಲಂಕಾ:** 20 ಓವರ್‌ಗಳಲ್ಲಿ 8 ವಿಕೆಟ್‌ಗೆ 137 (ಕುಶಾಲ್ ಪೆರೆರಾ 46, ಕುಶಾಲ್ ಮೆಂಡೀಸ್ 43; ವಾಷಿಂಗ್ಟನ್ 23ಕ್ಕೆ 2, ರಿಂಕು ಸಿಂಗ್ 3ಕ್ಕೆ 2, ಸೂರ್ಯಕುಮಾರ್ 5ಕ್ಕೆ 2). ಪಂದ್ಯದ ಆಟಗಾರ: ವಾಷಿಂಗ್ಟನ್ ಸುಂದರ್